ಸೋಮವಾರ, ನವೆಂಬರ್ 14, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಶಿಕ್ಷಣ**
ಮಕ್ಕಳು ಉನ್ನತ ವಿದ್ಯಾಭ್ಯಾಸಕ್ಕಾಗಿ ಕೋರ್ಸ್ ಆಯ್ಕೆ ಮಾಡಿಕೊಳ್ಳೋದು ಹೇಗೆ?

**ಶ್ರೀ ನರೇಂದ್ರ ಮೋದಿ**
ಸನ್ಮಾನ್ಯ ಪ್ರಧಾನಮಂತ್ರಿಗಳು

## ಕರ್ನಾಟಕ ಸರ್ಕಾರ
## ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ



**ಶ್ರೀ ಬಸವರಾಜ ಎಸ್. ಬೊಮ್ಮಾಯಿ**
ಸನ್ಮಾನ್ಯ ಮುಖ್ಯಮಂತ್ರಿಗಳು

VIVEKA
EVOLUTION OF SCHOOLS

# ವಿವೇಕ
## ಶಾಲಾ ಕೊಠಡಿಗಳ ನಿರ್ಮಾಣ

**ದಿನಾಂಕ : 14.11.2022 ರಂದು ರಾಜ್ಯಾದ್ಯಂತ 7601 ಶಾಲಾ ಹಾಗೂ ಪದವಿ ಪೂರ್ವ ಕಾಲೇಜುಗಳ ಕೊಠಡಿಗಳ ನಿರ್ಮಾಣಕ್ಕಾಗಿ ಶಂಕುಸ್ಥಾಪನೆ.**

**ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿ ರವರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಾಡಿಯಾಳ ತಾಂಡ, ಕಲಬುರಗಿ ತಾಲ್ಲೂಕು ಇಲ್ಲಿ ಹಾಗೂ ರಾಜ್ಯದ ಇತರೆ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಸಚಿವರು/ ಎಂ.ಪಿ./ ಎಂ.ಎಲ್.ಎ./ ಎಂ.ಎಲ್.ಸಿ./ ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಶಂಕುಸ್ಥಾಪನೆ ಮಾಡುವರು.**

### ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಅಭ್ಯಸಿಸಿದ ಶಾಲೆಗಳ ಅಭಿವೃದ್ಧಿ

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ವಿದ್ಯಾಭ್ಯಾಸ ಮಾಡಿದ ಶಾಲೆಗಳು ಮತ್ತು ಶತಮಾನ ಪೂರೈಸಿರುವ ರಾಜ್ಯದ ಸರ್ಕಾರಿ ಶಾಲೆಗಳ ಸಮಗ್ರ ಅಭಿವೃದ್ಧಿಗೆ ಕ್ರಮ.

### ಅಮೃತ ಶಾಲಾ ಸೌಲಭ್ಯ ಯೋಜನೆ

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸವಿ ನೆನಪಿಗಾಗಿ 750 ಸರ್ಕಾರಿ ಶಾಲೆಗಳ ಸಮಗ್ರ ಅಭಿವೃದ್ಧಿಗೆ ಕ್ರಮ.

### ಸರ್ಕಾರಿ ಪ್ರಾಥಮಿಕ ಶಾಲಾ ಕೊಠಡಿಗಳ ದುರಸ್ತಿ

ಸರ್ಕಾರಿ ಶಾಲಾ ಹಾಗೂ ಪದವಿ ಪೂರ್ವ ಕಾಲೇಜುಗಳ ತುರ್ತು ಕೊಠಡಿ ದುರಸ್ತಿ ಕಾಮಗಾರಿಗೆ ಒಟ್ಟು ರೂ.46.50 ಕೋಟಿ ಅನುದಾನ ಬಿಡುಗಡೆ.

### ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶೌಚಾಲಯ ನಿರ್ಮಾಣ ಮತ್ತು ದುರಸ್ತಿ

ಸರ್ಕಾರಿ ಶಾಲಾ ಹಾಗೂ ಪದವಿ ಪೂರ್ವ ಕಾಲೇಜುಗಳ ಶೌಚಾಲಯ ನಿರ್ಮಾಣ ಹಾಗೂ ದುರಸ್ತಿಗಾಗಿ ಒಟ್ಟು ರೂ.250 ಕೋಟಿ ಅನುದಾನ ಬಿಡುಗಡೆ.

### ಪೀಠೋಪಕರಣಗಳ ಸರಬರಾಜು

ಸರ್ಕಾರಿ ಶಾಲಾ ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಪೀಠೋಪಕರಣಗಳನ್ನು ಸರಬರಾಜು ಮಾಡಲು ಒಟ್ಟು ರೂ.100 ಕೋಟಿ ಅನುದಾನ ಬಿಡುಗಡೆ.

ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಬಸವರಾಜ ಎಸ್. ಬೊಮ್ಮಾಯಿ** ರವರೊಂದಿಗೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಹಾಗೂ ಸಕಾಲ ಸಚಿವರಾದ **ಶ್ರೀ ಬಿ.ಸಿ ನಾಗೇಶ್** ರವರು 2022-23ರ ಶಾಲಾ ಪ್ರಾರಂಭೋತ್ಸವ ಮತ್ತು ಕಲಿಕಾ ಚೇತರಿಕೆ ಕಾರ್ಯಕ್ರಮ ಉದ್ಘಾಟನ ಸಮಾರಂಭದಲ್ಲಿ ಭಾಗವಹಿಸಿರುವುದು

### ಇತರೆ ಕಾರ್ಯಕ್ರಮಗಳು

- 32,159 ಅತಿಥಿ ಶಿಕ್ಷಕರನ್ನು ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ಹಾಗೂ 3,708 ಅತಿಥಿ ಉಪನ್ಯಾಸಕರನ್ನು ಪದವಿ ಪೂರ್ವ ಕಾಲೇಜುಗಳಲ್ಲಿ ನೇಮಕ ಮಾಡಲಾಗಿದೆ.
  - ಪ್ರಾಥಮಿಕ ಶಾಲಾ ಅತಿಥಿ ಶಿಕ್ಷಕರ ಗೌರವಧನ ರೂ. 2,500/-ಗಳಷ್ಟು ಹೆಚ್ಚಳ.
  - ಪ್ರೌಢ ಶಾಲಾ ಅತಿಥಿ ಶಿಕ್ಷಕರ ಗೌರವಧನ ರೂ. 2,500/-ಗಳಷ್ಟು ಹೆಚ್ಚಳ.
  - ಪದವಿ ಪೂರ್ವ ಕಾಲೇಜು ಉಪನ್ಯಾಸಕರಿಗೆ ಗೌರವಧನ ರೂ. 3,000/-ಗಳಷ್ಟು ಹೆಚ್ಚಳ.
  - ಬಿಸಿಯೂಟ ಕಾರ್ಯಕರ್ತರಿಗೆ ಗೌರವಧನ ರೂ.1,000/-ಗಳಷ್ಟು ಹೆಚ್ಚಳ.
- ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರತಿಭಾ ಕಾರಂಜಿ, ವಿಜ್ಞಾನ ಮೇಳ, ಯುವ ಸಂಸತ್ ಹಾಗೂ ಕ್ರೀಡಾಕೂಟಗಳನ್ನು ಆಯೋಜಿಸಲಾಗುತ್ತಿದೆ.
- ರಾಷ್ಟ್ರೀಯ ಶಿಕ್ಷಣ ನೀತಿ-2020 (NEP) ಅನುಷ್ಠಾನಕ್ಕೆ ಸ್ಪಷ್ಟ ಕ್ರಮಗಳು.
- ವಿದ್ಯಾರ್ಥಿಗಳಿಗೆ ಪೌಷ್ಠಿಕ ಆಹಾರ ಒದಗಿಸುವ ನಿಟ್ಟಿನಲ್ಲಿ ಬಿಸಿ ಊಟ, ಹಾಲು, ಮೊಟ್ಟೆ/ ಚಿಕ್ಕಿ/ ಹಣ್ಣನ್ನು ಒದಗಿಸಲಾಗುತ್ತಿದೆ.
- 45.42 ಲಕ್ಷ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ಶೂ ಮತ್ತು ಸಾಕ್ಸ್ ವಿತರಣೆ.
- 59.04 ಲಕ್ಷ ಸರ್ಕಾರಿ ಹಾಗೂ ಅನುದಾನಿತ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ ವಿತರಣೆ.
- ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ಹಾಗೂ ಅಗತ್ಯ ಇರುವವರಿಗೆ ಹೆಚ್ಚಿನ ಚಿಕಿತ್ಸೆ.
- ಪ್ರಸಕ್ತ ಸಾಲಿನಲ್ಲಿ 15,000 ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ.
- ಕೋವಿಡ್-19 ಹಿನ್ನೆಲೆಯಲ್ಲಿ ಉಂಟಾಗಿದ್ದ ಕಲಿಕಾ ಹಿನ್ನಡೆ ಸರಿದೂಗಿಸಲು **"ಕಲಿಕಾ ಚೇತರಿಕೆ ಕಾರ್ಯಕ್ರಮ"** ಅನುಷ್ಠಾನಗೊಳಿಸಿದ ಮೊದಲ ರಾಜ್ಯ ಕರ್ನಾಟಕ.
- ಪಿಯು ವಿದ್ಯಾರ್ಥಿನಿಯರ ದಾಖಲಾತಿ ಶುಲ್ಕ ಪಾವತಿಯಿಂದ ಸಂಪೂರ್ಣ ವಿನಾಯಿತಿ.
- 23 ಸಾವಿರಕ್ಕೂ ಅಧಿಕ ಶಿಕ್ಷಕರು ತಾವು ಬಯಸಿದ ಸ್ಥಳಕ್ಕೆ ವರ್ಗಾವಣೆಗೊಂಡಿದ್ದಾರೆ.
- ಅನುದಾನಿತ ಶಾಲೆಗಳಲ್ಲಿ 31 ಡಿಸೆಂಬರ್ 2015ರ ಪೂರ್ವದ ಬೋಧಕರ ಹುದ್ದೆಗಳ ಭರ್ತಿಗೆ ಅನುಮತಿ.
- ಸರ್ಕಾರಿ ಶಾಲೆ, ಪದವಿ ಪೂರ್ವ ಕಾಲೇಜುಗಳ ಆಸ್ತಿ ಸಂರಕ್ಷಣೆಗಾಗಿ ವಿಶೇಷ ಅಭಿಯಾನ.
- ರಾಜ್ಯದ ಗ್ರಂಥಾಲಯಗಳ ಡಿಜಿಟಲೀಕರಣ.

ಸಾರ್ವಜನಿಕ ಆಸ್ತಿ-ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

## ಪ್ರವೀಣ್ ಹತ್ಯೆ: ಬೆಳ್ಳಾರೆಯ ಶಹೀದ್ ಬಂಧನ

ಮಂಗಳೂರು: ಬಿಜೆಪಿ ಯುವ ಮೋರ್ಚಾ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯಕಾರಣಿ ಸದಸ್ಯ ಪ್ರವೀಣ್ ನೆಟ್ಟಾರು ಕೊಲೆಗೆ ಸಂಬಂಧಿಸಿ ಬೆಳ್ಳಾರೆ ಗ್ರಾಮದ ಶಹೀದ್ ಎಂ. ಎಸ್. ಎಂಬಾತನನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಶನಿವಾರ ಬಂಧಿಸಿದೆ. ಇದರೊಂದಿಗೆ ಪ್ರಕರಣಕ್ಕೆ ಸಂಬಂಧಿಸಿ ಬಂಧಿತರ ಸಂಖ್ಯೆ 14ಕ್ಕೆ ಏರಿದೆ.

ಸುಳ್ಯ ತಾಲ್ಲೂಕಿನ ಕಳೆಂಜ ಗ್ರಾಮದ ಮಸೂದ್ ಹತ್ಯೆಗೆ ಪ್ರತೀಕಾರವಾಗಿ ಪ್ರವೀಣ್ ಅವರನ್ನು ಕೊಲೆ ಮಾಡಲಾಗಿದ್ದು, ಶಹೀದ್ ಮನೆಯಲ್ಲೇ ಸಂಚು ರೂಪಿಸಲಾಗಿತ್ತು ಎಂದು ಆರೋಪಿಗಳು ಹೇಳಿರುವುದಾಗಿ ಎನ್‌ಐಎ ಮೂಲಗಳು ತಿಳಿಸಿವೆ. ಜುಲೈ 19ರಂದು ಮಸೂದ್ ಮೇಲೆ ಹಲ್ಲೆ ಮಾಡಲಾಗಿತ್ತು. 21ರಂದು ಕೊನೆಯುಸಿರೆಳೆದಿದ್ದರು.

## ದೇಗುಲಮಠ ವಸತಿ ನಿಲಯದ ಮೂವರು ವಿದ್ಯಾರ್ಥಿಗಳು ನಾಪತ್ತೆ

ಕನಕಪುರ (ರಾಮನಗರ): ಇಲ್ಲಿನ ದೇಗುಲಮಠದ ನಿರ್ವಾಣೇಶ್ವರ ಪ್ರೌಢಶಾಲೆಯಲ್ಲಿ ಒಂಬತ್ತನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಮೂವರು ವಿದ್ಯಾರ್ಥಿಗಳು ನ.8 ರಿಂದ ನಾಪತ್ತೆಯಾಗಿದ್ದಾರೆ.

ಆನೇಕಲ್ ತಾಲ್ಲೂಕು ಅತ್ತಿಬೆಲೆಯ ಎ.ಎಸ್. ಶಿವಕುಮಾರ್, ಕೋಡ್ಲಿಪುರದ ಎಂ.ಪ್ರತಾಪ್ ಮತ್ತು ಬೆಂಗಳೂರು ಉತ್ತರ ತಾಲ್ಲೂಕಿನ ಬಿಡಿಎಲ್ ಲೇಔಟ್ ಎಂ.ಕಾರ್ತಿಕ್ ಕಾಣೆಯಾದ ವಿದ್ಯಾರ್ಥಿಗಳು.

‘ದೇಗುಲಮಠದ ನಿರ್ವಾಣೇಶ್ವರಸ್ವಾಮಿ ವಸತಿ ನಿಲಯದಲ್ಲಿದ್ದ ವಿದ್ಯಾರ್ಥಿಗಳು ನ. 8 ರಂದು ತಿಂಡಿ ತಿಂದು ಶಾಲೆಗೆ ಹೋಗುವುದಾಗಿ ಹೇಳಿ ಹೋದವರು ಮರಳಿ ಬಂದಿಲ್ಲ. ವಿದ್ಯಾರ್ಥಿಗಳ ಪೋಷಕರಿಗೆ ಕರೆ ಮಾಡಿ ವಿಚಾರಿಸಿದಾಗ ಅವರು ಅಲ್ಲಿಗೂ ಹೋಗಿಲ್ಲ ಎಂದು ತಿಳಿದು ಬಂದಿದೆ. ಶುಕ್ರವಾರ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ’ ಎಂದು ವಸತಿ ನಿಲಯದ ಮೇಲ್ವಿಚಾರಕ ಮಹದೇವಸ್ವಾಮಿ ತಿಳಿಸಿದರು.

‘ಕಿಸಾನ್ ಸ್ವರಾಜ್ ಸಮ್ಮೇಳನ’ದಲ್ಲಿ ಸಾವಯವ ಕೃಷಿಕರ ಘೋಷಣೆ

# ‘ರೈತರನ್ನು ಕಂಪನಿಗಳ ಪಾಲು ಮಾಡದಿರಿ’

ಪ್ರಜಾವಾಣಿ ವಾರ್ತೆ

ಮೈಸೂರು: ತಂತ್ರಜ್ಞಾನ, ಕೃಷಿ ಉತ್ಪಾದನೆ ಹೆಚ್ಚಳದ ನೆಪದಲ್ಲಿ ಸಾಂಪ್ರದಾಯಿಕ ಕೃಷಿ ಹಾಗೂ ಕೃಷಿಕರನ್ನು ಕಾರ್ಪೊರೇಟ್ ಕಂಪನಿಗಳ ಪಾಲು ಮಾಡುವುದನ್ನು ವಿರೋಧಿಸಿ ‘ಕಿಸಾನ್ ಸ್ವರಾಜ್ ಸಮ್ಮೇಳನ’ದಲ್ಲಿ ರೈತರು ಘೋಷಣೆ ಮೊಳಗಿಸಿದರು.

ಇಲ್ಲಿನ ಮುಕ್ತ ಗಂಗೋತ್ರಿಯಲ್ಲಿ ‘ಆಶಾ (ಅಲಯನ್ಸ್ ಫಾರ್ ಸಸ್ಟೈನಬಲ್ ಆ್ಯಂಡ್ ಹೊಲಿಸ್ಟಿಕ್ ಅಗ್ರಿಕಲ್ಚರ್) ಕಿಸಾನ್ ಸ್ವರಾಜ್ ಒಕ್ಕೂಟ’ ಭಾನುವಾರ ಆಯೋಜಿಸಿದ್ದ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ದೇಶದ ವಿವಿಧೆಡೆಯಿಂದ ಬಂದಿದ್ದ ಸಾವಿರಕ್ಕೂ ಹೆಚ್ಚು ರೈತರು ದನಿಗೂಡಿಸಿದರು.

ರೈತ ಮಹಿಳೆಯರ ಹಕ್ಕುಗಳ ಹೋರಾಟಗಾರ್ತಿ ಆಶ್ಲೇಶಾ ಖಾದ್ಸೆ ಹಾಗೂ ಸಂಜೀವ್ ಕುಲಕರ್ಣಿ ಘೋಷಣೆಗಳನ್ನು ಮಂಡಿಸಿದರು.

‘ರೈತರ ಭೂಮಿ, ಬೀಜ, ಮಾರುಕಟ್ಟೆ ಅಸ್ಥಿರಗೊಳಿಸಲು ಕಾರ್ಪೊರೇಟ್ ಕಂಪನಿಗಳು ಸರ್ಕಾರದ ನೀತಿಗಳ ಮೇಲೆ ಪ್ರಭಾವ ಬೀರುತ್ತಿದ್ದು, ಅದರ ವಿರುದ್ಧ ಸಂಘಟಿತರಾಗಿ ಹೋರಾಡಬೇಕು. ಎಲ್ಲರನ್ನೂ ಒಳಗೊಳ್ಳುವ ಪರಿಸರಾತ್ಮಕ ಕೃಷಿ ಪದ್ಧತಿಯನ್ನೇ ಅನುಸರಿಸಬೇಕು. ಅದನ್ನು ಬೆಂಬಲಿಸುವ ತಂತ್ರಜ್ಞಾನಗಳನ್ನಷ್ಟೆ ಒಪ್ಪಬೇಕು. ರೈತರ ಸ್ವಾತಂತ್ರ್ಯ, ಸ್ವಾಭಿಮಾನ ಮತ್ತು ಸಾರ್ವಭೌಮತೆ ಹೆಚ್ಚಿಸಬೇಕು. ನೀತಿ ಜಾರಿಗೆ ಮುನ್ನ ರೈತರ ಒಪ್ಪಿಗೆ ಪಡೆಯಬೇಕು’ ಎಂದು ಒತ್ತಾಯಿಸಿದರು.

‘ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ, ಬೆಳೆ ವಿಮೆ ನೀಡಬೇಕು, ರೈತರ ಆತ್ಮಹತ್ಯೆ ತಡೆಯಬೇಕು, ಬೀಜಗಳ ಹಕ್ಕುಸ್ವಾಮ್ಯ ಕಂಪನಿಗಳ ಪಾಲಾಗಬಾರದು ಹಾಗೂ ಕೃಷಿ ವೈವಿಧ್ಯ ಉಳಿಸಿಕೊಳ್ಳಬೇಕು’ ಎಂದು ಆಗ್ರಹಿಸಿದರು.

ರಾಜ್ಯಸಭಾ ಸದಸ್ಯ ಅನಿಲ್ ಹೆಗ್ಡೆ, ಆಶಾ ಒಕ್ಕೂಟದ ಶ್ರೀಧರ್ ರಾಧಾಕೃಷ್ಣನ್, ಸಂಘಟಕರಾದ ಉಷಾ ಸೂಲಪಾಣಿ, ಕಾರ್ತಿಕ್ ಗುಣಶೇಖರ್, ರಾಷ್ಟ್ರೀಯ ಸಂಚಾಲಕ ಕಪಿಲ್ ಶಾ, ಕೆಎಸ್‌ಒಯು ಕುಲಸಚಿವ ಖಾದರ್ ಪಾಷಾ ಇದ್ದರು.

ಮೈಸೂರಿನ ಮುಕ್ತ ಗಂಗೋತ್ರಿಯಲ್ಲಿ ಭಾನುವಾರ ಸಮಾರೋಪಗೊಂಡ ‘ಕಿಸಾನ್ ಸ್ವರಾಜ್ ಸಮ್ಮೇಳನ’ದಲ್ಲಿ ಕೃಷಿಕ ಮಹಿಳೆಯರು ಜನಪದ ಗೀತೆಗೆ ನೃತ್ಯ ಮಾಡಿದರು – ಪ್ರಜಾವಾಣಿ ಚಿತ್ರ

ಶ್ರೀಧರ್ ರಾಧಾಕೃಷ್ಣನ್

### ಪ್ರಮುಖ ಘೋಷಣೆಗಳು

- ಸುರಕ್ಷಿತ, ವೈವಿಧ್ಯಮಯ, ಸಮಗ್ರ ಆಹಾರವು ಪ್ರತಿಯೊಬ್ಬ ನಾಗರಿಕನಿಗೂ ಸಿಗಬೇಕು. ಏನನ್ನು ತಿನ್ನಬೇಕು, ತಿನ್ನಬಾರದೆಂದು ನಿರ್ಧರಿಸುವುದೂ ಸಂವಿಧಾನಕ್ಕೆ ವಿರುದ್ಧವಾಗುತ್ತದೆ.
- ರೈತ ಮಹಿಳೆಯರಿಗೆ ಭೂಮಿ ಹಕ್ಕು ವಿಷಯದಲ್ಲಿ ಕಾನೂನಾತ್ಮಕ ಬೆಂಬಲ ನೀಡಬೇಕು. ನಿಜವಾದ ಕೃಷಿಕರು ಹಾಗೂ ಕೃಷಿ ಕೂಲಿ ಕಾರ್ಮಿಕರಿಗೆ ಭೂಮಿ ಸಿಗಬೇಕು. ಅನ್ಯ ಉದ್ದೇಶಕ್ಕೆ ಮಾರಾಟ ತಪ್ಪಿಸಬೇಕು.
- ಜೀವ ವೈವಿಧ್ಯ ಉಳಿಸಿಕೊಳ್ಳಲು ಕುಲಾಂತರಿ ಸಾಸಿವೆ ಸೇರಿದಂತೆ ಯಾವುದೇ ಹೈಬ್ರೀಡ್ ತಳಿಗೆ ಅವಕಾಶ ನೀಡಬಾರದು.
- ಸ್ಥಳೀಯ ಸುಸ್ಥಿರ ಕೃಷಿ ಪ್ರೋತ್ಸಾಹಿಸಬೇಕು. ನಗರ ಹಾಗೂ ಗ್ರಾಮೀಣರ ನಡುವೆ ಸಂಬಂಧ ಬಲಪಡಿಸಬೇಕು.

### ಮುಖ್ಯಾಂಶಗಳು

- ಕೃಷಿ ಬಿಕ್ಕಟ್ಟುಗಳಿಂದ ರೈತರ ಆತ್ಮಹತ್ಯೆ
- ಕುಲಾಂತರಿ ಬೀಜಕ್ಕೆ ಅವಕಾಶ ಬೇಡ
- ನಗರ– ಗ್ರಾಮೀಣ ಸಂಬಂಧ ಬಲಪಡಿಸಿ

ಡ್ರೋನ್, ಡಿಜಿಟಲ್ ಕೃಷಿಯನ್ನು ನಿಮ್ಮ ತಲೆಯ ಮೇಲೆ ಹೊತ್ತುಕೊಳ್ಳಿ. ಹವಾಮಾನ ವರದಿಯನ್ನು ಸರಿಯಾಗಿ ಕೃಷಿಕನಿಗೆ ಒದಗಿಸಿ

**ಶ್ರೀಧರ್ ರಾಧಾಕೃಷ್ಣನ್,**
ಸಂಘಟಕ, ‘ಆಶಾ’ ಒಕ್ಕೂಟ

**ಚಿಣ್ಣರ ಆಟ...** ಕಲಬುರಗಿಯ ಕಣ್ಣಿ ಮಾರ್ಕೆಟ್ ಸಮೀಪದ ಕೊಳೆಗೇರಿಯಲ್ಲಿ ಭಾನುವಾರ ಮಕ್ಕಳು ಜೋಕಾಲಿ ಆಡಿ ಸಂಭ್ರಮಿಸಿದವು
ಪ್ರಜಾವಾಣಿ ಚಿತ್ರ/ತಾಜುದ್ದೀನ ಆಜಾದ್

## ಕುಕ್ಕೆ: 23ರಂದು ದೀಪೋತ್ಸವ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ: ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಚಂಪಾಷಷ್ಠಿ ಮಹೋತ್ಸವ ಪ್ರಯುಕ್ತ ನ. 23ರಂದು ಲಕ್ಷ ದೀಪೋತ್ಸವ ನಡೆಯಲಿದೆ.

‘ಚಂಪಾಷಷ್ಠಿ ಮಹೋತ್ಸವಕ್ಕೆ ನ.21ರ ಕಾರ್ತಿಕ ದ್ವಾದಶಿಯಂದು ಬೆಳಿಗ್ಗೆ ಕೊಪ್ಪರಿಗೆ ಏರುವ ಮೂಲಕ ಚಾಲನೆ ಲಭಿಸಲಿದೆ. ಡಿ.5 ಮಾರ್ಗಶಿರ ಶುದ್ಧ ದ್ವಾದಶಿಯಂದು ಬೆಳಿಗ್ಗೆ ಕೊಪ್ಪರಿಗೆ ಇಳಿದು, ರಾತ್ರಿ ನೀರು ಬಂಡಿ ಉತ್ಸವ, ದೈವಗಳ ನಡಾವಳಿ ನಡೆಯುವುದರೊಂದಿಗೆ ಸಂಪನ್ನಗೊಳ್ಳಲಿದೆ’ ಎಂದು ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಮೋಹನ ರಾಂ ಸುಳ್ಳಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಲಕ್ಷ ದೀಪೋತ್ಸವದ ದಿನ ಸಂಜೆ 7ರಿಂದ ದೇವಳದ ರಾಜಗೋಪುರದ ಬಳಿಯಿಂದ ರಥಬೀದಿ, ಅಡ್ಡಬೀದಿ, ಕಾಶಿಕಟ್ಟೆಯಾಗಿ ಕುಮಾರಧಾರಾದವರೆಗೆ ಕುಣಿತ ಭಜನೆ ಆಯೋಜಿಸಲಾಗಿದೆ. ಕುಣಿತ ಭಜನೆಯಲ್ಲಿ 1 ಸಾವಿರ ತಂಡಗಳು ಭಾಗವಹಿಸುವ ನಿರೀಕ್ಷೆ ಇದೆ. ಭಾಗವಹಿಸುವ ತಂಡಗಳು ನ. 20 ಒಳಗಾಗಿ ದೇವಳದ ಕಚೇರಿಯಲ್ಲಿ ಹೆಸರು ನೊಂದಾಯಿಸಿಕೊಳ್ಳಬೇಕು.

**ಮಾಹಿತಿಗೆ:** 9482646275, ಸಂಪರ್ಕಿಸಬಹುದು ಅಥವಾ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ನೊಂದಾಯಿಸಿಕೊಳ್ಳಬಹುದು’ ಎಂದರು.

**ಭಕ್ತರ ಸಾಗರ:** ಸರಣಿ ರಜೆಯ ಕಾರಣ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಶುಕ್ರವಾರ, ಶನಿವಾರ ಮತ್ತು ಭಾನುವಾರ ಭಕ್ತರ ಪ್ರವಾಹವೇ ಹರಿದು ಬಂದಿತ್ತು. ಜನದಟ್ಟಣೆಯಿಂದಾಗಿ ನೂರಾರು ಭಕ್ತರು ಆಶ್ಲೇಷ ಬಲಿ, ನಾಗಪ್ರತಿಷ್ಠೆ ಸೇರಿದಂತೆ ಇತರೆ ಸೇವೆ ಮಾಡಿಸಲು ಸಾಧ್ಯವಾಗದೆ, ಕೇವಲ ದೇವರ ದರ್ಶನ ಮಾಡಿ ತೆರಳಿದರು ಎನ್ನಲಾಗಿದೆ.

## ಸುದ್ದಿ 2 ನಿಮಿಷ

### ‘ವಿಧಾನಸಭೆ ಚುನಾವಣೆ– 25 ಪ್ರಖರ ಹಿಂದುವಾದಿಗಳು ಸ್ಪರ್ಧೆ’

ಚಿಕ್ಕಮಗಳೂರು: ‘ರಾಜ್ಯದಲ್ಲಿ 2023ರ ವಿಧಾನಸಭೆ ಚುನಾವಣೆಯಲ್ಲಿ 25 ಪ್ರಖರ ಹಿಂದುತ್ವವಾದಿಗಳು ಸ್ವತಂತ್ರ ಅಭ್ಯರ್ಥಿಗಳಾಗಿ ಕಣಕ್ಕಿಳಿಯುತ್ತೇವೆ’ ಎಂದು ಶ್ರೀರಾಮ ಸೇನೆ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ತಿಳಿಸಿದರು.

ತಾಲ್ಲೂಕಿನ ಬಾಬಾಬುಡನ್ ಗಿರಿಯಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ‘ಪ್ರಖರ ಹಿಂದುತ್ವವಾದಿಗಳು, ಸ್ವಾಮೀಜಿಗಳು ರಾಜಕೀಯ ಪ್ರವೇಶಿಸುತ್ತೇವೆ. ಹಿಂದೂಗಳ ರಕ್ಷಣೆಯ ಸಂಕಲ್ಪ ತೊಟ್ಟಿದ್ದೇವೆ’ ಎಂದು ಹೇಳಿದರು.

‘ದತ್ತ ಪೀಠ ಹೋರಾಟದ ಲಾಭ ಪಡೆದು ಬಿಜೆಪಿಯವರು ಅಧಿಕಾರ ಹಿಡಿದಿದ್ದಾರೆ. ಆದರೆ, ಹಿಂದುತ್ವದ ರಕ್ಷಣೆ ಆಗಿಲ್ಲ. ಬಿಜೆಪಿಯಿಂದ ಸ್ಪರ್ಧಿಸಿ ಗೆದ್ದಿರುವವರು ಹಿಂದುತ್ವ ರಕ್ಷಿಸಲು ವಿಫಲರಾಗಿದ್ದಾರೆ. ಹೀಗಾಗಿ, ಪ್ರಖರ ಹಿಂದುತ್ವವಾದಿಗಳು ರಾಜಕೀಯ ಪ್ರವೇಶಕ್ಕೆ ಮುಂದಾಗಿದ್ದೇವೆ’ ಎಂದು ಪ್ರತಿಪಾದಿಸಿದರು.

## ಪ್ರತ್ಯೇಕ ಧರ್ಮ: ಸಮಾವೇಶದಲ್ಲಿ ಮೂರು ನಿರ್ಣಯಗಳ ಅಂಗೀಕಾರ

ತುಮಕೂರು: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಮ್ಮಿಕೊಂಡಿರುವ ಬೆಂಗಳೂರು ವಿಭಾಗ ಮಟ್ಟದ ಸಮಾವೇಶದಲ್ಲಿ ವೀರಶೈವ ಲಿಂಗಾಯತರಿಗೆ ಪ್ರತ್ಯೇಕ ಧರ್ಮದ ಸ್ಥಾನಮಾನ ಕಲ್ಪಿಸುವುದು ಸೇರಿದಂತೆ ಮೂರು ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

ನಗರದ ಸಿದ್ಧಗಂಗಾ ಮಠದಲ್ಲಿ ಸಮಾವೇಶದ ಪ್ರಯುಕ್ತ ಎರಡು ದಿನ ವಿವಿಧ ಕಾರ್ಯಾಗಾರ, ವಿಚಾರಗೋಷ್ಠಿಗಳನ್ನು ಏರ್ಪಡಿಸಲಾಗಿತ್ತು.

ಭಾನುವಾರ ನಡೆದ ಸಮಾರೋಪ ಸಮಾರಂಭದಲ್ಲಿ ‘ವೀರಶೈವ–ಲಿಂಗಾಯತರು ಒಂದೇ ಸಮುದಾಯ. ಸಮುದಾಯಕ್ಕೆ ಪ್ರತ್ಯೇಕ ಧರ್ಮದ ಸ್ಥಾನಮಾನ ನೀಡಬೇಕು ಹಾಗೂ ಕೇಂದ್ರದ ಒಬಿಸಿ ಪಟ್ಟಿಗೆ ಸಮುದಾಯದ ಎಲ್ಲ ಒಳ ಪಂಗಡಗಳನ್ನು ಸೇರಿಸಬೇಕು’ ಎಂಬ ಮೂರು ನಿರ್ಣಯಗಳನ್ನು ಮಹಾಸಭಾದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ನಟರಾಜು ಸಾಗರನಹಳ್ಳಿ ಮಂಡಿಸಿದರು.

ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಬೆಟ್ಟದಹಳ್ಳಿಯ ಚಂದ್ರಶೇಖರ ಸ್ವಾಮೀಜಿ, ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಉಪಾಧ್ಯಕ್ಷ ಎನ್.ತಿಪ್ಪಣ್ಣ ಸೇರಿದಂತೆ ಎಲ್ಲರೂ ಇದಕ್ಕೆ ಅನುಮೋದನೆ ಸೂಚಿಸಿದರು.

## ಕೆಲವರಿಗೆ ಬಣ್ಣದ ಅಲರ್ಜಿ ಇದೆ: ಸಚಿವ ನಾಗೇಶ್

ಪ್ರಜಾವಾಣಿ ವಾರ್ತೆ

ಗದಗ: ‘ಕೆಲವರಿಗೆ ಬಣ್ಣಗಳ ಬಗ್ಗೆ ಅಲರ್ಜಿ ಇದೆ. ಅವರ ಪಕ್ಷದ ಧ್ವಜದಲ್ಲೂ ಕೇಸರಿ ಇದೆ. ಅದನ್ನೂ ತೆಗೆದು ಧ್ವಜ ಪೂರ್ತಿ ಹಸಿರು ಮಾಡಿಕೊಳ್ಳಲಿ’ ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಲೇವಡಿ ಮಾಡಿದರು.

ನಗರದಲ್ಲಿ ಭಾನುವಾರ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ ಅವರು, ‘ವಿವೇಕ ಶಾಲೆ’ಗಳ ಗೋಡೆಗಳಿಗೆ ಕೇಸರಿ ಬಣ್ಣ ಹಚ್ಚುವ ವಿಷಯಕ್ಕೆ ಸಂಬಂಧಿಸಿದಂತೆ ಮೇಲಿನಂತೆ ಪ್ರತಿಕ್ರಿಯಿಸಿದರು.

‘ಕೇಸರಿ ಕೂಡ ಬಣ್ಣವಲ್ಲವೇ? ಆ ಬಣ್ಣ ಚೆನ್ನಾಗಿರುತ್ತದೆ ಅಂತ ಆರ್ಕಿಟೆಕ್ಟ್ ಹೇಳಿದರೆ ಶಾಲೆ ಗೋಡೆಗಳಿಗೆ ಕೇಸರಿ ಬಣ್ಣವನ್ನೇ ಬಳಿಸಲಾಗುವುದು. ಬಣ್ಣ, ಕಿಟಕಿ, ಬಾಗಿಲುಗಳ ವಿನ್ಯಾಸದ ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳುವುದಿಲ್ಲ’ ಎಂದರು.

ಟಿಪ್ಪು ಪ್ರತಿಮೆ ನಿರ್ಮಾಣ ವಿಷಯಕ್ಕೆ ಪ್ರತಿಕ್ರಿಯಿಸಿದ ಅವರು, ‘ತನ್ವೀರ್ ಸೇಠ್ ಮೈಸೂರಿನಲ್ಲಿ ಪ್ರತಿಮೆ ಸ್ಥಾಪನೆಗೆ ಹೊರಟರೆ ಮುಂದೇನು ಮಾಡಬೇಕು ಎಂದು ಜನರೇ ನಿರ್ಧರಿಸುತ್ತಾರೆ’ ಎಂದರು.

‘ಟಿಪ್ಪು ಶ್ರೀರಂಗಪಟ್ಟಣದಲ್ಲಿ ಆಂಜನೇಯ ಸ್ವಾಮಿ ದೇವಸ್ಥಾನ ಒಡೆದು ಮಸೀದಿ ಕಟ್ಟಿದ ಅಂತ ಗೊತ್ತಾಯಿತು. ಪಹಣಿ, ಶಿರಸ್ತೇದಾರ್ ಕನ್ನಡ ಪದಗಳು ಅಂತ ಅಂದುಕೊಂಡಿದ್ದೆವು. ಆದರೆ, ಟಿಪ್ಪು ಕನ್ನಡ ಕೊಂದಿದ್ದ ಎಂದು ಈಗ ಗೊತ್ತಾಗುತ್ತಿದೆ. ಕೂರ್ಗ್, ಕೇರಳದಲ್ಲಿ ಟಿಪ್ಪು ಬಲವಂತವಾಗಿ ಹಿಂದೂಗಳನ್ನು ಮತಾಂತರ ಮಾಡಿದ. ಒಪ್ಪದವರನ್ನು ಕೊಂದ ಎಂಬ ವಿಚಾರಗಳು ಟಿಪ್ಪು ಬರೆದಿರುವ ಪತ್ರಗಳಿಂದಲೇ ಗೊತ್ತಾಗುತ್ತಿದೆ’ ಎಂದು ಅವರು ಕಿಡಿಕಾರಿದರು.

# ರಸ್ತೆ ಗುಂಡಿ: ನಿವೃತ್ತ ಯೋಧ ಸಾವು

ಬಗೆಹರಿಯದ ರಸ್ತೆ ವಿವಾದ; ನಿತ್ಯವೂ ಅಪಘಾತ • ಹೆಚ್ಚುತ್ತಿರುವ ಆಕ್ರೋಶ

ಪ್ರಜಾವಾಣಿ ವಾರ್ತೆ

ಮಂಡ್ಯ: ಕಾರೆಮನೆ ಗೇಟ್ ಬಳಿ ರಸ್ತೆ ಗುಂಡಿ ತಪ್ಪಿಸಲು ಹೋಗಿ ಕೆಳಗೆ ಬಿದ್ದ ನಿವೃತ್ತ ಯೋಧರೊಬ್ಬರ ಮೇಲೆ ಲಾರಿ ಹರಿದಿದ್ದು, ಅವರು ಸ್ಥಳದಲ್ಲೇ ಮೃತಪಟ್ಟ ಘಟನೆ ಭಾನುವಾರ ನಡೆದಿದೆ.

ಸಾತನೂರಿನ ಎಸ್.ಎನ್. ಕುಮಾರ್ (39) ಮೃತಪಟ್ಟವರು. ನಿವೃತ್ತಿ ನಂತರ ಅವರು ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗೆ ಆಯ್ಕೆಯಾಗಿದ್ದು, ಬೆಂಗಳೂರಿನಲ್ಲಿ 6 ತಿಂಗಳಿಂದ ತರಬೇತಿ ಪಡೆಯುತ್ತಿದ್ದರು. ಗ್ರಾಮಕ್ಕೆ ಬಂದಿದ್ದಾಗ ತಂದೆಯೊಂದಿಗೆ ಬೈಕ್‌ನಲ್ಲಿ ಮಂಡ್ಯದಿಂದ ಗ್ರಾಮಕ್ಕೆ ತೆರಳುತ್ತಿದ್ದರು.

ರಸ್ತೆಯಲ್ಲಿದ್ದ ಬೃಹತ್ ಗುಂಡಿ ತಪ್ಪಿಸಲು ಹೋದ ಕುಮಾರ್ ಎಡಕ್ಕೆ ಬೈಕ್ ತಿರುಗಿಸಿದ್ದಾರೆ. ಎದುರಿನಿಂದ ಬರುತ್ತಿದ್ದ ಬೈಕ್‌ಗೆ ಡಿಕ್ಕಿಯಾಗಿ ಕೆಳಕ್ಕೆ ಬಿದ್ದಿದ್ದಾರೆ. ಹಿಂದಿನಿಂದ ಕಾಯಿಮೊಟ್ಟೆ ತುಂಬಿಕೊಂಡು ಬರುತ್ತಿದ್ದ ಲಾರಿ ಅವರ ತಲೆಯ ಮೇಲೆ ಹರಿದಿದೆ. ಅವರು ಹೆಲ್ಮೆಟ್ ಧರಿಸಿದ್ದರೂ ಅದು ಛಿದ್ರಗೊಂಡು ಮಿದುಳು ಹೊರ ಬಂದಿದೆ. ತಂದೆ ಗಾಯಗೊಂಡಿದ್ದಾರೆ.

ಎಸ್.ಎನ್. ಕುಮಾರ್

ನಿವೃತ್ತ ಯೋಧ ಕುಮಾರ್ ಎಸ್‌ಐ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ್ದರು. ಪರೀಕ್ಷೆ ವಿವಾದವಾಗಿದ್ದ ಕಾರಣ ಕಾನ್‌ಸ್ಟೆಬಲ್ ಪರೀಕ್ಷೆ ತೆಗೆದುಕೊಂಡು ಉತ್ತೀರ್ಣರಾಗಿ, ಆಯ್ಕೆಯಾಗಿದ್ದರು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ.

**ಜನರ ಆಕ್ರೋಶ:** ಕಾರೆಮನೆ ಗೇಟ್ ಬಳಿ ರಸ್ತೆಯು ಕೆರೆಯಂತಾಗಿದ್ದು, ದೊಡ್ಡ ಗುಂಡಿಗಳು ನಿರ್ಮಾಣವಾಗಿವೆ. ಲೋಕೋಪಯೋಗಿ ಇಲಾಖೆ ರಸ್ತೆ ದುರಸ್ತಿ ಮಾಡದ ಕಾರಣ ಅಲ್ಲಿ ನಿತ್ಯವೂ ಸಣ್ಣಪುಟ್ಟ ಅಪಘಾತಗಳು ನಡೆದು ಜನರು ಗಾಯಗೊಳ್ಳುವುದು ಸಾಮಾನ್ಯವಾಗಿತ್ತು. ವ್ಯಕ್ತಿಯೊಬ್ಬರು ರಸ್ತೆ ಗುಂಡಿಗೆ ಬಲಿಯಾಗಿರುವುದಕ್ಕೆ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

ಜಮೀನು ಭೂಸ್ವಾಧೀನ ಹಾಗೂ ಪರಿಹಾರ ವಿತರಣೆ ವಿಚಾರದಲ್ಲಿ ಲೋಕೋಪಯೋಗಿ ಇಲಾಖೆ ಹಾಗೂ ಜಮೀನಿನ ಮಾಲೀಕನ ನಡುವೆ ವ್ಯಾಜ್ಯವಿದ್ದು, ಸಮಸ್ಯೆ ಬಗೆಹರಿದಿಲ್ಲ.

### ಮೆರವಣಿಗೆಯಲ್ಲಿ ಬಂದಿದ್ದ ಯೋಧ

‘ಭಾರತೀಯ ಸೇನೆಯಲ್ಲಿ ಕರ್ತವ್ಯ ನಿರ್ವಹಿಸಿ, ನಿವೃತ್ತರಾಗಿ ಗ್ರಾಮಕ್ಕೆ ಬಂದ ದಿನ ಅವರನ್ನು ಮಂಡ್ಯದಿಂದ ಸಾತನೂರು ಗ್ರಾಮದವರೆಗೆ ಮೆರವಣಿಗೆಯಲ್ಲಿ ಕರೆತಂದಿದ್ದೆವು. ಸೇನೆಯಲ್ಲಿ ಇದ್ದಾಗ ಹಲವು ಸಂಕಷ್ಟದ ಸ್ಥಿತಿ ಎದುರಿಸಿದ ಸಂದರ್ಭಗಳನ್ನು ಅವರು ಹೇಳುತ್ತಿದ್ದರು. ಅಂಥ ಸಂಕಷ್ಟ ದಾಟಿ ಬಂದವರು ಈಗ ರಸ್ತೆಗುಂಡಿಗೆ ಬಲಿಯಾದದ್ದು ಅತ್ಯಂತ ನೋವಿನ ಸಂಗತಿ’ ಎಂದು ಸಾತನೂರು ಗ್ರಾಮಸ್ಥರು ಹೇಳಿದರು.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಇಡಬ್ಲ್ಯುಎಸ್ ಮೀಸಲಾತಿ: ಯಾರಿಗೆ ಲಾಭ, ಯಾರಿಗೆ ನಷ್ಟ?
ಸಂವಾದ
ನ್ಯಾ.ಎಚ್.ಎನ್. ನಾಗಮೋಹನ ದಾಸ್, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ
ಎಚ್.ಎಸ್. ಸಚ್ಚಿದಾನಂದಮೂರ್ತಿ, ಅಧ್ಯಕ್ಷ, ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ
ಭಾಗವಹಿಸುವವರು
ಶ್ರೀಪಾದ ಭಟ್, ಶಿಕ್ಷಣ ತಜ್ಞ ಹಾಗೂ ಸಾಮಾಜಿಕ ಕಾರ್ಯಕರ್ತ
ಡಿ.ಎಸ್. ಅರುಣ, ಶಾಸಕ ಹಾಗೂ ಅಧ್ಯಕ್ಷ, ಕರ್ನಾಟಕ ಆರ್ಯವೈಶ್ಯ ಅಭಿವೃದ್ಧಿ ಮಂಡಳಿ
ಅಖಿಲಾ ವಿದ್ಯಾಸಂದ್ರ, ವಕೀಲೆ, ಸಾಮಾಜಿಕ ಕಾರ್ಯಕರ್ತೆ
ಸಂಜೆ 4ರಿಂದ 5ರವರೆಗೆ
ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8 ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ಕನ್ನಡ ಧ್ವನಿ

ಮೈಸೂರಿನ ರಂಗಾಯಣದ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ರಚಿಸಿದ ‘ಟಿಪ್ಪು ನಿಜಕನಸುಗಳು’ ನಾಟಕ ಕೃತಿಯನ್ನು ಕಾದಂಬರಿಕಾರ ಎಸ್‌.ಎಲ್‌. ಭೈರಪ್ಪ ಭಾನುವಾರ ಬಿಡುಗಡೆ ಮಾಡಿದರು. ವೃಶಾಂಕ ಭಟ್, ವಾದಿರಾಜ್, ಅಡ್ಡಂಡ ಸಿ. ಕಾರ್ಯಪ್ಪ, ಪ್ರತಾಪ ಸಿಂಹ, ರೋಹಿತ್ ಚಕ್ರತೀರ್ಥ ಹಾಗೂ ಶಶಾಂಕ್ ಭಟ್ ಇದ್ದಾರೆ – ಪ್ರಜಾವಾಣಿ ಚಿತ್ರ

ಟಿಪ್ಪು ಕನ್ನಡ ದ್ರೋಹಿ: ಕಾದಂಬರಿಕಾರ ಭೈರಪ್ಪ ಆರೋಪ

# ಪೊಲೀಸ್ ಪಹರೆಯಲ್ಲಿ ‘ಟಿಪ್ಪು ನಿಜಕನಸುಗಳು’ ಬಿಡುಗಡೆ

ಪ್ರಜಾವಾಣಿ ವಾರ್ತೆ

ಮೈಸೂರು: ರಂಗಾಯಣದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ರಚಿಸಿರುವ ‘ಟಿಪ್ಪು ನಿಜಕನಸುಗಳು’ ನಾಟಕ ಕೃತಿಯ ಬಿಡುಗಡೆ ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ಭಾನುವಾರ ನಡೆಯಿತು.

ಕೃತಿಯ ಬಗ್ಗೆ ಟಿಪ್ಪು ಅಭಿಮಾನಿ ಸಂಘಟನೆಗಳ ಆಕ್ಷೇಪದ ಹಿನ್ನೆಲೆಯಲ್ಲಿ ಭದ್ರತೆ ಕಲ್ಪಿಸಲಾಗಿತ್ತು. ರಂಗಾಯಣದ ‘ವನರಂಗ’ದಲ್ಲಿ ನಡೆದ ಕಾರ್ಯಕ್ರಮಕ್ಕೆ ಬಂದಿದ್ದ ಪ್ರತಿಯೊಬ್ಬರನ್ನೂ ತಪಾಸಣೆಗೆ ಒಳಪಡಿಸಲಾಯಿತು.

ಕೃತಿ ಬಿಡುಗಡೆ ಮಾಡಿದ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಮಾತನಾಡಿ, ‘ಟಿಪ್ಪು ಕನ್ನಡ ದ್ರೋಹಿ ಎಂಬುದನ್ನು ಇತಿಹಾಸದ ದಾಖಲೆಗಳನ್ನು ಗಮನಿಸಿ ಒಪ್ಪಿಕೊಳ್ಳಬೇಕಾಗುತ್ತದೆ. ಇದಕ್ಕೆ, ಕಂದಾಯ ಇಲಾಖೆಯಲ್ಲಿ ಇನ್ನೂ ಉಳಿದಿರುವ ಪರ್ಷಿಯನ್, ಪಾರ್ಸಿ ಹೆಸರುಗಳು, ಬದಲಾದ ಹಾಗೂ ಬದಲಾವಣೆಗೆ ಪ್ರಯತ್ನಿಸಿದ ಊರುಗಳ ಹೆಸರು ಸಾಕ್ಷಿ ಎಂದರು.

ಕಾರ್ಯಕ್ರಮಕ್ಕೆ ಬಂದವರನ್ನು ಪೊಲೀಸರು ತಪಾಸಣೆಗೆ ಒಳಪಡಿಸಿದರು

‘ಟಿಪ್ಪು ಜಯಂತಿ ಎಂಬುದು ಪ್ರತಿಸ್ಪರ್ಧಿ ಕೀಟಲೆ ಮನೋಭಾವ’ ಎಂದು ವಿಶ್ಲೇಷಿಸಿದರು.

ಸಂಸದ ಪ್ರತಾಪ ಸಿಂಹ ಮಾತನಾಡಿ, ‘ಟಿಪ್ಪು ಮೈಸೂರು ಹುಲಿ ಅಲ್ಲ; ಹುಲಿಯನ್ನು ಏಕಾಂಗಿಯಾಗಿ ಕೊಂದಿಲ್ಲ. ತಂದೆ ಹೈದರಾಲಿಯಂತೆ ಟಿಪ್ಪು ನೇರ ಯುದ್ಧ ಮಾಡಿಲ್ಲ. ಯುದ್ಧರಂಗದಲ್ಲಿ ಸೈನ್ಯವನ್ನೂ ಮುನ್ನಡೆಸಿಲ್ಲ. ಯುದ್ಧಕ್ಕೆ ಹೆದರಿ ಮಕ್ಕಳನ್ನೇ ಬ್ರಿಟಿಷರ ಒತ್ತೆಯಲ್ಲಿರಿಸಿ ಯುದ್ಧವೆಚ್ಚ ಪಾವತಿಸಿದ್ದ. ಕೊನೆಗೆ ಬ್ರಿಟಿಷರೊಂದಿಗಿನ ಯುದ್ಧದಲ್ಲಿ ಕೋಟೆಯೊಳಗೆ ಸತ್ತು ಬಿದ್ದಿದ್ದ’ ಎಂದು ಆರೋಪಿಸಿದರು.

‘ಟಿಪ್ಪು ಬಗ್ಗೆ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಭಾವಾವೇಶ ಅರ್ಥವಾಗುತ್ತದೆ. ಆದರೆ, ಎಚ್.ವಿಶ್ವನಾಥ ಅವರಿಗೆ ಅನಿವಾರ್ಯತೆ ಏನಿದೆ’ ಎಂದು ಪ್ರಶ್ನಿಸಿದರು.

‘ಮೈಸೂರು ಅಭಿವೃದ್ಧಿ ಹರಿಕಾರ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಇಲ್ಲಿನ ರೈಲು ನಿಲ್ದಾಣಕ್ಕೂ ಒಡೆಯರ್ ಹೆಸರು ನಾಮಕರಣ ಚಿಂತನೆ ಇದೆ’ ಎಂದರು.

## ‘ಮಾಧ್ಯಮ ಅಕಾಡೆಮಿ ಸಹಯೋಗದಲ್ಲಿ ಹೊಸ ಕೋರ್ಸ್’

ಬೆಂಗಳೂರು: ‘ಕೌಶಲಾಭಿವೃದ್ಧಿ ಇಲಾಖೆಯು ಕರ್ನಾಟಕ ಮಾಧ್ಯಮ ಅಕಾಡೆಮಿ ಸಹಯೋಗದಲ್ಲಿ ಪತ್ರಿಕೋದ್ಯಮ ಸರ್ಟಿಫಿಕೇಟ್ ಕೋರ್ಸ್ ಆರಂಭಿಸಲಿದೆ’ ಎಂದು ಉನ್ನತ ಶಿಕ್ಷಣ ಹಾಗೂ ಕೌಶಲಾಭಿವೃದ್ಧಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಪ್ರಕಟಿಸಿದರು.

ಪ್ರಸಾರ ಭಾರತಿ ಮತ್ತು ಕರ್ನಾಟಕ ಮಾಧ್ಯಮ ಅಕಾಡೆಮಿ ಜಂಟಿಯಾಗಿ ಬೆಂಗಳೂರು ದೂರದರ್ಶನ ಕೇಂದ್ರದಲ್ಲಿ ಭಾನುವಾರ ಆಯೋಜಿಸಿದ್ದ ‘ಮಾಧ್ಯಮ ಮೈಲುಗಲ್ಲು ನಲವತ್ತರ ಹೊಸ್ತಿಲು’ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ‘ಪತ್ರಿಕೋದ್ಯಮ ಕ್ಷೇತ್ರದ ಈಗಿನ ಬೇಡಿಕೆಗೆ ಅನುಗುಣವಾಗಿ ಡಿಜಿಟಲ್ ತಂತ್ರಜ್ಞಾನದ ಬಳಕೆ ಸೇರಿದಂತೆ ಸಮಗ್ರ ಕಲಿಕೆಯ ಕೋರ್ಸ್ ಆರಂಭಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದರು.

ಪತ್ರಕರ್ತರ ಜ್ಞಾನ ಮತ್ತು ಕೌಶಲ ಅಭಿವೃದ್ಧಿಗೆ ಪೂರಕವಾಗಿ ಹೊಸ ಕೋರ್ಸ್ ಆರಂಭಿಸುವಂತೆ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ ಮನವಿ ಮಾಡಿದರು. ವೇದಿಕೆಯಲ್ಲೇ ಸ್ಪಂದಿಸಿದ ಸಚಿವರು, ಸರ್ಟಿಫಿಕೇಟ್ ಕೋರ್ಸ್ ಆರಂಭಿಸುವ ತೀರ್ಮಾನ ಪ್ರಕಟಿಸಿದರು.

ನಟಿ ಪ್ರಿಯಾಂಕಾ ಉಪೇಂದ್ರ, ‘ಚಂದನದಲ್ಲಿ ಬಳಸುವ ಭಾಷೆಯ ಅತ್ಯುತ್ತಮವಾಗಿರುತ್ತದೆ. ಇದರಿಂದ ಕನ್ನಡ ಕಲಿಕೆಯಾಗುತ್ತದೆ’ ಎಂದರು.

## ಸುರಕೋಡ: ಸ್ವಜಾತಿಯವರಿಂದಲೇ ಬಹಿಷ್ಕಾರ

ನರಗುಂದ (ಗದಗ ಜಿಲ್ಲೆ): ಪ್ರೀತಿಸಿ ಮದುವೆಯಾದ ಒಂದೇ ಜಾತಿಯ ಯುವಕ, ಯುವತಿ 14 ವರ್ಷಗಳ ನಂತರ ಗ್ರಾಮಕ್ಕೆ ಬಂದಿದ್ದು, ಅವರ ಕುಟುಂಬವನ್ನು ಅದೇ ಜಾತಿಯವರು ಬಹಿಷ್ಕರಿಸಿದ ಪ್ರಕರಣ ತಾಲ್ಲೂಕಿನ ಸುರಕೋಡದಲ್ಲಿ ನಡೆದಿದೆ.

ಶೋಭಾ ಮತ್ತು ಶಿವಾನಂದ ಅವರ ಕುಟುಂಬ ಬಹಿಷ್ಕಾರಕ್ಕೊಳಗಾಗಿದೆ.

‘ಶೋಭಾ ಮನೆಯವರು ಕೆಲವರೊಂದಿಗೆ ಬಂದು ಶಿವಾನಂದ ಸುರಕೋಡ (ಮಾದರ) ಅವರ ತಂದೆ ಸಾಬಣ್ಣನವರ ಮನೆಗೆ ಕೀಲಿ ಹಾಕಿ ಕುಟುಂಬವನ್ನು ಹೊರಹಾಕಿದ್ದಾರೆ. ನಮ್ಮ ಜನಾಂಗದವರ ಜೊತೆ ನಾವು ಯಾರಾದರೂ ಮಾತನಾಡಿದರೆ ₹1 ಸಾವಿರ ದಂಡ ಹಾಗೂ ಬಹಿಷ್ಕಾರ ಹಾಕುವುದಾಗಿ ಎಚ್ಚರಿಸಿದ್ದಾರೆ’ ಎಂದು ಶಿವಾನಂದ ಅವರ ಸಹೋದರ ಮುತ್ತು ಸುರಕೋಡ ಭಾನುವಾರ ತಿಳಿಸಿದರು.

ಸಾಬಣ್ಣ ಮಾದರ ಅವರ ಕುಟುಂಬ ಸ್ವಜಾತಿಯವರಿಂದಲೇ ಬಹಿಷ್ಕಾರಕ್ಕೊಳಗಾಗಿ ಬೀದಿಯಲ್ಲಿಯೇ ಬದುಕು ಸಾಗಿಸುತ್ತಿದೆ

‘ಸುರಕೋಡ ಗ್ರಾಮಕ್ಕೆ ಶನಿವಾರ ತಾಲ್ಲೂಕು ಪಂಚಾಯಿತಿ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಬಹಿಷ್ಕಾರ ಹಾಕಿರುವುದನ್ನು ಪರಿಶೀಲಿಸಲಾಗಿದೆ. ಕುಟುಂಬಕ್ಕೆ ಪ್ರತ್ಯೇಕ ನಿವೇಶನ ನೀಡಲು ಸ್ಥಳ ಗುರುತಿಸಲಾಗಿದೆ’ ಎಂದು ತಹಶೀಲ್ದಾರ್ ಎ.ಡಿ. ಅಮರವಾದಗಿ ಹೇಳಿದರು.

## ಜೀವ ಬೆದರಿಕೆ: ಮಣಿಕಂಠ ವಿರುದ್ಧ ಪ್ರಕರಣ

ಕಲಬುರಗಿ: ಶಾಸಕ ಪ್ರಿಯಾಂಕ್ ಖರ್ಗೆ ಅವರಿಗೆ ಜೀವ ಬೆದರಿಕೆ ಒಡ್ಡಿದ ಆರೋಪದ ಮೇಲೆ ಬಿಜೆಪಿ ಮುಖಂಡ ಮಣಿಕಂಠ ರಾಠೋಡ ವಿರುದ್ಧ ನಗರದ ಬ್ರಹ್ಮಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಆರೋಪಿ ಬಂಧನಕ್ಕೆ ಐವರು ಪೊಲೀಸ್ ತಂಡ ಹೈದರಾಬಾದ್‌ಗೆ ತೆರಳಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಪ್ರಿಯಾಂಕ್ ಖರ್ಗೆ ಮಾತನಾಡುವ ವೇಳೆ, ತಾಳ್ಮೆ ಮೀರಿದರೆ ಬಿಜೆಪಿಯವರಿಗೆ ಓಡಾಡಲು ಬಿಡುವುದಿಲ್ಲ ಎಂದಿದ್ದಾರೆ. ಅವರ ಕ್ರಿಯೆಗೆ ಪ್ರತಿಕ್ರಿಯೆ ಕೊಟ್ಟಿದ್ದಾರೆ’ ಎಂದು ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ತಿಳಿಸಿದರು.

ನಾಗರಹೊಳೆ: ಉರುಳಿಗೆ ಸಿಲುಕಿ ತಾಯಿ ಹುಲಿ ಸಾವು

# 3 ಹುಲಿ ಮರಿ ರಕ್ಷಣೆಗೆ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): ನಾಗರಹೊಳೆ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಅಂತರಸಂತೆ ವನ್ಯಜೀವಿ ವಲಯ ವ್ಯಾಪ್ತಿಯ ಕಾಡಂಚಿನಲ್ಲಿ ಉರುಳಿಗೆ ಸಿಲುಕಿ ತಾಯಿ ಹುಲಿ ಮೃತಪಟ್ಟ ಹಿನ್ನೆಲೆಯಲ್ಲಿ, ಅದರ ಮೂರು ಮರಿಗಳನ್ನು ರಕ್ಷಿಸಲು ಅರಣ್ಯ ಇಲಾಖೆ ಕ್ರಮ ವಹಿಸಿದೆ. ನಾಲ್ಕು ಆನೆಗಳನ್ನು ಬಳಸಿಕೊಂಡು ಭಾನುವಾರ ಪತ್ತೆ ಕಾರ್ಯಾಚರಣೆ ಆರಂಭಿಸಿದೆ.

ದಮ್ಮನಕಟ್ಟೆ ಸಫಾರಿ ಕೇಂದ್ರದ ಆಕರ್ಷಣೆಯಾಗಿದ್ದ, 9 ಮರಿಗಳಿಗೆ ಜನ್ಮ ನೀಡಿ ಪ್ರಖ್ಯಾತಿ ಪಡೆದಿದ್ದ ‘ನಾಯಂಜಿಕಟ್ಟೆ ಫೀಮೆಲ್’ (12) ಹುಲಿಯ ಕಳೇಬರ ಶನಿವಾರ ಪತ್ತೆಯಾಗಿತ್ತು.

‘ತಾಯಿ ಇಲ್ಲದೆ ಅನಾಥವಾಗಿರುವ 1 ವರ್ಷದ 3 ಹುಲಿ ಮರಿಗಳು ಬೇಟೆಯಾಡಿ ಜೀವಿಸಲು ಸಾಧ್ಯವಿಲ್ಲ. ಅವುಗಳನ್ನು ಅರಿವಳಿಕೆ ಚುಚ್ಚುಮದ್ದು ನೀಡಿ ಸೆರೆ ಹಿಡಿಯಲು ಇಲಾಖೆಯಿಂದ ಅನುಮತಿ ದೊರೆತಿದೆ. ಚಲನವಲನ ವಿದ್ದ ಜಾಗಗಳಲ್ಲಿ ಕಾರ್ಯಾಚರಣೆ ಆರಂಭಿಸಲಾಗಿದೆ’ ಎಂದು ವಲಯ ಅರಣ್ಯಾಧಿಕಾರಿ ಸಿದ್ದರಾಜು ತಿಳಿಸಿದರು.

ಕಾರ್ಯಾಚರಣೆಯಲ್ಲಿ ಅಭಿಮನ್ಯು ಹಾಗೂ ಭೀಮ ಆನೆ

‘ಮರಿಗಳ ಹೆಜ್ಜೆ ಗುರುತುಗಳು ಇದ್ದ ಕಡೆ ಮೂರು ಬೋನುಗಳನ್ನು ಇಡಲಾಗಿದೆ’ ಎಂದು ಪ್ರತಿಕ್ರಿಯಿಸಿದರು.

‘ಕಾರ್ಯಾಚರಣೆಯಲ್ಲಿ ‘ಅಭಿಮನ್ಯು’, ‘ಭೀಮ’ ಸೇರಿದಂತೆ ನಾಲ್ಕು ಆನೆಗಳ ಸಹಕಾರದಿಂದ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ’ ಎಂದು ಇಲಾಖೆಯ ಪಶುವೈದ್ಯ ಡಾ.ರಮೇಶ್ ತಿಳಿಸಿದರು.

ಪ್ರತಿ ಬಾರಿಯೂ ಮೂರು ಮರಿಗಳಂತೆ ಒಟ್ಟು 9 ಮರಿಗಳಿಗೆ ಜನ್ಮ ನೀಡಿದ್ದ ‘ತಾರಕ ಹಿನ್ನೀರು ಹುಲಿ’ ಎಂದೇ ತಾಯಿ ಹುಲಿ ಹೆಸರಾಗಿತ್ತು. ಅದು 2020ರ ಜನವರಿಯಲ್ಲಿ 3 ಮರಿಗಳೊಂದಿಗೆ ನಾಯಂಜಿಕಟ್ಟೆ ಕೆರೆಯಲ್ಲಿ ನೀರಿನಲ್ಲಿ ಚೆಲ್ಲಾಟವಾಡುತ್ತಿದ್ದ ದೃಶ್ಯಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಜನರು ಹಂಚಿಕೊಂಡಿದ್ದರು.

ಸೋಮವಾರ, ನವೆಂಬರ್ 14, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 314 | ಪುಟ 14
● www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಣಿಪಾಲ್ ಹಾಸ್ಪಿಟಲ್ಸ್
ಅವರ ಪರಿಸ್ಥಿತಿ ತಿಳಿಯಲು ಸ್ಕ್ಯಾನ್ ಮಾಡಿ
ಸ್ಟ್ರೋಕ್ ಚಿಕಿತ್ಸೆಗೆ ಮಣಿಪಾಲ್ ಹಾಸ್ಪಿಟಲ್ಸ್ ಸದಾ ಸನ್ನದ್ಧ
MARS 080 2222 1111

ಮಕ್ಕಳ ದಿನಾಚರಣೆಯ ಶುಭಾಶಯಗಳು

ಆರ್‌ಎಸ್‌ಎಸ್ ಮುಖಂಡ ಇಂದ್ರೇಶ್ ಕುಮಾರ್ ಹೇಳಿಕೆ
**‘ಶೇ 99ರಷ್ಟು ಮುಸ್ಲಿಮರು ಹಿಂದೂಸ್ತಾನಿಗಳೇ’** 4

ಅರಣ್ಯ ಸಂರಕ್ಷಣೆ ಕಾಯ್ದೆ ಜಾರಿಯಾದ ಬಳಿಕ 771 ಪ್ರಸ್ತಾವಗಳಿಗೆ ಒಪ್ಪಿಗೆ

# ‘ಅಭಿವೃದ್ಧಿ’ಗಾಗಿ 79,702 ಎಕರೆ ಕಾಡು

● ಮಂಜುನಾಥ ಹೆಬ್ಬಾರ್



ಪ್ರಜಾವಾಣಿ ವಿಶೇಷ

ನವದೆಹಲಿ: ಕೇಂದ್ರ ಸರ್ಕಾರವು ‘ಅರಣ್ಯ ಸಂರಕ್ಷಣೆ ಕಾಯ್ದೆ 1980’ಗೆ ತಿದ್ದುಪಡಿ ತರಲು ಉಮೇದು ತೋರುತ್ತಿರುವ ಹೊತ್ತಿನಲ್ಲಿ ಕರ್ನಾಟಕದಲ್ಲಿ ಕಳೆದ ನಾಲ್ಕು ದಶಕಗಳಲ್ಲಿ ಗಣಿಗಾರಿಕೆ, ರಾಷ್ಟ್ರೀಯ ಹೆದ್ದಾರಿ, ವಿದ್ಯುತ್ ಮಾರ್ಗ ನಿರ್ಮಾಣ ಸೇರಿದಂತೆ ವಿವಿಧ ‘ಅಭಿವೃದ್ಧಿ’ ಯೋಜನೆಗಳಿಗೆ 31,881 ಹೆಕ್ಟೇರ್ (79,702 ಎಕರೆ) ಅರಣ್ಯ ಭೂಮಿಯನ್ನು ಬಳಸಿಕೊಂಡಿರುವುದು ಮುನ್ನೆಲೆಗೆ ಬಂದಿದೆ.

ಕೇಂದ್ರ ಸರ್ಕಾರವು ಈ ಕಾಯ್ದೆಗೆ ತಿದ್ದುಪಡಿ ತಂದು ಅರಣ್ಯ ಕಾನೂನನ್ನು ಉದಾರಗೊಳಿಸಲು ಮುಂದಾಗಿದೆ. ರಕ್ಷಣೆ, ಗಡಿಯಲ್ಲಿ ಮೂಲ ಸೌಕರ್ಯ, ಹೆದ್ದಾರಿ ಅಭಿವೃದ್ಧಿ ಯೋಜನೆ ಸೇರಿದಂತೆ ಪ್ರಮುಖ ಯೋಜನೆಗಳಿಗೆ ಪೂರ್ವಾನುಮತಿ ಪಡೆಯದೆ ಅರಣ್ಯ ಭೂಮಿಯ ಮುಕ್ತ ಬಳಕೆಗೆ ಅವಕಾಶ ನೀಡುವುದು ಇದರ ಉದ್ದೇಶ. ಕಾಯ್ದೆಗೆ ತಿದ್ದುಪಡಿ ತರಲು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯವು ಆಕ್ಷೇಪಣೆ ಆಹ್ವಾನಿಸಿತ್ತು. ಇದಕ್ಕೆ ಪರಿಸರವಾದಿಗಳಿಂದ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಪ್ರಭಾವಿ ಕಂಪನಿಗಳು ಹಾಗೂ ಖಾಸಗಿ ಹೂಡಿಕೆದಾರರಿಗೆ ಅನುಕೂಲ ಮಾಡಿಕೊಡಲು ಕಾಯ್ದೆಗೆ ತಿದ್ದುಪಡಿ ತರಲಾಗುತ್ತಿದೆ ಎಂದು ಪರಿಸರವಾದಿಗಳು ಆಕ್ರೋಶ ವ್ಯಕ್ತಪಡಿಸಿದ್ದರು. ಹೀಗಾಗಿ, ಆಕ್ಷೇಪಣೆಗಳನ್ನು ಸಮಗ್ರ ಪರಿಶೀಲಿಸಿ ಮುಂದಿನ ಹೆಜ್ಜೆ ಇಡಲು ಸರ್ಕಾರ ನಿರ್ಧರಿಸಿದೆ ಎಂದು ಪರಿಸರ ಸಚಿವಾಲಯದ ಮೂಲಗಳು ತಿಳಿಸಿವೆ.

1980ರಿಂದ 2000ರ ಅವಧಿಯಲ್ಲಿ ಸಲ್ಲಿಕೆಯಾದ ಪ್ರಸ್ತಾವನೆಗಳ ಸಂಖ್ಯೆ ಕಡಿಮೆ. 2000ರ ಬಳಿಕ ಹೆಚ್ಚಿನ ಸಂಖ್ಯೆಯ ಪ್ರಸ್ತಾವನೆಗಳಿಗೆ ಒಪ್ಪಿಗೆ ನೀಡಲಾಗಿದೆ. ಈ ಅವಧಿಯಲ್ಲಿ ಗಣಿಗಾರಿಕೆ ಉದ್ದೇಶಕ್ಕೆ ದೊಡ್ಡ ಪ್ರಮಾಣದಲ್ಲಿ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕೆ ಬಳಸಲಾಗಿದೆ. ಬಳ್ಳಾರಿ, ಚಿತ್ರದುರ್ಗ ಹಾಗೂ ಸುತ್ತಮುತ್ತಲ ಜಿಲ್ಲೆಗಳಲ್ಲಿ ಸುಮಾರು 5 ಸಾವಿರ ಹೆಕ್ಟೇರ್‌ನಷ್ಟು ಅರಣ್ಯವನ್ನು ಗಣಿಗಾರಿಕೆಗೆ ಬಳಸಲಾಗಿದೆ. ಅಂಕಿ ಅಂಶಗಳ ಪ್ರಕಾರ, ಅರಣ್ಯ ಪ್ರದೇಶದಲ್ಲಿ ಗಣಿ ಚಟುವಟಿಕೆಗಾಗಿ ಒಪ್ಪಿಗೆ ಪಡೆದ ಕಂಪನಿಗಳ ಸಂಖ್ಯೆ 50 ದಾಟುತ್ತದೆ.

ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ಹಾಗೂ ಕರ್ನಾಟಕ ಅರಣ್ಯ ಇಲಾಖೆಯ ಅಂಕಿ ಅಂಶಗಳ ಪ್ರಕಾರ, ಕರ್ನಾಟಕದಲ್ಲಿ 1980ರಿಂದ ಇಲ್ಲಿಯವರೆಗೆ ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಕ್ಕೆ ಬಳಸಲು ಸಲ್ಲಿಕೆಯಾದ 771 ಪ್ರಸ್ತಾವನೆಗಳಿಗೆ ಅನುಮತಿ ನೀಡಲಾಗಿದೆ. ನೀರಾವರಿ, ರಸ್ತೆ, ವಿದ್ಯುದ್ದೀಕರಣ, ಗಣಿಗಾರಿಕೆ, ಕಟ್ಟಡ ನಿರ್ಮಾಣ ಸೇರಿದಂತೆ ವಿವಿಧ ಉದ್ದೇಶಗಳಿಗೆ ಅರಣ್ಯ ಭೂಮಿಯನ್ನು ಬಳಸಲು ಅನುಮೋದನೆ ಕೋರಿರುವ 79 ಪ್ರಸ್ತಾವನೆಗಳು ಪರಿಸರ ಸಚಿವಾಲಯದ ಮುಂದೆ ಇದೆ.

ಅರಣ್ಯ ಸಂರಕ್ಷಣೆ ಕಾಯ್ದೆ 1980ರಡಿ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕೆ ಬಳಸಲು ಕೇಂದ್ರ ಅರಣ್ಯ, ಪರಿಸರ ಮತ್ತು ತಾಪಮಾನ ಬದಲಾವಣೆ ಸಚಿವಾಲಯಕ್ಕೆ ಪ್ರಸ್ತಾವನೆ ಸಲ್ಲಿಸಬೇಕು. ಪ್ರಸ್ತಾವನೆಗಳ ಸಾಧಕ–ಬಾಧಕಗಳನ್ನು ಪರಿಶೀಲಿಸಿ ಸಚಿವಾಲಯ ಅನುಮೋದನೆ ನೀಡುತ್ತದೆ. ಕಳೆದ ಮೂರು ವರ್ಷಗಳಲ್ಲಿ 1,865 ಎಕರೆ ಅರಣ್ಯ ಬಳಕೆಗೆ (48 ಪ್ರಸ್ತಾವನೆಗಳು) ಪೂರ್ವಾನುಮೋದನೆ ನೀಡಲಾಗಿದೆ.

ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಕ್ಕೆ ಬಳಸುವ ವೇಳೆ ಪರಿಹಾರಾತ್ಮಕ ಅರಣ್ಯೀಕರಣಕ್ಕೆ ಆದ್ಯತೆ ನೀಡಬೇಕು ಎಂದು 2016ರಲ್ಲಿ ಆದೇಶ ಹೊರಡಿಸಲಾಗಿದೆ. ಬದಲಿಯಾಗಿ ಕಂದಾಯ ಭೂಮಿಯನ್ನು ನೀಡಬೇಕು ಎಂಬ ಷರತ್ತು ಇದೆ. ಕಳೆದ ಮೂರು ವರ್ಷಗಳಲ್ಲಿ 25 ಪ್ರಕರಣಗಳಲ್ಲಿ 425 ಎಕರೆ ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಲಾಗಿದೆ.

## ಅನ್ಯ ಉದ್ದೇಶಕ್ಕೆ ಅರಣ್ಯ ಬಳಕೆ ಪ್ರಮಾಣ

| ಇಲಾಖೆ/ಸಂಸ್ಥೆ | ಪ್ರಕರಣ | ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) |
|---|---|---|
| ಸೀಬರ್ಡ್ | 10 | 4,851 |
| ಸೇನೆ | 2 | 476 |
| ಅರಣ್ಯ | 3 | 1,979 |
| ಜಲಸಂಪನ್ಮೂಲ | 2 | 245 |
| ಸಣ್ಣ ನೀರಾವರಿ | 39 | 561 |
| ಕಂದಾಯ | 5 | 200 |
| ಕೈಗಾ | 6 | 737 |
| ಕೆಬಿಜೆಎನ್‌ಎಲ್ | 5 | 225 |
| ಕೆಐಎಡಿಬಿ | 2 | 565 |
| ಕೆಐಒಸಿಎಲ್ | 1 | 1,452 |
| ಕೆಎನ್‌ಎನ್‌ಎಲ್ | 19 | 1,253 |
| ಕೆಪಿಸಿಎಲ್ | 9 | 5,140 |
| ಕೆಪಿಟಿಸಿಎಲ್ | 86 | 887 |
| ಮೈಸೂರು ಮಿನರಲ್ಸ್ | 7 | 329 |
| ರಾಷ್ಟ್ರೀಯ ಹೆದ್ದಾರಿ | 23 | 393 |
| ಎನ್‌ಎಂಡಿಸಿ | 3 | 953 |
| ರೈಲ್ವೆ | 13 | 426 |
| ಎನರ್‌ಕಾನ್ | 5 | 643 |
| ಜೆಎಸ್‌ಡಬ್ಲ್ಯು | 7 | 304 |
| ಎಂಎಸ್‌ಪಿಎಲ್ | 5 | 408 |
| ಸುಜ್ಲಾನ್ | 13 | 402 |
| ತುಂಗಭದ್ರಾ ಮಿನರಲ್ಸ್ | 3 | 392 |
| ಇತರ ಖಾಸಗಿ ಕಂಪನಿಗಳು | 78 | 1,291 |
| ಇತರ ವ್ಯಕ್ತಿಗಳು | 35 | 990 |

(*200 ಹೆಕ್ಟೇರ್‌ಗಿಂತ ಹೆಚ್ಚು ಪಡೆದ ಇಲಾಖೆ/ಸಂಸ್ಥೆಗಳ ಹೆಸರನ್ನು ಮಾತ್ರ ನೀಡಲಾಗಿದೆ)

## ಇಂಗ್ಲೆಂಡ್ ವಿಶ್ವ ಚಾಂಪಿಯನ್

ಆಸ್ಟ್ರೇಲಿಯಾದ ಮೆಲ್ಬರ್ನ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಪಾಕಿಸ್ತಾನದ ವಿರುದ್ಧ ಐದು ವಿಕೆಟ್‌ಗಳಿಂದ ಗೆದ್ದ ಇಂಗ್ಲೆಂಡ್ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು
-ಎಎಫ್‌ಪಿ ಚಿತ್ರ

ಸುದ್ದಿ 9

## ಅಮೆರಿಕ ಸೆನೆಟ್ ಚುನಾವಣೆ ಡೆಮಾಕ್ರಟಿಕ್ ಪಕ್ಷಕ್ಕೆ ಬಹುಮತ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಸೆನೆಟ್‌ಗೆ ಡೆಮಾಕ್ರಟಿಕ್ ಪಕ್ಷದ ಇಬ್ಬರು ಅಭ್ಯರ್ಥಿಗಳು ಆಯ್ಕೆಯಾಗಿದ್ದು, ಈ ಮೂಲಕ ಪಕ್ಷವು ಬಹುಮತ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಈ ಗೆಲುವು ಅಧ್ಯಕ್ಷ ಜೋ ಬೈಡನ್ ಅವರ ಉಳಿದ ಅವಧಿಗೆ ಹೆಚ್ಚಿನ ಬಲವನ್ನು ನೀಡಿದೆ.

ಆಡಳಿತ ಕಾರ್ಯಸೂಚಿ ಮತ್ತು ನ್ಯಾಯಮೂರ್ತಿಗಳ ನೇಮಕ ಮತ್ತು ಆಯಕಟ್ಟಿನ ಸ್ಥಾನಗಳಿಗೆ ನೇಮಕ ಮಾಡುವಲ್ಲಿ ಜೋ ಬೈಡನ್ ಅವರ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿ ಎಂದೇ ಇಬ್ಬರು ಸದಸ್ಯರ ಗೆಲುವನ್ನು ವಿಶ್ಲೇಷಿಸಲಾಗಿದೆ.

ಕಾರ್ಟೆಜ್ ಮಾಸ್ಟೊ ಅವರು ನೆವಾಡಾದಿಂದ ಪ್ರತಿಸ್ಪರ್ಧಿ ರಿಪಬ್ಲಿಕನ್ ಪಕ್ಷದ ಆಡಂ ಲಕ್ಸಲ್ಟ್ ವಿರುದ್ಧ ಜಯಗಳಿಸಿದರೆ, ಮಾರ್ಕ್ ಕೆಲಿ ಅವರು ಅರಿಜೋನಾದಲ್ಲಿ ರಿಪಬ್ಲಿಕನ್ ಪಾರ್ಟಿಯ ಬ್ಲೇಕ್ ಮಾಸ್ಟರ್ ವಿರುದ್ಧ ಜಯಗಳಿಸಿದರು.

ಈ ಫಲಿತಾಂಶದೊಂದಿಗೆ 100 ಸದಸ್ಯ ಬಲದ ಅಮೆರಿಕದ ಸೆನೆಟ್‌ನಲ್ಲಿ ಡೆಮಾಕ್ರಟಿಕ್ ಪಕ್ಷದ ಬಲ 50ಕ್ಕೆ ಏರಿದೆ. ರಿಪಬ್ಲಿಕನ್ ಪಾರ್ಟಿ ಬಲ 49 ಆಗಿದ್ದು, ಜಾರ್ಜಿಯಾದ ಫಲಿತಾಂಶ ಬರಬೇಕಿದೆ. ಉಭಯ ಪಕ್ಷಗಳ ಬಲ ಸಮ ಆದಲ್ಲಿ ಡೆಮಾಕ್ರಟಿಕ್ ಪಕ್ಷದವರೇ ಆದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ತಮ್ಮ ವಿವೇಚನಾ ಮತ ಚಲಾಯಿಸುವರು.

‘ಈ ಫಲಿತಾಂಶವು ಡೆಮಾಕ್ರಟಿಕ್ ಪಕ್ಷದ ಕಾರ್ಯಸೂಚಿಗೆ ದೊರೆತ ಗೆಲುವು. ಅಮೆರಿಕದ ಜನರ ಗೆಲುವು’ ಎಂದು ಸೆನೆಟ್‌ನಲ್ಲಿನ ಪಕ್ಷದ ನಾಯಕ ಚುಕ್ ಶುಮೆರ್ ಅವರು ಪ್ರತಿಕ್ರಿಯಿಸಿದರು.

ನ.8ರಂದು ಮಧ್ಯಂತರ ಚುನಾವಣೆ ನಡೆದಿತ್ತು. ಆಡಳಿತ ವಿರೋಧಿ ಅಲೆ ಎದುರಾಗಬಹುದು ಎಂದು ರಾಜಕೀಯ ತಜ್ಞರು ವಿಶ್ಲೇಷಿಸಿದ್ದರು. ಆದರೆ, ಈಗ ಅದಕ್ಕೆ ಭಿನ್ನವಾದ ಚಿತ್ರಣವಿದೆ. ಪ್ರತಿಪಕ್ಷವಾಗಿರುವ ರಿಪಬ್ಲಿಕನ್ ಬಹುಮತ ಪಡೆಯಲು ತಿಣುಕಾಡುತ್ತಿದೆ.

## ಪ್ರತಿಕೂಲ ಹವಾಮಾನ ‘ವಿಕ್ರಂ–ಎಸ್’ ರಾಕೆಟ್ ಉಡಾವಣೆ ಮುಂದಕ್ಕೆ

ನವದೆಹಲಿ (ಪಿಟಿಐ): ‘ಖಾಸಗಿಯಾಗಿ ಅಭಿವೃದ್ಧಿಪಡಿಸಲಾಗಿರುವ ದೇಶದ ಮೊದಲ ರಾಕೆಟ್ ‘ವಿಕ್ರಂ–ಎಸ್’ನ ಉಡಾವಣೆಯನ್ನು ಪ್ರತಿಕೂಲ ಹವಾಮಾನದ ಕಾರಣ ಮುಂದೂಡಲಾಗಿದೆ’ ಎಂದು ಹೈದರಾಬಾದ್ ಮೂಲದ ಬಾಹ್ಯಾಕಾಶ ನವೋದ್ಯಮ ಸಂಸ್ಥೆ ‘ಸ್ಕೈರೂಟ್ ಏರೋಸ್ಪೇಸ್’ ಭಾನುವಾರ ತಿಳಿಸಿದೆ.

‘ಇದೇ 15ರಂದು ರಾಕೆಟ್ ಉಡಾವಣೆ ಮಾಡಲು ನಿರ್ಧರಿಸಲಾಗಿತ್ತು. ಪ್ರತಿಕೂಲ ಹವಾಮಾನದಿಂದಾಗಿ ಇದನ್ನು ಮುಂದೂಡಲಾಗಿದೆ. ಇಸ್ರೊದ ಶ್ರೀಹರಿಕೋಟ ಉಡ್ಡಯನ ಕೇಂದ್ರದಿಂದ 18ರಂದು ಬೆಳಿಗ್ಗೆ 11.30ಕ್ಕೆ ರಾಕೆಟ್ ಉಡಾವಣೆ ಮಾಡುವ ಸಾಧ್ಯತೆ ಹೆಚ್ಚಿದೆ’ ಎಂದು ಸ್ಕೈರೂಟ್ ಏರೋಸ್ಪೇಸ್‌ನ ವಕ್ತಾರ ಹೇಳಿದ್ದಾರೆ.

ಪ್ರಸಿದ್ಧ ಬಾಹ್ಯಾಕಾಶ ವಿಜ್ಞಾನಿ ವಿಕ್ರಂ ಸಾರಾಭಾಯ್ ಅವರ ಸ್ಮರಣಾರ್ಥವಾಗಿ ಈ ರಾಕೆಟ್‌ಗೆ ‘ವಿಕ್ರಂ–ಎಸ್’ ಎಂದು ಹೆಸರಿಡಲಾಗಿದೆ.

ನಾಮಪತ್ರ ಸಲ್ಲಿಸಲು ಬಂದಾಗ ಚಪ್ಪಾಳೆ ಹೊಡೆಯಿರಿ

# ಎಲ್ಲರ ಒತ್ತಾಸೆಯಿದೆ; ಆಗಲ್ಲ ಎನ್ನಲಾರೆ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಕೋಲಾರ: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೋಲಾರ ಕ್ಷೇತ್ರದಿಂದ ಸ್ಪರ್ಧಿಸುವ ಸುಳಿವನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಭಾನುವಾರ ನೀಡಿದರು.

‘ನಾನು ಈಗ ನಾಮಪತ್ರ ಸಲ್ಲಿಸಲು ಬಂದಿಲ್ಲ. ಹೈಕಮಾಂಡ್ ಒಪ್ಪಿಗೆ ಸೂಚಿಸಿ ನಾಮಪತ್ರ ಸಲ್ಲಿಸಲು ಮತ್ತೆ ಇಲ್ಲಿಗೆ ಬಂದಾಗ ಜೋರು ಚಪ್ಪಾಳೆ ಹೊಡೆಯಿರಿ. ಕೋಲಾರದಲ್ಲೇ ಸ್ಪರ್ಧಿಸಬೇಕೆಂಬ ಎಲ್ಲರ ಒತ್ತಾಸೆ ಇದ್ದು, ಆಗಲ್ಲ ಎನ್ನಲಾರೆ’ ಎಂದು ಹೇಳಿದರು. ಮುಖಂಡರು, ಕಾರ್ಯಕರ್ತರು ಜೋರು ಚಪ್ಪಾಳೆ ಮೂಲಕ ಸಂಭ್ರಮಿಸಿದರು.

ಕ್ಷೇತ್ರದಲ್ಲಿ ಸ್ಪರ್ಧೆಗೆ ಅಖಾಡ ಸಿದ್ಧಮಾಡಿಕೊಳ್ಳಲು ಹಾಗೂ ಜನರ ನಾಡಿಮಿಡಿತ ಅರಿಯಲು ದಿನವಿಡೀ ದೇಗುಲ, ಮಸೀದಿ, ಚರ್ಚ್‌ಗೆ ತೆರಳಿ ಪೂಜೆ, ಪ್ರಾರ್ಥನೆ ಸಲ್ಲಿಸಿದರು. ವಾಲ್ಮೀಕಿ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಮಹಾತ್ಮ ಗಾಂಧಿ, ಬಿ.ಆರ್. ಅಂಬೇಡ್ಕರ್, ಕೈವಾರ ತಾತಯ್ಯ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಆನಂತರ ಕನಕ ಮಂದಿರಕ್ಕೆ ಭೇಟಿ ನೀಡಿದರು.

4ನೇ ಪುಟ ನೋಡಿ

### ಒಂದಾಗದ ಬಣಗಳು

ಸಿದ್ದರಾಮಯ್ಯ ಕೋಲಾರಕ್ಕೆ ಭೇಟಿ ನೀಡಿದರೂ ಜಿಲ್ಲಾ ಕಾಂಗ್ರೆಸ್‌ನಲ್ಲಿರುವ ಮಾಜಿ ಸಂಸದ ಕೆ.ಎಚ್. ಮುನಿಯಪ್ಪ ಮತ್ತು ಶಾಸಕ ಕೆ.ಆರ್. ರಮೇಶ್ ಕುಮಾರ್ ನೇತೃತ್ವದ ಬಣಗಳನ್ನು ಒಂದುಗೂಡಿಸಲು ಸಾಧ್ಯವಾಗಲಿಲ್ಲ.

ಎರಡೂ ಬಣಗಳು ಪ್ರತ್ಯೇಕವಾಗಿಯೇ ಸಿದ್ದರಾಮಯ್ಯ ಅವರನ್ನು ಸ್ವಾಗತಿಸಿದವು. ನಗರದ ಅಂಬೇಡ್ಕರ್ ಪ್ರತಿಮೆ ಬಳಿ ಸ್ವಾಗತ ಕೋರಿದ ಮುನಿಯಪ್ಪ ಅವರ ಬೆಂಬಲಿಗರು ನಂತರ ಮತ್ತೆ ಎಲ್ಲಿಯೂ ಕಾಣಿಸಿಕೊಳ್ಳಲಿಲ್ಲ. ರಮೇಶ್ ಕುಮಾರ್ ಅವರ ಬೆಂಬಲಿಗರು ಸಿದ್ದರಾಮಯ್ಯ ಬೆಂಗಳೂರಿಗೆ ತೆರಳುವವರೆಗೂ ಜೊತೆಯಲ್ಲಿಯೇ ಇದ್ದರು.

ಹೈಕಮಾಂಡ್ ಬುಲಾವ್ ಮೇರೆಗೆ ಮುನಿಯಪ್ಪ ಗುಜರಾತ್‌ಗೆ ತೆರಳಿದ್ದಾರೆ. ಮುನಿಯಪ್ಪ ಅವರ ಪುತ್ರಿ, ಕೆಜಿಎಫ್ ಶಾಸಕಿ ರೂಪಕಲಾ ಶಶಿಧರ್ ಕಾರ್ಯಕ್ರಮದಿಂದ ದೂರ ಉಳಿದಿದ್ದರು.

### ‘ಸ್ವತಂತ್ರ ನ್ಯಾಯಾಂಗಕ್ಕೆ ಕೊಲಿಜಿಯಂ ಅನಿವಾರ್ಯ’

ನವದೆಹಲಿ: ನ್ಯಾಯಮೂರ್ತಿಗಳ ನೇಮಕಾತಿ ಮಾಡುವ ಕೊಲಿಜಿಯಂ ವ್ಯವಸ್ಥೆಯು ಸ್ವತಂತ್ರ ನ್ಯಾಯಾಂಗಕ್ಕೆ ಅನಿವಾರ್ಯ ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯನ್ಯಾಯಮೂರ್ತಿ ಯು.ಯು. ಲಲಿತ್ ಅವರು ಪ್ರತಿಪಾದಿಸಿದ್ದಾರೆ. 8

ಆಳ–ಅಗಲ
ಸಿಲಿಕಾನ್ ವ್ಯಾಲಿಯಲ್ಲಿ ಬಿರುಗಾಳಿ ನೌಕರಿಗೆ ಕತ್ತರಿ

### ಒಳ ಪುಟ

ನೌಕರರ ಮತಸೆಳೆಯಲು ‘ಒಪಿಎಸ್’ 8

### ಚಿನಕುರಳಿ

ಪ್ರಕಾಶ್ ಶೆಟ್ಟಿ

ಅಮೆರಿಕದ ಡಲ್ಲಾಸ್‌ನಲ್ಲಿ ವೈಮಾನಿಕ ಪ್ರದರ್ಶನದ ವೇಳೆ ಸೇನೆಯ ಎರಡು ವಿಂಟೇಜ್ ಯುದ್ಧ ವಿಮಾನಗಳು ಪರಸ್ಪರ ಡಿಕ್ಕಿಯಾದ ವೇಳೆ ದಟ್ಟ ಜ್ವಾಲೆ ಆವರಿಸಿಕೊಂಡಿತ್ತು –ಎಪಿ/ಪಿಟಿಐ ಚಿತ್ರ

ಸುದ್ದಿ 8

ಕಡಿಮೆ ಹುದ್ದೆಗಳ ಪ್ರಸ್ತಾವ: ಉದ್ಯೋಗ ಆಕಾಂಕ್ಷಿಗಳ ಆಕ್ರೋಶ

# 300ರಲ್ಲಿ 43 ಹುದ್ದೆ ಭರ್ತಿಗೆ ಪ್ರಸ್ತಾವ

● ರಾಜೇಶ್ ರೈ ಚಟ್ಲ

ಬೆಂಗಳೂರು: ಕೆಎಎಸ್ (ಕಿರಿಯ ಶ್ರೇಣಿ) 40 ಹುದ್ದೆಗಳು ಸೇರಿದಂತೆ ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ ‘ಎ’ ಮತ್ತು ‘ಬಿ’ ವೃಂದದ 300ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇದ್ದರೂ, ಕೇವಲ 43 ಹುದ್ದೆಗಳ ಭರ್ತಿಗೆ ರಾಜ್ಯ ಸರ್ಕಾರ ಕರ್ನಾಟಕ ಲೋಕಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ಪ್ರಸ್ತಾವ ಕಳುಹಿಸಿರುವುದು ಉದ್ಯೋಗ ಆಕಾಂಕ್ಷಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಆದರೆ, ಪ್ರಸ್ತಾವದ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಸ್ಪಷ್ಟನೆ ಕೇಳಿರುವ ಕೆಪಿಎಸ್‌ಸಿ, ನ. 1ರಿಂದ ಅನ್ವಯವಾಗುವಂತೆ ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀಸಲಾತಿಯನ್ನು ಸರ್ಕಾರ ಹೆಚ್ಚಿಸಿದೆ. ಹೀಗಾಗಿ, ಮೀಸಲಾತಿಯ ಹುದ್ದೆಗಳನ್ನು ನಿಗದಿಪಡಿಸಿ ಪರಿಷ್ಕೃತ ಪ್ರಸ್ತಾವ ಕಳುಹಿಸುವಂತೆ ತಿಳಿಸಿದೆ.

ಶಿಕ್ಷಣ ಮತ್ತು ಉದ್ಯೋಗದಲ್ಲಿ ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ 17ಕ್ಕೆ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಶೇ 7ಕ್ಕೆ ಹೆಚ್ಚಿಸಿ ಅ. 23ರಂದು ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿತ್ತು. ಅದನ್ನು ನ. 1ರಿಂದ ಜಾರಿಗೊಳಿಸಲು ಸಮಾಜ ಕಲ್ಯಾಣ ಇಲಾಖೆ ಅಧಿಸೂಚನೆ ಹೊರಡಿಸಿದೆ. ಆದರೆ, ಮೀಸಲಾತಿ ಕೋಟಾದಲ್ಲಿ ಹೆಚ್ಚಳವಾಗಲಿರುವ ಹುದ್ದೆಗಳನ್ನು ರೋಸ್ಟರ್‌ನಲ್ಲಿ ಯಾವ ಸ್ಥಾನದಲ್ಲಿ ನೀಡಬೇಕೆಂಬ ಬಗ್ಗೆ ಸರ್ಕಾರ ಇನ್ನೂ ನಿರ್ಧರಿಸಿಲ್ಲ.

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಮೇಲೆ ಕಣ್ಣಿಟ್ಟು 4 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಧಾರವಾಡ, ಬಾಗಲಕೋಟೆ, ಬೆಂಗಳೂರು ಸೇರಿ ರಾಜ್ಯದ ವಿವಿಧೆಡೆಗಳಲ್ಲಿರುವ ಕೆಎಎಸ್ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ, ಐದು ವರ್ಷಗಳ ಬಳಿಕ ಅತೀ ಕಡಿಮೆ ಹುದ್ದೆಗಳ ಭರ್ತಿಗೆ ಪ್ರಸ್ತಾವ ಸಲ್ಲಿಸಿದೆ.

‘ಎಸ್‌ಸಿ, ಎಸ್‌ಟಿ ವರ್ಗಕ್ಕೆ ಮೀಸಲಾತಿ ಹೆಚ್ಚಿಸಿ ಅಧಿಸೂಚನೆ ಹೊರಡಿಸಿರುವುದೂ ಗೊತ್ತಿದ್ದೂ ಈ ರೀತಿಯಲ್ಲಿ ಕೆಪಿಎಸ್‌ಸಿಗೆ ಪ್ರಸ್ತಾವ ಸಲ್ಲಿಸಿರುವುದು ಡಿಪಿಎಆರ್ ಅಧಿಕಾರಿಗಳ ಬೇಜವಾಬ್ದಾರಿ ನಡೆ. ಹುದ್ದೆ ನಿರೀಕ್ಷೆಯಲ್ಲಿ ತರಬೇತಿ ನಿರತ ಅಭ್ಯರ್ಥಿಗಳ ಜೀವನದ ಜೊತೆಗಿನ ಚೆಲ್ಲಾಟ’ ಎಂದು ಕೆಎಎಸ್ ಹುದ್ದೆ ಆಕಾಂಕ್ಷಿ ವಿಜಯಪುರದ ಸಂತೋಷ್‌ಕುಮಾರ್ ಕಿಡಿಕಾರಿದರು.

### ‘ಮೀಸಲಾತಿ ಹೆಚ್ಚಳ; ಸ್ಪಷ್ಟನೆ ಅಗತ್ಯ’

‘ನ. 1ರ ನಂತರದ ನೇಮಕಾತಿಗಳನ್ನು ಎಸ್‌ಸಿ, ಎಸ್‌ಟಿ ವರ್ಗಕ್ಕೆ ಹೆಚ್ಚಿಸಿದ ಮೀಸಲಾತಿಗೆ ಅನುಗುಣವಾಗಿ ಮಾಡಬೇಕಿದೆ. ಹೀಗಾಗಿ, ಗೆಜೆಟೆಡ್ ಪ್ರೊಬೇಷನರಿ, ವಿವಿಧ ಇಲಾಖೆಗಳಲ್ಲಿ ಶೀಘ್ರಲಿಪಿಗಾರ, ಡೇಟಾ ಆಪರೇಟರ್ ಹುದ್ದೆಗಳ ನೇಮಕಾತಿ ಸೇರಿ ಕೆಲವು ಪ್ರಸ್ತಾವಗಳು ನ. 4 ಮತ್ತು ಆ ನಂತರ ಬಂದಿವೆ. ಅವುಗಳ ನೇಮಕಾತಿ ಅಧಿಸೂಚನೆ ಹೊರಡಿಸುವ ಮೊದಲು ಹೆಚ್ಚಳಗೊಳಿಸಿದ ಮೀಸಲಾತಿ ನಿಗದಿಪಡಿಸುವ ಕುರಿತು ಆಯಾ ಇಲಾಖೆಗಳಿಂದ ಸ್ಪಷ್ಟನೆ ಕೇಳಲಾಗಿದೆ’ ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ವಿಕಾಸ್ ಕಿಶೋರ್ ಸುರಳ್ಕರ್ ತಿಳಿಸಿದರು.

### ಕೆಪಿಎಸ್‌ಸಿ ಅಧಿಸೂಚನೆಗೆ ಬಾಕಿ

| ಇಲಾಖೆ | ಹುದ್ದೆ | ಸಂಖ್ಯೆ |
|---|---|---|
| ಡಿಪಿಎಆರ್ | ಗೆಜೆಟೆಡ್ ಪ್ರೊಬೇಷನರಿ | 43 |
| ವಿವಿಧ ಇಲಾಖೆ | ಶೀಘ್ರ ಲಿಪಿಗಾರರು | 222 |
| ವಿವಿಧ ಇಲಾಖೆ | ಡಾಟಾ ಆಪರೇಟರ್ | 88 |
| ವಾಣಿಜ್ಯ ತೆರಿಗೆ | ಪರಿವೀಕ್ಷಕರು | 243 |
| ಸಹಕಾರ | ನಿರೀಕ್ಷಕ | 53 |

ನಿಮ್ಮ ಮಗುವಿನ ಬೆಳವಣಿಗೆಯ ಪ್ರಮುಖ ಹಂತಗಳಲ್ಲಿ ಆಕರ್ಷಕ ಪಾವತಿಗಳನ್ನು ಪಡೆಯಿರಿ.

ಮುಖ್ಯ ವೈಶಿಷ್ಟ್ಯಗಳು :
- ಅರ್ಹತೆಯ ವಯಸ್ಸು : 0 –12 ವರ್ಷಗಳು. ಪರಿಪಕ್ವತೆಯ ವಯಸ್ಸು : 25 ವರ್ಷಗಳು
- ಕನಿಷ್ಠ ವಿಮಾ ಮೊತ್ತ : ₹ 1 ಲಕ್ಷ. ಗರಿಷ್ಠ ವಿಮಾ ಮೊತ್ತ : ಗರಿಷ್ಠ ಮಿತಿ ಇಲ್ಲ.
- ಮನೀ ಬ್ಯಾಕ್ ಕಂತುಗಳು : 20% ಮೂಲ ವಿಮಾ ಮೊತ್ತದ 18, 20 ಮತ್ತು 22 ವರ್ಷಗಳ ವಯಸ್ಸಿನಲ್ಲಿ
- ಪರಿಪಕ್ವತೆಯ ಲಾಭ : ಮೂಲ ವಿಮಾ ಮೊತ್ತದ ಉಳಿದ 40% ಮತ್ತು ಬೋನಸ್
- ಪ್ರಿಮಿಯಂ ವೇವರ್ ಲಾಭದ ರೈಡರ್ : ಆಯ್ಕೆ ಉಪಲಬ್ಧವಿದೆ.
- ಮನೀ ಬ್ಯಾಕ್ ಕಂತುಗಳನ್ನು ಡೆಫರ್ ಮಾಡುವ ಆಯ್ಕೆ : ಪಾಲಿಸಿಯ ಕಾಲಾವಧಿಯಲ್ಲಿ ಉಪಲಬ್ಧವಿದೆ.

ವಿವರಗಳಿಗಾಗಿ ನಿಮ್ಮ ಏಜಂಟರನ್ನು/ಸಮೀಪದ ಎಲ್‌ಐಸಿ ಶಾಖೆಯನ್ನು ಸಂಪರ್ಕಿಸಿರಿ/ಸಂದರ್ಶಿಸಿರಿ www.licindia.in ಅಥವಾ ನಿಮ್ಮ ನಗರದ ಹೆಸರನ್ನು 56767474ಗೆ SMS ಮಾಡಿ

ಡೌನ್‌ಲೋಡ್ ಮಾಡಿರಿ ಎಲ್‌ಐಸಿ ಮೊಬೈಲ್ ಆ್ಯಪ್ ‘LIC Customer’ ಸಂದರ್ಶಿಸಿರಿ: licindia.in
ಕಾಲ್ ಸೆಂಟರ್ ಸರ್ವಿಸ್ (022) 6827 6827

ನಕಲಿ ಫೋನ್ ಕರೆಗಳು ಮತ್ತು ಸುಳ್ಳು/ಮೋಸದ ಕೊಡುಗೆಗಳ ಬಗ್ಗೆ ಎಚ್ಚರಿಕೆಯಿಂದಿರಿ. ಐಆರ್‌ಡಿಎಐ ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ • ಐಆರ್‌ಡಿಎಐ ಅಥವಾ ಅದರ ಸಿಬ್ಬಂದಿಗಳು, ಯಾವುದೇ ಬಗೆಯ ವಿಮೆ ಅಥವಾ ಆರ್ಥಿಕ ಪ್ರಾಡಕ್ಟ್‌ಗಳ ಮಾರಾಟ, ಪ್ರೀಮಿಯಂ ಮೊತ್ತ ಹೂಡುವಿಕೆ ಮುಂತಾದ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ. • ಐಆರ್‌ಡಿಎಐ ಯಾವುದೇ ಬೋನಸ್ ಘೋಷಿಸುವುದಿಲ್ಲ. ಯಾರಿಗಾದರೂ ಇಂತಹ ಫೋನ್ ಕರೆಗಳು ಬಂದಲ್ಲಿ, ಅವರು ಫೋನ್ ಕರೆಯ ವಿವರ ಮತ್ತು ನಂಬರ್‌ನೊಂದಿಗೆ, ಪೋಲೀಸರ ಬಳಿ ತಕರಾರು ನೋಂದಾಯಿಸಬೇಕೆಂದು ಕೇಳಿಕೊಳ್ಳಲಾಗಿದೆ.

ನಮ್ಮನ್ನು ಫಾಲೋ ಮಾಡಿರಿ: LIC India Forever | IRDAI Regn No.: 512

LIC ಭಾರತೀಯ ಜೀವ ವಿಮಾ ನಿಗಮ LIFE INSURANCE CORPORATION OF INDIA

LIC / P1 / 2022-23 / 17 / KAN

ಆಪತ್ತಿನ ಅಂಶಗಳು, ನಿಬಂಧನೆಗಳು ಮತ್ತು ಷರತ್ತುಗಳ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿಯಲು, ದಯವಿಟ್ಟು ಮಾರಾಟ ಪೂರ್ಣಗೊಳಿಸುವ ಮೊದಲು ಮಾರಾಟ ಪುಸ್ತಿಕೆಯನ್ನು ತಪ್ಪದೇ ಓದಿಕೊಳ್ಳಿ.

ಜೀವನದೊಂದಿಗೂ, ಜೀವನದ ನಂತರವೂ.

## ನಾಗೇಂದ್ರ ಕಮ್ಮಾರ ಆಯ್ಕೆ

ಬೆಂಗಳೂರು: ಉತ್ತರ ಕರ್ನಾಟಕ ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾಗಿ ನಾಗೇಂದ್ರ ಕಮ್ಮಾರ ಆಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿಯಾಗಿ ವಿಜಯಕುಮಾರ ಪತ್ತಾರ, ಕಾರ್ಯಾಧ್ಯಕ್ಷರಾಗಿ ಬಸವರಾಜ ಬಡಿಗೇರ, ಉಪಾಧ್ಯಕ್ಷರಾಗಿ ದ್ಯಾಮಣ್ಣ ಬಡಿಗೇರ, ಮಹಾರುದ್ರ ಮನ್ವಾಚಾರ್ಯ, ಉಮಾ ವಿ. ಕಿತ್ತಳಿ, ಕಾರ್ಯದರ್ಶಿಯಾಗಿ ವಾಸುದೇವ ಆಚಾರ, ಸಂಘಟನಾ ಕಾರ್ಯದರ್ಶಿಯಾಗಿ ಶ್ರೀಧರ ಹೊಂಬಳ, ಖಜಾಂಚಿಯಾಗಿ ಸುಭಾಷ್ ಬಡಿಗೇರ, ಸಹ ಖಜಾಂಚಿಯಾಗಿ ಸುರೇಶ ಎಸ್. ಬಡಿಗೇರ, ಕಾನೂನು ಸಲಹೆಗಾರರಾಗಿ ಮಹೇಶ ಕಮ್ಮಾರ, ಲೆಕ್ಕ ಪರಿಶೋಧಕರಾಗಿ ಸಂತೋಷ ಡಿ. ಸೋನಾರ ಆಯ್ಕೆಯಾಗಿದ್ದಾರೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.


## ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರ, ಈ ಕೆಳಕಂಡ "ಷೆಡ್ಯೂಲ್" (ಇನ್ನುಮುಂದೆ ಇದನ್ನು **"ಷೆಡ್ಯೂಲ್ ಸ್ವತ್ತುಗಳು"** ಎಂದು ಕರೆಯಲ್ಪಡುವ) ವಾಸದ ಉದ್ದೇಶಕ್ಕಾಗಿ ಪರಿವರ್ತನೆಗೊಂಡಿರುವ ಸ್ಥಿರಾಸ್ತಿ ಸ್ವತ್ತುಗಳ ಒಟ್ಟಾರೆ ವಿಸ್ತೀರ್ಣ 15 ಎಕರೆ 31½ ಗುಂಟೆಗಳು ಮತ್ತು 13 ಗುಂಟೆಗಳ ಖರಾಬು ಜಮೀನು ಒಳಗೊಂಡ ಸ್ವತ್ತಿನ ಮಾಲೀಕರಾದ ಮೆ॥ ಸೆಂಚೂರಿ ಸ್ಟಾರ್, ಪಾಲುದಾರರ ಸಂಸ್ಥೆ ಮತ್ತು ಈ ಕೃಷಿ ಜಮೀನುಗಳ ಮಾಲೀಕತ್ವವನ್ನು ಹೊಂದಿರುವ ಶ್ರೀ. ಎ. ರಾಮಕೃಷ್ಣ ಎಂಬುವರಿಂದ ಖರೀದಿಸಲು ಇಚ್ಚಿಸಿರುತ್ತಾರೆ. ಕೆಳಕಂಡ ಷೆಡ್ಯೂಲ್‌ನಲ್ಲಿ ಜಮೀನಿನ ಸವಿವರಗಳ ಜೊತೆಗೆ ಹಿಂದಿನ ಮಾಲೀಕರುಗಳ ವಿವರಗಳು ತಿಳಿಸಲಾಗಿದೆ.

ಯಾವುದೇ ವ್ಯಕ್ತಿಗಳು, ಷೆಡ್ಯೂಲ್ ಸ್ವತ್ತಿನ ಅಥವಾ ಅದರ ಯಾವುದೇ ಭಗಾಂಶದ ಮೇಲೆ ಯಾವುದೇ ರೀತಯ ಹಕ್ಕು, ಹಕ್ಕುಬಾಧ್ಯತೆ, ಕ್ಲೇಮ್, ಅಡಮಾನ, ಧಾರಣೆ, ಅಥವಾ ಯಾವುದೇ ರೀತಿಯ ಹಿತಾಸಕ್ತಿಯನ್ನು ಹೊಂದಿದ್ದರೆ, ಅಥವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಮಾಲೀಕರೊಂದಿಗೆ ಯಾವುದೇ ವ್ಯವಹಾರಗಳು ಅಥವಾ ದಸ್ತಾವೇಜುಗಳು (ನೋಂದಣಿಯಾಗಿರುವ ಅಥವಾ ನೋಂದಣಿಯಾಗದಿರುವ) ಹಕ್ಕು ಪತ್ರವನ್ನು ಹೊಂದಿದ್ದರೆ, ಅದನ್ನು ತಮ್ಮ ಆಕ್ಷೇಪಣೆಗಳು ಅಥವಾ ಕ್ಲೇಮುಗಳನ್ನು ದಾಖಲೆ ಪುರಾವೆಗಳೊಡನೆ ಲಿಖಿತ ರೂಪದಲ್ಲಿ ಜೊತೆಗೆ ಯಾವುದೇ ಸ್ವರೂಪದ ಮೂಲ ದಾಖಲೆ ಪತ್ರಗಳ ಬೆಂಬಲದೊಡನೆ ಸದರಿ ನೋಟೀಸ್ ಪ್ರಕಟವಾದ **ಹದಿನೈದು (15 ದಿನಗಳು)** ಅವಧಿಯೊಳಗೆ ತಿಳಿಸಿರುವ ವಿಳಾಸಕ್ಕೆ ತಿಳಿಸತಕ್ಕದ್ದು. ಒಂದು ವೇಳೆ ಅಂತಹ ಆಕ್ಷೇಪಣೆಗಳು ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಅದರ ಭಾಗದ ಮೇಲೆ ಯಾವುದೇ ವ್ಯಕ್ತಿಗಳು ಯಾವುದೇ ಹಕ್ಕು, ಹಕ್ಕು ಬಾಧ್ಯತೆ, ಆಸಕ್ತಿ, ಕ್ಲೇಮುಗಳು, ಡಿಮ್ಯಾಂಡ್, ಧಾರಣೆ ಅಥವಾ ಹೊರೆ ಇರುವುದಿಲ್ಲವೆಂದು ಭಾವಿಸಲಾಗುವುದು ಮತ್ತು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ತಿಳಿಸಿರುವ ಮಾಲೀಕರುಗಳು ಸ್ವತ್ತಿನ ಮೇಲೆ ಹಕ್ಕು ಬಾಧ್ಯತೆ ಹೊಂದಿರುತ್ತಾರೆ ಎಂದು ನಾವು ದೃಢೀಕರಿಸುತ್ತೇವೆ.

ಷೆಡ್ಯೂಲ್ ಸ್ವತ್ತುಗಳು

ಐಟಂ ನಂ.1 :

ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಅಟ್ಟೂರು ಗ್ರಾಮದಲ್ಲಿರುವ ವಾಸದ ಉದ್ದೇಶಕ್ಕಾಗಿ ಪರಿವರ್ತನೆಗೊಂಡಿರುವ ಸ್ಥಿರಾಸ್ತಿ ಸ್ವತ್ತುಗಳ ಒಟ್ಟಾರೆ ವಿಸ್ತೀರ್ಣ 15 ಎಕರೆ 28¾ ಗುಂಟೆಗಳು ಮತ್ತು 13 ಗುಂಟೆಗಳ ಖರಾಬು ಜಮೀನು ಒಳಗೊಂಡಿರುವ ಸಂಪೂರ್ಣ ಸ್ವತ್ತಿಗೆ ಚಕ್ಕುಬಂದಿ:

| ಕ್ರಮ ಸಂಖ್ಯೆ | ಸರ್ವೆ ನಂ | ಹಿಂದಿನ ಮಾಲೀಕರು | ವಿಸ್ತೀರ್ಣ | ಖರಾಬ್ | | ಚಕ್ಕುಬಂದಿ | | | |
|---|---|---|---|---|---|---|---|---|---|
| | | | ಎ – ಗು | ಎ | ಬಿ | ಪೂರ್ವಕ್ಕೆ : | ಪಶ್ಚಿಮಕ್ಕೆ : | ಉತ್ತರಕ್ಕೆ : | ದಕ್ಷಿಣಕ್ಕೆ |
| 1 | 68 | ಎಂ.ಎಸ್. ಮಹದೇವಯ್ಯ | 01 – 03 | 0 | 1 | ಸರ್ವೆ ನಂ.65 | ಸರ್ವೆ ನಂ.75 | ಸರ್ವೆ ನಂ.69/1ಪಿ, 69/2ಪಿ ಮತ್ತು 72 | ಸರ್ವೆ ನಂ.67 |
| 2 | 69/1 (ಪಿ) | ಎ. ರಾಮಕೃಷ್ಣ | 0 – 12.5 | 0 | 0 | ಸರ್ವೆ ನಂ.69/2ಪಿ | ಸರ್ವೆ ನಂ.69/1ರ ಉಳಿದ ಭಾಗ | ಸರ್ವೆ ನಂ.71/1 ಮತ್ತು 71/2 | ಸರ್ವೆ ನಂ.68 |
| 3 | 69/2 (ಪಿ) | ಎ. ರಾಮಕೃಷ್ಣ | 0 – 25.5 | 0 | 1 | ಸರ್ವೆ ನಂ.69/2ರ ಉಳಿದ ಭಾಗ | ಸರ್ವೆ ನಂ.69/1ಪಿ | ಸರ್ವೆ ನಂ.71/2 | ಸರ್ವೆ ನಂ.68 ಮತ್ತು 65 |
| 4 | 71/1 | ಎ. ರಾಮಕೃಷ್ಣ | 0 – 22 | 0 | 1 | ಸರ್ವೆ ನಂ.71/2 | ಸರ್ವೆ ನಂ.72 | ಸರ್ವೆ ನಂ.57 | ಸರ್ವೆ ನಂ.69/1 |
| 5 | 71/2 | ಎ. ರಾಮಕೃಷ್ಣ | 2 – 05 | 0 | 0 | ಸರ್ವೆ ನಂ.70 | ಸರ್ವೆ ನಂ.71/1 | ಸರ್ವೆ ನಂ.57 | ಸರ್ವೆ ನಂ.69/1, 69/2ಮತ್ತು 69/3 |
| 6 | 73(ಪಿ) | ಎ. ರಾಮಕೃಷ್ಣ | 1 – 07 | 0 | 0 | ಸರ್ವೆ ನಂ.73ರ ಉಳಿದ ಭಾಗ | ಸರ್ವೆ ನಂ.77/2 | ಅನಂತಪುರ ಗ್ರಾಮದ ಗಡಿ | ಸರ್ವೆ ನಂ.74/1ಎ ಮತ್ತು 74/2 |
| 7 | 74/1ಬಿ | ಎ. ರಾಮಕೃಷ್ಣ | 0 – 05 | 0 | 0 | ಸರ್ವೆ ನಂ.74/2 | ಸರ್ವೆ ನಂ.77/2 | ಸರ್ವೆ ನಂ.74/1ಎ | ಸರ್ವೆ ನಂ.75 |
| 8 | 75 | ಎಂ.ಎಸ್. ಮಹದೇವಯ್ಯ | 1 – 04 | 3 | 2 | ಸರ್ವೆ ನಂ.68 | ಸರ್ವೆ ನಂ.76 | ಸರ್ವೆ ನಂ.72,74/1ಬಿ ಮತ್ತು 74/2 | ಸರ್ವೆ ನಂ.67 |
| 9 | 76 | ಎಂ.ಎಸ್. ಮಹದೇವಯ್ಯ | 1 – 11 | 0 | 1 | ಸರ್ವೆ ನಂ.75 ಮತ್ತು 67 | ಸರ್ವೆ ನಂ.82/2 | ಸರ್ವೆ ನಂ.80 ಮತ್ತು 77/2 | ಸರ್ವೆ ನಂ.83 |
| 10 | 77/1 | ಎ. ರಾಮಕೃಷ್ಣ | 0 – 03 | 0 | 0 | ಸರ್ವೆ ನಂ.77/2 | ಸರ್ವೆ ನಂ.78 | ಅನಂತಪುರ ಗ್ರಾಮದ ಗಡಿ | ಸರ್ವೆ ನಂ.77/3 |
| 11 | 77/2 | ಎ. ರಾಮಕೃಷ್ಣ | 1 – 14 | 0 | 1 | ಸರ್ವೆ ನಂ.73, 74/1ಎ ಮತ್ತು 1ಬಿ | ಸರ್ವೆ ನಂ.77/1, 77/3, 77/4, 77/5,77/6,78,79 ಮತ್ತು 80 | ಅನಂತಪುರ ಗ್ರಾಮದ ಗಡಿ | ಸರ್ವೆ ನಂ.76 |
| 12 | 77/4 | ಎ. ರಾಮಕೃಷ್ಣ | 0 – 03¼ | 0 | 0 | ಸರ್ವೆ ನಂ.77/2 | ಸರ್ವೆ ನಂ.78 | ಸರ್ವೆ ನಂ.77/3 | ಸರ್ವೆ ನಂ.77/5 |
| 13 | 77/6 | ಎ. ರಾಮಕೃಷ್ಣ | 0 – 03¼ | 0 | 0 | ಸರ್ವೆ ನಂ.77/2 | ಸರ್ವೆ ನಂ.78 | ಸರ್ವೆ ನಂ.77/5 | ಸರ್ವೆ ನಂ.77/2 |
| 14 | 78 | ಎ. ರಾಮಕೃಷ್ಣ | 2 – 23 | 0 | 0 | ಸರ್ವೆ ನಂ.77/1, 77/2,77/3, 77/4, 77/5 ಮತ್ತು 77/6 | ರಸ್ತೆ | ಅನಂತಪುರ ಗ್ರಾಮದ ಗಡಿ | ಸರ್ವೆ ನಂ.79 |
| 15 | 79 | ಎ. ರಾಮಕೃಷ್ಣ | 1 – 29 | 0 | 0 | ಸರ್ವೆ ನಂ.77/2 | ರಸ್ತೆ | ಸರ್ವೆ ನಂ.78 | ಸರ್ವೆ ನಂ.80 |
| 16 | 80/1 | ಎ. ರಾಮಕೃಷ್ಣ | 0 – 35¼ | 0 | 2 | ಸರ್ವೆ ನಂ.77/2 ಮತ್ತು 80/2 | ರಸ್ತೆ | ಸರ್ವೆ ನಂ.79 | ಸರ್ವೆ ನಂ.76,82/3, 82/2, ಮತ್ತು 82/2ಪಿ |
| 17 | 82/2(ಪಿ) | ಎಂ.ಎಸ್. ಮಹದೇವಯ್ಯ | 0 – 23 | 0 | 1 | ಸರ್ವೆ ನಂ.76 | ಸರ್ವೆ ನಂ.82/2ರ ಉಳಿದ ಭಾಗ | ಸರ್ವೆ ನಂ.80/1 | ಸರ್ವೆ ನಂ.83 |

ಐಟಂ ನಂ.2 :

ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಅಟ್ಟೂರು ಗ್ರಾಮದಲ್ಲಿರುವ ಸರ್ವೆ ನಂ80/2ರ ಕೃಷಿ ಜಮೀನಿನ ವಿಸ್ತೀರ್ಣ 0.2¾ ಗುಂಟೆಗಳು ಒಳಗೊಂಡಿರುವ ಸಂಪೂರ್ಣ ಸ್ವತ್ತಿಗೆ ಚಕ್ಕುಬಂದಿ:

| ಕ್ರಮ ಸಂಖ್ಯೆ | ಸರ್ವೆ ನಂ | ಮಾಲೀಕರ ಹೆಸರು | ವಿಸ್ತೀರ್ಣ | ಖರಾಬ್ | | ಚಕ್ಕುಬಂದಿ | | | |
|---|---|---|---|---|---|---|---|---|---|
| | | | ಎ – ಗು | ಎ | ಬಿ | ಪೂರ್ವಕ್ಕೆ : | ಪಶ್ಚಿಮಕ್ಕೆ : | ಉತ್ತರಕ್ಕೆ : | ದಕ್ಷಿಣಕ್ಕೆ |
| 1 | 80/2 | ಎ. ರಾಮಕೃಷ್ಣ | 00 – 2¾ | 0 | 0 | ಸರ್ವೆ ನಂ.77/2 | ಸರ್ವೆ ನಂ.80/1 | ಸರ್ವೆ ನಂ.79 | ಸರ್ವೆ ನಂ.80/1 |

ಸಹಿ/– **ಜೆರಲ್ಡ್ ಮನೋಹರನ್,** ಪಾಲುದಾರರು
**ಜೆ. ಸಾಗರ್ ಅಸೋಸಿಯೇಟ್ಸ್**
ಲೆವೆಲ್ 3, ಪ್ರೆಸ್ಟೀಜ್ ಒಬೆಲಿಸ್ಕ್, 3, ಕಸ್ತೂರ್ಬಾ ರಸ್ತೆ, ಬೆಂಗಳೂರು–560001.
ದೂ: 080–43503600/080–43503610., ಇಮೇಲ್– gerald@jsalaw.com

ದಿನಾಂಕ: 14/11/2022
ಸ್ಥಳ: ಬೆಂಗಳೂರು

## ನಗರದಲ್ಲಿ ಇಂದು

## ಮಕ್ಕಳ ದಿನಾಚರಣೆ ವಿಶೇಷ ಕಾರ್ಯಕ್ರಮಗಳು

**ಮಕ್ಕಳ ಹಬ್ಬ:** ಉದ್ಘಾಟನೆ: ಎಸ್.ಆರ್. ವಿಶ್ವನಾಥ್, ಅಧ್ಯಕ್ಷತೆ: ಅಶ್ವಿನಿ ಅಂಗಡಿ, ಅತಿಥಿಗಳು: ಎಚ್.ಎಂ. ವಿಶ್ವನಾಥ್, ರಂಗಣ್ಣ, ಉದ್ದಂಡಯ್ಯ, ಅನಿತಾ ಪ್ರಕಾಶ್, ಕೆ.ಎನ್. ಮುನಿರಾಜು, ಆಯೋಜನೆ: ಸುಕಾಂಕ್ಷ ಚಾರಿಟಬಲ್ ಟ್ರಸ್ಟ್, ಅಶ್ವಿನಿ ಅಂಗಡಿ ಟ್ರಸ್ಟ್, ಸ್ಥಳ: ವಿನಾಯಕನಗರ, ಕಡಬಗೆರೆ, ಬೆಳಿಗ್ಗೆ 9.30

**ಮಕ್ಕಳ ದಿನಾಚರಣೆ ಮತ್ತು ಕನ್ನಡ ರಾಜ್ಯೋತ್ಸವ:** ಧ್ವಜಾರೋಹಣ: ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ: ಎನ್. ಕುಮಾರ್, ಅತಿಥಿಗಳು: ಕೆ. ಶ್ರೀನಿವಾಸನ್, ಗಾಯತ್ರಿ ಚಂದ್ರಮೂರ್ತಿ, ವಿಶ್ವನಾಥ್, ಜಯರಾಮ ಅಡಿಗ, ಶ್ಯಾಮಲಾ ರತ್ನಕುಮಾರಿ, ನಾಗೇಂದ್ರ ಪ್ರಸಾದ್, ಆಯೋಜನೆ: ವಿನಾಯಕ ವಿದ್ಯಾ ಮಂದಿರ, ಸ್ಥಳ: ವಿ.ಎಸ್. ಕೃಷ್ಣಯ್ಯರ್ ಪ್ರೌಢಶಾಲೆ ಹಾಗೂ ಸಂಯುಕ್ತ ಪದವಿಪೂರ್ವ ಕಾಲೇಜು ಆವರಣ, ಬನಶಂಕರಿ 1ನೇ ಹಂತ, ಬೆಳಿಗ್ಗೆ 10

**ಮಕ್ಕಳ ದಿನಾಚರಣೆ-2022, ಪ್ರಶಸ್ತಿ ಪ್ರದಾನ ಮತ್ತು ಉದ್ಘಾಟನೆ:** ಥಾವರ್‌ಚಂದ್ ಗೆಹಲೋತ್, ಪ್ರಶಸ್ತಿ ಪ್ರದಾನ: ಬಸವರಾಜ ಬೊಮ್ಮಾಯಿ, ಹಾಲಪ್ಪ ಆಚಾರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸ್ಥಳ: ಜವಾಹರ ಬಾಲಭವನ, ಕಬ್ಬನ್ ಉದ್ಯಾನ, ಬೆಳಿಗ್ಗೆ 11

**ಮಕ್ಕಳ ದಿನಾಚರಣೆ:** ಉದ್ಘಾಟನೆ: ಜಿ.ಎಚ್. ಇಮ್ರಾಪುರ್, ಅಧ್ಯಕ್ಷತೆ: ಆರ್.ಶಾಂತಕುಮಾರ್, ಅತಿಥಿಗಳು: ಆರ್. ಮಂಜುನಾಥ್, ಜಿ. ಮರಿಸ್ವಾಮಿ, ಕೆ. ನಾಗಭೂಷಣ್, ಉಪಸ್ಥಿತಿ: ಡಿ.ಪಿ. ರಾಘವೇಂದ್ರ ರಾವ್, ಜಿ. ರಾಜೇಂದ್ರ, ಬಿ.ಎಸ್. ಲಕ್ಷ್ಮೀಶ್, ಡಿ.ಎನ್. ಹರಿದಾಸ್, ಆಯೋಜನೆ: ನಾರ್ಥ್ ಬೆಂಗಳೂರು ಎಜ್ಯುಕೇಷನಲ್ ಟ್ರಸ್ಟ್, ಸ್ಥಳ: ಎಂ.ಎನ್.ಟಿ.ಎ ಕಾಲೇಜು ಆವರಣ, ಕಮ್ಮಗೊಂಡನಹಳ್ಳಿ, ಬೆಳಿಗ್ಗೆ 11

ದೀಪ್ತಿ ಮೋಹನ್

**ಕರ್ನಾಟಕ ಶಾಸ್ತ್ರೀಯ ಸಂಗೀತ:** ಪ್ರಸ್ತುತಿ: ದೀಪ್ತಿ ಮೋಹನ್, ಪಿಟೀಲು: ಸತ್ಯವೀರ್, ಮೃದಂಗ: ಮುರಳಿ ನಾರಾಯಣರಾವ್, ಆಯೋಜನೆ ಮತ್ತು ಸ್ಥಳ: ಕನ್ನಿಕಾ ಪರಮೇಶ್ವರಿ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.30

**ಮಕ್ಕಳ ದಿನಾಚರಣೆ:** ಬಹುಮಾನ ವಿತರಣೆ: ಅನ್ನಿ ಜೇಮ್ಸ್, ಅಧ್ಯಕ್ಷತೆ: ನರಸಿಂಹ ನಾಯ್ಕ, ಅತಿಥಿಗಳು: ಹೇಮಾ ಆರ್. ರಾವ್, ಎಂ. ಗುರುರಾಜ್, ಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

****

**ವೆಂಚರ್ ಫೆಸ್ಟ್ 4.0-2022: ಅತಿಥಿಗಳು:** ಕಿಶೋರ ಬಿ.ಎಸ್., ಆಯೋಜನೆ: ಆರ್.ವಿ. ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಸ್ಥಳ: ನಂದನವನ ಮೈದಾನ, ಜಯನಗರ, 4ನೇ ಹಂತ, ಪಟ್ಟಾಭಿ ರಾಮನಗರ, ಬೆಳಿಗ್ಗೆ 10

**ಸುವರ್ಣ ಮಹೋತ್ಸವ:** ಧ್ವಜಾರೋಹಣ: ಎಚ್.ವಿ. ಅನಂತ ಸುಬ್ಬಾರಾವ್, ಆಯೋಜನೆ: ಅಖಿಲ ಭಾರತ ಎಲ್‌ಐಸಿ ನೌಕರರ ಒಕ್ಕೂಟ, ಸ್ಥಳ: ಎಲ್‌ಐಸಿ ವಿಭಾಗೀಯ ಕಚೇರಿ, ಜೆಸಿ ರಸ್ತೆ, ಮಧ್ಯಾಹ್ನ 1

**3ನೇ ಸಾಂಸ್ಕೃತಿಕ ಉತ್ಸವ:** ಉದ್ಘಾಟನೆ: ಎಂ.ಎಸ್. ನರಸಿಂಹಮೂರ್ತಿ, ಅಧ್ಯಕ್ಷತೆ: ಎಚ್.ಎಸ್. ವೇಣುಗೋಪಾಲ್, ಸೇವಾ ಪುರಸ್ಕಾರ ಪುರಸ್ಕೃತರು: ಡಾ. ರಘುನಾಥ್, ಅತಿಥಿಗಳು: ಚಂದ್ರಕುಮಾರ್ ಚಾವ್ಲ, ಪಲ್ಲವಿ ಮಣಿ, ಸುರೇಶಬಾಬು, ಭರತನಾಟ್ಯ ಪ್ರದರ್ಶನ: ಸುನಿಧಿ ಗುರುದತ್, ಹಿಂದೂಸ್ತಾನಿ ಸಂಗೀತ: ಲೀಲಾಸಂಪತ್ ಕುಮಾರ್, ಆಯೋಜನೆ: ರಂಗವಿಜಯಾ ಟ್ರಸ್ಟ್, ಸ್ಥಳ: ರಂಗವಿಠಲ, ನಂ.193/28, 5ನೇ ಮುಖ್ಯರಸ್ತೆ ವೈಯಾಲಿ ಕಾವಲ್, ಸಂಜೆ 5

**ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಉಪನ್ಯಾಸ ಮತ್ತು ಉದ್ಘಾಟನೆ:** ರಜನಿ ಜಯರಾಂ, ವಿಷಯ: ಜ್ಞಾನ ಗಳಿಕೆಯಲ್ಲಿ ಓದುವಿಕೆ ಅತ್ಯಗತ್ಯ ಅಂಶ, ಆಯೋಜನೆ: ಕರ್ನಾಟಕ ರಾಜ್ಯ ಗ್ರಂಥಾಲಯ ಸಂಘ, ಸ್ಥಳ: ಇನ್ಫರ್ಮ್ಯಾಟಿಕ್ಸ್ ಪಬ್ಲಿಷಿಂಗ್ ಲಿಮಿಟೆಡ್. ಆರ್.ವಿ. ರಸ್ತೆ ಬಸವನಗುಡಿ, ಸಂಜೆ 5.30

**ಹೇಮಲತಾ ಎನ್.ಎಸ್ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ:** ಅತಿಥಿಗಳು: ಚಿ.ಸು. ಕೃಷ್ಣ ಸೆಟ್ಟಿ, ಎಂ.ಜೆ. ಕಮಲಾಕ್ಷಿ, ರವಿಚಂದ್ರ, ಸ್ಮಿತಾ ಕಾರ್ಯಪ್ಪ, ಆಯೋಜನೆ ಮತ್ತು ಸ್ಥಳ: ಆರ್ಟ್ ಹೌಸ್, ಅರಮನೆ ರಸ್ತೆ, ವಸಂತನಗರ, ಸಂಜೆ 6

ಚಿ.ಸು.ಕೃಷ್ಣಸೆಟ್ಟಿ


### ನೈಋತ್ಯ ರೈಲ್ವೆ

ಇ-ಟೆಂಡರ್ ಸೂಚನೆ ಸಂ.: TWS-HLAR_01_2022-23 ದಿನಾಂಕ: 07.11.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಕಾಮಗಾರಿಯ ವಿವರ | ಅಂದಾಜು ಮೌಲ್ಯ |
|---|---|
| ನೈಋತ್ಯ ರೈಲ್ವೆಯ ಹುಬ್ಬಳ್ಳಿ ವಿಭಾಗದ ಹೊಳೆ ಆಲೂರು ನಿಲ್ದಾಣದಲ್ಲಿ ಭೂಗತ ಸಿಗ್ನಲಿಂಗ್ ಕೇಬಲ್‌ಗಳು/ವಿದ್ಯುತ್ ಕೇಬಲ್‌ಗಳನ್ನು ಟ್ರೆಂಚಿಂಗ್ ಮಾಡುವುದು ಮತ್ತು ಹಾಕುವುದು, ಫೌಂಡೇಶನ್‌ಗಳ ಕ್ಯಾಸ್ಟಿಂಗ್, ಕೆಲವು ಉಪಕರಣಗಳು / ಸಾಮಾಗ್ರಿಗಳ ಪೂರೈಕೆ, ಉಪಕರಣದ ಮುಚ್ಚಳಗಳನ್ನು ಅಳವಡಿಸುವುದು ಮತ್ತು ವಿವಿಧ ಸಲಕರಣೆಗಳ ಫಿಕ್ಸಿಂಗ್ ಮಾಡುವುದು, ವೈರಿಂಗ್, ಪರೀಕ್ಷೆ ಮತ್ತು ಅಸ್ತಿತ್ವದಲ್ಲಿರುವ ಇಐ ನಲ್ಲಿ ಬದಲಾವಣೆಯನ್ನು ಒಳಗೊಂಡಂತೆ ಟವರ್ ವ್ಯಾಗನ್ ಸೈಡಿಂಗ್ ಒದಗಿಸುವಿಕೆಗೆ ಸಂಬಂಧಿಸಿದ ನಿಯೋಜನೆ (ತಯಾರಿಕೆ: ಸೀಮೆನ್ಸ್ ವೆಸ್ಟ್ರೇಸ್ ಎಂಕೆ–II) ಹೊಳೆ ಆಲೂರು (ಒಳಪಡಿಸಿ) ಬಾಗಲಕೋಟೆ ಜಂಕ್ಷನ್ (ಒಳಪಡಿಸಿ) 25 ಕೆವಿ ಎಸಿ ಆರ್‌ಇ ಫಿಟ್‌ನೆಸ್‌ಗೆ ಸಂಬಂಧಿಸಿದ ಇತರ ವಿವಿಧ ಸಿಗ್ನಲಿಂಗ್ ಕಾರ್ಯಗಳನ್ನು ಕೈಗೊಳ್ಳುವುದು – ವಿಭಾಗ (ಗ್ರೂಪ್: 258) **(ಕಾಮಗಾರಿ ಮುಕ್ತಾಯದ ಅವಧಿ: 06 ತಿಂಗಳುಗಳು)** | ರೂ. 65,87,580.05 |

ಇ-ಟೆಂಡರ್ ಸೂಚನೆ ಸಂ.: TWS-BSRX_IDR_02_2022-23 ದಿನಾಂಕ: 07.11.2022

| ಕಾಮಗಾರಿಯ ವಿವರ | ಅಂದಾಜು ಮೌಲ್ಯ |
|---|---|
| ನೈಋತ್ಯ ರೈಲ್ವೆಯ ಹುಬ್ಬಳ್ಳಿ ವಿಭಾಗದಲ್ಲಿ ಭೂಗತ ಸಿಗ್ನಲಿಂಗ್ ಕೇಬಲ್‌ಗಳು/ವಿದ್ಯುತ್ ಕೇಬಲ್‌ಗಳನ್ನು ಟ್ರೆಂಚಿಂಗ್ ಮಾಡುವುದು ಮತ್ತು ಹಾಕುವುದು, ಫೌಂಡೇಶನ್‌ಗಳ ಕ್ಯಾಸ್ಟಿಂಗ್, ಕೆಲವು ಉಪಕರಣಗಳು / ಸಾಮಾಗ್ರಿಗಳ ಪೂರೈಕೆ, ಉಪಕರಣದ ಮುಚ್ಚಳಗಳನ್ನು ಅಳವಡಿಸುವುದು ಮತ್ತು ವಿವಿಧ ಸಲಕರಣೆಗಳ ಫಿಕ್ಸಿಂಗ್ ಮಾಡುವುದು, ವೈರಿಂಗ್, ಪರೀಕ್ಷೆ ಮತ್ತು ಬಸವನ ಬಾಗೇವಾಡಿ ರೋಡ್ ಮತ್ತು ಇಂಡಿ ರೋಡ್ ನಿಲ್ದಾಣಗಳಲ್ಲಿ ಅಸ್ತಿತ್ವದಲ್ಲಿರುವ ಇಐ ನಲ್ಲಿ ಬದಲಾವಣೆ ಒಳಗೊಂಡಂತೆ ಟವರ್ ವ್ಯಾಗನ್ ಸೈಡಿಂಗ್ ಒದಗಿಸುವಿಕೆಗೆ ಸಂಬಂಧಿಸಿದ ನಿಯೋಜನೆ (ತಯಾರಿಕೆ: ಹಿಟಾಚಿ ಮೈಕ್ರೋಲೋಕ್–II) ವಂದಾಲ (ಒಳಪಡಿಸಿ) – ಹೊಟಗಿ ಜಂಕ್ಷನ್ (ಒಳಪಡಿಸಿ) ವಿಭಾಗ (ಗ್ರೂಪ್: 258) **(ಕಾಮಗಾರಿ ಮುಕ್ತಾಯದ ಅವಧಿ: 06 ತಿಂಗಳುಗಳು)** | ರೂ. 77,10,545.22/- |

ಮೇಲಿನ ಟೆಂಡರಗಳಿಗೆ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30.11.2022, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ ಮತ್ತು ದೂರಸಂಪರ್ಕ ಇಂಜಿನಿಯರ್ ರೈಲ್ವೆ ವಿದ್ಯುದೀಕರಣ, ಬೆಂಗಳೂರು

PUB/479/AAD/PRB/SWR/2022-23

S.W.Railways SWRRLY SWRRLY



### ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ. 30/MYS/2022 ದಿನಾಂಕ: 08.11.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಕ್ರಸಂ | ಕಾಮಗಾರಿಯ ಹೆಸರು | ಅಂದಾಜು ಮೌಲ್ಯ |
|---|---|---|
| 1 | **ಮೈಸೂರು:** ರೈಲ್ವೇ ಆಸ್ಪತ್ರೆಗೆ ಬೇಕಾದ ಅಭಿವೃದ್ಧಿ ಕೆಲಸಗಳು – ಛಾವಣಿಯ ಮೇಲಿನ ವಾಟರ್‌ಪ್ರೂಫಿಂಗ್ ಟ್ರೀಟ್‌ಮೆಂಟ್, ಆರ್‌ಸಿಸಿ ಸ್ಟೇಜ್– ವಾಟರ್ ಟ್ಯಾಂಕ್‌ಗೆ ಮತ್ತು ಪಾರ್ಶ್ವದಲ್ಲಿರುವ ಚರಂಡಿ. | ರೂ. 81,95,863/- |
| 2 | **ಚಿಕ್ಕಜಾಜೂರು–ರಾಯದುರ್ಗ ವಿಭಾಗ:** ಬ್ಯಾಡ್ ಫಾರ್ಮೇಶನ್‌ನ ಮೇಲೆ ಬೇಕಾದ ಥ್ರೂ ಫಾರ್ಮೇಶನ್ ಟ್ರೀಟ್‌ಮೆಂಟ್ – ಜಿಯೋ ಟೆಕ್ಸ್‌ಟೈಲ್ ಮತ್ತು ಜಿಯೋ ಗ್ರಿಡ್‌ನೊಂದಿಗಿನ ಬ್ಲಾಂಕೆಟಿಂಗ್ ಸೇರಿದಂತೆ. (2 ಲೇಯರ್‌ಗಳು) ಕಿಮೀ. 19/0 ಯಿಂದ 21/400, ಕಿಮೀ. 231/800 ಯಿಂದ 234/00, ಕಿಮೀ. 257/0 ಯಿಂದ 258/300 ಮತ್ತು ಕಿಮೀ. 266/500 ಯಿಂದ 268/200 – ಒಟ್ಟು ಮೊತ್ತ ಉದ್ದ 7.4 ಕಿಮೀ.ಗಳು. ಜಾಹೀರಾತು ಮಾಡಲಾದ ಕಾಮಗಾರಿಯ ಮೌಲ್ಯ: **ರೂ. 14,88,51,807/-** ಇದು ನಿರ್ದಿಷ್ಟಪಡಿಸಿದ ಅರ್ಹತಾ ಮಾನದಂಡಗಳಿಗೆ ಪರಿಗಣಿಸಬೇಕಾದ ವಿಶೇಷ ಘಟಕಗಳ ಕೆಳಗಿನ ಮೌಲ್ಯವನ್ನು ಹೊಂದಿರುವ ಕೆಲಸವಾಗಿದೆ: ಅ) ಅರ್ಥ್ ವರ್ಕ್ ಕಾಂಪೋನೆಂಟ್: **ರೂ. 6,63,29,483/-**, ಬಿ) ಟ್ರ್ಯಾಕ್ ವರ್ಕ್ ಕಾಂಪೋನೆಂಟ್: **ರೂ. 8,17,61,946/-** | ರೂ. 14,88,51,807/- |
| 3 | **ಹಾಸನದಲ್ಲಿ** ಲೋಕೋ ಮರಳು ಶೇಖರಣೆಗಾಗಿ 2 ನಂ. ಮರಳು ಕೊಠಡಿಗಳನ್ನು ನಿರ್ಮಾಣ ಮಾಡುವುದು. | ರೂ. 8,19,029/- |
| 4 | ಅಬ್ಯುಟ್‌ಮೆಂಟ್ ಮತ್ತು ಬ್ರಿಡ್ಜ್‌ಗಳ ಪಿಯರ್ಸ್‌ಗಾಗಿ ತಪಾಸಣಾ ಪ್ಲಾಟ್‌ಫಾರ್ಮ್ ಅನ್ನು ಒದಗಿಸುವುದು, 763 ಆರ್‌ಯೂಬಿ ಸ್ಪಾನ್ 1x12.20ಮೀ. ಮೈಸೂರು–ಚಾಮರಾಜನಗರ ವಿಭಾಗ – ಬ್ರಿಡ್ಜ್ ಸಂ. 279 ಆರ್‌ಯುಬಿ ಸ್ಪಾನ್ 1x12.20ಮೀ, ಬ್ರಿಡ್ಜ್ ಸಂ. 242 ಕಾವೇರಿ ಸ್ಪಾನ್ 13x12.20ಮೀ & ಬ್ರಿಡ್ಜ್ ಸಂ. 91 ಸ್ಪಾನ್ 1x12.20 - ಮೈಸೂರು–ಅರಸೀಕೆರೆ ವಿಭಾಗ, ಬ್ರಿಡ್ಜ್ ಸಂ. 28 ಸ್ಪಾನ್ 3x12.20ಮೀ, ಬ್ರಿಡ್ಜ್ ಸಂ. 74 ಸ್ಪಾನ್ 4x12.20ಮೀ, ಬ್ರಿಡ್ಜ್ ಸಂ. 75 ಸ್ಪಾನ್ 4x12.20ಮೀ & ಬ್ರಿಡ್ಜ್ ಸಂ. 119 ಸ್ಪಾನ್ 4x12.20 - ಚಿಕ್ಕಜಾಜೂರು–ರಾಯದುರ್ಗ ವಿಭಾಗ, ಬ್ರಿಡ್ಜ್ ಸಂ. 48ಬಿ ಸ್ಪಾನ್ 1x18.30ಮೀ, ಬ್ರಿಡ್ಜ್ ಸಂ. 59 ಭದ್ರಾ ಸ್ಪಾನ್ 11x18.30ಮೀ, ಬ್ರಿಡ್ಜ್ ಸಂ. 86 ತುಂಗಾ ಸ್ಪಾನ್ 15x18.30ಮೀ & ಬ್ರಿಡ್ಜ್ ಸಂ. 104A ಸ್ಪಾನ್ 1x30.50 - ಬೀರೂರು–ತಾಳಗುಪ್ಪ ವಿಭಾಗ, ಬ್ರಿಡ್ಜ್ ಸಂ. 27 ಸ್ಪಾನ್ 1x18.30ಮೀ & ಬ್ರಿಡ್ಜ್ ಸಂ. 39 ಸ್ಪಾನ್ 1x18.30ಮೀ – ಕಡೂರು–ಚಾಮರಾಜನಗರ ವಿಭಾಗ (ಒಟ್ಟು 14 ಸೇತುವೆಗಳು). | ರೂ. 96,05,311/- |
| 5 | ಅಬ್ಯುಟ್‌ಮೆಂಟ್ ಮತ್ತು ಬ್ರಿಡ್ಜ್‌ಗಳ ಪಿಯರ್ಸ್‌ಗಾಗಿ ತಪಾಸಣಾ ಪ್ಲಾಟ್‌ಫಾರ್ಮ್ ಅನ್ನು ಒದಗಿಸುವುದು, ಬ್ರಿಡ್ಜ್ ಸಂ. 242ಎ ಆರ್‌ಯೂಬಿ ಸ್ಪಾನ್ 1x12.20ಮೀ (3 ಟ್ರ್ಯಾಕ್), 222ಎ ಆರ್‌ಯೂಬಿ ಸ್ಪಾನ್ 1x12.20ಮೀ,192ಡಿ ಆರ್‌ಯೂಬಿ ಸ್ಪಾನ್ 1x15.10ಮೀ (2 ಟ್ರ್ಯಾಕ್),131 ಆರ್‌ಯೂಬಿ ಸ್ಪಾನ್ 1x12.20ಮೀ, ಬ್ರಿಡ್ಜ್ ಸಂ. 110 ಡಿಎನ್ ಲೈನ್ ಸ್ಪಾನ್ 1x18.30ಮೀ, ಬ್ರಿಡ್ಜ್ ಸಂ. 86 ಸ್ಪಾನ್ 3x12.20ಮೀ, ಬ್ರಿಡ್ಜ್ ಸಂ. 85 ಸ್ಪಾನ್ 2x12.20ಮೀ, ಬ್ರಿಡ್ಜ್ ಸಂ. 71 ಸ್ಪಾನ್ 2x12.20ಮೀ, ಬ್ರಿಡ್ಜ್ ಸಂ. 50 ಸ್ಪಾನ್ 2x12.20ಮೀ, ಬ್ರಿಡ್ಜ್ ಸಂ. 35 ಸ್ಪಾನ್ 3x12.20ಮೀ, ಬ್ರಿಡ್ಜ್ ಸಂ. 34 ಸ್ಪಾನ್ 1x12.20ಮೀ, ಬ್ರಿಡ್ಜ್ ಸಂ. 23 ಸ್ಪಾನ್ 1x12.20ಮೀ, ಬ್ರಿಡ್ಜ್ ಸಂ. 21 ಸ್ಪಾನ್ 1x12.20ಮೀ, ಬ್ರಿಡ್ಜ್ ಸಂ. 69 ಸ್ಪಾನ್ 1x12.20ಮೀ, ಬ್ರಿಡ್ಜ್ ಸಂ. 51 ಸ್ಪಾನ್ 2x12.20ಮೀ, ಬ್ರಿಡ್ಜ್ ಸಂ. 50 ಸ್ಪಾನ್ 2x12.20ಮೀ & ಬ್ರಿಡ್ಜ್ ಸಂ. 44 ಸ್ಪಾನ್ 1x12.20ಮೀ+1x18.30ಮೀ. (ಒಟ್ಟು 17 ಸೇತುವೆಗಳು). | ರೂ. 36,87,630/- |
| 6 | **ಹಾಸನ–ಮಂಗಳೂರು ವಿಭಾಗ:** ಹಾಸನ–ಮಂಗಳೂರು ವಿಭಾಗದಲ್ಲಿ ಎಸ್‌ಎಸ್‌ಇ/ಬ್ರಿಡ್ಜ್/ಸಕಲೇಶಪುರ ವ್ಯಾಪ್ತಿ (ಸಕಲೇಶಪುರ–ಸುಬ್ರಮಣ್ಯ ರೋಡ್ ಘಾಟ್ ವಿಭಾಗ ಒಳಗೊಂಡಂತೆ) 2020–21 & 2022–23 ವರ್ಷಗಳಲ್ಲಿ ಮಾಡಬೇಕಾದ ಸ್ಟೀಲ್ ಗಿರ್ಡರ್ ಪೈಂಟಿಂಗ್ ಕೆಲಸ (ಬ್ರಿಡ್ಜ್ ಸಂ. 293, 296, 298, 300, 367, 400, 474, 539 & ಐಓಹೆಚ್ ಶೆಡ್ ಮತ್ತು 15, 23, 133, 142, 165, 177, 180, 183, 184, 185, 186, 187, 188, 189, 190, 192, 193, 194, 200, 232, 233, 238, 239, 241, 243, 246, 247, 248, 249, 250, 251, 252, 264, 281, 283, 287, 289, 292, 297, 303, 318, 322, 326, 327, 328, 334, 335, 337, 353, 358, 366 & 578) | ರೂ. 1,47,94,769/- |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30.11.2022, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/483/AAD/PRB/SWR/2022-23 ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ/ಮೈಸೂರು

S.W.Railways sw_rly SWRRLY southwesternrailway SWRRLY


## ಇಂದು ಮಧುಮೇಹ ತಪಾಸಣೆ ಶಿಬಿರ

ಬೆಂಗಳೂರು: ವಿಶ್ವ ಮಧುಮೇಹ ದಿನದ ಪ್ರಯುಕ್ತ ಅಪೋಲೊ ಆಸ್ಪತ್ರೆಗಳ ಸಮೂಹವು ಸೋಮವಾರ ಉಚಿತ ಮಧುಮೇಹ ತಪಾಸಣಾ ಶಿಬಿರ ಹಮ್ಮಿಕೊಂಡಿದೆ.

ಆಸ್ಪತ್ರೆಯಲ್ಲಿನ ಎಲ್ಲ ಕೇಂದ್ರಗಳಲ್ಲಿ ರಕ್ತದಲ್ಲಿನ ಸಕ್ಕರೆ ಅಂಶವನ್ನು ಪರೀಕ್ಷಿಸಲಾಗುತ್ತದೆ. ಹತ್ತಿರದ ಅಪೋಲೊ ಆಸ್ಪತ್ರೆಗೆ ತೆರಳಿ, ಪರೀಕ್ಷೆ ಮಾಡಿಸಿಕೊಳ್ಳಬಹುದು ಎಂದು ಆಸ್ಪತ್ರೆಗಳ ಸಮೂಹದ ಅಧ್ಯಕ್ಷ ಡಾ. ಪ್ರತಾಪ್ ಸಿ. ರೆಡ್ಡಿ ತಿಳಿಸಿದ್ದಾರೆ.

## ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ನೊಳಂಬ ಲಿಂಗಾಯತ ಸಂಘವು ತಾಂತ್ರಿಕ, ವೈದ್ಯಕೀಯ, ಕೃಷಿ ಹಾಗೂ ಸ್ನಾತಕೋತ್ತರ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಬಡ ಹಾಗೂ ಪ್ರತಿಭಾವಂತ ನೊಳಂಬ ಲಿಂಗಾಯತ ವಿದ್ಯಾರ್ಥಿಗಳಿಂದ 2022–23ನೇ ಸಾಲಿನ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ನ.30ರ ಒಳಗಾಗಿ ಕಾರ್ಯದರ್ಶಿ, ನೊಳಂಬ ಲಿಂಗಾಯತ ಸಂಘ, ಕಂಬಿ ಎಂ. ಸಿದ್ದರಾಮಣ್ಣ ವಿದ್ಯಾರ್ಥಿನಿಲಯ, ನ.1/ಎ, 1ನೇ 'ಎ' ಅಡ್ಡರಸ್ತೆ, 3ನೇ ಹಂತ, 4ನೇ ವಿಭಾಗ, ಬಸವೇಶ್ವರನಗರ, ಬೆಂಗಳೂರು– 79 ಇಲ್ಲಿಗೆ ಕಳುಹಿಸಬಹುದು.


ಪ್ರಜಾವಾಣಿ

## ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**JOB OPPORTUNITIES**

**Security & Detectives**

**REQUIRED** EX-MAN, Civilian Experienced Field Executive, Tally Clerk Ph: 080-23437474 / 080-23437797

**Wanted**

**WANTED FEMALE** Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

**General**

**EXCLUSIVELY FOR** Retired, Sr.Citizens, VRS, Pensioner's, Homemaker's & Entrepreneurs. Opportunity to Earn Income upto 1.5 Lac p.m. Contact:- 8861561347/ 9686399918

**REAL ESTATE SELLING**

**Residential/ Commercial**

**Multiple Locations**

**NANDI HILLS** road 1/2 acre 15rooms gated AC furnished 8Cr. 80x60 plot KSIT kanakapura road10.5K/Sq.ft Ph:7019346409

**BUSINESS**

**Business Offers**

**Finance**

**NRI'S INVESTMENT** And Finance Available On Low Interest Against Properties, Land & Building,Sites,Flats, Converted& Agriculture Lands Call:7411265189

**WANTED BUSINESS** Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

**CONNECT**

ಪಂಚೆಗಳು
RAMRAJ
UATHAYAM
MINISTER WHITE®
DHOTIES, TOWELS & other Items
PRAKASH Corporation
Ph : 080 42156845
# 186, Prem Plaza, Chickpet Bangalore - 560 053

DH ಪ್ರಜಾವಾಣಿ

BOOK YOUR REAL ESTATE

AD IN DECCAN HERALD ALL KARNATAKA
PRAJAVANI ALL KARNATAKA

@ 750/-* Per Sqcm
Single Column

conditions apply*

For More Details Contact:
9845114560 | 9731810277 | 9901641752 | 9886213331
080- 45557163 | 45557164
dhclassifieds@deccanherald.co.in www.dhclassifieds.com

**SUYAMB MANAGEMENT,** A Genuine Share Market Trading Company offers Genuine and Principle Safe Returns for your investment. 6% a Month Fixed Returns. Office in Koramangla. Successful 5th Year. All Investments supported with Legal Document. Call 90709 90709

**PERSONAL**

**Change of Name**

**CHANGE OF NAME**
We, **Manish Kalla,** S/o. Prakash Narayan & Richa Purohit, W/o. Manish Kalla aged 43 years currently residing at Villa No.63, Confident Bellatrix, Billapura Cross, Sarjapura, Bangalore 562125, have changed our daughter's name as **AADYA KALLA** from **AADYA** vide affidavit dated 12.11.2022 before Notary Aravind Patil G.G, Bangalore

**EDUCATIONAL**

**Admission**

**ONE SITTING.** BCA/BBA/ BSc/BCom/MA/MSc/MBA. Distance Education from Tamilnadu's Prestigious University.Limited Seats, LAST CHANCE. Asha Academy, Bangalore. Call: 9448460103/ 7093438248

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಆಡಳಿತ ವ್ಯವಸ್ಥೆಯಿಂದ ಬೇಸತ್ತು ಹೊಸ ಪಕ್ಷ ‘ಉದಯ’

# ಪಕ್ಷ ಕಟ್ಟಿದ ಮಾಜಿ ಸೈನಿಕರು

● ಆದಿತ್ಯ ಕೆ.ಎ.

**ಮುಖ್ಯಾಂಶಗಳು**

- ಕೇಂದ್ರ ಚುನಾವಣಾ ಆಯೋಗದಿಂದ ಅನುಮೋದನೆ
- ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ ಬದಲಾವಣೆ ತರುವ ಗುರಿ

ಪ್ರಜಾವಾಣಿ ವಿಶೇಷ

**ಬೆಂಗಳೂರು:** ಈಗಿನ ವ್ಯವಸ್ಥೆಯಿಂದ ಬೇಸತ್ತು ವಿಭಿನ್ನ ಆಲೋಚನೆ ಹಾಗೂ ಆಡಳಿತದಲ್ಲಿ ಬದಲಾವಣೆ ತರುವ ಉದ್ದೇಶದಿಂದ ಮಾಜಿ ಸೈನಿಕರು ‘ಸಾರ್ವಜನಿಕ ಆದರ್ಶ ಸೇನಾ’ ಎಂಬ ರಾಜಕೀಯ ಪಕ್ಷವೊಂದನ್ನು ರಾಜ್ಯದಲ್ಲಿ ಕಟ್ಟಿದ್ದಾರೆ.

ದಕ್ಷಿಣ ಭಾರತದಲ್ಲಿ ಮಾಜಿ ಸೈನಿಕರು, ನಿವೃತ್ತ ಸೇನಾಧಿಕಾರಿಗಳೇ ಸೇರಿಕೊಂಡು ಪ್ರಥಮ ಬಾರಿಗೆ ಈ ಪಕ್ಷ ಸ್ಥಾಪಿಸಿದ್ದಾರೆ.

ಕೇಂದ್ರ ಚುನಾವಣಾ ಆಯೋಗವು ಸೇನಾಗೆ ಅನುಮೋದನೆ ನೀಡಿದೆ. ಪಕ್ಷದ ಪ್ರಥಮ ಅಧ್ಯಕ್ಷರಾಗಿ ಭಾರತೀಯ ಸೇನೆಯಲ್ಲಿ 30 ವರ್ಷ ಸೇವೆ ಸಲ್ಲಿಸಿ ಬ್ರಿಗೇಡಿಯರ್ ಆಗಿ ನಿವೃತ್ತರಾದ ಬಳಿಕ ಇಲ್ಲಿನ ವಿದ್ಯಾರಣ್ಯಪುರದಲ್ಲಿ ನೆಲೆಸಿರುವ ರವಿ ಮುನಿಸ್ವಾಮಿ ಆಯ್ಕೆಗೊಂಡಿದ್ದಾರೆ.

ಜಂಟಿ ಕಾರ್ಯದರ್ಶಿಗಳಾಗಿ ನಿವೃತ್ತ ಮೇಜರ್ ಎನ್.ರಘುರಾಮ್ ರೆಡ್ಡಿ ಹಾಗೂ ದಾವಣಗೆರೆ ಜಿಲ್ಲೆ ಹೊನ್ನಾಳಿಯ ನಿವೃತ್ತ ಸುಬೇದಾರ್ ರಮೇಶ್ ಜಗತ್ತಪ್ಪ ಆಯ್ಕೆಗೊಂಡಿದ್ದಾರೆ. ‘ಶ್ರೀಲಂಕಾ ಆಪರೇಷನ್’ ವೇಳೆ ರವಿ ಶಾಸ್ತ್ರಸ್ತ್ರಗಳ ನಿರ್ವಹಣೆಯ ಜವಾಬ್ದಾರಿ ವಹಿಸಿದ್ದರು. ರಘುರಾಮ್‌ರೆಡ್ಡಿ ಸಹ ಗಡಿಗಳಲ್ಲಿ ಉಗ್ರರ ವಿರುದ್ಧದ ಕಾರ್ಯಾಚರಣೆ ನಡೆಸಿದ್ದವರು.

‘ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ ಬದಲಾವಣೆ ತರುವ ಬಯಕೆಯಿದೆ’ ಎಂದು ಅಧ್ಯಕ್ಷ ರವಿ ‘ಪ್ರಜಾವಾಣಿ’ಗೆ ತಿಳಿಸಿದರು.

ಕಹಳೆ ಚಿಹ್ನೆ ನಿಗದಿ ಪಡಿಸುವಂತೆ ಕೋರಿ ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಲು ಪಕ್ಷದ ಮುಖಂಡರು ನಿರ್ಧರಿಸಿದ್ದಾರೆ.

## ವೆಬ್‌ಸೈಟ್‌ನಲ್ಲಿ ಖರ್ಚು, ವೆಚ್ಚ ಪ್ರಕಟ

ಸಭೆ, ಪ್ರಚಾರ, ಚುನಾವಣೆಯ ಖರ್ಚಿಗೆ ಸಾರ್ವಜನಿಕರಿಂದಲೇ ದೇಣಿಗೆ ಸಂಗ್ರಹಿಸಲು ಮಾಜಿ ಸೈನಿಕರು ನಿರ್ಧರಿಸಿದ್ದಾರೆ. ಪ್ರತಿ ರೂಪಾಯಿಯ ಖರ್ಚು ವೆಚ್ಚಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ನಿವೃತ್ತ ಸೈನಿಕರಿರುವ ಕಾರಣಕ್ಕೆ ಪಕ್ಷದಲ್ಲಿ ಶಿಸ್ತು ಇರಲಿದೆ ಎಂದು ರವಿ ಮುನಿಸ್ವಾಮಿ ಹೇಳಿದರು.

> **ಜನರು ಬದಲಾವಣೆ ಬಯಸಿದ್ದಾರೆ. ರಾಷ್ಟ್ರೀಯ, ಪ್ರಾದೇಶಿಕ ಪಕ್ಷಗಳ ಮೇಲೆ ಬೇಸತ್ತಿದ್ದಾರೆ. ಪ್ರತಿ ಚುನಾವಣೆಯಲ್ಲೂ ನಮ್ಮ ಅಭ್ಯರ್ಥಿಗಳು ಸ್ಪರ್ಧಿಸಲಿದ್ದಾರೆ.**
> **ರವಿ ಮುನಿಸ್ವಾಮಿ,** ಅಧ್ಯಕ್ಷ, ‘ಸಾರ್ವಜನಿಕ ಆದರ್ಶ ಸೇನಾ’

‘ಜನರಿಂದ ಜನರಿಗಾಗಿ ಜನರಿ ಗೋಸ್ಕರ ಸರ್ಕಾರಗಳು ಆಡಳಿತ ನಡೆಸುತ್ತಿಲ್ಲ. ಭ್ರಷ್ಟಾಚಾರ ತಾಂಡವ ವಾಡುತ್ತಿದೆ. ಧರ್ಮದ ಹೆಸರಿನಲ್ಲಿ ವ್ಯರ್ಥ ಹೋರಾಟಗಳು ನಡೆಯುತ್ತಿವೆ. ಧರ್ಮದ ಹೋರಾಟ ಜನರಿಗೆ ಶಿಕ್ಷಣ, ಅನ್ನ ನೀಡುತ್ತಿಲ್ಲ. ಪರಿಣಾಮಕಾರಿ, ಪಾರದರ್ಶಕ, ಬದ್ಧತೆಯುಳ್ಳ ಆಡಳಿತ ರಾಜ್ಯಕ್ಕೆ ಬೇಕಿದೆ. ಅದನ್ನು ಈಡೇರಿಸುವ ಆಲೋಚನೆ ಹೊಸ ಪಕ್ಷದ್ದು’ ಎಂದು ಪಕ್ಷದ ನೇತೃತ್ವ ವಹಿಸಿರುವ ನಿವೃತ್ತ ಸೇನಾಧಿಕಾರಿಗಳು ಹೇಳುತ್ತಾರೆ.

**ಜನರಿಂದಲೇ ದೇಣಿಗೆ:** ಜಿಲ್ಲಾಮಟ್ಟದಲ್ಲೂ ಪದಾಧಿಕಾರಿಗಳನ್ನು ನೇಮಿಸಲಾಗುವುದು. ಮಾಜಿ ಸೈನಿಕರ ಸಂಘಗಳ ಬೆಂಬಲ ಪಕ್ಷಕ್ಕಿದೆ. ರಾಜ್ಯದಲ್ಲಿನ ಸಾಫ್ಟ್‌ವೇರ್ ಎಂಜಿನಿಯರ್, ವೈದ್ಯರು ಹಾಗೂ ಸುಶಿಕ್ಷಿತರು ನೆರವು ಸಿಕ್ಕಿದೆ. ಡಿಸೆಂಬರ್‌ನಲ್ಲಿ ಪಕ್ಷದ ಉದ್ಘಾಟನೆ, ವೆಬ್‌ಸೈಟ್: http://sasparty.in ಅನಾವರಣ ನಡೆಯಲಿದೆ. ಜನವರಿಯಲ್ಲಿ ಜಿಲ್ಲಾ ಪ್ರವಾಸ ಕೈಗೊಳ್ಳಲಾಗುವುದು ಎಂದು ಅಧ್ಯಕ್ಷರು ತಿಳಿಸಿದರು.

# ಡಿಜಿಟಲ್ ರೂಪ: ಲಿಪಿ ವಿನ್ಯಾಸ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರೆವರೆಂಡ್ ಫರ್ಡಿನಾಂಡ್ ಕಿಟೆಲ್ ಬಳಸಿದ್ದ ಹಳೆಯ ಕನ್ನಡ ಲಿಪಿಯನ್ನು ಡಿಜಿಟಲ್ ರೂಪದಲ್ಲಿ ಪ್ರಶಾಂತ್ ಪಂಡಿತ್ ಅವರು ಮರು ಸೃಷ್ಟಿಸಿದ್ದು, ಆ ಲಿಪಿ ವಿನ್ಯಾಸವನ್ನು ನಗರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಗಣ್ಯರು ಲೋಕಾರ್ಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ಕಿಟೆಲ್ ಗಿರಿ ಮೊಮ್ಮಗ ಈವ್ಸ್ ಮಯರ್ ಮಾತನಾಡಿ, ‘ದೇಶ ಪರ್ಯಟನೆ ವೇಳೆ ರಾಜ ಮಹಾರಾಜರ ಕೈಯಲ್ಲಿ ಕತ್ತಿ ರಾರಾಜಿಸುವುದನ್ನು ಕಂಡಿದ್ದೇವೆ. ಆದರೆ, ಕರ್ನಾಟಕದಲ್ಲಿ ಮುತ್ತಾತ ಕಿಟೆಲ್ ಅವರ ಎಲ್ಲ ಪ್ರತಿಮೆಗಳ ಕೈಯಲ್ಲಿ ಪುಸ್ತಕ ನೋಡಿ ಸಂತೋಷವಾಯಿತು’ ಎಂದರು.

ಈವ್ಸ್ ಮಯರ್

‘ಕಿಟೆಲ್ ಅವರು ಜ್ಞಾನದ ಮೂಲಕ ಎಲ್ಲರನ್ನು ಗೆಲ್ಲಲು ಪ್ರಯತ್ನಿಸಿದರು. ಅವರು ಬಳಸಿದ ಒಂದೇ ಆಯುಧ ಲೇಖನಿ. ನನ್ನ ತಾತನ ಕಥೆಗಳಲ್ಲಿ ಭಾರತ ಹಾಗೂ ಕರ್ನಾಟಕ ಎಂಬ ಅದ್ಭುತ ರಾಜ್ಯದ ಕತೆಗಳಲ್ಲಿ ತನ್ನ ತಾತನನ್ನೂ ಒಬ್ಬ ಪಾತ್ರಧಾರಿಯಾಗಿ ಕಂಡಿದ್ದೇವೆ’ ಎಂದು ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್ ಮಾತನಾಡಿ, ಭಾರತೀಯ ಭಾಷೆಗಳ ಲಿಪಿ ಕ್ಯಾಲಿಗ್ರಫಿ ಶೈಲಿಯಲ್ಲಿದ್ದು, ಕಿಟಲ್ ಫಾಂಟ್ ಅನ್ನು ಅದೇ ರೀತಿ ಕಾಣುವಂತೆ ಮಾಡಿದ್ದನ್ನು ನೋಡಿ ಸಂತೋಷವಾಯಿತು’ ಎಂದರು.

ಭಾರತೀಯ ಭಾಷೆಗಳಲ್ಲಿ ಮರುಸೃಷ್ಟಿ ಕೆಲಸಗಳು ಕಡಿಮೆಯಾಗಿವೆ. ಈ ರೀತಿಯ ಕೆಲಸಗಳು ಇನ್ನೂ ಹೆಚ್ಚಾಗಬೇಕು ಎಂದು ಸಲಹೆ ನೀಡಿದರು.

ಪ್ರಶಾಂತ ಪಂಡಿತ್ ಅವರು ಮಾತನಾಡಿ, ‘ಕಿಟೆಲ್ 70 ಸಾವಿರ ಪದಗಳ ನಿಘಂಟು ಸಿದ್ಧಪಡಿಸಿದ್ದರು. ಅವರು ಬರೆದ ಅನೇಕ ಪುಸ್ತಕಗಳ ಅರಿವು ವಿದ್ವತ್ ವಲಯದ ಎಲ್ಲರಿಗೂ ಪರಿಚಯ’ ಎಂದರು.

‘ಫಾಂಟ್ ಇನ್ನೂ ಬಹಳಷ್ಟು ಪರೀಕ್ಷೆಗೆ ಒಳಪಡಬೇಕಿದ್ದು, ಹಲವಾರು ಸುಧಾರಣೆ ಕಾಣಬೇಕಿದೆ. ಕನ್ನಡ ಸಮುದಾಯ ಈ ಕೆಲಸಕ್ಕೆ ಮುಂದಾಗಬಹುದು. ಇದೇ ಕಾರಣದಿಂದ ಫಾಂಟ್ ಅನ್ನು ಮುಕ್ತ ಹಾಗೂ ಸ್ವತಂತ್ರ್ಯ ತಂತ್ರಾಂಶವಾಗಿ ಬಿಡುಗಡೆ ಮಾಡಲಾಗಿದೆ’ ಎಂದು ತಿಳಿಸಿದರು.

# ‘ಶಕ್ತಿ, ಒಗ್ಗಟ್ಟು ಪ್ರದರ್ಶನ ಅನಿವಾರ್ಯ’

## ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಸಮಾಜದ ಮುಖಂಡರ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಸಮಾಜವು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಹಿಂದುಳಿದಿದೆ. ಈ ಸಮಾಜಕ್ಕೆ ಸರ್ಕಾರ ಎಲ್ಲ ಕ್ಷೇತ್ರದಲ್ಲೂ ಪ್ರಾತಿನಿಧ್ಯ ಕಲ್ಪಿಸಬೇಕು’ ಎಂಬ ನಿರ್ಣಯವನ್ನು ಸಮಾಜದ ಮುಖಂಡರು ಕೈಗೊಂಡರು.

ರಾಜರಾಜೇಶ್ವರ ಸಹಸ್ರಾರ್ಜುನ ಮಹಾರಾಜರ ಜಯಂತಿ ಸಮಿತಿ ವತಿಯಿಂದ ಎಬಿಎಸ್‌ಎಸ್‌ಕೆ ಸಮಾಜ, ಎಸ್‌ಎಸ್‌ಕೆ ಸಂಘ, ಎಸ್‌ಎಸ್‌ಕೆ ಕೋ-ಆಪರೇಟಿವ್ ಸೊಸೈಟಿ ಸಹಯೋಗದಲ್ಲಿ ನಗರದಲ್ಲಿ ಭಾನುವಾರ ಆಯೋಜಿಸಿದ್ದ ‘ಸಹಸ್ರಾರ್ಜುನ ಮಹಾರಾಜರ ಜಯಂತಿ’ಯಲ್ಲಿ ಮಾತನಾಡಿದ ಮುಖಂಡರು, ಸಮಾಜದ ಅಭಿವೃದ್ಧಿಗೆ ಸೌಲಭ್ಯಗಳನ್ನು ಕಲ್ಪಿಸುವಂತೆ ಆಗ್ರಹಿಸಿದರು.

ಶಾಸಕ ದಿನೇಶ್ ಆರ್. ಗುಂಡೂರಾವ್ ಮಾತನಾಡಿ, ‘ಸಮಾಜಕ್ಕೆ ಸೌಲಭ್ಯಗಳನ್ನು ಕಲ್ಪಿಸಲು ಬದ್ಧನಿದ್ದೇನೆ. ಭವನ ಮತ್ತಿತರ ಕಾರ್ಯಕ್ಕೆ ಜಾಗ ಕೊಡಿಸಲು ಸಂಬಂಧಪಟ್ಟ ಸಚಿವರ ಜೊತೆಗೆ ಚರ್ಚಿಸುತ್ತೇನೆ. ನನ್ನ ಕಷ್ಟ-ಸುಖಗಳಲ್ಲಿ ಈ ಸಮಾಜವು ಜತೆಗೆ ನಿಂತಿದ್ದು, ಎಲ್ಲ ರೀತಿಯ ನೆರವು ಕಲ್ಪಿಸಲು ಪ್ರಯತ್ನಿಸುತ್ತೇನೆ’ ಎಂದು ಭರವಸೆ ನೀಡಿದರು.

ಅಖಿಲ ಭಾರತೀಯ ಸೋಮವಂಶೀಯ ಸಹಸ್ರಾರ್ಜುನ ಕ್ಷತ್ರಿಯ ಸಮಾಜದ ಉಪಾಧ್ಯಕ್ಷ ಡಮಾಮ್ ವಿ. ಸತ್ಯನಾರಾಯಣ ಮಾತನಾಡಿ, ‘ಬೆಂಗಳೂರಿನ ಹೃದಯ ಭಾಗವಾದ ಚಿಕ್ಕಪೇಟೆ ಸುತ್ತಮುತ್ತ ಪ್ರದೇಶದಲ್ಲಿ ನೂರಾರು ವರ್ಷಗಳಿಂದ ನೆಲೆಸಿದ್ದೇವೆ. ಬೆಂಗಳೂರಿನಲ್ಲೇ 10 ಲಕ್ಷ ಜನಸಂಖ್ಯೆ ಇದ್ದರೆ, ವಿವಿಧ ಜಿಲ್ಲೆಗಳಲ್ಲಿ 40 ಲಕ್ಷದಷ್ಟು ಜನಸಂಖ್ಯೆ ನೆಲೆಸಿದೆ. ಶಕ್ತಿ ಪ್ರದರ್ಶನ ಮಾಡುವ ಅವಕಾಶ ಈಗ ಬಂದಿದೆ. ರಾಜಕೀಯ ಪಕ್ಷಗಳು ನಮ್ಮ ಸಮಾಜವನ್ನು ಮತಬ್ಯಾಂಕ್ ಆಗಿ ಮಾತ್ರ ಪರಿಗಣಿಸಿವೆ. ಸಮಾಜವು ಅಭಿವೃದ್ಧಿ ಹೊಂದಲು ಶಕ್ತಿ ಪ್ರದರ್ಶನ ಅವಶ್ಯಕ’ ಎಂದರು.

‘ಸಣ್ಣಪುಟ್ಟ ಸಮಾಜಕ್ಕೂ ಪ್ರತ್ಯೇಕ ನಿಗಮ ಮಂಡಳಿಯನ್ನು ರಚಿಸಿದೆ. ಆದರೆ, ನಮ್ಮ ಸಮಾಜಕ್ಕೆ ಯಾವುದೇ ಮಂಡಳಿ ಸ್ಥಾಪಿಸಿಲ್ಲ. ಆದ್ದರಿಂದ, ಸಮಾಜವು ಒಗ್ಗಟ್ಟು ಪ್ರದರ್ಶನ ಮಾಡಬೇಕು’ ಎಂದು ಸಲಹೆ ನೀಡಿದರು.

‘ಈ ರೀತಿಯ ಕಾರ್ಯಕ್ರಮಗಳು ಪದೇ ಪದೇ ನಡೆಯಬೇಕು’ ಎಂದು ಸಲಹೆ ನೀಡಿದರು.

ಸಮಾಜದ ಮುಖಂಡ ಎಸ್.ಡಿ.ಎಂ.ಸ್ವಾಮಿ, ಎಸ್‌ಎಸ್‌ಕೆ ಸಂಘದ ಅಧ್ಯಕ್ಷ ವಾಗೆಲೆ ರಾಜೇಂದ್ರ, ಬಿಬಿಎಂಪಿ ಮಾಜಿ ಸದಸ್ಯ ಎಚ್. ರವೀಂದ್ರ, ಅಖಿಲ ಭಾರತೀಯ ಸೋಮವಂಶೀಯ ಸಹಸ್ರಾರ್ಜುನ ಕ್ಷತ್ರಿಯ ಸಮಾಜದ ಪ್ರಧಾನ ಕಾರ್ಯದರ್ಶಿ ಕಬಾಡಿ ಜಿ. ರಾಮಚಂದ್ರಸಾ, ಎಸ್‌ಎಸ್‌ಕೆ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಮಗಜಿ ಬಾದ್ ಕೆ. ಸೋಮಶೇಖರ್, ಸಮಾಜ ಸೇವಕ ಡಿ.ಎಚ್.ನಾರಾಯಣಸಾ, ಬ್ರಿಜ್‌ಮೋಹನ್ ಎಸ್. ಖೋಡೆ, ಎಂ.ಎನ್.ರಾಮ್, ಕಲಬುರ್ಗಿಯ ವಸಂತ್, ಎಂ.ಸಿ.ಉಮಾಶಂಕರ್, ಸುಬ್ರಮಣಿ ಜೇ ಮಗಜಿ ಹಾಜರಿದ್ದರು.

ನಗರದಲ್ಲಿ ಭಾನುವಾರ ನಡೆದ ಸಹಸ್ರಾರ್ಜುನ ಮಹಾರಾಜರ ಜಯಂತಿಯಲ್ಲಿ ಶಾಸಕ ದಿನೇಶ್ ಗುಂಡೂರಾವ್ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ) ಸಮಿತಿ ಖಜಾಂಚಿ ಎಂ.ಸಿ.ಉಮಾಶಂಕರ್, ಎಸ್‌ಎಸ್‌ಕೆ ಸಂಘದ ಅಧ್ಯಕ್ಷ ವಾಗೆಲೆ ರಾಜೇಂದ್ರ, ಸಮಾಜದ ಮುಖಂಡ ಬ್ರಿಜ್ ಮೋಹನ್ ಎಸ್. ಖೋಡೆ, ಅಖಿಲ ಭಾರತೀಯ ಸೋಮವಂಶೀಯ ಸಹಸ್ರಾರ್ಜುನ ಕ್ಷತ್ರಿಯ ಸಮಾಜದ ಪ್ರಧಾನ ಕಾರ್ಯದರ್ಶಿ ಕಬಾಡಿ ಜಿ. ರಾಮಚಂದ್ರಸಾ, ಸಮಾಜದ ಮುಖಂಡ ಎಸ್.ಡಿ.ಎಂ.ಸ್ವಾಮಿ ಅಖಿಲ ಭಾರತೀಯ ಸೋಮವಂಶೀಯ ಸಹಸ್ರಾರ್ಜುನ ಕ್ಷತ್ರೀಯ ಸಮಾಜದ ಉಪಾಧ್ಯಕ್ಷ ಡಮಾಮ್ ವಿ. ಸತ್ಯನಾರಾಯಣ, ಮುಖಂಡ ಸಹಜಾನಂದಸಾ ಇದ್ದರು ಪ್ರಜಾವಾಣಿ ಚಿತ್ರ

### ಆಕರ್ಷಕ ಮೆರವಣಿಗೆ

ರಾಜರಾಜೇಶ್ವರ ಸಹಸ್ರಾರ್ಜುನ ಮಹಾರಾಜರ ಭಾವಚಿತ್ರ ಹಾಗೂ ಪೂರ್ಣಕುಂಭದ ಜತೆಗೆ ಮೆರವಣಿಗೆಯು ಎಸ್‌ಎಸ್‌ಕೆ ಸಂಘದಿಂದ ಆರಂಭಗೊಂಡು ಶಿಕ್ಷಕರ ಸದನ ತಲುಪಿತು. ಫ್ಯಾನ್ಸಿ ಡ್ರೆಸ್, ರಸಪ್ರಶ್ನೆ ಸ್ಪರ್ಧೆ ಆಯೋಜಿಸಲಾಗಿತ್ತು. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಯೂತ್ ಪರಿವರ್ತನ್ ಅಧ್ಯಕ್ಷ ಅಮಿತ್ ಅಮರನಾಥ್, ಅಜಿತ್ ಸುದರ್ಶನ್ ಅವರನ್ನು ಸನ್ಮಾನಿಸಲಾಯಿತು. ಹೆಚ್ಚು ಅಂಕ ಪಡೆದ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು.

# 3 ತಿಂಗಳಿಂದ ವರದಿಯಾಗದ ಕೋವಿಡ್ ಮರಣ

**ಬೆಂಗಳೂರು:** ನಗರದಲ್ಲಿ ಕೊರೊನಾ ಸೋಂಕಿನ ತೀವ್ರತೆ ಕಡಿಮೆಯಾಗಿದ್ದು, ಕಳೆದ ಒಂದು ತಿಂಗಳಿಂದ ಕೋವಿಡ್ ಮರಣ ಪ್ರಕರಣ ಹೊಸದಾಗಿ ವರದಿಯಾಗಿಲ್ಲ.

2022ರ ಅ.13ರಂದು ಕೊರೊನಾ ಸೋಂಕಿಗೆ ಇಬ್ಬರು ಮೃತಪಟ್ಟಿದ್ದರು. ನಗರದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಈ ತಿಂಗಳ ಬಹುತೇಕ ದಿನಗಳು 100ರ ಆಸುಪಾಸಿನಲ್ಲಿದೆ. ಇದರಿಂದಾಗಿ ಬಿಬಿಎಂಪಿ ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಇಳಿಕೆ ಮಾಡಿದೆ. ನಗರದಲ್ಲಿ ಈವರೆಗೆ 18.75 ಲಕ್ಷಕ್ಕೂ ಅಧಿಕ ಕೋವಿಡ್ ಪ್ರಕರಣಗಳು ವರದಿಯಾಗಿವೆ. ಸೋಂಕಿತರಲ್ಲಿ 18.56 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ. 1,624 ಸಕ್ರಿಯ ಪ್ರಕರಣಗಳಿವೆ. ಸೋಂಕಿತರಲ್ಲಿ ಸದ್ಯ ಇಬ್ಬರು ಮಾತ್ರ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದು, ಉಳಿದವರು ಮನೆ ಆರೈಕೆಗೆ ಒಳಗಾಗಿದ್ದಾರೆ. ಇದರಿಂದಾಗಿ ಬಹುತೇಕ ಆಸ್ಪತ್ರೆಗಳು ಕೋವಿಡ್ ಮುಕ್ತವಾಗಿವೆ.

ಕಳೆದ ಒಂದು ವಾರದ ಅವಧಿಯಲ್ಲಿ ದೃಢಪಟ್ಟ ಪ್ರಕರಣಗಳನ್ನು ಬಿಬಿಎಂಪಿ ವಾರ್ ರೂಮ್ ವಿಶ್ಲೇಷಿಸಿದೆ. ಏಳು ದಿನಗಳಲ್ಲಿ 12,947 ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದ್ದು, 560 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಸೆಪ್ಟೆಂಬರ್ ತಿಂಗಳು ವಾರದಲ್ಲಿ 5 ಸಾವಿರಕ್ಕೂ ಅಧಿಕ ಪ್ರಕರಣಗಳು ಪತ್ತೆಯಾಗುತ್ತಿದ್ದವು.

ಒಂದು ವಾರದ ಅವಧಿಯಲ್ಲಿ 503 ಮಂದಿ ಚೇತರಿಸಿಕೊಂಡಿದ್ದಾರೆ. ಸೋಂಕು ದೃಢ ಪ್ರಮಾಣವು ಶೇ 5ರ ಗಡಿಯೊಳಗೆ ಇದೆ. ಬೆಳ್ಳಂದೂರು ವಾರ್ಡ್‌ನಲ್ಲಿ ಪ್ರತಿನಿತ್ಯ ಸರಾಸರಿ 4 ಪ್ರಕರಣಗಳು ಹೊಸದಾಗಿ ಪತ್ತೆಯಾಗುತ್ತಿವೆ.

ಕೆಂಪೇಗೌಡರ ಆಟದ ಮೈದಾನದಲ್ಲಿ ಸರ್ಕಾರಿ ಶಾಲಾ ಕಟ್ಟಡ ನಿರ್ಮಿಸಲು ಮುಂದಾಗಿರುವ ಬಿಬಿಎಂಪಿ ವಿರುದ್ಧ ಸ್ಥಳೀಯ ನಿವಾಸಿಗಳು ಹಾಗೂ ಮಕ್ಕಳು ಪ್ರತಿಭಟನೆ ನಡೆಸಿದರು

ಬಿಬಿಎಂಪಿ ಮುಖ್ಯ ಎಂಜಿನಿಯರ್ ವಿಜಯಕುಮಾರ್ ಸ್ಥಳಕ್ಕೆ ಬಂದಾಗ ನಾಗರಿಕರು ಆಕ್ರೋಶ ವ್ಯಕ್ತಪಡಿಸಿದರು.

### ಆರ್‌ಆರ್ ನಗರದ ಕೆಂಪೇಗೌಡ ಆಟದ ಮೈದಾನದಲ್ಲಿ ಶಾಲೆ ನಿರ್ಮಾಣಕ್ಕೆ ವಿರೋಧ

# ಆಟದ ಮೈದಾನ ಉಳಿವಿಗೆ ಹೋರಾಟ

ಪ್ರಜಾವಾಣಿ ವಾರ್ತೆ

**ರಾಜರಾಜೇಶ್ವರಿನಗರ:** ಇಲ್ಲಿನ ಬಿಇಎಂಎಲ್ ಐದನೇ ಹಂತದಲ್ಲಿ 1.6 ಎಕರೆ ವಿಸ್ತೀರ್ಣದಲ್ಲಿರುವ ಕೆಂಪೇಗೌಡ ಆಟದ ಮೈದಾನ ಉಳಿವಿಗಾಗಿ ನಡೆಯುತ್ತಿರುವ ಹೋರಾಟ ತೀವ್ರಗೊಂಡಿದೆ.

ಈ ಜಾಗದಲ್ಲಿ ಸರ್ಕಾರಿ ಶಾಲಾ ಕಟ್ಟಡ ನಿರ್ಮಾಣ ಮಾಡಲು ಮುಂದಾಗಿದ್ದು, ಅದನ್ನು ಕೈಬಿಡಬೇಕೆಂದು ಒತ್ತಾಯಿಸಿ, ಸ್ಥಳೀಯ ನೂರಾರು ನಿವಾಸಿಗಳು, ಮಕ್ಕಳು, ಮಹಿಳೆಯರು ಭಾನುವಾರ ಪ್ರತಿಭಟನೆ ನಡೆಸಿದರು.

ಬಿಇಎಂಎಲ್ ಬಡಾವಣೆ 155 ಎಕರೆ ಪ್ರದೇಶದಲ್ಲಿ ವಸತಿ ಪ್ರದೇಶವಿದ್ದು, ಈ ಭಾಗದಲ್ಲಿ ಆಟದ ಮೈದಾನ ಇಲ್ಲ. ಕೇವಲ 1.6 ಎಕರೆ ಪ್ರದೇಶದಲ್ಲಿ ಆಟದ ಮೈದಾನ ಇದೆ. ಈ ಪ್ರದೇಶದ ವ್ಯಾಪ್ತಿಯಲ್ಲಿ ಎಲ್ಲೂ ಸರ್ಕಾರಿ ಆಟದ ಮೈದಾನ ಇಲ್ಲ. ಮಕ್ಕಳ ಬೌದ್ಧಿಕ ಬೆಳವಣಿಗೆ ದೃಷ್ಟಿಯಿಂದ ಮೈದಾನದಲ್ಲಿ ಯಾವುದೇ ಕಟ್ಟಡ ನಿರ್ಮಾಣಕ್ಕೆ ಮುಂದಾಗಬಾರದು. ಮಕ್ಕಳ ಆರೋಗ್ಯ ಮತ್ತು ಮಾನಸಿಕ ನೆಮ್ಮದಿಗೆ ಈ ಜಾಗವನ್ನು ಆಟದ ಮೈದಾನಕ್ಕಾಗಿಯೇ ಮೀಸಲಿಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

21ರ ಡಿಸೆಂಬರ್ 2006ರಲ್ಲಿ ಉಪ ಮುಖ್ಯಮಂತ್ರಿ ಆಗಿದ್ದ ಬಿ.ಎಸ್. ಯಡಿಯೂರಪ್ಪ ಅವರು ಕೆಂಪೇಗೌಡ ಆಟದ ಮೈದಾನ ಉದ್ಘಾಟಿಸಿದ್ದರು. ಅಂದಿನ ಶಾಸಕ ಎಂ.ಶ್ರೀನಿವಾಸ್ ಅವರು ಆಟದ ಮೈದಾನ ಅಭಿವೃದ್ಧಿಗಾಗಿ ಶ್ರಮಿಸಿದ್ದರು. ಈ ಜಾಗದಲ್ಲಿ ಸರ್ಕಾರಿ ಶಾಲೆ ನಿರ್ಮಿಸಲು ಸಚಿವ ಮುನಿರತ್ನ ಮುಂದಾಗಿದ್ದು, ಮಕ್ಕಳ ಆರೋಗ್ಯ, ಕ್ರೀಡೆಗಳ ಉಳುವಿಗಾಗಿ ಈ ಕೂಡಲೇ ಕೈಬಿಟ್ಟು, ನಾಡಪ್ರಭು ಕೆಂಪೇಗೌಡರ ಹೆಸರಿನಲ್ಲಿ ಆಟದ ಮೈದಾನ ಉಳಿಸಬೇಕು ಎಂದು ಒತ್ತಾಯಿಸಿದರು.

ಈ ಮೈದಾನದಿಂದ 500 ಮೀಟರ್ ದೂರದಲ್ಲಿ ಹಲಗೇವಡೇರಹಳ್ಳಿ ಸರ್ಕಾರಿ ಶಾಲೆಯಿದೆ. ಅಲ್ಲಿ ಸಾಕಷ್ಟು ಸ್ಥಳವಿದೆ. ಅಲ್ಲಿ ಸುಸಜ್ಜಿತ ಕಟ್ಟಡ ನಿರ್ಮಿಸಬಹುದು. 1 ಕಿ.ಮೀ ವ್ಯಾಪ್ತಿಯಲ್ಲಿ ಬಂಗಾರಪ್ಪನಗರ, 1.5 ಕಿ.ಮೀ ವ್ಯಾಪ್ತಿಯಲ್ಲಿ ಚನ್ನಸಂದ್ರದಲ್ಲಿ ಸರ್ಕಾರಿ ಶಾಲೆ, 1.5 ಕಿ.ಮೀ ವ್ಯಾಪ್ತಿಯಲ್ಲಿ ರಾಜರಾಜೇಶ್ವರಿ ಅನುದಾನಿತ ಶಾಲೆಯಿದೆ. ಅಲ್ಲಿರುವ ಶಾಲೆಗಳ ಅಭಿವೃದ್ಧಿಗೆ ಸರ್ಕಾರ ಮುಂದಾಗದೇ ಈ ಜಾಗದ ಮೇಲೆಯೇ ಏಕೆ ಕಣ್ಣು ಎಂದು ಆಕ್ರೋಶ ವ್ಯಕ್ತಪಡಿಸಿದ ನಾಗರಿಕರು, 'ಶಾಂತಿಯುತ ಹೋರಾಟಕ್ಕೆ ಸರ್ಕಾರ ಬೆಂಬಲಿಸಬೇಕು. ಇಲ್ಲದಿದ್ದರೆ ಹೋರಾಟ ತೀವ್ರಗೊಳಿಸುತ್ತೇವೆ' ಎಂದು ಎಚ್ಚರಿಸಿದರು.

ಜೋಸೆಫ್ ಮಾತನಾಡಿ, ರಾಜರಾಜೇಶ್ವರಿನಗರ ವ್ಯಾಪ್ತಿಯಲ್ಲಿ ಸಾಕಷ್ಟು ನಾಗರಿಕ ಸೌಲಭ್ಯಗಳ(ಸಿ.ಎ) ಜಾಗಗಳಿವೆ. ಸರ್ಕಾರಿ ಜಮೀನಿನಲ್ಲಿ, ಆ ಜಾಗದಲ್ಲಿ ಶಾಲಾ ಕಟ್ಟಡ ನಿರ್ಮಾಣ ಮಾಡಲಿ. ಈ ಆಟದ ಮೈದಾನ ಉಳಿಯಲಿ. ಇಲ್ಲದಿದ್ದರೆ ರಾಜರಾಜೇಶ್ವರಿನಗರ ಪ್ರಜ್ಞಾವಂತ ನಾಗರಿಕರು ಆಟದ ಮೈದಾನದ ಉಳಿವಿಗಾಗಿ ಮುಂದಿನ ದಿನಗಳಲ್ಲಿ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದರು. ರವಿ, ವೇಯಪ್ಪನ್, ಸವಿತಾ, ಮಾಲಿನಿ ಇದ್ದರು.

ರಾಜರಾಜೇಶ್ವರಿನಗರ ವಲಯ ಮುಖ್ಯ ಎಂಜಿನಿಯರ್ ವಿಜಯಕುಮಾರ್, ಉಪ ಆಯುಕ್ತ ಮಲ್ಲಿಕಾರ್ಜುನ್ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಪ್ರತಿಭಟನೆ ಕೈಬಿಡುವಂತೆ ಮನವಿ ಮಾಡಿದರು.

15ರಂದು ವಲಯ ಆಯುಕ್ತರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಈ ಸಮಸ್ಯೆ ಬಗೆ ಹರಿಸುವ ಬಗ್ಗೆ ಆಶ್ವಾಸನೆ ನೀಡಿದ್ದರು.

## ಗುತ್ತಿಗೆದಾರರಿಗೆ ಅನುಕೂಲ ಮಾಡುವ ಹುನ್ನಾರ

'1992ರಲ್ಲಿ ಬಿಡಿಎ ಆಟದ ಮೈದಾನಕ್ಕೆ ಅನುಮೋದನೆ ನೀಡಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿಯೇ ಮೈದಾನವನ್ನು ಅಭಿ ವೃದ್ಧಿಪಡಿಸಲಾಗಿದೆ. ಆರ್‌ಟಿಐ ಅಡಿಯಲ್ಲಿ ನೀಡಿದ ಮಾಹಿತಿ ಪ್ರಕಾರ 1 ಕಿ.ಮೀ ವ್ಯಾಪ್ತಿಯಲ್ಲಿ ಒಂದು ಸರ್ಕಾರಿ ಶಾಲೆಯಿದ್ದರೆ, ಆ ಶಾಲೆ ಅಭಿವೃದ್ಧಿಪಡಿಸಬೇಕು ಹೊರತು ಬೇರೆ ಯಾವುದೇ ಸರ್ಕಾರಿ ಶಾಲೆಗಳನ್ನು ಪ್ರಾರಂಭಿಸಬಾರದು. ಅದನ್ನು ಕೈಬಿಟ್ಟು ಗುತ್ತಿಗೆದಾರರಿಗೆ ಅನುಕೂಲ ಮಾಡಿಕೊಡಲು ಈ ಜಾಗದಲ್ಲಿ ಶಾಲಾ ಕಟ್ಟಡ ನಿರ್ಮಿಸಲು ಮುಂದಾಗಿರುವುದು ಎಷ್ಟು ಸರಿ' ಎಂದು ಸ್ಥಳೀಯ ನಿವಾಸಿ ವಿಶಾಲ ಸುರೇಶ್ ಪ್ರಶ್ನಿಸಿದರು.

# ಎಂಬಿಬಿಎಸ್ ಸೀಟು: ಇಸ್ರೊ ವಿಜ್ಞಾನಿಗೆ ₹ 18 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಬಿಜಿಎಸ್ ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ಸೀಟು ಕೊಡಿಸುವುದಾಗಿ ಹೇಳಿ ₹ 18 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಇಸ್ರೊ ವಿಜ್ಞಾನಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ಎನ್ನಲಾದ ಅರುಣ್ ದಾಸ್ ಎಂಬಾತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಿಜ್ಞಾನಿಯ ಮಗಳು ದ್ವಿತೀಯ ಪಿಯು ಪೂರ್ಣಗೊಳಿಸಿ, ಎಂಬಿಬಿಎಸ್ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಈ ಬಗ್ಗೆ ಮಾಹಿತಿ ತಿಳಿದಿದ್ದ ಆರೋಪಿ ಅರುಣ್‌ದಾಸ್, ಏಜೆನ್ಸಿಯೊಂದರ ಪ್ರತಿನಿಧಿ ಎಂಬುದಾಗಿ ಪರಿಚಯಿಸಿಕೊಂಡು ವಿಜ್ಞಾನಿಗೆ ಕರೆ ಮಾಡಿದ್ದ. ಮಗಳಿಗೆ ಬೆಂಗಳೂರಿನ 'ಬಿಜಿಎಸ್ ಗ್ಲೋಬಲ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್' ಕಾಲೇಜಿನಲ್ಲಿ ಸೀಟು ಕೊಡಿಸುವುದಾಗಿ ಹೇಳಿದ್ದ' ಎಂದು ಮೂಲಗಳು ಹೇಳಿವೆ.

'ಕಾಲೇಜು ಶುಲ್ಕ ಹಾಗೂ ಡೊನೇಷನ್ ಹೆಸರಿನಲ್ಲಿ ಆರೋಪಿ ಹಂತ ಹಂತವಾಗಿ ₹ 18 ಲಕ್ಷ ಪಡೆದಿದ್ದ. ಇದಾದ ನಂತರ ಆರೋಪಿ ಯಾವುದೇ ಸೀಟು ಕೊಡಿಸದೇ ಪರಾರಿಯಾಗಿದ್ದಾನೆ. ಮೊಬೈಲ್ ಸಹ ಸ್ವಿಚ್ ಆಫ್ ಮಾಡಿಕೊಂಡಿದ್ದಾನೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

# ಆರೋಪಿ ಹಿಡಿದ ಕೆಎಸ್‌ಆರ್‌ಟಿಸಿ ಸಿಬ್ಬಂದಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪ್ರಯಾಣಿಕರ ಸೋಗಿನಲ್ಲಿ ಬಸ್‌ಗಳಲ್ಲಿ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಹಿಡಿದಿರುವ ಕೆಎಸ್‌ಆರ್‌ಟಿಸಿ ಸಿಬ್ಬಂದಿ, ಉಪ್ಪಾರಪೇಟೆ ಪೊಲೀಸ್ ಠಾಣೆಗೆ ಒಪ್ಪಿಸಿದ್ದಾರೆ.

'ಜುಲೈ 10ರಂದು ಬೆಂಗಳೂರಿನಿಂದ ಮಂಗಳೂರಿಗೆ ವೋಲ್ವೊ ಬಸ್‌ನಲ್ಲಿ ಪ್ರಯಾಣಿಸಿದ್ದ ಲಕ್ಷ್ಮಿ ಎಂಬುವರ ಚಿನ್ನಾಭರಣವಿದ್ದ ಬ್ಯಾಗ್ ಕಳ್ಳತನ ಆಗಿತ್ತು' ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಯೊಬ್ಬರು ತಿಳಿಸಿದರು.

'ಮುಂಗಡವಾಗಿ ಟಿಕೆಟ್ ಕಾಯ್ದಿರಿಸಿದ್ದ ಆರೋಪಿ, ಕೆಎಸ್‌ಆರ್‌ಟಿಸಿ ನಿಲ್ದಾಣಕ್ಕೆ ನ. 12 ಬಂದಿದ್ದ. ಬಸ್ ಹತ್ತುವ ಪ್ರಯಾಣಿಕರ ಬ್ಯಾಗ್‌ಗಳನ್ನು ಅನುಮಾನದಿಂದ ನೋಡುತ್ತಿದ್ದ. ಅದನ್ನು ಗಮನಿಸಿದ್ದ ನಿರ್ವಾಹಕ ಅಶೋಕ ಜಾಧವ, ಆರೋಪಿಯನ್ನು ವಿಚಾರಿಸಿದ್ದರು. ನಾಲ್ಕು ತಿಂಗಳ ಹಿಂದೆ ಕಳ್ಳತನ ಮಾಡಿದ್ದ ಆರೋಪಿ ಈತನೇ ಎಂಬುದು ಗೊತ್ತಾಗಿತ್ತು. ಬಳಿಕ, ಚಾಲಕ ಹಾಗೂ ಸಾರ್ವಜನಿಕರ ಸಹಾಯದಿಂದ ಆರೋಪಿಯನ್ನು ಹಿಡಿದು ಪೊಲೀಸರ ಸುಪರ್ದಿಗೆ ನೀಡಿದ್ದಾರೆ' ಎಂದರು.

**ಅರ್ಧದಲ್ಲೇ ಇಳಿದು ಹೋಗಿದ್ದ:** 'ಜುಲೈ 10ರಂದು ಬೆಂಗಳೂರಿನಿಂದ ಮಂಗಳೂರಿಗೆ ಹೊರಟಿದ್ದ ಬಸ್ಸಿನಲ್ಲಿ ಅಶೋಕ ಜಾಧವ ಅವರೇ ನಿರ್ವಾಹಕರಾಗಿದ್ದರು. ಶೌಚಾಲಯಕ್ಕೆಂದು ಮಾರ್ಗಮಧ್ಯೆ ಬಸ್ ನಿಲ್ಲಿಸಲಾಗಿತ್ತು. ಇದೇ ಸಂದರ್ಭದಲ್ಲೇ ಆರೋಪಿ, ಲಕ್ಷ್ಮಿ ಬ್ಯಾಗ್ ಕದ್ದುಕೊಂಡು ಇಳಿದು ಹೋಗಿದ್ದ' ಎಂದು ಅಧಿಕಾರಿ ತಿಳಿಸಿದರು.

'ಹಲವು ನಿಮಿಷ ಕಾದರೂ ಆರೋಪಿ ವಾಪಸು ಬಂದಿರಲಿಲ್ಲ. ಮೊಬೈಲ್ ಸ್ವಿಚ್ ಆಫ್ ಮಾಡಿದ್ದ. ಆತನ ಮುಖಚಹರೆ ಅಶೋಕ ಅವರಿಗೆ ನೆನಪಿತ್ತು. ಇದೀಗ ಅಶೋಕ ಅವರೇ ಆರೋಪಿ ಹಿಡಿದುಕೊಟ್ಟಿದ್ದು, ಅವರ ಕೆಲಸವನ್ನು ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಹಾಗೂ ಅಧಿಕಾರಿಗಳು ಶ್ಲಾಘಿಸಿದ್ದಾರೆ' ಎಂದು ಹೇಳಿದರು.

## ನೇಮಕಾತಿ ಜಾಹೀರಾತು: ದೂರು ದಾಖಲು

ಶಿವಮೊಗ್ಗ: ರಾಜ್ಯಮಟ್ಟದ ದಿನಪತ್ರಿಕೆಯೊಂದರಲ್ಲಿ ಸಂಸ್ಥೆಯ ಹೆಸರಿನಲ್ಲಿ ನೇಮಕಾತಿಯ ನಕಲಿ ಜಾಹೀರಾತು ನೀಡಲಾಗಿದೆ ಎಂದು ಆರೋಪಿಸಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಕೆಎಸ್‌ಅರ್‌ಟಿಸಿ) ಸಿಬ್ಬಂದಿ ಜಿ.ಕೆ.ಮರಿಗೌಡ ಇಲ್ಲಿನ ದೊಡ್ಡಪೇಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಬೆಂಗಳೂರಿನ ಕೆ.ಆರ್.ಪುರಂನ ಸನ್ಮಾರ್ಗ ಮಾನವ ಸಂಪನ್ಮೂಲ ಏಜೆನ್ಸಿ ಹೆಸರಿನಲ್ಲಿ ನ.11ರಂದು ನೇಮಕಾತಿ ಬಗ್ಗೆ ಜಾಹೀರಾತು ನೀಡಲಾಗಿದೆ.

'ಸಂಸ್ಥೆಯಿಂದ ಅಧಿಕೃತವಾಗಿ ಯಾವುದೇ ನೇಮಕಾತಿ ಆದೇಶ ಹೊರಡಿಸಿಲ್ಲ. ಸಂಬಂಧಿಸಿದವರ ವಿರುದ್ಧ ಕ್ರಮ ಕೈಗೊಳ್ಳಿ' ಎಂದು ಮರಿಗೌಡ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

## ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

### 'ಬಸ್ ಸೌಲಭ್ಯ ಕಲ್ಪಿಸಲು ಒತ್ತಾಯ'

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯ ಆಚಾರ್ಯ ಕಾಲೇಜಿಗೆ ನಗರದ ಸುತ್ತ-ಮುತ್ತಲಿನ ನೂರಾರು ವಿದ್ಯಾರ್ಥಿಗಳು ಬರುತ್ತಾರೆ. ಆದರೆ, ಈ ಮಾರ್ಗದಲ್ಲಿ ಸರಿಯಾದ ಸಾರಿಗೆ ವ್ಯವಸ್ಥೆ ಇಲ್ಲ. ಕೆಂಗೇರಿಯಿಂದ ಮಲ್ಲತ್ತಹಳ್ಳಿಗೆ ಸಂಚರಿಸುತ್ತಿದ್ದ ಬಸ್‌ವೊಂದು ಕೋವಿಡ್ ಕಾರಣಕ್ಕೆ ನಿಲ್ಲಿಸಲಾಗಿತ್ತು. ಆ ಬಸ್ ಮತ್ತೆ ಸಂಚರಿಸಿದರೆ ಮಲ್ಲತ್ತಹಳ್ಳಿ, ಆಲೂರು ಪಾಳ್ಯ, ಆಲೂರು, ಸಾಸಿವೆಘಟ್ಟ, ಆಚಾರ್ಯ ಕಾಲೇಜು, ಶಾಂತಿನಗರ, ಗಣಪತಿನಗರದ ನಾಗರಿಕರಿಗೆ ಪೀಣ್ಯ ಕೈಗಾರಿಕಾ ವಲಯದಲ್ಲಿ ಕೆಲಸಕ್ಕೆ ಹೋಗಿ ಬರುವ ಪ್ರಯಾಣಿಕರಿಗೆ ಅನುಕೂಲವಾಗುತ್ತದೆ.

**ಮಂಜುಳ ಚನ್ನಿಗಪ್ಪಗೌಡ,** ಗಣಪತಿನಗರ, ಚಿಕ್ಕಬಾಣಾವರ

ಸುಗ್ಗಪ್ಪ ಬಡಾವಣೆಯ ಕೆಂಪೇಗೌಡ ವಾರ್ಡ್ ಸಂಖ್ಯೆ 1ರ ಮಿನಿ ವಿಧಾನಸೌಧದ ರಸ್ತೆ

### 'ರಸ್ತೆ ಸರಿಪಡಿಸಿ'

ಯಲಹಂಕ ವಿಧಾನಸಭಾ ಕ್ಷೇತ್ರದ ಸುಗ್ಗಪ್ಪ ಬಡಾವಣೆಯ ಕೆಂಪೇಗೌಡ ವಾರ್ಡ್ ಸಂಖ್ಯೆ 1ರ ಮಿನಿ ವಿಧಾನಸೌಧಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಹದಗೆಟ್ಟಿದೆ. ವಾಹನ ಸಂಚಾರ ಮತ್ತು ಪಾದಚಾರಿಗಳ ಓಡಾಟಕ್ಕೆ ಸಮಸ್ಯೆಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ರಸ್ತೆಯನ್ನು ಡಾಂಬರೀಕರಣ ಮಾಡಿಸಬೇಕು. ಈ ರಸ್ತೆಯಲ್ಲಿ ವೃದ್ಧರು ಮತ್ತು ಮಕ್ಕಳನ್ನು ದ್ವಿಚಕ್ರ ವಾಹನಗಳಲ್ಲಿ ಕರೆದುಕೊಂಡು ಸಂಚರಿಸುವುದು ದುಸ್ತರವಾಗಿದೆ. ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

**ಪೂಜಾ,** ಸ್ಥಳೀಯ ನಿವಾಸಿ

### 'ರಸ್ತೆ ಗುಂಡಿ ಮುಚ್ಚಿ'

ಮಹದೇವಪುರದ ವಿಧಾನಸಭಾ ಕ್ಷೇತ್ರದ ಬಹುತೇಕ ಎಲ್ಲಾ ಬಡಾವಣೆಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಹಾಳಾಗಿವೆ. ಈ ಭಾಗದಲ್ಲಿ ಸುಮಾರು 500ಕ್ಕೂ ಹೆಚ್ಚು ರಸ್ತೆ ಗುಂಡಿಗಳಿದ್ದು, ವಾಹನ ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಬಿಬಿಎಂಪಿ ಅಧಿಕಾರಿಗಳು ಈ ಗುಂಡಿಗಳನ್ನು ಮುಚ್ಚಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

**ಬಸವರಾಜು,** ಮಹದೇವಪುರದ ನಿವಾಸಿ

ಮಹದೇವಪುರ ವಿಧಾನಸಭಾ ಕ್ಷೇತ್ರದ ರಸ್ತೆ

ಹನುಮಗಿರಿ ಮುಖ್ಯರಸ್ತೆಯ ಪಾದಚಾರಿ ಮಾರ್ಗದ ಮೇಲೆ ಕಸ ಹಾಕಿರುವುದು

### 'ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ'

ಹೊಸಕೆರೆಹಳ್ಳಿಯ ಸಪ್ತಗಿರಿ ನಗರಕ್ಕೆ ಸಂಪರ್ಕ ಕಲ್ಪಿಸುವ ಹನುಮಗಿರಿ ಮುಖ್ಯರಸ್ತೆಯ ಪಾದಚಾರಿ ಮಾರ್ಗದ ಮೇಲೆ ಕಸವನ್ನು ಎಸೆಯಲಾಗುತ್ತಿದೆ. ಮದ್ಯದ ಬಾಟಲಿಗಳು ಕಾಣಸಿಗುತ್ತಿವೆ. ಇದರಿಂದಾಗಿ ಪಾದಚಾರಿಗಳು ರಸ್ತೆಯಲ್ಲಿಯೇ ನಡೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಎಸೆಯಲಾದ ಕಸವು ವಾರಗಟ್ಟಲೆ ಹಾಗೇ ಕೊಳೆಯುತ್ತವೆ. ಮಳೆ ಬಂದಾಗ ಆ ಕಸ ರಸ್ತೆಗಳಲ್ಲಿ ಚೆಲ್ಲಾಡುತ್ತಿದೆ. ಇದರಿಂದಾಗಿ ಬೀದಿ ನಾಯಿಗಳ ಕಾಟವೂ ಹೆಚ್ಚಳವಾಗಿದೆ. ಪಾದಚಾರಿ ಪಾರ್ಗದಲ್ಲಿ ಕಸ ಎಸೆಯುವುದಕ್ಕೆ ಕಡಿವಾಣ ಹಾಕಬೇಕು.

**ಗೌರೀಶ್ ಗಜಾನನ,** ಹೊಸಕೆರೆಹಳ್ಳಿ

### 'ಇ–ಶೌಚಾಲಯ ತೆರೆಯಲು ಆಗ್ರಹ'

ಜಯನಗರದ 5ನೇ ಬ್ಲಾಕ್ ಶಾಲಿನಿ ಮೈದಾನದ ಹತ್ತಿರ ಇರುವ ಇ-ಶೌಚಾಲಯ ಸೌಲಭ್ಯವೇ ಇಲ್ಲ. ಇದರಿಂದ ಸಾರ್ವಜನಿಕರಿಗೆ ಸಮಸ್ಯೆಯಾಗಿದ್ದು, ಪುರುಷರು ಸಾರ್ವಜನಿಕ ಪ್ರದೇಶಗಳಲ್ಲಿ ಮೂತ್ರ ವಿಸರ್ಜನೆ ಮಾಡುತ್ತಿದ್ದು, ಮಹಿಳೆಯರು, ವಿದ್ಯಾರ್ಥಿಗಳು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಎದುರಾಗಿದೆ. ಇ-ಶೌಚಾಲಯ ತೆರೆಯಲು ಮನವಿ ಸಲ್ಲಿಸಲಾಗಿದೆ. ಈ ಕುರಿತು ಸ್ಥಳೀಯ ಜನಪ್ರತಿನಿಧಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ.

**ಚಂದ್ರೇಗೌಡ,** ಸ್ಥಳೀಯ ನಿವಾಸಿ

ಜಯನಗರದ ಶಾಲಿನಿ ಮೈದಾನ ಹತ್ತಿರದಲ್ಲಿರುವ ಇ–ಶೌಚಾಲಯ

# ತಿಂಗಳಲ್ಲಿ 5 ಬಾರಿ ಸಿಬಿಐ, ಐಟಿ, ಇ.ಡಿ ಸಮನ್ಸ್!

**ಬೆಂಗಳೂರು:** ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋಮವಾರ (ನ. 14) ದೆಹಲಿಯಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ಮುಂದೆ ಹಾಜರಾಗಲಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಇದೇ ತಿಂಗಳು ಬೇರೆ ಬೇರೆ ದಿನಗಳಲ್ಲಿ ಇನ್ನೂ ನಾಲ್ಕು ಪ್ರಕರಣಗಳಲ್ಲಿ ಸಿಬಿಐ, ಐಟಿ, ಇ.ಡಿ, ಹೈಕೋರ್ಟ್ ವಿಚಾರಣೆ ಎದುರಿಸಲಿದ್ದಾರೆ.

'ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿ ತನ್ನ ಅಧೀನದಲ್ಲಿರುವ ತನಿಖಾ ಸಂಸ್ಥೆಗಳನ್ನು ಛೂ ಬಿಟ್ಟು ನಮ್ಮ ನಾಯಕನಿಗೆ ಕೇಂದ್ರ ಸರ್ಕಾರ ಪದೇ ಪದೇ ಕಿರುಕುಳ ನೀಡುತ್ತಿದೆ. ಆ ಮೂಲಕ, ರಾಜ್ಯದಲ್ಲಿ ಪಕ್ಷ ಸಂಘಟನೆ ಮಾಡದಂತೆ ತೊಂದರೆ ಕೊಡುತ್ತಿದೆ' ಎಂದು ಶಿವಕುಮಾರ್ ಆಪ್ತರು ಆರೋಪಿಸಿದ್ದಾರೆ.

'ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿದ ಆರೋಪದಲ್ಲಿ ಸಿಬಿಐ ದಾಖಲಿಸಿರುವ ಪ್ರಕರಣದಲ್ಲಿ ಇದೇ 18ರಂದು ರಾಜ್ಯ ಹೈಕೋರ್ಟ್‌ನಲ್ಲಿ ಶಿವಕುಮಾರ್ ವಿಚಾರಣೆಗೆ ಹಾಜರಾಗಬೇಕಿದೆ. ಮರುದಿನ (ನ. 19) ಸಿಟಿ ಸಿವಿಲ್ ಕೋರ್ಟ್‌ನಲ್ಲಿ ಐಟಿ ಮತ್ತು ಇತರ ಎರಡು ಪ್ರಕರಣಗಳ ವಿಚಾರಣೆ ನಡೆಯಲಿದ್ದು, ಅದಕ್ಕೂ ಅವರು ಹಾಜರಾಗಬೇಕಿದೆ. ಬೇನಾಮಿ ಆಸ್ತಿಗೆ ಸಂಬಂಧಿಸಿದಂತೆ ಚೆನ್ನೈನಲ್ಲಿ ದಾಖಲಾಗಿರುವ ಪ್ರಕರಣದಲ್ಲಿ 21ರಂದು ವರ್ಚುವಲ್ ಮೂಲಕ ವಿಚಾರಣೆಗೆ ಹಾಜರಾಗಬೇಕಾಗಿದ್ದು, ದೆಹಲಿಯ ರೋಸ್ ಅವೆನ್ಯೂ ಅಪಾರ್ಟ್‌ಮೆಂಟ್‌ನಲ್ಲಿ ಹಣ ಪತ್ತೆಯಾದ ಘಟನೆಯಲ್ಲಿ ಇ.ಡಿ ದಾಖಲಿಸಿಕೊಂಡಿರುವ ಪ್ರಕರಣದಲ್ಲಿ ದೆಹಲಿ ಹೈಕೋರ್ಟ್‌ನಲ್ಲಿ 23ರಂದು ವಿಚಾರಣೆ ಎದುರಿಸಬೇಕಾಗಿದೆ' ಎಂದು ಅವರ ಆಪ್ತ ಮೂಲಗಳು ಮಾಹಿತಿ ನೀಡಿವೆ.

ಅಕ್ರಮ ಹಣ ವರ್ಗಾವಣೆ ಆರೋಪದ ಪ್ರಕರಣದಲ್ಲಿ ನ. 7ರಂದು ತನ್ನ ಮುಂದೆ ಹಾಜರಾಗುವಂತೆ ಡಿ.ಕೆ. ಶಿವಕುಮಾರ್ ಮತ್ತು ಅವರ ಸಹೋದರ ಸಂಸದ ಡಿ.ಕೆ. ಸುರೇಶ್ ಅವರಿಗೆ ಇ.ಡಿ ನೋಟಿಸ್ ನೀಡಿತ್ತು. ಆದರೆ, ವಿಚಾರಣೆಗೆ ಹಾಜರಾಗುವುದರಿಂದ ಶಿವಕುಮಾರ್ ವಿನಾಯಿತಿ ಪಡೆದಿದ್ದರು. ಅದರ ಹಿಂದಿನ ದಿನ (ನ. 6) ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ರಾಜ್ಯ ಕಾಂಗ್ರೆಸ್ ಘಟಕದ ವತಿಯಿಂದ ಅಭಿನಂದನೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಅದೇ ದಿನ ರಾತ್ರಿ ಸದಾಶಿವನಗರದಲ್ಲಿರುವ ಖರ್ಗೆ ಅವರ ನಿವಾಸಕ್ಕೆ ತೆರಳಿದ್ದ ಶಿವಕುಮಾರ್ ಮತ್ತು ಸುರೇಶ್, ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಇಡಿ ವಿಚಾರಣೆ ಕುರಿತಂತೆ ಖರ್ಗೆ ಅವರ ಜೊತೆ ಚರ್ಚೆ ನಡೆಸಿದ್ದರು. ಅಂದು ಗೈರಾಗಿದ್ದರಿಂದ, ನ. 14ರಂದು ಹಾಜರಾಗುವಂತೆ ಇ.ಡಿ ಮತ್ತೆ ಸಮನ್ಸ್ ನೀಡಿತ್ತು.

## ಚಿತ್ರಾವಳಿ

ಕೋಲ್ಕತ್ತದಲ್ಲಿ ಶುಕ್ರವಾರ ನಡೆದ ಸಾರ್ವಜನಿಕ ಸಂಪರ್ಕ ಜಾಗತಿಕ ಸಮಾವೇಶದಲ್ಲಿ ಬೆಂಗಳೂರಿನ ಮೇಪಲ್ ಎಂಜಿನಿಯರಿಂಗ್ ಕನ್ಸಲ್ಟಂಟ್ ಸಂಸ್ಥೆ ಸಂಸ್ಥಾಪಕ ಬಿ.ಎಸ್. ಅಶ್ವತ್ಥನಾರಾಯಣ ಅವರಿಗೆ ಚಾಣಕ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ದಿ ಸ್ಟೇಟ್ಸ್‌ಮನ್ ಪತ್ರಿಕೆಯ ಪ್ರಧಾನ ಸಂಪಾದಕ ರವೀಂದ್ರ ಕುಮಾರ್, ಚಲನಚಿತ್ರ ನಟಿ ಸುಚಂದ್ರ ವಾಣಿಯಾ, ಸಾರ್ವಜನಿಕ ಸಂಪರ್ಕ ಸಂಸ್ಥೆಯ ಜಾಗತಿಕ ಮುಖ್ಯಸ್ಥ ಎಂ.ಬಿ. ಜಯರಾಂ ಮತ್ತು ಕೆನರಾ ಬ್ಯಾಂಕಿನ ನಿವೃತ್ತ ಅಧ್ಯಕ್ಷ ರಾಜ್ ಕಿಶೋರ್ ದುಬೆ ಇದ್ದರು.

ಕೆ.ಪಿ. ಅಗ್ರಹಾರ ಸ್ನೇಹ ಬಾಂಧವ್ಯ ಗೆಳೆಯರ ಬಳಗವು ಪ್ರಸನ್ನ ಚಿತ್ರಮಂದಿರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ವಿಶೇಷ ಪ್ರದರ್ಶನದಲ್ಲಿ ಬೇಸ್ ಇಂಡಿಯಾ ಅನಾಥ ಮಕ್ಕಳ ಆಶ್ರಮದ ಮಕ್ಕಳು ಪುನೀತ್ ರಾಜ್‌ಕುಮಾರ್ ಅಭಿನಯದ 'ಗಂಧದಗುಡಿ' ಚಲನಚಿತ್ರ ವೀಕ್ಷಿಸಿ ಸಂಭ್ರಮಿಸಿದರು.

# ಶ್ರೀಗಂಧಕಾವಲಿನಲ್ಲಿ ತಾಯಿ– ಮಗ ಆತ್ಮಹತ್ಯೆ

**ಬೆಂಗಳೂರು:** ರಾಜಗೋಪಾಲನಗರ ಠಾಣೆ ವ್ಯಾಪ್ತಿಯಲ್ಲಿ ಶ್ರೀನಿವಾಸ್ (33) ಹಾಗೂ ಅವರ ತಾಯಿ ಭಾಗ್ಯಮ್ಮ (57) ಎಂಬುವವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಅತ್ತೆ– ಸೊಸೆ ಜಗಳವೇ ಆತ್ಮಹತ್ಯೆಗೆ ಕಾರಣವಿರಬಹುದೆಂದು ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ.

'ಹೆಗ್ಗನಹಳ್ಳಿಯ ಶ್ರೀಗಂಧಕಾವಲಿನಲ್ಲಿ ವಾಸವಿದ್ದ ಶ್ರೀನಿವಾಸ್, ಔಷಧ ಮಾರಾಟ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದರು. ಪತ್ನಿ ಸಂಧ್ಯಾ ಹಾಗೂ ಮಗನ ಜೊತೆ ನೆಲೆಸಿದ್ದರು. ಬೇರೆ ಊರಿನಲ್ಲಿ ನೆಲೆಸಿದ್ದ ತಾಯಿ ಭಾಗ್ಯಮ್ಮ ಅವರನ್ನು ಇತ್ತೀಚೆಗಷ್ಟೇ ತಮ್ಮ ಮನೆಗೆ ಕರೆತಂದಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ತಾಯಿಯನ್ನು ಮನೆಗೆ ಕರೆತಂದಿದ್ದಕ್ಕೆ ಸಿಟ್ಟಾಗಿದ್ದ ಪತ್ನಿ ಸಂಧ್ಯಾ, ಶ್ರೀನಿವಾಸ್ ಜೊತೆ ನಿತ್ಯವೂ ಜಗಳ ಮಾಡುತ್ತಿದ್ದರು. ಇದರಿಂದ ಬೇಸತ್ತ ಶ್ರೀನಿವಾಸ್ ಹಾಗೂ ತಾಯಿ ಭಾಗ್ಯಮ್ಮ, ಮನೆಯ ಕೊಠಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಭಾನುವಾರ ಬೆಳಿಗ್ಗೆ ಕೊಠಡಿಯಲ್ಲಿ ನೋಡಿದಾಗ ಮೃತದೇಹಗಳು ಕಂಡಿದ್ದವು.'

'ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಯಿತು. ಶ್ರೀನಿವಾಸ್ ಅವರ ತಂಗಿ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಅತ್ತೆ ಭಾಗ್ಯಮ್ಮ ಅವರನ್ನು ಮನೆಗೆ ಕರೆತರುತ್ತಿದ್ದಂತೆ ತಗಾದೆ ತೆಗೆದಿದ್ದ ಸಂಧ್ಯಾ, ಪತಿ ವಿರುದ್ಧ ಹರಿಹಾಯ್ದಿದ್ದರು. 'ಬೆಂಗಳೂರಿನಲ್ಲೇ ನಾವಷ್ಟೇ ಜೀವನ ಸಾಗಿಸುವುದು ಕಷ್ಟವಾಗಿದೆ. ಅತ್ತೆಯನ್ನು ಏಕೆ ಕರೆತಂದಿದ್ದೀರಾ' ಎಂದು ಪ್ರಶ್ನಿಸಿದ್ದರು. ಇದೇ ಕಾರಣಕ್ಕೆ ದಂಪತಿ ನಡುವೆ ಜಗಳ ಸಹ ಆಗಿತ್ತು ಎಂಬುದಾಗಿ ದೂರಿನಲ್ಲಿ ತಿಳಿಸಲಾಗಿದೆ' ಎಂದು ಹೇಳಿವೆ.

**ಪತಿ-ಅತ್ತೆ ವಿರುದ್ಧ ದೂರು ನೀಡಿದ್ದ ಸಂಧ್ಯಾ:** 'ಸಂಧ್ಯಾ ಹಾಗೂ ಭಾಗ್ಯಮ್ಮ ಅವರಿಬ್ಬರು ನಿತ್ಯವೂ ಸಣ್ಣಪುಟ್ಟ ವಿಷಯಕ್ಕೂ ಗಲಾಟೆ ಮಾಡುತ್ತಿದ್ದರು. ತಾಯಿ ಪರ ಮಾತನಾಡುತ್ತಿದ್ದ ಶ್ರೀನಿವಾಸ್, ಚೆನ್ನಾಗಿ ನೋಡಿಕೊಳ್ಳುವಂತೆ ಹೇಳುತ್ತಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮನೆಯಲ್ಲಿ ಗಲಾಟೆ ಹೆಚ್ಚಾಗುತ್ತಿದ್ದಂತೆ ಠಾಣೆ ಮೆಟ್ಟಿಲೇರಿದ್ದ ಸಂಧ್ಯಾ, 'ಪತಿ ಹಾಗೂ ಅತ್ತೆ ನನಗೆ ಕಿರುಕುಳ ನೀಡುತ್ತಿದ್ದಾರೆ. ಅವರನ್ನು ಠಾಣೆಗೆ ಕರೆಸಿ ಬುದ್ದಿವಾದ ಹೇಳಿ' ಎಂದು ದೂರು ನೀಡಿದ್ದರು. ಈ ವಿಷಯ ಗೊತ್ತಾಗಿ ಶ್ರೀನಿವಾಸ್ ಮತ್ತಷ್ಟು ನೊಂದಿದ್ದರೆಂದು ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

### ಜಯನಗರದಲ್ಲಿ ನಡೆದ ಕೃತ್ಯ: ತಂತ್ರಜ್ಞಾನದ ಮೂಲಕ ಸ್ಥಳ ಪತ್ತೆ • ಆರೋಪಿ ಬಂಧನ

# ಮೊಬೈಲ್ ಕಿತ್ತು ಪರಾರಿ: ಬೆನ್ನಟ್ಟಿದ್ದ ವ್ಯಕ್ತಿಗೆ ಚಾಕು ಇರಿತ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

**ಬೆಂಗಳೂರು:** ಯುವತಿಯ ಮೊಬೈಲ್ ಸುಲಿಗೆ ಹಾಗೂ ಡೆಲಿವರಿ ಬಾಯ್ ಮೇಲೆ ಹಲ್ಲೆ ಮಾಡಿದ್ದ ಆರೋಪದಡಿ ಟೋನಿ (25) ಎಂಬಾತನನ್ನು ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸಂಪಂಗಿರಾಮನಗರ ನಿವಾಸಿ ಟೋನಿ, ಅಪರಾಧ ಹಿನ್ನೆಲೆಯುಳ್ಳವ. ಸುಲಿಗೆ ಹಾಗೂ ಹಲ್ಲೆ ಪ್ರಕರಣದಲ್ಲಿ ಈತನನ್ನು ಬಂಧಿಸಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿದ್ದ ಇನ್ನೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

'ಜಯನಗರ 2ನೇ ಹಂತದ ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ ವಾಸವಿದ್ದ ಯುವತಿ, ಅ. 18ರಂದು ಮಧ್ಯಾಹ್ನ ರಸ್ತೆಯಲ್ಲಿ ನಡೆದುಕೊಂಡು ಕೆಲಸಕ್ಕೆಂದು ಕಚೇರಿಗೆ ಹೊರಟಿದ್ದರು. ದ್ವಿಚಕ್ರ ವಾಹನದಲ್ಲಿ ಬಂದಿದ್ದ ಟೋನಿ ಹಾಗೂ ಸಹಚರ, ಯುವತಿಯನ್ನು ಹಿಂಬಾಲಿಸಿದ್ದರು. ನಡುರಸ್ತೆಯಲ್ಲೇ ಯುವತಿಯನ್ನು ಅಡ್ಡಗಟ್ಟಿ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದರು' ಎಂದು ತಿಳಿಸಿದರು.

**ಸಹಾಯಕ್ಕೆ ಬಂದ ಡೆಲಿವರಿ ಬಾಯ್:** 'ಯುವತಿ ಸಹಾಯಕ್ಕಾಗಿ ಕೂಗಾಡಿದ್ದರು. ಸಮೀಪದಲ್ಲಿದ್ದ ಡೆಲಿವರಿ ಬಾಯ್ ಸೂರ್ಯ ಸಹಾಯಕ್ಕೆ ಬಂದಿದ್ದರು. 'ಫೈಂಡ್ ಮೈ ಡಿವೈಸ್' ತಂತ್ರಜ್ಞಾನದ ಮೂಲಕ ಯುವತಿ ಮೊಬೈಲ್ ಲೋಕೇಶನ್ ಪತ್ತೆ ಮಾಡಿದ್ದರು. ನಂತರ, ಆರೋಪಿಗಳನ್ನು ಹುಡುಕುತ್ತ ಹೊರಟಿದ್ದರು' ಎಂದು ಪೊಲೀಸರು ಹೇಳಿದರು.

'ಸುಧಾಮನಗರದ ಚಹಾ ಅಂಗಡಿಯೊಂದರ ಮುಂದೆ ಆರೋಪಿಗಳು ನಿಂತುಕೊಂಡಿದ್ದರು. ಸ್ಥಳಕ್ಕೆ ಹೋಗಿದ್ದ ಸೂರ್ಯ, ಯುವತಿಯ ಮೊಬೈಲ್ ಕೊಡುವಂತೆ ಒತ್ತಾಯಿಸಿದ್ದರು. ಅದಕ್ಕೆ ಒಪ್ಪದ ಆರೋಪಿಗಳು, ಸೂರ್ಯ ಜೊತೆ ಜಗಳ ತೆಗೆದು ಚಾಕುವಿನಿಂದ ಇರಿದು ಪರಾರಿಯಾಗಿದ್ದರು. ತೀವ್ರ ಗಾಯಗೊಂಡ ಸೂರ್ಯ ಅವರನ್ನು ಯುವತಿಯೇ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದರು. ನಂತರ, ಕೃತ್ಯದ ಬಗ್ಗೆ ಯುವತಿ ಠಾಣೆಗೆ ದೂರು ನೀಡಿದ್ದರು' ಎಂದು ತಿಳಿಸಿದರು.

'ಮೊಬೈಲ್ ಸುಲಿಗೆ, ಹಲ್ಲೆ ಸಂಬಂಧ ಸಿದ್ದಾಪುರ ಹಾಗೂ ಕಲಾಸಿಪಾಳ್ಯ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ. ಸಿಸಿಟಿವಿ ಕ್ಯಾಮೆರಾ ದೃಶ್ಯ ಹಾಗೂ ಇತರೆ ಪುರಾವೆಗಳನ್ನು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದರು.

## ವೃದ್ಧೆಯ ಚಿನ್ನಾಭರಣ ಕಿತ್ತೊಯ್ದಿದ್ದವ ಬಂಧನ

ಬೆಂಗಳೂರು: ವಾಯುವಿಹಾರ ಮಾಡುತ್ತಿದ್ದ ವೃದ್ಧೆಯನ್ನು ತಳ್ಳಿ ಬೀಳಿಸಿ ಚಿನ್ನಾಭರಣ ಕಿತ್ತೊಯ್ದಿದ್ದ ಆರೋಪಿ ಎಚ್. ಸುರೇಶ್ ಅಲಿಯಾಸ್ ಸೂರಿ (21) ಎಂಬಾತನನ್ನು ಗಿರಿನಗರ ಪೊಲೀಸರು ಬಂಧಿಸಿದ್ದಾರೆ.

'ಹನುಮಂತನಗರ 2ನೇ ಅಡ್ಡರಸ್ತೆಯ ನಿವಾಸಿ ಸುರೇಶ್, ಕೃತ್ಯ ಎಸಗಿ ಪರಾರಿಯಾಗಿದ್ದ. ಈತನನ್ನು ಬಂಧಿಸಿ ₹ 9.07 ಲಕ್ಷ ಮೌಲ್ಯದ 165 ಗ್ರಾಂ ಚಿನ್ನಾಭರಣ, ಎರಡು ದ್ವಿಚಕ್ರ ವಾಹನ ಹಾಗೂ ಚಾಕು ಜಪ್ತಿ ಮಾಡಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿದ್ದ ಇನ್ನೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

'65 ವರ್ಷದ ವೃದ್ಧೆ ಶಾರದಮ್ಮ, ಮನೆ ಸಮೀಪದ ರಸ್ತೆಯಲ್ಲಿ ನಿತ್ಯವೂ ವಾಯುವಿಹಾರ ಮಾಡುತ್ತಿದ್ದರು. ಅ. 21ರಂದು ಬೆಳಿಗ್ಗೆ 6.45ರ ಸುಮಾರಿಗೆ ಯಥಾಪ್ರಕಾರ ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದರು. ದ್ವಿಚಕ್ರ ವಾಹನದಲ್ಲಿ ಸ್ಥಳಕ್ಕೆ ಬಂದಿದ್ದ ಆರೋಪಿಗಳು, ಚಾಕು ತೋರಿಸಿ ವೃದ್ಧೆಯನ್ನು ಬೆದರಿಸಿದ್ದರು.'

'ವೃದ್ಧೆಯ ಚಿನ್ನದ ಸರ ಕಿತ್ತುಕೊಂಡಿದ್ದ ಆರೋಪಿಗಳು, ಅವರನ್ನು ರಸ್ತೆಯಲ್ಲೇ ತಳ್ಳಿ ಬೀಳಿಸಿದ್ದರು. ನಂತರ, ಸ್ಥಳದಿಂದ ಪರಾರಿಯಾಗಿದ್ದರು. ತೀವ್ರ ಗಾಯಗೊಂಡಿದ್ದ ವೃದ್ಧೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ವೃದ್ಧೆಯ ಮಗಳು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಸಿಸಿಟಿವಿ ಕ್ಯಾಮೆರಾ ದೃಶ್ಯಗಳು ಹಾಗೂ ಇತರೆ ಪುರಾವೆಗಳನ್ನು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಸರಗಳವು ಮಾತ್ರವಲ್ಲದೇ, ಕೆಲ ಮನೆಗಳಲ್ಲೂ ಆರೋಪಿಗಳು ಕಳ್ಳತನ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದರು.

## ಗೂಂಡಾ ಕಾಯ್ದೆ: ರೌಡಿ ಮೆರಾಜ್ ಖಾನ್ ಬಂಧನ

ಬೆಂಗಳೂರು: ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಬಂದು ಜನರನ್ನು ಬೆದರಿಸುತ್ತಿದ್ದ ರೌಡಿ ಮೆರಾಜ್ ಖಾನ್ ಅಲಿಯಾಸ್ ಬಿಹಾರಿಯನ್ನು (33) ಗೂಂಡಾ ಕಾಯ್ದೆಯಡಿ ಬಂಧಿಸಿ ಜೈಲಿಗಟ್ಟಲಾಗಿದೆ.

'ಕೊಲೆ, ಕೊಲೆ ಯತ್ನ, ಸುಲಿಗೆ, ಅಪಹರಣ, ಡ್ರಗ್ಸ್ ಮಾರಾಟ ಸೇರಿದಂತೆ 23 ಪ್ರಕರಣಗಳಲ್ಲಿ ಭಾಗಿಯಾಗಿದ್ದ ಮೆರಾಜ್ ಖಾನ್, ಜನರನ್ನು ಬೆದರಿಸುತ್ತಿದ್ದ. ಅಪರಾಧ ಕೃತ್ಯ ಎಸಗುವುದನ್ನೇ ವೃತ್ತಿ ಮಾಡಿಕೊಂಡಿದ್ದ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಮೆರಾಜ್ ಖಾನ್‌ನನ್ನು ಗೂಂಡಾ ಕಾಯ್ದೆಯಡಿ ಬಂಧಿಸಲು ಕಮಿಷನರ್ ಅವರಿಗೆ ಪ್ರಸ್ತಾವ ಸಲ್ಲಿಸಲಾಗಿತ್ತು. ಪರಿಶೀಲನೆ ನಡೆಸಿದ್ದ ಕಮಿಷನರ್, ಪ್ರಸ್ತಾವಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ರೌಡಿಯನ್ನು ಒಂದು ವರ್ಷ ನ್ಯಾಯಾಂಗ ಬಂಧನದಲ್ಲಿಡಲು ಆದೇಶಿಸಿದ್ದಾರೆ. ಅದರಂತೆ ರೌಡಿಯನ್ನು ಬಂಧಿಸಿ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರಿಸಲಾಗಿದೆ' ಎಂದು ತಿಳಿಸಿದರು.

## ಅಪಘಾತ: ಕ್ಯಾಂಟರ್ ಚಾಲಕ, ಮಾಲೀಕ ಬಂಧನ

**ಬೆಂಗಳೂರು:** ಬಾಣಸವಾಡಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ್ದ ಅಪಘಾತದಲ್ಲಿ ಮೆಟ್ರೊ ಕಾರ್ಮಿಕ ಬಾಪಿ ಕುಮಾರ್ (23) ಮೃತಪಟ್ಟ ಪ್ರಕರಣ ಸಂಬಂಧ, ಕ್ಯಾಂಟರ್ ವಾಹನ ಚಾಲಕ ದೇವಪ್ರಸನ್ನ (23) ಹಾಗೂ ಮಾಲೀಕ ಮಂಜುನಾಥ್ (37) ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಮೆಟ್ರೊ ಕಾಮಗಾರಿಯಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದ ಬಾಪಿ ಕುಮಾರ್, ನ. 11ರಂದು ರಾತ್ರಿ ರಸ್ತೆ ದಾಟುತ್ತಿದ್ದರು. ಇದೇ ಸಂದರ್ಭದಲ್ಲೇ ಕ್ಯಾಂಟರ್ ಡಿಕ್ಕಿ ಹೊಡೆದಿದ್ದರಿಂದ ಮೃತಪಟ್ಟಿದ್ದರು. ಕ್ಯಾಂಟರ್ ಸಮೇತ ಚಾಲಕ ಪರಾರಿಯಾಗಿದ್ದ' ಎಂದು ಪೊಲೀಸರು ಹೇಳಿದರು.

'ಅತಿವೇಗ ಹಾಗೂ ನಿರ್ಲಕ್ಷ್ಯದ ಚಾಲನೆ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಚನ್ನರಾಯಪಟ್ಟಣದ ದೊಡ್ಡಗನಿಯ ದೇವಪ್ರಸನ್ನ (23) ಹಾಗೂ ದಾಸನಪುರ ಹೋಬಳಿಯ ಮಾಕಳಿ ಪ್ರಭಾನಗರದ ಮಂಜುನಾಥ್ (37) ಎಂಬುವವರನ್ನು ಬಂಧಿಸಲಾಗಿದೆ. ಕ್ಯಾಂಟರ್ ಜಪ್ತಿ ಮಾಡಿ, ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

## ಬಿಬಿಎಂಪಿ ಅರಣ್ಯ ವಿಭಾಗ: ಕಡಿಯಲು ಮುಂದೆ; ಬೆಳೆಸಿ, ರಕ್ಷಿಸುವಲ್ಲಿ ಹಿಂದೆ

# ನೆಟ್ಟ ಸಸಿ ಮರವಾದದ್ದಕ್ಕೆ ಲೆಕ್ಕವಿಲ್ಲ

• ಆರ್. ಮಂಜುನಾಥ್

ಬೆಂಗಳೂರು: ಲಕ್ಷಾಂತರ ಸಸಿಗಳನ್ನು ನೆಡಲಾಗಿದೆ. ಯಾವ ವರ್ಷ ಎಷ್ಟು ಎಂಬುದೂ ದಾಖಲಾಗಿದೆ. ಆದರೆ, ಅವುಗಳೆಲ್ಲ ಮರವಾಗಿವೆಯೇ, ರಕ್ಷಣೆಯಾಗುತ್ತಿವೆಯೇ ಎಂಬ ಮಾಹಿತಿ ಮಾತ್ರ ಬಿಬಿಎಂಪಿ ಅರಣ್ಯ ವಿಭಾಗದಲ್ಲಿ ಇಲ್ಲ.

ಬಿಬಿಎಂಪಿ ಅರಣ್ಯ ವಿಭಾಗ ನಗರದಲ್ಲಿ ಹಲವು ಅಭಿವೃದ್ಧಿ ಯೋಜನೆಗಳಿಗೆ ಬೃಹತ್ ಮರಗಳನ್ನು ಧರೆಗುರುಳಿಸುತ್ತದೆ. ಒಂದು ಮರಕ್ಕೆ ಬದಲಾಗಿ 10 ಸಸಿಗಳನ್ನು ನೆಡಲಾಗುತ್ತಿದೆ ಎಂದೂ ಹೇಳುತ್ತದೆ. ಆ ಸಸಿಗಳು ಎಲ್ಲಿವೆ, ಮರವಾಗಿರುವುದು ಎಷ್ಟು ಎಂದರೆ ಅರಣ್ಯ ವಿಭಾಗದ ಅಧಿಕಾರಿಗಳು ಮತ್ತೊಬ್ಬ ಅಧಿಕಾರಿಗಳತ್ತ ಬೊಟ್ಟು ಮಾಡುತ್ತಾರೆ.

ಕಡಿದ ಮರಕ್ಕೆ ಪ್ರತಿಯಾಗಿ ಸಸಿಗಳನ್ನು ಎಲ್ಲಿ ನೆಡಲಾಗಿದೆ ಎಂಬ ಪ್ರಶ್ನೆಗೆ, 'ಉದ್ಯಾನ, ತೆರೆದ ಪ್ರದೇಶ ಎಲ್ಲಿ ಸಿಗುತ್ತೋ ಅಲ್ಲಿ ಹಾಕಿದ್ದೇವೆ' ಎಂಬ ಹಾರಿಕೆಯ ಉತ್ತರ ಅರಣ್ಯ ವಿಭಾಗದಿಂದ ಬರುತ್ತದೆ.

**ಮಾಹಿತಿ ಇಲ್ಲ:** ಬಿಬಿಎಂಪಿ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸರಿನಾ ಸಿಕ್ಕಲಿಗರ್ ಅವರಲ್ಲಿ ಸಸಿ ನೆಟ್ಟ, ನಿರ್ವಹಣೆಯ ಮಾಹಿತಿ ಕೇಳಿದಾಗ, 'ವಿಭಾಗದ ವ್ಯವಸ್ಥಾಪಕರಲ್ಲಿ ಪಡೆಯಿರಿ' ಎಂದರು. ವ್ಯವಸ್ಥಾಪಕರು, 'ವೃಕ್ಷ ಅಧಿಕಾರಿಯವರಲ್ಲಿ ಮಾಹಿತಿ ಇದೆ' ಎಂದರು. ಒಬ್ಬರು ಮರ ಕತ್ತರಿಸಿದ ಮಾಹಿತಿ ನೀಡಿದರು. ಮತ್ತೊಬ್ಬರು ಸಸಿ ನೆಟ್ಟ ವಿವರ ನೀಡಿದರಷ್ಟೆ. 'ಉದ್ಯಾನ, ತೆರೆದ ಪ್ರದೇಶ ಎಲ್ಲಿ ಸಿಗುತ್ತೋ ಅಲ್ಲಿ ಹಾಕಿದ್ದೇವೆ' ಎಂಬ ಹಾರಿಕೆಯ ಉತ್ತರ ಅರಣ್ಯ ವಿಭಾಗದಿಂದ ಬರುತ್ತದೆ. ನೆಟ್ಟ ಸಸಿ ಮರವಾದ ಬಗ್ಗೆ ಮಾತ್ರ ಯಾರಲ್ಲಿಯೂ ಮಾಹಿತಿ ಇಲ್ಲ.

**ಎಲ್ಲಿ ಹೋದವು ಸಸಿ?:** 'ಗ್ರೀನ್ ಸಿಟಿ' ಎಂಬ ಹೆಗ್ಗಳಿಕೆ ಹೊಂದಿರುವ ಬೆಂಗಳೂರಿನಲ್ಲಿ ಪರಿಸರ ದಿನ ಸೇರಿ ಹಲವು ಸಂದರ್ಭಗಳಲ್ಲಿ ಬಿಬಿಎಂಪಿ, ಸರ್ಕಾರದ ಹಲವು ಇಲಾಖೆಗಳು ಸೇರಿದಂತೆ ಸಂಘ–ಸಂಸ್ಥೆಗಳು ಲಕ್ಷಾಂತರ ಸಸಿಗಳನ್ನು ನೆಡುತ್ತಿವೆ. ಆದರೆ, ಆ ಪ್ರಮಾಣದ ಮರಗಳು ಕಾಣಸಿಗುತ್ತಿಲ್ಲ. ಕೆಲವು ಅಧ್ಯಯನಗಳ ಪ್ರಕಾರ ಸುಮಾರು 20 ಲಕ್ಷ ಮರಗಳು ನಗರದಲ್ಲಿವೆ. 2014ರಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಪ್ರಕಾರ 14.78 ಲಕ್ಷ, 2016ರಿಂದ ಬಿಬಿಎಂಪಿ ಅರಣ್ಯ ವಿಭಾಗ 4.73 ಲಕ್ಷ ಸಸಿಗಳನ್ನು ನೆಟ್ಟಿದೆ.

### ಸಸಿಗಳು ಪರಿಹಾರವಲ್ಲ...

'ಬೃಹತ್ ಮರವೊಂದನ್ನು ಕಡಿದುಹಾಕಿ, ಅದರ ಬದಲು ಎಷ್ಟೇ ಸಂಖ್ಯೆಯ ಸಸಿಗಳನ್ನು ನೆಟ್ಟರೂ ಅದಕ್ಕೆ ಪರಿಹಾರವಾಗುವುದಿಲ್ಲ. ಪ್ರತಿಯೊಂದು ಮರಕ್ಕೂ ತನ್ನದೇ ಮೌಲ್ಯವಿದೆ. ಎಲ್ಲವನ್ನೂ ರಕ್ಷಿಸಬೇಕು. ಬಿಬಿಎಂಪಿಯ ಅರಣ್ಯ ವಿಭಾಗ ಮೂರ್ನಾಲ್ಕು ಮೀಟರ್ ಎತ್ತರದ ದೊಡ್ಡ ಮರಗಳ ಪಟ್ಟಿಯನ್ನು ನೀಡುತ್ತದೆ. ಮರ ಕಡಿಯಲು ಸಾರ್ವಜನಿಕ ಪ್ರಕಟಣೆ ನೀಡುವ ಮುನ್ನ ವಾಸ್ತವವನ್ನು ಅರಿತುಕೊಳ್ಳಬೇಕು' ಎಂದು ಸಿಟಿಜನ್ ಫಾರ್ ಸಿಟಿಜನ್ಸ್ ಸಂಸ್ಥಾಪಕ ರಾಜ್‌ಕುಮಾರ್ ದುಗಾರ್ ಹೇಳಿದರು.

**ಅಲ್ಲೇ ಸಸಿ ನೆಡಿ:** 'ನಗರದಲ್ಲಿ ಮರಗಳ ರಕ್ಷಣೆ ಬಿಬಿಎಂಪಿಯ ಕರ್ತವ್ಯ. ಬಿಎಂಆರ್‌ಸಿಎಲ್, ಕೆಆರ್‌ಡಿಸಿಎಲ್, ರೈಲ್ವೆ ಸೇರಿದಂತೆ ಯಾವುದೇ ಯೋಜನೆಗಾಗಿ ಮರಗಳನ್ನು ಕಡಿಯುವ ಸುತ್ತಮುತ್ತಲಿನ ಪ್ರದೇಶದಲ್ಲೇ ಸಸಿಗಳನ್ನು ನೆಡಬೇಕು' ಎಂದು ನಮ್ಮ ಬೆಂಗಳೂರು ಪ್ರತಿಷ್ಠಾನದ ವ್ಯವಸ್ಥಾಪಕ ವಿನೋದ್ ಜಾಕೋಬ್ ಆಗ್ರಹಿಸಿದರು.

### ಮರ ಗಣತಿಯಾಗಲಿ...

ನಗರದಲ್ಲಿ ಮರಗಳ ಗಣತಿಯಾಗಬೇಕು. ಇದರಿಂದ ಹಲವು ವರ್ಷಗಳಿಂದ ಇರುವ ಮರಗಳೆಷ್ಟು, ಹೊಸದಾಗಿ ನೆಟ್ಟಿರುವ ಸಸಿಗಳು ಮರವಾಗಿರುವ ಲೆಕ್ಕಗಳೆಲ್ಲ ಸಿಗುತ್ತದೆ. ಪ್ರತಿ 6 ತಿಂಗಳಿಗೆ ಮರಗಳ ಗಣತಿಯ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು. ವಾಸ್ತವದಲ್ಲಿ ಎಲ್ಲಿ ಸಸಿಗಳಿವೆ, ಮರಗಳಿಗೆ ಎಂಬುದು ಡಿಜಿಟಲ್ ದಾಖಲೆ ಇರಬೇಕು ಎಂದು ಪರಿಸರ ಕಾರ್ಯಕರ್ತ ವಿಜಯ್ ನಿಶಾಂತ್ ಒತ್ತಾಯಿಸಿದರು.

**ಮರಗಳನ್ನು ಕತ್ತರಿಸಿರುವ ವಿವರ**

| ವರ್ಷ | ಮರಗಳ ಸಂಖ್ಯೆ |
|---|---|
| 2019-20 | 632 |
| 2020-21 | 154 |
| 2021-22 | 157 |
| 2022-23 ಅ.13ರಂತೆ | 535 |
| **ಸಸಿಗಳನ್ನು ನೆಟ್ಟಿರುವ ವಿವರ** | |
| 2016-17 | 1,16,000 |
| 2017-18 | 1,00,000 |
| 2018-19 | ಇಲ್ಲ |
| 2019-20 | 1,37,400 |
| 2020-21 | 1,30,523 |
| 2021-22 | ಇಲ್ಲ |
| 2022-23 | 2 ಲಕ್ಷ ಗುರಿ |

*ಮಾಹಿತಿ: ಬಿಬಿಎಂಪಿ ಅರಣ್ಯ ವಿಭಾಗ

# ಕುಲಾಲ ಸಮುದಾಯದ ಅಭಿವೃದ್ಧಿ ನಿಗಮ ಸ್ಥಾಪನೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕವಾಗಿ ಹಿಂದುಳಿದ ಕುಲಾಲ ಸಮುದಾಯದ ಅಭಿವೃದ್ಧಿಗಾಗಿ ನಿಗಮ ಸ್ಥಾಪನೆ ಮಾಡಬೇಕು ಎಂದು ರಾಜ್ಯ ಸರ್ಕಾರಕ್ಕೆ ಬೆಂಗಳೂರು ಕುಲಾಲ ಸಂಘ ಒತ್ತಾಯಿಸಿದೆ.

ಕುಲಾಲ ಸಂಘದ 50ನೇ ವರ್ಷದ ಹಿನ್ನಲೆಯಲ್ಲಿ ಆಯೋಜಿಸಲಾಗಿದ್ದ ಸುವರ್ಣ ಸಂಭ್ರಮೋತ್ಸವ ಕಾರ್ಯಕ್ರಮದಲ್ಲಿ ಸಂಘದ ಸದಸ್ಯರು ಆಗ್ರಹಿಸಿದರು.

ಸಮಾರೋಪ ಸಮಾರಂಭದಲ್ಲಿ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರನ್ನು ಸನ್ಮಾನಿಸಿ, ಕುಲಾಲ ಸಮುದಾಯದ ಅಭಿವೃದ್ಧಿಗಾಗಿ ನಿಗಮ ಸ್ಥಾಪನೆ ಮಾಡಬೇಕು ಎಂದು ಮನವಿ ಸಲ್ಲಿಸಿದರು.

ಕುಲಾಲ ಸಂಘಕ್ಕಾಗಿ ಬೆಂಗಳೂರಿನಲ್ಲಿ ಕಟ್ಟಡ ನಿರ್ಮಿಸಲು ಸ್ಥಳ ನೀಡುವುದಾಗಿ ಭರವಸೆ ನೀಡಿದ ಸಚಿವರು, ಸಮುದಾಯ ಸರ್ವತೋಮುಖ ಅಭಿವೃದ್ಧಿಗಾಗಿ ಬೇಕಾದ ಸಹಕಾರ ನೀಡುವುದಾಗಿ ಹೇಳಿದರು.

ಕುಲಾಲ ಸಂಘದ ಅಧ್ಯಕ್ಷರು ಪುರುಷೋತ್ತಮ್ ಚೇಂಡ್ಲಾ ಮಾತನಾಡಿ, 'ಬಹುಕಾಲದಿಂದಲೂ ಕುಲಾಲ ಸಮುದಾಯವು ಶೋಷಣೆಗೆ ಒಳಗಾಗಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಅತಿ ಹಿಂದುಳಿದ ಸಮುದಾಯವಾಗಿ ಉಳಿದಿದೆ. ಕುಲಾಲ ಸಂಘವನ್ನು 1969ರಲ್ಲಿ ಸ್ಥಾಪನೆ ಮಾಡಲಾಯಿತು. ಬೆಂಗಳೂರಲ್ಲಿ ಆಗ 100–200ರಷ್ಟಿದ್ದ ಕುಲಾಲರ ಜನಸಂಖ್ಯೆ ಹಾಲಿ ಐದಾರು ಸಾವಿರ ದಾಟಿದೆ. ಸಮಾಜವನ್ನು ಮುಖ್ಯವಾಹಿನಿಗೆ ತರಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸಂಘದ ಗೌರವಾಧ್ಯಕ್ಷರು ಜಿ.ಈಶ್ವರ ಮೂಲ್ಯ, ಪ್ರಧಾನ ಕಾರ್ಯದರ್ಶಿ ಶಂಕರ ಕುಲಾಲ್ ಜನ್ನಾಡಿ, ಭರತ್ ಸೌಂದರ್ಯ, ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿದ್ದರು.

ಮಹಾಲಕ್ಷ್ಮೀ ಕ್ಷೇತ್ರ ಶ್ರೀಧಾಮ ಮಾಣಿಲದ ಮೋಹನದಾಸ ಪರಮ ಹಂಸ ಸ್ವಾಮೀಜಿ ಇದ್ದರು. ಕು.ವಿ.ಕು ರವರ ಆಸ್ತಿ ತುಳು ಕಥಾ ಸಂಕಲನ ಬಿಡುಗಡೆ ಮಾಡಲಾಯಿತು.

ಕುಲಾಲ ಸಂಘದ 50ನೇ ವರ್ಷದ ಹಿನ್ನೆಲೆಯಲ್ಲಿ 'ಸುವರ್ಣ ಸಂಭ್ರಮೋತ್ಸವ'ದಲ್ಲಿ ಕುಲಾಲ ಸಂಘದ ಅಧ್ಯಕ್ಷ ಪುರುಷೋತ್ತಮ್ ಚೇಂಡ್ಲಾ, ಜಿ.ಈಶ್ವರ ಮೂಲ್ಯ, ಪ್ರಧಾನ ಕಾರ್ಯದರ್ಶಿ ಶಂಕರ ಕುಲಾಲ್ ಜನ್ನಾಡಿ, ಭರತ್ ಸೌಂದರ್ಯ ಇದ್ದರು

# ವೈಟ್ ಟಾಪಿಂಗ್: ₹38 ಕೋಟಿ ಪರಿಹಾರ!

• ನವೀನ್ ಮಿನೇಜಸ್

ಬೆಂಗಳೂರು: ನಗರದಲ್ಲಿ ನಿರ್ವಹಿಸದ ಕಾಮಗಾರಿಗಾಗಿ ₹38 ಕೋಟಿಯನ್ನು ಪಾವತಿಸಬೇಕಾದ ಸ್ಥಿತಿ ಬಿಬಿಎಂಪಿಗೆ ಬಂದೊದಗಿದೆ.

ಸರ್ಕಾರದ ಆದೇಶದಂತೆ ಮೂರನೇ ಹಂತದ ಕಾಂಕ್ರೀಟ್ ರಸ್ತೆ ಯೋಜನೆಯನ್ನು ರದ್ದುಪಡಿಸಿದರೆ, ಗುತ್ತಿಗೆಯನ್ನು ಈಗಾಗಲೇ ನೀಡಿರುವುದನ್ನೂ ರದ್ದುಗೊಳಿಸಿದರೆ ಟೆಂಡರ್ ಷರತ್ತಿನಂತೆ ಪರಿಹಾರ ನೀಡಬೇಕಾಗುತ್ತದೆ.

2019ರಲ್ಲಿ ಬಿಬಿಎಂಪಿ 89 ರಸ್ತೆಗಳಲ್ಲಿ ವೈಟ್ ಟಾಪಿಂಗ್ ಮಾಡಲು ₹1,154 ಕೋಟಿ ವೆಚ್ಚ ಮಾಡಲು ನಿರ್ಧರಿಸಿ 6 ಪ್ಯಾಕೇಜ್‌ಗಳನ್ನು ಮಾಡಿ ಮೂರು ಹಂತದಲ್ಲಿ ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರ ಅನುಮತಿ ನೀಡಿತ್ತು.

ಟೆಂಡರ್ ಪ್ರಕ್ರಿಯೆ ಮುಗಿದು, ಬಿಬಿಎಂಪಿ ಎರಡು ಹಂತದ ಕಾಮಗಾರಿಗಳಿಗೆ ಕಾರ್ಯಾದೇಶ ನೀಡಿ, ಮೂರನೇ ಹಂತಕ್ಕೆ ಸಮ್ಮತಿ ಪತ್ರ ನೀಡಿತ್ತು. ಈಗ ಕೊನೆಯ ಹಂತದ ಕಾಮಗಾರಿ ಸರ್ಕಾರದ ಸಮ್ಮತಿಗಾಗಿ ಕಾಯುತ್ತಿದೆ. ನಾಲ್ಕು ಗುತ್ತಿಗೆದಾರರು ಬ್ಯಾಂಕ್ ಖಾತರಿ ಅಥವಾ ಭದ್ರತಾ ಠೇವಣಿ ನೀಡಿದ್ದಾರೆ.

ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ವೈಟ್ ಟಾಪಿಂಗ್ ಯೋಜನೆ ಬಗ್ಗೆ ಅಕ್ರಮಗಳ ಬಗ್ಗೆ ಮಾತನಾಡಿದ್ದರು. ಅಲ್ಲದೆ, ವೈಟ್‌ಟಾಪಿಂಗ್ ಯೋಜನೆಯಲ್ಲಿ 89 ರಸ್ತೆಗಳು ಬಿಜೆಪಿಯೇತರ ಶಾಸಕರ ಕ್ಷೇತ್ರದಲ್ಲಿದ್ದವು. ಹೀಗಾಗಿ ಯೋಜನೆಗೆ ತಡೆ ನೀಡಿದ್ದರು.

ಮೂರನೇ ಹಂತದ ವೈಟ್ ಟಾಪಿಂಗ್ ನಿಲ್ಲಿಸಲು ರಾಜ್ಯ ಸರ್ಕಾರ ಸೂಚಿಸಿತ್ತು. ಇದರಂತೆ ಅಕ್ಟೋಬರ್‌ನಲ್ಲಿ ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದ ಬಿಬಿಎಂಪಿ, ₹1,450 ಕೋಟಿ ವೆಚ್ಚ 39 ಕಾಂಕ್ರೀಟ್ ರಸ್ತೆಗಳ ಹೊಸ ಯೋಜನೆಗೆ ಅನುಮತಿ ನೀಡಬೇಕು ಹಾಗೂ ಹಳೆಯ ಯೋಜನೆಯ ಗುತ್ತಿಗೆ ರದ್ದುಪಡಿಸಲು ಮನವಿ ಮಾಡಿತ್ತು. 2019ರಲ್ಲಿ ಟೆಂಡರ್ ಕರೆಯಲಾಗಿದ್ದ ಈ ಯೋಜನೆ ಬಗ್ಗೆ ಕಾನೂನು ಸಮಸ್ಯೆಗಳ ಮಾಹಿತಿ ನೀಡುವಂತೆ ನಗರಾಭಿವೃದ್ಧಿ ಇಲಾಖೆ ಸೂಚಿಸಿತ್ತು.

ಇದರಂತೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಕಾನೂನು ಕೋಶದ ಸಲಹೆ ಕೋರಿದ್ದರು. ಕಾನೂನು ಇಲಾಖೆ ವಿವರವಾದ ಪತ್ರ ಪರೆದಿದ್ದು, ಈ ಸಂದರ್ಭದಲ್ಲಿ ಗುತ್ತಿಗೆ ರದ್ದು ಮಾಡಿದರೆ ಮಧ್ಯಸ್ಥಿಕೆ ಪರಿಹಾರವಾಗಿ ₹38.4 ಕೋಟಿ ಅಥವಾ ಗುತ್ತಿಗೆ ಮೌಲ್ಯದ ಶೇ 10ರಷ್ಟು ಹಣ ನೀಡಬೇಕಾಗುತ್ತದೆ ಎಂದಿದೆ.

## ಸಿ.ಎಂ ಬೊಮ್ಮಾಯಿ ಟೀಕೆ • ₹122 ಕೋಟಿ ವೆಚ್ಚದಲ್ಲಿ ವಾಣಿಜ್ಯ ಸಮುಚ್ಚಯ: ಸೋಮಶೇಖರ್

# ಸ್ವಪ್ರತಿಷ್ಠೆಗೆ ಜನಹಿತ ಬದಿಗೊತ್ತಿದ ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ 15 ಲಕ್ಷ ಮನೆ ನಿರ್ಮಾಣದ ಘೋಷಣೆ ಮಾಡಿದ್ದರೂ ಅನುದಾನದ ನೀಡಿದ್ದು ಮಾತ್ರ ₹ 2,500 ಕೋಟಿ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹರಿಹಾಯ್ದರು.

ವಳಗೇರಹಳ್ಳಿಯಲ್ಲಿ ವಸತಿ ಇಲಾಖೆ ವತಿಯಿಂದ ನಿರ್ಮಾಣಗೊಳ್ಳುತ್ತಿರುವ ವಾಣಿಜ್ಯ ಸಮುಚ್ಚಯ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಸ್ವಪ್ರತಿಷ್ಠೆಗಾಗಿ ರಾಜ್ಯದ ಜನರ ಹಿತವನ್ನು ಬದಿಗೊತ್ತಿದ್ದ ಕಾಂಗ್ರೆಸ್, ಜನರ ದಿಕ್ಕುತಪ್ಪಿಸಲು ಅನುದಾನದ ಲಭ್ಯತೆಯೇ ಇಲ್ಲದೆ 15 ಲಕ್ಷ ಮನೆ ನಿರ್ಮಾಣ ಘೋಷಣೆ ಮಾಡಿತ್ತು. ತೋರಿಕೆಗಾಗಿ ಕಾಂಗ್ರೆಸ್ ಜನಪ್ರಿಯ ಯೋಜನೆ ಜಾರಿ ಮಾಡಿತ್ತು. ಅಲ್ಲದೆ ಪ್ರಧಾನಮಂತ್ರಿ ಯೋಜನೆಯನ್ನೂ ಜನರಿಂದ ದೂರ ಇಟ್ಟಿತ್ತು. ಸ್ವಪ್ರತಿಷ್ಠೆಗಾಗಿ ಒಂದು ಸರ್ಕಾರ ಜನರ ಹಿತ ಕಾಯದೇ ಅನ್ಯಾಯ ಮಾಡಿತ್ತು ಎಂದು ಹೇಳಿದರು.

'ಬಿಜೆಪಿ ಸರ್ಕಾರ ಆಡಳಿತಕ್ಕೆ ಬಂದ ನಂತರ ಪಿಎಂ ಆವಾಸ್ ಯೋಜನೆ ಅಡಿ ವಸತಿ ನೋಂದಣಿ ಕಾರ್ಯ ವ್ಯವಸ್ಥಿತವಾಗಿ ಜಾರಿಯಾಗಿದೆ. 18 ಲಕ್ಷ ವಸತಿ ಆಕಾಂಕ್ಷಿಗಳು ನೋಂದಣಿ ಮಾಡಿದ್ದು, 5 ಲಕ್ಷ ಮನೆಗಳ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ನಗರ ಭಾಗದಲ್ಲಿ 1 ಲಕ್ಷ ಹಾಗೂ 4 ಲಕ್ಷ ಮನೆ ಗ್ರಾಮೀಣ ಭಾಗದಲ್ಲಿ ನಿರ್ಮಾಣವಾಗುತ್ತಿವೆ' ಎಂದು ಮಾಹಿತಿ ನೀಡಿದರು.

'ನಗರದ ಅಭಿವೃದ್ಧಿಗೆ ಹಲವಾರು ಯೋಜನೆ ರೂಪಿಸಲಾಗಿದೆ. ನಗರೋತ್ಥಾನ ಯೋಜನೆಯಡಿ ₹ 6,000 ಕೋಟಿ ಬಿಡುಗಡೆ ಮಾಡಲಾಗಿದೆ. ರಾಜಕಾಲುವೆ ಅಭಿವೃದ್ಧಿಗೆ ₹ 2 ಸಾವಿರ ಕೋಟಿ ಮೀಸರಿಸಲಾಗಿದೆ. ಮಳೆ ಕಡಿಮೆ ಆಗುತ್ತಿದ್ದಂತೆ ಡಾಂಬರೀಕರಣಕ್ಕೆ ವೇಗ ನೀಡಲಾಗುವುದು' ಎಂದೂ ಹೇಳಿದರು.

ಸಚಿವ ಎಸ್.ಟಿ. ಸೋಮಶೇಖರ್ ಮಾತನಾಡಿ, 'ಯಶವಂತಪುರ ಕ್ಷೇತ್ರಕ್ಕೆ ವಸತಿ ಯೋಜನೆ ಅಡಿ 14,000 ಮನೆ ಲಭ್ಯವಾಗಿದ್ದು, ನಿರ್ಮಾಣ ಹಂತದಲ್ಲಿದೆ. ಶೀಘ್ರದಲ್ಲೇ ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗುವುದು' ಎಂದು ಹೇಳಿದರು.

ವಸತಿ ಸಚಿವ ವಿ.ಸೋಮಣ್ಣ ಮಾತನಾಡಿ, ₹ 122 ಕೋಟಿ ವೆಚ್ಚದಲ್ಲಿ ವಾಣಿಜ್ಯ ಸಮುಚ್ಚಯ ನಿರ್ಮಾಣ ಮಾಡಲಾಗುತ್ತಿದೆ ಎಂದು ಹೇಳಿದರು.

### ವಸತಿ ಸಮುಚ್ಚಯದ ವಿಶೇಷ

ವಾಣಿಜ್ಯ ಸಮುಚ್ಚಯ ₹ 122 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿದೆ. 10 ಅಂತಸ್ತುಗಳಲ್ಲಿ ವಸತಿ ಸಮುಚ್ಚಯ ತಲೆ ಎತ್ತುತ್ತಿದ್ದು 3 ತಳ ಮಹಡಿಗಳು ಕಾರ್ ಪಾರ್ಕಿಂಗ್ ವ್ಯವಸ್ಥೆಗೆ ಮೀಸಲಿಡಲು ಉದ್ದೇಶಿಸಲಾಗಿದೆ. ಇಲ್ಲಿ 674 ಕಾರುಗಳಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ.

ಉಳಿದ ಅಂತಸ್ತುಗಳ ಪೈಕಿ 1, 2 ಮತ್ತು 3ನೇ ಮಹಡಿಯಲ್ಲಿ ದೊಡ್ಡ ಮಳಿಗೆಗಳು ರೂಪುಗೊಳ್ಳಲಿವೆ. 4ನೇ ಅಂತಸ್ತಿನಲ್ಲಿ ಫುಡ್ ಕೋರ್ಟ್ ಕೂಡ ಇರಲಿದೆ. 5 ಮತ್ತು 6ನೇ ಅಂತಸ್ತಿನಲ್ಲಿ ಚಿತ್ರ ಮಂದಿರ ರೂಪುಗೊಳ್ಳಲಿದ್ದು, 5 ಪರದೆಗಳಿಗೆ ಅವಕಾಶ ಕಲ್ಪಿಸಲಾಗಿದೆ. ಸುಮಾರು 9,903.74 ಚದರ ಮೀಟರ್ ವಿಸ್ತೀರ್ಣದಲ್ಲಿ ವಾಣಿಜ್ಯ ಸಮುಚ್ಚಯ ನಿರ್ಮಾಣಗೊಳ್ಳುತ್ತಿದೆ.

## 'ರಾಜಕಾರಣಿಗಳಿಂದ ಸಂಘರ್ಷ'

ಬೈಲಹೊಂಗಲ (ಬೆಳಗಾವಿ ಜಿಲ್ಲೆ): 'ಧರ್ಮ ಮತ್ತು ಜಾತಿಗಳ ನಡುವೆ ಸಂಘರ್ಷ ಹುಟ್ಟು ಹಾಕುವಂಥ ಕೆಲಸವನ್ನು ಕೆಲ ರಾಜಕಾರಣಿಗಳು ಮಾಡುತ್ತಿರುವುದು ವಿಷಾದಕರ ಸಂಗತಿ' ಎಂದು ಬಾಳೆಹೊನ್ನೂರ ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯರು ಬೇಸರ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ರಾಜಕೀಯ ಧುರೀಣರು ಸರ್ವ ಜನಾಂಗದ ಶ್ರೇಯೋಭಿವೃದ್ಧಿಗೆ ಗಮನ ಹರಿಸದೆ, ಅಧಿಕಾರದ ಗದ್ದುಗೆಗಾಗಿ ವಿಷ ಬೀಜ ಬಿತ್ತುತ್ತಿದ್ದಾರೆ. ಇಂತಹ ಕೃತ್ಯವನ್ನು ಯಾರೂ ಮಾಡಬಾರದು' ಎಂದರು.

'ಭಾರತೀಯ ಉತ್ಕೃಷ್ಟ ಸಂಸ್ಕೃತಿಯಲ್ಲಿ ಎಲ್ಲರೂ ಒಂದಾಗಿ ಬಾಳಬೇಕು. ಪ್ರತಿಯೊಬ್ಬರೂ ತಮ್ಮ ಧರ್ಮಗಳಲ್ಲಿ ನಿಷ್ಠೆ ಹೊಂದಿರಬೇಕು. ಪರಧರ್ಮ ಸಹಿಷ್ಣುತಾ ಭಾವ ಬೆಳೆಸಿಕೊಂಡಾಗ ಮಾತ್ರ ಧರ್ಮ, ಜಾತಿಗಳ ಸಂಘರ್ಷ ಉಂಟಾಗುವುದಿಲ್ಲ. ಸ್ವಾಭಿಮಾನದ ಕೊರತೆಯಿಂದಾಗಿ ಎಲ್ಲ ರಂಗಗಳಲ್ಲಿ ಸಂಘರ್ಷ ಉಂಟಾಗುತ್ತಿವೆ' ಎಂದರು.

## ಚಿತ್ರಾವಳಿ

ಅಖಿಲ ಕರ್ನಾಟಕ ಸುಗಮ ಸಂಗೀತ ಸಂಸ್ಥೆಗಳ ಒಕ್ಕೂಟವು 67ನೇ ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ಕವಿಯೊಂದಿಗೆ ಭಾವ ಸಂಭ್ರಮ' ಕಾರ್ಯಕ್ರಮದಲ್ಲಿ ಕವಿಗಳಾದ ಆರ್.ಕೆ. ನಲ್ಲೂರು ಪ್ರಸಾದ್, ಪ್ರೊ. ನಾರಾಯಣ ಘಟ್ಟ, ಎಚ್. ಡುಂಡಿರಾಜ್, ನಾ. ದಾಮೋದರ ಶೆಟ್ಟಿ, ಬಾಗೂರು ಮಾರ್ಕಂಡೇಯ ಅವರ ಜತೆಗೆ ಗಾಯಕರಾದ ಆನಂದ ಮಾದಲಗೆರೆ, ಮೃತ್ಯುಂಜಯ ದೊಡ್ಡವಾಡ, ರಾಜೇಂದ್ರ ಬೆಂಡೆ, ದಿವಾಕರ ಕಶ್ಯಪ್, ಇಂಚರ ಪ್ರವೀಣ್ ಕುಮಾರ್, ರಾಜಾರಾಮ್, ಅಪರ್ಣ ನರೇಂದ್ರ ಅವರು ವಿವಿಧ ಗೀತೆಗಳನ್ನು ಪ್ರಸ್ತುತಪಡಿಸಿದರು

ರೈನ್‌ಬೋ ಮಕ್ಕಳ ಆಸ್ಪತ್ರೆಯು ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ಕ್ಯಾನ್ವಾಸ್ ಕಾರ್ನಿವಲ್'ನಲ್ಲಿ ಮಕ್ಕಳು ತಮ್ಮ ಕಲ್ಪನೆಯ ಚಿತ್ರಗಳನ್ನು ಬಿಡಿಸಿದರು

ನಗರದ ನಾಯಬಂಡಿವಾಡ ಮಸೀದಿ ಬಳಿ ಎಸ್‌ಬಿಐ ಸುಲ್ತಾನ್‌ಪೇಟೆ ಶಾಖೆ ವತಿಯಿಂದ ಈಚೆಗೆ ಪ್ರಧಾನ ಮಂತ್ರಿ ಮುದ್ರ ಸಾಲ ಯೋಜನೆ ಹಾಗೂ ಸ್ಟ್ಯಾಂಡ್ ಅಪ್ ಇಂಡಿಯಾ ಸಾಲ ಶಿಬಿರ ಆಯೋಜಿಸಲಾಗಿತ್ತು. ವ್ಯವಸ್ಥಾಪಕ ಅಖಿಲೇಶ್ ಕುಮಾರ್, ಅಧಿಕಾರಿಗಳಾದ ಅನುಪಮ ಶರ್ಮಾ, ಅರುಣ್‌ಕುಮಾರ್ ಹಾಜರಿದ್ದರು

## ಬಿಬಿಎಂಪಿ: ಕ್ಷೇಮಾಭಿವೃದ್ಧಿ ಸಂಘದಿಂದ ಆಯೋಜನೆ

# ಕಾಶಿಯಲ್ಲಿ ಕನ್ನಡ ಡಿಂಡಿಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ಉತ್ತರ ಪ್ರದೇಶದ ಕಾಶಿ ಬಳಿಯ ಗಂಗಾನದಿ ತೀರದಲ್ಲಿ 'ಕನ್ನಡ ಡಿಂಡಿಮೋತ್ಸವ'ವನ್ನು ಆಯೋಜಿಸಲಾಗಿತ್ತು.

ಜಂಗಮವಾಡಿ ಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, 'ಕಾಶಿ ಮತ್ತು ಕರ್ನಾಟಕ ರಾಜ್ಯಕ್ಕೂ ಅವಿನಾಭಾವ ಸಂಬಂಧವಿದೆ. ಕನ್ನಡ ಭಾಷೆ ಪ್ರಾಚೀನ ಭಾಷೆ. ಸರಳ, ಸುಂದರವಾದ ಭಾಷೆ. ಅನ್ಯ ಭಾಷಿಕರು ಕನ್ನಡ ಭಾಷೆ ಕಲಿಯಲು ಬಹಳ ಸುಲಭ. ಕಾಶಿ ವಿಶ್ವನಾಥನ ಸನ್ನಿಧಾನದಲ್ಲಿ ಕನ್ನಡ ಡಿಂಡಿಮೋತ್ಸವ ಕನ್ನಡಿಗರಿಗೆ ಹೆಚ್ಚು ಶಕ್ತಿ ತುಂಬುತ್ತದೆ' ಎಂದರು.

ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಮಾತನಾಡಿ, 'ಕರ್ನಾಟಕ ನನ್ನ ಮಾತೃಭೂಮಿ. ಕನ್ನಡಿಗರು ಆಯೋಜಿಸುವ ಪ್ರತೀ ಕಾರ್ಯಕ್ರಮಕ್ಕೆ ಬರುತ್ತೇನೆ. ಕರ್ನಾಟಕ ಮತ್ತು ಕನ್ನಡಿಗರನ್ನು ನಾನು ಮರೆಯುವುದಿಲ್ಲ. ಬಿಬಿಎಂಪಿ ಸಂಘದ ವಿಶ್ವಾಸದ ಮೇರೆಗೆ ನನ್ನ ತಾಯಿ ಜೊತೆ ಭಾಗವಹಿಸಿದ್ದೇನೆ' ಎಂದರು.

ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ತಾರಾ ಅನುರಾಧ ಮಾತನಾಡಿ, 'ಹೊರ ರಾಜ್ಯದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಕನ್ನಡಿಗರಿಗೆ ಹೆಮ್ಮೆಯ ವಿಷಯ. ಭಾಷೆ ಉಳಿಯಬೇಕಾದರೆ ಪ್ರತಿಯೊಬ್ಬರು ಕನ್ನಡ ಭಾಷೆ ಬಳಸಬೇಕು. ಅನ್ಯ ಭಾಷಿಕರಿಗೆ ಕನ್ನಡ ಕಲಿಸಲು ಪ್ರತಿಯೊಬ್ಬ ಕನ್ನಡಿಗ ಹೋರಾಟ ಮಾಡಬೇಕು' ಎಂದರು.

ನಟಿ ಪ್ರೇಮಾ ಮಾತನಾಡಿ, 'ಮೊದಲ ಬಾರಿಗೆ ಕಾಶಿ ನಗರಕ್ಕೆ ಬಂದಿದ್ದೇನೆ. ಕನ್ನಡ ಭಾಷೆ ಉಳಿಯಬೇಕು, ಬೆಳೆಯಬೇಕು. ರಾಜ್ಯೋತ್ಸವ ಕಾರ್ಯಕ್ರಮ ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯಬೇಕು' ಎಂದು ಹೇಳಿದರು.

ಸಂಘದ ಅಧ್ಯಕ್ಷ ಅಮೃತ್ ರಾಜ್ ಮಾತನಾಡಿ, 'ಕನ್ನಡ ಭಾಷೆ ಉಳಿಸಿ, ಬೆಳಸಲು ಸಂಘದ ವತಿಯಿಂದ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು, ರಂಗಕಲಾವಿದರು ಪ್ರೋತ್ಸಾಹಿಸಲಾಗುತ್ತಿದೆ' ಎಂದರು.

ಜಾನಪದ ನೃತ್ಯ, ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ನಟಿ ಪ್ರೇಮಾ ಹಾಗೂ ಪತ್ರಕರ್ತ ಆನಂದ ಬುರಲಿ ಅವರಿಗೆ 'ಶ್ರೀಗಂಧದ ಗುಡಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬಿಬಿಎಂಪಿ ವಿಶೇಷ ಆಯುಕ್ತ ರಂಗಪ್ಪ, ಮಾಜಿ ಮೇಯರ್ ಗೌತಮ್ ಕುಮಾರ್, ಗಾಯಕಿ ರಮ್ಯಾ ವಶಿಷ್ಠ, ನಟ ಧನ್ವೀರ್ ಗೌಡ, ಬಿಬಿಎಂಪಿ ಕಂದಾಯ ವಿಭಾಗದ ಉಪ ಆಯುಕ್ತೆ ಆರ್. ಲಕ್ಷ್ಮೀದೇವಿ, ಸಂಘದ ಗಂಗಾಧರ್, ಸೂರ್ಯಕುಮಾರಿ, ಎಚ್.ವಿ. ಅಶ್ವಥ್, ಕೆ.ಜಿ.ರವಿ, ರಾಮಚಂದ್ರ, ಕೆ.ಮಂಜೇಗೌಡ, ಎಸ್.ಜಿ.ಸುರೇಶ್, ಕೆ.ನರಸಿಂಹ, ಸಾಯಿಶಂಕರ್, ಸಂತೋಷ್ ಕುಮಾರ್ ನಾಯಕ್, ಮಂಜು, ರುದ್ರೇಶ್ ಪಾಲ್ಗೊಂಡಿದ್ದರು.

ಕಾಶಿಯಲ್ಲಿ ನಡೆದ 'ಕನ್ನಡ ಡಿಂಡಿಮೋತ್ಸವ'ದಲ್ಲಿ ಬಿಬಿಎಂಪಿ ಸಂಘದ ಅಧ್ಯಕ್ಷ ಅಮೃತರಾಜ್, ನಟಿ ಪ್ರೇಮಾ, ಮಾಜಿ ಮೇಯರ್ ಗೌತಮ್ ಕುಮಾರ್, ನಟಿ ತಾರಾ, ನಟಿ ಶಿಲ್ಪಾ ಶೆಟ್ಟಿ, ವಿಶೇಷ ಆಯುಕ್ತ ರಂಗಪ್ಪ, ಜಂಗಮವಾಡಿ ಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಭಾಗವಹಿಸಿದ್ದರು.

# ಕನ್ನಡತಿ ಉತ್ಸವದಲ್ಲಿ 'ಮಿಸ್ ಮಹಾಲಕ್ಷ್ಮೀ'

ಬೆಂಗಳೂರು: ಮಹಾಲಕ್ಷ್ಮೀ ಲೇಔಟ್‌ನಲ್ಲಿ ಕನ್ನಡತಿ ಉತ್ಸವದ ಅಂಗವಾಗಿ ಭಾನುವಾರ ಆಯೋಜಿಸಿದ್ದ 'ಮಿಸ್ ಮಹಾಲಕ್ಷ್ಮೀ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಹಿಳೆಯರಿಗೆ ಅವಳ ಹೆಜ್ಜೆ ಸಂಸ್ಥೆಯ ಸಂಸ್ಥಾಪಕಿ ಶಾಂತಲಾ ದಾಮ್ಲೆ ಬಹುಮಾನ ವಿತರಿಸಿದರು.

ಕಾರ್ಯಕ್ರಮದಲ್ಲಿ 7 ವರ್ಷದ ಮಗುವಿನಿಂದ 75 ವರ್ಷದ ಮಹಿಳೆಯರು ತಮ್ಮ ಕನಸು, ಕಸುಬು ಮತ್ತು ಕಲೆಗಳನ್ನು ಕ್ರಿಯಾಶೀಲವಾಗಿ ಪ್ರದರ್ಶಿಸಲು ವಿವಿಧ ಉಡುಗೆ–ತೊಡುಗೆಗಳ ಧರಿಸುವ ಮೂಲಕ ರ‍್ಯಾಂಪ್ ಮೇಲೆ ಹೆಜ್ಜೆ ಹಾಕಿದರು.

'ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಸಾಧನೆ ಮಾಡಬೇಕು. ಈ ಸಾಧನೆಗೆ ಸಮಾಜ ಪ್ರೋತ್ಸಾಹ ನೀಡಬೇಕು' ಎಂದು ಶಾಂತಲಾ ದಾಮ್ಲೆ ಹೇಳಿದರು.

ಅವಳ ಹೆಜ್ಜೆ ಸಂಸ್ಥೆ ಹಮ್ಮಿಕೊಂಡಿದ್ದ ಮಿಸ್ ಮಹಾಲಕ್ಷ್ಮೀ ಕಾರ್ಯಕ್ರಮಕ್ಕೆ ಭಾನುವಾರ ಚಾಲನೆ ನೀಡಲಾಯಿತು

# ಡೇರಿ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: 'ಸುಸಜ್ಜಿತ ಕಟ್ಟಡ ಇದ್ದರೆ ಗುಣಮಟ್ಟದ ಹಾಲು ಶೇಖರಣೆಗೆ ಸಹಕಾರಿ. ತಾಲ್ಲೂಕಿನಾದ್ಯಂತ ಎಲ್ಲ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೂ ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡಲು ಬಮೂಲ್ ಬದ್ಧವಾಗಿದೆ' ಎಂದು, ಬೆಂಗಳೂರು ಹಾಲು ಒಕ್ಕೂಟ ನೆಲಮಂಗಲ ತಾಲ್ಲೂಕು ನಿರ್ದೇಶಕ ಭಾಸ್ಕರ್ ಹೇಳಿದರು.

ತಾಲ್ಲೂಕಿನ ಬುಗಡಿಹಳ್ಳಿ ಗ್ರಾಮದಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ಹೈನುಗಾರಿಕೆಯಿಂದ ಗ್ರಾಮೀಣ ಭಾಗದ ಹಲವಾರು ಕುಟುಂಬಗಳು ಬದುಕು ಕಟ್ಟಿಕೊಂಡಿದ್ದಾರೆ. ಕೃಷಿಯಂತೆ ಹೈನುಗಾರಿಕೆ ರೈತರ ಒಡನಾಡಿಯಾಗಿದೆ ಎಂದು ಅವರು ತಿಳಿಸಿದರು.

ಉಪ ವ್ಯವಸ್ಥಾಪಕರಾದ ಗೋಪಾಲಗೌಡ, 'ಡೇರಿಯ ಅಧ್ಯಕ್ಷರು ಕಾರ್ಯಕಾರಿ ಮಂಡಳಿ ಸದಸ್ಯರು ಹಾಲು ಉತ್ಪಾದಕರು ಹಾಗೂ ಸಂಘದ ಸಿಬ್ಬಂದಿ ವರ್ಗ ಒಗ್ಗೂಡಿ ಪರಸ್ಪರ ಸಹಕಾರದಲ್ಲಿ ಗುಣಮಟ್ಟದ ಕಟ್ಟಡ ನಿರ್ಮಾಣ ಮಾಡಬೇಕು' ಎಂದರು.

ವಿಸ್ತರಣಾಧಿಕಾರಿ ಚಿಕ್ಕಮಾರೇಗೌಡ, ಅಧ್ಯಕ್ಷ ಎಸ್.ಗೋವಿಂದಯ್ಯ, ಸಂಘದ ಕಾರ್ಯದರ್ಶಿ ಭರತ್ ಇದ್ದರು.

ನೆಲಮಂಗಲ ತಾಲ್ಲೂಕು ಬುಗಡಿಹಳ್ಳಿ ಗ್ರಾಮದಲ್ಲಿ ನೂತನ ಡೇರಿ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಲಾಯಿತು

## ಕಬ್ಬನ್ ಪಾರ್ಕ್‌ನಲ್ಲಿ ಗಮನ ಸೆಳೆದ ಮಕ್ಕಳ ವಾಕಥಾನ್

# ಚುಮುಚುಮು ಚಳಿಯಲ್ಲಿ ಮಕ್ಕಳ ಕಲರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೋಟರಿ ಇ-ಕ್ಲಬ್ ಆಫ್ ಉತ್ಕೃಷ್ಟ'ದಿಂದ ಮಕ್ಕಳ ದಿನಾಚರಣೆ ಅಂಗವಾಗಿ ಭಾನುವಾರ ನಗರದ ಕಬ್ಬನ್ ಪಾರ್ಕ್‌ನಲ್ಲಿ ಆಯೋಜಿಸಿದ್ದ 'ಮಕ್ಕಳ ವಾಕಥಾನ್' ಗಮನ ಸೆಳೆಯಿತು.

ಬೆಳಿಗ್ಗೆ6.30ಕ್ಕೆ ಉದ್ಯಾನದಲ್ಲಿ ಮಕ್ಕಳ ಕಲರವ ಕೇಳಿಬಂತು. ಸಿಲಿಕಾನ್ ಸಿಟಿಯ ವಿವಿಧ ಬಡಾವಣೆಯ ಮಕ್ಕಳು ನಿಗದಿತ ಸಮಯಕ್ಕೆ ಉದ್ಯಾನದಲ್ಲಿ ಜಮಾಯಿಸಿದ್ದರು. 150ಕ್ಕೂ ಹೆಚ್ಚು ಮಕ್ಕಳು ವಿವಿಧ ವಿಭಾಗದಲ್ಲಿ ನಡೆದ ವಾಕಥಾನ್‌ನಲ್ಲಿ ಪಾಲ್ಗೊಂಡು, ಗಮನ ಸೆಳೆದರು. ಚುಮುಚುಮು ಚಳಿ, ಜಿಟಿ ಜಿಟಿ ಮಳೆಯ ನಡುವೆ ಮಕ್ಕಳು ಉದ್ಯಾನದಲ್ಲಿ ಸಾಗಿದರು.

2 ಕಿ.ಮೀ, 3 ಕಿ.ಮೀ ಹಾಗೂ 5 ಕಿ.ಮೀನ ಮೂರು ಪ್ರತ್ಯೇಕ ವಿಭಾಗದಲ್ಲಿ ವಾಕಥಾನ್ ಆಯೋಜಿಸಲಾಗಿತ್ತು. ಮಕ್ಕಳ ಜತೆಗೆ ಪೋಷಕರೂ ವಾಕಥಾನ್‌ನಲ್ಲಿ ಸಾಗಿದರು.

'76ನೇ ಚೆಸ್ ಗ್ರ್ಯಾಂಡ್ ಮಾಸ್ಟರ್' ಪ್ರಣವ್ ಆನಂದ್ ವಾಕಥಾನ್‌ಗೆ ಹಸಿರು ನಿಶಾನೆ ತೋರಿದರು. ಬಳಿಕ ಶುಭ ಹಾರೈಸಿದರು.

ರೋಟರಿ ಕ್ಲಬ್‌ನ ಮಾಜಿ ಜಿಲ್ಲಾ ಗವರ್ನರ್ ಫಜಲ್ ಮಹಮ್ಮದ್ ಮಾತನಾಡಿ, 'ಮಕ್ಕಳು ಭವಿಷ್ಯದ ಪ್ರಜೆಗಳು. ನಿತ್ಯ ದೈಹಿಕ ಕಸರತ್ತು ನಡೆಸುವುದರಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವಾಗಲಿದೆ. ಮಕ್ಕಳು ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ರೋಟರಿ ಇ-ಕ್ಲಬ್ ಆಫ್ ಉತ್ಕೃಷ್ಟದ ಅಧ್ಯಕ್ಷ ಮುರುಗೇಶ್ ಮಾತನಾಡಿ, 'ವಾಕಥಾನ್‌ನಲ್ಲಿ ಪಾಲ್ಗೊಳ್ಳಲು ನೋಂದಣಿ ಶುಲ್ಕ ರೂಪದಲ್ಲಿ ಪಡೆದ ಹಣವನ್ನು ರೋಟರಿ ಸಂಸ್ಥೆಯ ಮೂಲಕ ಮಕ್ಕಳ ಚಿಕಿತ್ಸೆಗೆ ಬಳಸಲಾಗುವುದು. ಅದರಲ್ಲೂ ಹೃದಯ ಸಂಬಂಧಿ ಕಾಯಿಲೆಯ ಚಿಕಿತ್ಸೆಗೆ ಬಳಸಿಕೊಳ್ಳಲಾಗುವುದು' ಎಂದರು.

'ರೋಟರಿ ಕ್ಲಬ್ ಸಾಮಾಜಿಕ ಕಳಕಳಿ ಸಂಸ್ಥೆ. ಸೇವಾ ಕಾರ್ಯ ನಡೆಸಿಕೊಂಡು ಬರುತ್ತಿದೆ. ಶಿಕ್ಷಣ, ಆರೋಗ್ಯ ಸೇವೆಗೆ ನೆರವು ನೀಡುತ್ತಿದೆ' ಎಂದರು.

ರೋಟರಿ ಸಂಸ್ಥೆಯ ಸಬಿಹಾ ಹಾಜರಿದ್ದರು. ವಿಜೇತರಿಗೆ ಮೆಡಲ್ ವಿತರಣೆ ಮಾಡಲಾಯಿತು.

ರೋಟರಿ ಇ–ಕ್ಲಬ್ ಆಫ್ ಉತ್ಕೃಷ್ಟದಿಂದ ಭಾನುವಾರ ನಗರದ ಕಬ್ಬನ್ ಪಾರ್ಕ್‌ನಲ್ಲಿ ಆಯೋಜಿಸಿದ್ದ 'ಮಕ್ಕಳ ವಾಕಥಾನ್'ಗೆ '76ನೇ ಚೆಸ್ ಗ್ರ್ಯಾಂಡ್ ಮಾಸ್ಟರ್' ಪ್ರಣವ್ ಆನಂದ್ ಚಾಲನೆ ನೀಡಿದರು

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿಯಲ್ಲಿ ನಡೆದ ರಾಜ್ಯಮಟ್ಟದ ಒಕ್ಕಲಿಗ ವಧು–ವರರ ಸಮಾವೇಶದಲ್ಲಿ ಪಾಲ್ಗೊಳ್ಳಲು ನೋಂದಣಿಗೆ ಸೇರಿದ್ದ ಜನಸ್ತೋಮ

# ವಧು–ವರರ ಸಮಾವೇಶದಲ್ಲಿ ನೂಕುನುಗ್ಗಲು: ಕೆಲವರು ಅಸ್ವಸ್ಥ

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ): ತಾಲ್ಲೂಕಿನ ಆದಿಚುಂಚನಗಿರಿ ಮಠದ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ ಒಕ್ಕಲಿಗ ವಧು-ವರರ ಸಮಾವೇಶದಲ್ಲಿ ಪಾಲ್ಗೊಳ್ಳಲು 25ಸಾವಿರಕ್ಕೂ ಹೆಚ್ಚು ಮಂದಿ ಜಮಾಯಿಸಿದ್ದರಿಂದ ನೂಕುನುಗ್ಗಲು ಉಂಟಾಗಿ, ಕೆಲವರು ಪ್ರಜ್ಞೆ ಕಳೆದುಕೊಂಡು ಚಿಕಿತ್ಸೆಗೆ ದಾಖಲಾದರು.

ರಾಜ್ಯಮಟ್ಟದ ಸಮಾವೇಶಕ್ಕೆ ವಿವಿಧ ಜಿಲ್ಲೆಗಳಿಂದ ವಾರ ಮುಂಚಿತವಾಗಿಯೇ 13ಸಾವಿರ ಮಂದಿ ನೋಂದಾಯಿಸಿದ್ದರು. ಭಾನುವಾರ ಅವರೊಂದಿಗೆ ಪೋಷಕರೂ ಬಂದಿದ್ದರಿಂದ ನೂಕುನುಗ್ಗಲು ಉಂಟಾಯಿತು.

ವೇದಿಕೆಯಲ್ಲಿ ನಿಂತು ಸ್ವವಿವರಗಳನ್ನು ತಿಳಿಸುತ್ತಿದ್ದಾಗ ಸರತಿ ಸಾಲಿನಲ್ಲಿ ಸಾಗುತ್ತಿದ್ದವರಿಂದ ನೂಕುನುಗ್ಗಲು ಉಂಟಾಯಿತು. ಈ ವೇಳೆ ಸಭಾಂಗಣದಲ್ಲಿ ಕೆಲವು ಪೋಷಕರು ಆಯತಪ್ಪಿ ಬಿದ್ದು ಅಸ್ವಸ್ಥರಾದರು. ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಚಿಕಿತ್ಸೆ ನೀಡಲಾಯಿತು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನೆ

# ‘ಪ್ರತಿಮೆಯಿಂದ ನಾಯಕರಾಗಲು ಸಾಧ್ಯವೆ?’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕೆಂಪೇಗೌಡರ ಪ್ರತಿಮೆ ಅನಾವರಣದಿಂದ ಮತಗಳು ಬರುತ್ತವೆ ಎಂಬ ಭ್ರಮೆಯಲ್ಲಿ ಬಿಜೆಪಿಯವರು ಇದ್ದಾರೆ. ಪ್ರತಿಮೆ ಸ್ಥಾಪಿಸಿದ ಮಾತ್ರಕ್ಕೆ ಒಕ್ಕಲಿಗರ ನಾಯಕರಾಗಲು ಬಿಜೆಪಿಯವರಿಗೆ ಸಾಧ್ಯವೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

ಪಕ್ಷದ ಪ್ರಧಾನ ಕಚೇರಿ ಜೆ.ಪಿ. ಭವನದಲ್ಲಿ ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, ‘ನಾನು ಎರಡು ಕಡೆಗಳಲ್ಲಿ ಕೆಂಪೇಗೌಡರ ಪ್ರತಿಮೆ ಅನಾವರಣ ಮಾಡಿ ಬಂದಿದ್ದೇನೆ. ಅಷ್ಟು ಮಾತ್ರಕ್ಕೆ ಜನರು ನನ್ನೊಂದಿಗೆ ಓಡಿ ಬರುತ್ತಾರಾ? ಕೆಂಪೇಗೌಡರ ಆಶಯಕ್ಕೆ ತಕ್ಕಂತೆ ಕೆಲಸ ಮಾಡಿದರೆ ಜನರು ಗೌರವಿಸುತ್ತಾರೆ’ ಎಂದರು.

‘ನೆರೆ, ಬರಗಳಿಂದ ಜನರು ಬೀದಿಗೆ ಬಂದರು. ಆಗ ಜೀವಂತ ಪ್ರತಿಮೆಗಳಿಗೆ ಈ ನಾಯಕರು ಏನು ಕೊಟ್ಟಿದ್ದಾರೆ? ಒಕ್ಕಲಿಗ ಸಮಾಜಕ್ಕೆ ಬಿಜೆಪಿಯ ಕೊಡುಗೆ ಏನು? ಕೆಂಪೇಗೌಡರ ಪ್ರತಿಮೆ ಹೆಸರಿನಲ್ಲಿ ಗಿನ್ನೆಸ್ ದಾಖಲೆ ನಿರ್ಮಿಸಿರುವುದಾಗಿ ಹೇಳಿಕೊಳ್ಳುತ್ತಿದ್ದಾರೆ. ಅದೇ ಕೆಂಪೇಗೌಡರು ನಿರ್ಮಿಸಿದ್ದ ಕೆರೆಗಳನ್ನು ನುಂಗಿರುವ ಕಾರಣಕ್ಕೆ ಬಿಜೆಪಿಯವರನ್ನು ಗಿನ್ನೆಸ್ ದಾಖಲೆಗೆ ಸೇರಿಸಬೇಕು’ ಎಂದು ವಾಗ್ದಾಳಿ ನಡೆಸಿದರು.

ಪ್ರತಿಮೆ ಸ್ಥಾಪನೆಗೆ ಸರ್ಕಾರದ ಬೊಕ್ಕಸದಿಂದ ₹ 64 ಕೋಟಿ ಖರ್ಚು ಮಾಡಿದ್ದಾರೆ. ಅನಾವರಣ ಸಮಾರಂಭಕ್ಕೂ ಸರ್ಕಾರದ ಬೊಕ್ಕಸದ ಹಣ ವೆಚ್ಚ ಮಾಡಲಾಗಿದೆ. ಆದರೆ, ಬಿಜೆಪಿ ಕಾರ್ಯಕ್ರಮ ಮಾಡಲಾಗಿದೆ’ ಎಂದು ದೂರಿದರು.

> **ಸಿದ್ದರಾಮಯ್ಯ ಅವರು ಇದ್ದ ಕ್ಷೇತ್ರ ಬಿಟ್ಟು ಬೇರೆ ಕಡೆ ಯಾಕೆ ಹೋಗುತ್ತಿದ್ದಾರೆ ಅಂತಾ ನಮಗೆ ಅರ್ಥವಾಗುತ್ತಿಲ್ಲ. ತವರು ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡದೆ, ಬೇರೆ ಜಾಗ ಹುಡುಕುತ್ತಿದ್ದಾರೆ**
> **ಬಿ.ಎಸ್.ಯಡಿಯೂರಪ್ಪ,** ಶಾಸಕ

> **ವಿನಾಶಕಾಲೇ ವಿಪರೀತ ಬುದ್ಧಿ. ಕಾಂಗ್ರೆಸ್ ಇಡೀ ದೇಶದಲ್ಲಿ ವಿನಾಶದತ್ತ ಹೋಗುತ್ತಿದೆ. ಶಾಸಕ ತನ್ವೀರ್ ಸೇಠ್ ಅವರ ಹೇಳಿಕೆ ಕಾಂಗ್ರೆಸ್ ಅಭಿಪ್ರಾಯವಾಗಿರುತ್ತದೆ.**
> **ಬಿ.ವೈ.ವಿಜಯೇಂದ್ರ**
> ಬಿಜೆಪಿ ರಾಜ್ಯ ಉಪಾಧ್ಯಕ್ಷ

‘ಡಬ್ಬಲ್ ಎಂಜಿನ್ ಸರ್ಕಾರ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಇದು ದುಡ್ಡು ಲೂಟಿ ಮಾಡುವ ಡಬ್ಬಲ್ ಎಂಜಿನ್ನೆ? ಹಣ ಹೊಡೆದುಕೊಂಡು ಹೋಗಿ ದೆಹಲಿಯಲ್ಲಿ ಇಡುವುದಾ? 2006ರಲ್ಲಿ ಬಿಜೆಪಿಯ ಎಲ್ಲ ನಿರ್ಧಾರಗಳೂ ಕರ್ನಾಟಕದಲ್ಲೇ ಆಗುತ್ತಿದ್ದವು. ಈಗ ದೆಹಲಿಯಿಂದ ಲಕೋಟೆಯಲ್ಲಿನ ತೀರ್ಮಾನಗಳು ಬರುತ್ತಿವೆ’ ಎಂದರು.

‘ಇದೇ 18 ಅಥವಾ 20ರಿಂದ ಪಂಚರತ್ನ ಯಾತ್ರೆಯನ್ನು ಆರಂಭಿಸಲಾಗುವುದು. ಒಂದೆರಡು ದಿನಗಳಲ್ಲೇ ದಿನಾಂಕ ಪ್ರಕಟಿಸಲಾಗುವುದು’ ಎಂದರು.

## ಸರ್ಕಾರದ ಉತ್ತರಕ್ಕೆ ಆಗ್ರಹ

ಕೆಂಪೇಗೌಡರ ಪ್ರತಿಮೆ ಅನಾವರಣ ಸಮಾರಂಭದಲ್ಲಿ ಶಿಷ್ಟಾಚಾರ ಉಲ್ಲಂಘನೆ ಆಗಿರುವ ಕುರಿತು ಮುಖ್ಯಮಂತ್ರಿ ಅಥವಾ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಉತ್ತರ ನೀಡಬೇಕು ಎಂದು ಜೆಡಿಎಸ್ ಆಗ್ರಹಿಸಿದೆ.

ಪಕ್ಷದ ಅಧಿಕೃತ ಟ್ವಿಟರ್ ಖಾತೆಯಿಂದ ಭಾನುವಾರ ಸರಣಿ ಟ್ವೀಟ್ ಮಾಡಿದ್ದು, ‘ಸಮಾರಂಭಕ್ಕೆ ಎಚ್.ಡಿ. ದೇವೇಗೌಡರನ್ನು ಆಹ್ವಾನಿಸದೇ ಶಿಷ್ಟಾಚಾರ ಉಲ್ಲಂಘಿಸಿರುವ ಕುರಿತು ಸರ್ಕಾರ ಉತ್ತರಿಸಬೇಕು. ಇದು ಕೇಶವಕೃಪಾದ ಕಾರ್ಯಕ್ರಮ ಅಲ್ಲ. ಹಾಗಾಗಿ ಉತ್ತರ ನೀಡಬೇಕಿರುವುದು ಬಿಜೆಪಿಯಲ್ಲ, ಸರ್ಕಾರ’ ಎಂದು ಒತ್ತಾಯಿಸಲಾಗಿದೆ.

## ಸುದ್ದಿ 2 ನಿಮಿಷ

### ಟಿಪ್ಪು ಪ್ರತಿಮೆಗೆ ಮುಸ್ಲಿಮರೇ ಒಪ್ಪಲ್ಲ: ಮಾಧುಸ್ವಾಮಿ

**ತುಮಕೂರು:** ವಿಗ್ರಹ ಆರಾಧನೆಯನ್ನು ಮುಸ್ಲಿಂ ಧರ್ಮದವರು ಒಪ್ಪುವುದಿಲ್ಲ. ಟಿಪ್ಪು ಸುಲ್ತಾನ್ ಪ್ರತಿಮೆ ನಿರ್ಮಿಸಲು ರಾಜ್ಯದ ಜನತೆಯೂ ಒಪ್ಪಲ್ಲ ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು.

ಕುಣಿಗಲ್ ತಾಲ್ಲೂಕಿನ ಎಡೆಯೂರಿನಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿ, ತನ್ವಿರ್ ಸೇಠ್ ದುಸ್ಸಾಹಸಕ್ಕೆ ಕೈ ಹಾಕುತ್ತಿದ್ದಾರೆ. ಅವರು ವೈಯಕ್ತಿಕವಾಗಿ ಏನಾದರೂ ಮಾಡಿಕೊಳ್ಳಲಿ. ಸಾರ್ವಜನಿಕವಾಗಿ ಪ್ರತಿಮೆ ನಿರ್ಮಾಣ ಮಾಡಲು ಮುಸ್ಲಿಮರೇ ಒಪ್ಪಲ್ಲ ಎಂದರು.



ಸಿದ್ದರಾಮಯ್ಯ ಅವರಿಗೆ ಕೋಲಾರವೂ ಸುರಕ್ಷಿತ ಅಲ್ಲ. ಅವರು ಚಿಕ್ಕನಾಯಕನಹಳ್ಳಿಗೆ ಬಂದರೆ ಸ್ವಾಗತಿಸುತ್ತೇನೆ. ತವರು ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿದರೆ ಗೆಲುವು ಸಿಗುವುದಿಲ್ಲ ಎನ್ನುವುದು ಕಳೆದ ಬಾರಿ ಸಾಬೀತಾಗಿದೆ. ಹಾಗಾಗಿ ಅವರು ಬೇರೆ ಕ್ಷೇತ್ರಗಳನ್ನು ಹುಡುಕುತ್ತಿದ್ದಾರೆ ಎಂದೂ ಹೇಳಿದರು.

### ‘2022ರಲ್ಲಿ ಪಾಕ್ ಕಡೆಯಿಂದ ಗಡಿ ದಾಟುವ ಡ್ರೋನ್ ಸಂಖ್ಯೆ ಹೆಚ್ಚಳ’

**ನವದೆಹಲಿ (ಪಿಟಿಐ):** ‘ಪಾಕಿಸ್ತಾನದ ಕಡೆಯಿಂದ ಗಡಿ ದಾಟಿ ಬರುವ ಡ್ರೋನ್‌ಗಳ ಸಂಖ್ಯೆ 2022ರಲ್ಲಿ ದುಪ್ಪಟ್ಟು ಆಗಿದ್ದು ಮಾದಕವಸ್ತುಗಳು, ಶಸ್ತ್ರಾಸ್ತ್ರಗಳನ್ನು ವಾಯುಮಾರ್ಗದಲ್ಲಿ ಸಾಗಿಸುವ ನಿದರ್ಶನಗಳು ಹೆಚ್ಚಿವೆ’ ಎಂದು ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಪ್ರಧಾನ ನಿರ್ದೇಶಕ ಪಂಕಜ್ ಕುಮಾರ್ ಸಿಂಗ್ ಹೇಳಿದ್ದಾರೆ.

ಡ್ರೋನ್ ಚಲನವಲನ ಗುರುತಿಸಲು ಬಿಎಸ್‌ಎಫ್ ಅತ್ಯಾಧುನಿಕ ಪ್ರಯೋಗಾಲಯವನ್ನು ದೆಹಲಿಯ ತನ್ನ ಶಿಬಿರದಲ್ಲಿ ಇತ್ತೀಚೆಗೆ ಸ್ಥಾಪಿಸಿದೆ. ಇದರ ಫಲಿತಾಂಶವೂ ಸಕಾರಾತ್ಮಕವಾಗಿವೆ. ವಾಯುಮಾರ್ಗದ ಚಲನವಲನ ಹಾಗೂ ಕ್ರಿಮಿನಲ್‌ಗಳು ಭಾಗಿಯಾಗಿದ್ದಾರೆಯೇ ಎಂದು ಗುರುತಿಸುವುದು ಸಾಧ್ಯವಾಗಲಿದೆ ಎಂದು ಶನಿವಾರ ತಿಳಿಸಿದರು.

ಇತ್ತೀಚಿನ ವರ್ಷಗಳಲ್ಲಿ ಡ್ರೋನ್ ಬಳಕೆಯ ಪಿಡುಗು ಹೆಚ್ಚಿದ್ದು, ಇದರ ಬಳಕೆ ಹೆಚ್ಚಿನ ಸಮಸ್ಯೆಗಳಿಗೆ ಆಸ್ಪದವಾಗಿದೆ. ಅನಾಮಿಕರಾಗಿ ಇರಬಹುದು ಹಾಗೂ ಎತ್ತರದ ಮಾರ್ಗದಲ್ಲಿ ಸುಲಭವಾಗಿ ಗಡಿದಾಟಬಹುದು ಎಂಬ ಕಾರಣಕ್ಕೆ ಡ್ರೋನ್‌ಗಳ ಬಳಕೆಯು ಹೆಚ್ಚಾಗಿದೆ ಎಂದು ಅಭಿಪ್ರಾಯಪಟ್ಟರು.

ವೆಬಿನಾರ್ ಮೂಲಕ ಪ್ರಯೋಗಾಲಯ ಉದ್ಘಾಟನೆ ಸಂದರ್ಭದಲ್ಲಿ ಡಿಜಿ ಅವರು ಕೇಂದ್ರ ಗೃಹ ಸಚಿವಾಲಯದ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಅವರಿಗೆ ಈ ಕುರಿತು ವಿವರಗಳನ್ನು ನೀಡಿದರು.

### ‘ಭಾರತದ ಮೇಲೆ ಕೆಟ್ಟದೃಷ್ಟಿ ಬೀರುವವರಿಗೆ ತಕ್ಕ ಉತ್ತರ’

**ಚಂಡೀಗಡ (ಪಿಟಿಐ):** ‘ಭಾರತದ ಮೇಲೆ ಕೆಟ್ಟದೃಷ್ಟಿ ಬೀರುವವರಿಗೆ ಈಗ ತಕ್ಕ ಉತ್ತರ ನೀಡಲಾಗುತ್ತಿದೆ. ರಾಷ್ಟ್ರೀಯ ಹಿತಾಸಕ್ತಿಯ ರಕ್ಷಣೆಯು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಮುಖ್ಯ ಗುರಿಯಾಗಿದೆ’ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಅಭಿಪ್ರಾಯಪಟ್ಟಿದ್ದಾರೆ.

ಹರಿಯಾಣದ ಜಜ್ಜರ್‌ನಲ್ಲಿ ನಿರ್ಮಾಣಗೊಂಡಿರುವ ರಾಜ ಪೃಥ್ವಿರಾಜ್ ಚೌಹಾಣ್ ಪ್ರತಿಮೆಯನ್ನು ಭಾನುವಾರ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

‘ಭಾರತವು ಈಗ ದುರ್ಬಲವಾಗಿ ಉಳಿದಿಲ್ಲ. ನಾವು ಶಾಂತಿಯಲ್ಲಿ ನಂಬಿಕೆ ಇರಿಸಿದವರು. ಆದರೆ, ನಮಗೆ ಹಾನಿಯುಂಟು ಮಾಡುವ ಪ್ರಯತ್ನ ಮಾಡಿದವರಿಗೆ ತಕ್ಕ ಉತ್ತರ ನೀಡಲಾಗುತ್ತಿದೆ. ಇದನ್ನು ನಮ್ಮ ಸೈನಿಕರು ಮತ್ತೆ ಮತ್ತೆ ಸಾಬೀತು ಮಾಡುತ್ತಿದ್ದಾರೆ’ ಎಂದರು.

‘ಬ್ರಿಟಿಷರ ಕಾಲದ ಮನಃಸ್ಥಿತಿಯಿಂದ ಹೊರಬರುವ ಉದ್ದೇಶದಿಂದ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಹಲವು ಕ್ರಮಗಳನ್ನು ಕೈಗೊಂಡಿದೆ. ಛತ್ರಪತಿ ಶಿವಾಜಿಯಿಂದ ಸ್ಫೂರ್ತಿ ಪಡೆದುಕೊಂಡು ಭಾರತೀಯ ನೌಕಾಪಡೆಯ ಧ್ವಜವನ್ನು ಬದಲು ಮಾಡಲಾಗಿದೆ ಎಂದು ಹೇಳಿದರು.

ಚುನಾವಣೆಗಾಗಿ ಕ್ಷೇತ್ರ ಹುಡುಕಾಟ • ಸರಣಿ ಟ್ವೀಟ್ ಮೂಲಕ ತರಾಟೆ

# ಸಿದ್ದರಾಮಯ್ಯಗೆ ಡಿಕೆಶಿ ಭಯ: ಬಿಜೆಪಿ ವ್ಯಂಗ್ಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಯಾವುದೇ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದರೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರೇ ತಮ್ಮನ್ನು ಸೋಲಿಸಬಹುದು ಎಂಬ ಭಯ ಸಿದ್ದರಾಮಯ್ಯ ಅವರನ್ನು ಕಾಡುತ್ತಿರುವಂತಿದೆ’ ಎಂದು ಬಿಜೆಪಿ ವ್ಯಂಗ್ಯ ಮಾಡಿದೆ.

ಸಿದ್ದರಾಮಯ್ಯ ಅವರು ಭಾನುವಾರ ಕೋಲಾರ ಪ್ರವಾಸ ಕೈಗೊಂಡ ಬೆನ್ನಲ್ಲೇ ಬಿಜೆಪಿ ರಾಜ್ಯ ಘಟಕದ ಅಧಿಕೃತ ಟ್ವಿಟರ್ ಖಾತೆಯಿಂದ ಸರಣಿ ಟ್ವೀಟ್ ಮಾಡಿದ್ದು, ‘ಪ್ರತಿಪಕ್ಷದ ನಾಯಕರು ಮುಂದಿನ ಚುನಾವಣೆಗೆ ಕ್ಷೇತ್ರ ಹುಡುಕಲು ಇಷ್ಟೊಂದು ಕಸರತ್ತು ನಡೆಸುವುದನ್ನು ನೋಡಿದರೆ ಶಿವಕುಮಾರ್ ಭಯ ಕಾಡುತ್ತಿರುವಂತಿದೆ’ ಎಂದು ಹೇಳಿದೆ.

‘ಸಿದ್ದರಾಮಯ್ಯ ಅವರೇ, ನೀವು ನಿಜವಾದ ಜನಪರ ನಾಯಕರಾದರೆ ಬಾದಾಮಿಯಿಂದಲೇ ಸ್ಪರ್ಧಿಸಿ, ಆ ಜನರ ಋಣ ತೀರಿಸಿ. ಬಾದಾಮಿ ಮತದಾರರ ಮೇಲೆ ಅನುಮಾನಪಟ್ಟು ಅವರಿಗೆ ಅವಮಾನ ಮಾಡುತ್ತಿರುವುದು ಎಷ್ಟು ಸರಿ’ ಎಂದು ಪ್ರಶ್ನಿಸಿದೆ.

‘ಕಳೆದ ಚುನಾವಣೆಯಲ್ಲಿ ಗೆಲ್ಲಿಸಿ ಮಾನ ಕಾಪಾಡಿದ ಬಾದಾಮಿ ಕ್ಷೇತ್ರದ ಜನತೆಗೆ ಕೈ ಕೊಡುವುದು ಜನನಾಯಕನ ಲಕ್ಷಣವೇ? ರಾಜಕೀಯ ಸಂದಿಗ್ಧ ಕಾಲದಲ್ಲಿ ಮಾನ ಕಾಪಾಡಿದ ಜನತೆಗಿಂತ ಮುಂದಿನ ಚುನಾವಣೆ ಗೆಲ್ಲುವುದೇ ಮುಖ್ಯವಾಯಿತೆ’ ಎಂದು ಕೇಳಿದೆ.

### ಶ್ರೀನಿವಾಸಗೌಡರೇ ಸಮಸ್ಯೆ: ಕುಮಾರಸ್ವಾಮಿ

‘ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕ್ಷೇತ್ರ ಹುಡುಕುತ್ತಾ ಕೋಲಾರಕ್ಕೆ ಹೋಗಿರುವ ಕುರಿತು ಲಘುವಾಗಿ ಮಾತನಾಡುವುದಿಲ್ಲ. ಆದರೆ, ನಮ್ಮ ಪಕ್ಷಕ್ಕೆ ಕೈಕೊಟ್ಟು ಕಾಂಗ್ರೆಸ್ ಸೇರಿಸುವ ಶಾಸಕ ಶ್ರೀನಿವಾಸಗೌಡರೇ ಅವರಿಗೆ ಸಮಸ್ಯೆಯಾಗಲಿದ್ದಾರೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

‘ಶ್ರೀನಿವಾಸಗೌಡರು ನಮಗೆ ಮಾಡಿದ ದ್ರೋಹವೇ ಈ ಬಾರಿ ಕೋಲಾರದಲ್ಲಿ ಕಾಂಗ್ರೆಸ್‌ಗೆ ಮುಳುವಾಗಲಿದೆ. ಸಿದ್ದರಾಮಯ್ಯ ಅವರಿಗೆ ನಕಾರಾತ್ಮಕ ಅಂಶಗಳಿರುವುದೇ ಈ ವಿಚಾರದಲ್ಲಿ’ ಎಂದು ಹೇಳಿದರು.

‘ಬಹುತೇಕ ಎಲ್ಲ ಕ್ಷೇತ್ರಗಳಲ್ಲೂ ಜಾತಿ ಲೆಕ್ಕಾಚಾರದಲ್ಲಿ ಚುನಾವಣೆ ನಡೆಯುತ್ತಿದೆ. ಸಿದ್ದರಾಮಯ್ಯ ಕೂಡ ಅದೇ ಲೆಕ್ಕಾಚಾರದಲ್ಲಿ ಕೋಲಾರಕ್ಕೆ ಹೋಗಿರಬಹುದು. ಚಾಮುಂಡೇಶ್ವರಿ, ಬಾದಾಮಿಯಲ್ಲೂ ಜಾತಿ ಲೆಕ್ಕಾಚಾರದಲ್ಲಿ ಚುನಾವಣೆ ನಡೆದಿದೆ. ಕಳೆದ ಚುನಾವಣೆಯಲ್ಲಿ ಕೊನೆಯ ದಿನಗಳಲ್ಲಿ ನಾನು ಮೂರು ಬಾರಿ ಬಾದಾಮಿ ಕ್ಷೇತ್ರಕ್ಕೆ ಹೋಗದೇ ಇದ್ದಿದ್ದರೆ ಅಲ್ಲಿಯೂ ಸಿದ್ದರಾಮಯ್ಯ ಹತ್ತು ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಸೋಲುತ್ತಿದ್ದರು’ ಎಂದು ಹೇಳಿದರು.

### ಅಬ್ಬೇಪಾರಿಯಂತೆ ಓಡಾಡುತ್ತಿರುವ ಸಿದ್ದರಾಮಯ್ಯ: ಪ್ರಲ್ಹಾದ ಜೋಶಿ

**ಹುಬ್ಬಳ್ಳಿ:** ‘ಸಿದ್ದರಾಮಯ್ಯ ಅವರು ಎಲ್ಲಿಗೇ ಹೋದರೂ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುವುದಿಲ್ಲ. ಪ್ರತಿ ಸಲ ಚುನಾವಣೆ ಬಂದಾಗ ಅಬ್ಬೇಪಾರಿಯಂತ ಕ್ಷೇತ್ರಗಳನ್ನು ಹುಡುಕಿಕೊಂಡು ಓಡಾಡುತ್ತಿದ್ದಾರೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವ್ಯಂಗ್ಯವಾಡಿದರು.

ಮುಂದಿನ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರು ಕೋಲಾರದಿಂದ ಸ್ಪರ್ಧಿಸುತ್ತಾರೆಂಬ ವಿಷಯ ಕುರಿತು, ನಗರದಲ್ಲಿ ಭಾನುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಚಾಮುಂಡೇಶ್ವರಿಯಲ್ಲಿ ಕೆಲಸ ಮಾಡದ ಅವರನ್ನು ಜನ ಸೋಲಿಸಿ ಮನೆಗೆ ಕಳಿಸಿದರು. ಬಾದಾಮಿಯಲ್ಲಿ ಏನು ಪುಣ್ಯ ಇತ್ತೋ ಆರಿಸಿ ಬಂದರು. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ದೊಡ್ಡ ನಾಯಕರಾದವರಿಗೆ ಇಂತಹ ಗತಿ ಬರಬಾರದಿತ್ತು’ ಎಂದು ಲೇವಡಿ ಮಾಡಿದರು.

‘ಕೋಲಾರಕ್ಕೆ ಬಂದಿರುವ ಸಿದ್ದರಾಮಯ್ಯ ಅವರಿಗೆ ಅಲ್ಲಿನ ಜನರು ಚಾಮುಂಡೇಶ್ವರಿಯಲ್ಲಿ, ಬಾದಾಮಿ ಯಲ್ಲಿ ಏನು ಮಾಡಿದ್ರಿ? ಎಂದು ಕೇಳಬೇಕು. ಅಲ್ಲಿಯೂ ಅವರನ್ನು ಸೋಲಿಸಿ ಮನೆಗೆ ಕಳಿಸಬೇಕು ಎಂದು ಅಲ್ಲಿನ ಜನರಿಗೆ ಹೇಳುವೆ. ಇನ್ನು ಸ್ವಲ್ಪ ದಿನದಲ್ಲಿ ಅವರು ಯಾವ ಪಕ್ಷಕ್ಕೆ ಹೋಗುತ್ತಾರೆಂದು ಕಾದು ನೋಡೋಣ’ ಎಂದು ಕುಟುಕಿದರು. ಶಾಸಕ ಜಗದೀಶ ಶೆಟ್ಟರ್, ‘5 ವರ್ಷ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದವರಿಗೆ ತಮ್ಮ ಕ್ಷೇತ್ರದಲ್ಲಿ ಮತ್ತೆ ಚುನಾವಣೆಗೆ ಸ್ಪರ್ಧಿಸಲು ಹೆದರುತ್ತಾರೆಂದರೆ, ಅವರ ವ್ಯಕ್ತಿತ್ವ ಎಂತಹದ್ದು ಎಂಬುದು ಅರ್ಥ ಆಗುತ್ತದೆ’ ಎಂದರು.

## ರಾಮದೇವ್ ಕಂಪನಿಯ 5 ಉತ್ಪನ್ನಗಳ ಮೇಲಿನ ನಿರ್ಬಂಧ ತೆರವು

**ಡೆಹ್ರಾಡೂನ್:** ಯೋಗ ಗುರು ಬಾಬಾ ರಾಮದೇವ್ ಅವರ ದಿವ್ಯ ಫಾರ್ಮಸಿಗೆ ಸೇರಿದ ಐದು ಔಷಧಗಳ ಉತ್ಪಾದನೆಯ ಮೇಲೆ ಹೇರಿದ್ದ ನಿರ್ಬಂಧವನ್ನು ಉತ್ತರಾಖಂಡ ಆಯುರ್ವೇದ ಮತ್ತು ಯುನಾನಿ ಪರವಾನಗಿ ಪ್ರಾಧಿಕಾರವು ವಾಪಸ್ ಪಡೆದುಕೊಂಡಿದೆ.

ಮಧುಮೇಹ, ರಕ್ತದೊತ್ತಡ, ಗಳಗಂಡ, ಗ್ಲಾಕೋಮಾ ಮತ್ತು ಅಧಿಕ ಕೊಲೆಸ್ಟರಾಲ್‌ಗಿರುವ ಔಷಧಗಳ ಉತ್ಪಾದನೆಯನ್ನು ಮುಂದುವರಿಸಬಹುದು ಎಂದೂ ಪ್ರಾಧಿಕಾರವು ಹೊಸ ಆದೇಶದಲ್ಲಿ ಹೇಳಿದೆ.

ಈ ಔಷಧಗಳ ಉತ್ಪಾದನೆಗೆ ನಿರ್ಬಂಧ ಹೇರಿ ನವೆಂಬರ್ 9ರಂದು ಹೊರಡಿಸಿದ್ದ ಆದೇಶದಲ್ಲಿ ದೋಷಗಳು ಕಂಡುಬಂದಿವೆ ಮತ್ತು ಅದನ್ನು ತರಾತುರಿಯಲ್ಲಿ ಹೊರಡಿಸಲಾಗಿತ್ತು ಎಂದು ರಾಜ್ಯ ಆರೋಗ್ಯ ಪ್ರಾಧಿಕಾರದ ಔಷಧ ನಿಯಂತ್ರಕರು ಸ್ಪಷ್ಟನೆ ನೀಡಿದ್ದಾರೆ.

ಆದೇಶ ಹೊರಡಿಸುವ ಮೊದಲು ಕಂಪನಿಗೆ ತನ್ನ ನಿಲುವನ್ನು ವ್ಯಕ್ತಪಡಿಸಲು ಕಾಲಾವಕಾಶ ನೀಡಬೇಕಾಗಿತ್ತು ಎಂದೂ ಹೇಳಿದ್ದಾರೆ.

ತಪ್ಪನ್ನು ತಿದ್ದಿಕೊಂಡಿರುವುದಕ್ಕೆ ರಾಮದೇವ್ ಅವರ ಆಪ್ತರಾದ ಆಚಾರ್ಯ ಬಾಲಕೃಷ್ಣ ಅವರು ರಾಜ್ಯ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ.

ಪ್ರಜಾವಾಣಿ@75
ಫೋನ್-ಇನ್ ಕಾರ್ಯಕ್ರಮ
ಕಾಲ್ ಮಾಡಿ ಸಮಸ್ಯೆ ಹೇಳ್ಕೊಳ್ಳಿ
- ಸರಿಯಾದ ಸಮಯಕ್ಕೆ ಕೆಎಸ್‌ಆರ್‌ಟಿಸಿ ಬಸ್‌ಗಳು ಬರುತ್ತಿಲ್ಲವೇ?
- ನಿಮ್ಮ ಮಾರ್ಗದ ಬಸ್ ಸೇವೆ ಸ್ಥಗಿತ ಆಗಿದೆಯೇ?
- ರಾತ್ರಿ ವೇಳೆ ಬಸ್ ಸಿಗದೆ ತೊಂದರೆ ಅನುಭವಿಸುತ್ತಿದ್ದೀರಾ?
- ಬಸ್‌ಗಳಲ್ಲಿ ಸಿಬ್ಬಂದಿ ವರ್ತನೆ ಬಗ್ಗೆ ತಕರಾರು ಇದೆಯಾ?
- ಬಸ್‌ಗಳಲ್ಲಿ ಮಹಿಳೆಯರಿಗೆ ಸುರಕ್ಷತೆ ಇಲ್ಲವೇ?
ನಿಮ್ಮ ಅಹವಾಲುಗಳಿಗೆ ಸ್ಪಂದಿಸಲಿದ್ದಾರೆ
ವಿ.ಅನ್ಬುಕುಮಾರ್, ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ(ಕೆಎಸ್‌ಆರ್‌ಟಿಸಿ)
ಇಂದೇ ಕರೆಮಾಡಿ
ಸಮಯ: ಮಧ್ಯಾಹ್ನ 12.30 ರಿಂದ 1.30ರವರೆಗೆ
ದೂರವಾಣಿ: 080 45557261
LIVE /prajavani.net /prajavani

ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ
ಸಂಖ್ಯೆ: 116, 8ನೇ ಅಡ್ಡರಸ್ತೆ, ರೈಲ್ವೆ ಸಮಾನಾಂತರ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560 020. ದೂರವಾಣಿ : 080-23568200
ಸಂಖ್ಯೆ : KSBD/CR-II-vol II/2020-21/201 ದಿನಾಂಕ : 14.11.2022
ಪ್ರಕಟಣೆ
ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯು ಜೈವಿಕ ಇಂಧನ ಉತ್ಪಾದನಾ ಕೈಗಾರಿಕೆಗಳಿಗೆ ಪ್ರೋತ್ಸಾಹ ಧನ/ ಅನುದಾನವನ್ನು ಪಡೆಯಲು ಅರ್ಜಿ ಆಹ್ವಾನಿಸಿದೆ. ಈ ಸಂಬಂಧ ಅರ್ಹತಾ ಮಾನದಂಡಗಳು ಹಾಗೂ ಅರ್ಜಿ ನಮೂನೆಗಳನ್ನು https://bioenergy.karnataka.gov.in/ ನಿಂದ ಪಡೆಯಬಹುದು. ಭರ್ತಿಮಾಡಿದ ಅರ್ಜಿ ಮತ್ತು ಪೂರಕ ದಾಖಲೆಗಳನ್ನು ಇ-ಮೇಲ್ pschairmanbiofuels@gmail.com ಮೂಲಕ ದಿ. 25.11.2022 ರೊಳಗಾಗಿ ಸಲ್ಲಿಸುವುದು.
ಸಹಿ/- ವ್ಯವಸ್ಥಾಪಕ ನಿರ್ದೇಶಕರು
DIPR/CP/3037/Yakshi/2022-23

Hindu Religious Institutions And Charitable Endowments Department, Bangalore.
Office of the Commissioner, Chamrajpete Bangalore-18
No:ADM 10/CR /05/2022-23 Date : 09.11.2022
SHORT TERM TENDER NOTIFICATION
Commissioner for Religious Institution and Charitable Endowments, Bangalore-18, invites Electronic Tenders from Eligible Tenderers for providing Man Power Services of Data Entry Operators, Drivers, Group 'D' (Office boys) and Cleaners to the **Office of the Commissioner, Hindu Religious Institutions & Charitable Endowment** Department.
Last Date for Submission of Tender through on-line is **28.11.2022 before 4 P.M.** For any further details please logon to: **https://eproc.karnataka.gov.in**
**Note : For any further information and announcement regarding this tender please contact office of the Commissioner.**
Sd/-
Commissioner
Hindu Religious Institutions and Charitable Endowments, Bangalore.
DIPR/CP/SSC/3061/2022-23

# ಎಲ್ಲರ ಒತ್ತಾಸೆಯಿದೆ; ಆಗಲ್ಲ ಎನ್ನಲಾರೆ

ಒಂದನೇ ಪುಟದಿಂದ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರಿಗೆ ಬಹಳ ದೂರವಿರುವುದರಿಂದ ಬಾದಾಮಿಯಲ್ಲಿ ಮತ್ತೊಮ್ಮೆ ಸ್ಪರ್ಧೆಯನ್ನು ತಳ್ಳಿಹಾಕಿದರು.

‘ಕೆ.ಎಚ್.ಮುನಿಯಪ್ಪ ಜೊತೆ ಮಾತನಾಡಿದ್ದು ಕೋಲಾರದಲ್ಲಿ ಸ್ಪರ್ಧೆಗೆ ಸ್ವಾಗತ ಕೋರಿದ್ದಾರೆ. ಶಾಸಕ ಕೆ.ಶ್ರೀನಿವಾಸಗೌಡ ಕೂಡ ಕ್ಷೇತ್ರ ಬಿಡಲು ಸಿದ್ಧರಿದ್ದಾರೆ. ಕೋಲಾರದಿಂದಲೇ ಸ್ಪರ್ಧೆಗೆ ಎಲ್ಲರ ಪ್ರೀತಿಯ ಒತ್ತಡ ಹೆಚ್ಚಿದೆ. ಕ್ಷೇತ್ರ ಆಯ್ಕೆ ಬಗ್ಗೆ ಹೈಕಮಾಂಡ್ ಜೊತೆಯೂ ಚರ್ಚಿಸಿದ್ದೇನೆ. ನಾನು ಬಯಸುವ ಕ್ಷೇತ್ರ ಒಪ್ಪಿಕೊಳ್ಳುವುದಾಗಿ ಹೇಳಿದ್ದಾರೆ. ಆದರೆ, ಅಂತಿಮ ಸೂಚನೆ ಹೈಕಮಾಂಡ್‌ನಿಂದಲೇ ಬರಬೇಕು’ ಎಂದರು. 2013ರಲ್ಲಿ ವರುಣಾದಿಂದ ಗೆದ್ದು ಮುಖ್ಯಮಂತ್ರಿ ಪಟ್ಟಕ್ಕೇರಿದಿರಿ, ಮತ್ತೆ ಅಲ್ಲಿಂದಲೇ ಸ್ಪರ್ಧಿಸುವ ಸಾಧ್ಯತೆ ಇದೆಯೇ ಎಂಬ ಮಾಧ್ಯಮದವರ ಪ್ರಶ್ನೆಗೆ ‘ಬಾದಾಮಿಯಿಂದ ಗೆದ್ದು ವಿರೋಧ ಪಕ್ಷದ ನಾಯಕನಾಗಲಿಲ್ಲವೇ? ಕೋಲಾರದಿಂದ ನಿಂತು ಗೆಲ್ಲಬಹುದಲ್ಲವೇ’ ಎಂದು ಮರು ಪ್ರಶ್ನೆ ಹಾಕಿದರು.

ಕೋಲಾರದಲ್ಲಿ ಸಿದ್ದರಾಮಯ್ಯ ಅವರನ್ನು ಭಾನುವಾರ ತೆರೆದ ಜೀಪಿನಲ್ಲಿ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು.

### ಮಿಂಚಿನ ಸಂಚಾರ

ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಲು ಬಂದಿದ್ದಾರೇನೋ ಎಂಬಂತೆ ಸಿದ್ದರಾಮಯ್ಯ ಕೋಲಾರ ಕ್ಷೇತ್ರದಲ್ಲಿ ಓಡಾಡಿ ಮಿಂಚಿನ ಸಂಚಲನ ಸೃಷ್ಟಿಸಿದರು. ಚುನಾವಣಾ ಪ್ರಚಾರಕ್ಕಾಗಿ ಸಿದ್ಧಪಡಿಸಿರುವ ವಿಶೇಷ ಬಸ್ ನಲ್ಲಿ ಕೋಲಾರಕ್ಕೆ ಬಂದರು. ಮೊದಲು ನಗರದ ಶಕ್ತಿ ದೇವತೆ ಕೋಲಾರಮ್ಮ ದೇಗುಲಕ್ಕೆ ತೆರಳಿ ಪೂಜೆ ಸಲ್ಲಿಸಿದರು. ದೇಗುಲವನ್ನು ₹4 ಲಕ್ಷ ವೆಚ್ಚದಲ್ಲಿ ಹೂವುಗಳಿಂದ ಸಿಂಗರಿಸಲಾಗಿತ್ತು.

ಆನಂತರ ಮೆಥೋಡಿಸ್ಟ್ ಚರ್ಚ್‌ನಲ್ಲಿ ಕ್ರೈಸ್ತ ಸಮುದಾಯದವರ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಕ್ಲಾಕ್ ಟವರ್ ಬಳಿಯ ದರ್ಗಾಕ್ಕೆ ತೆರಳಿ ಮುಸ್ಲಿಂ ಸಮುದಾಯದವರ ಪ್ರಾರ್ಥನೆಯಲ್ಲಿ ಭಾಗಿಯಾದರು.

### ‘ಕೇಜ್ರಿವಾಲ್ ಸುಳ್ಳು ಪತ್ತೆ ಪರೀಕ್ಷೆಗೆ ಒಳಪಡಲಿ’

**ನವದೆಹಲಿ (ಪಿಟಿಐ):** ದೆಹಲಿ ಅಬಕಾರಿ ನೀತಿ ಹಗರಣ ಸಂಬಂಧ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ವಿರುದ್ಧ ವಾಗ್ದಾಳಿ ಮುಂದುವರಿಸಿರುವ ಬಿಜೆಪಿ, ‘ಕೇಜ್ರಿವಾಲ್ ಅವರು ಸುಳ್ಳು ಪತ್ತೆ ಪರೀಕ್ಷೆಗೆ ಒಳಪಟ್ಟು ಪ್ರಾಮಾಣಿಕತೆಯನ್ನು ಸಾಬೀತುಪಡಿಸಲಿ’ ಎಂದು ಸವಾಲು ಹಾಕಿದೆ.

ಭಾನುವಾರ ಸುದ್ದಿಗೋಷ್ಠಿ ನಡೆಸಿದ ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ, ‘ಕೇಜ್ರಿವಾಲ್ ನಿರ್ದೇಶನದ ‘ಲೂಟೇರಾ’ (ಲೂಟಿಕೋರ) ಸಿನಿಮಾ ರಾಷ್ಟ್ರ ರಾಜಧಾನಿಯಲ್ಲಿ ಹಿಂದಿನ ಎಂಟು ವರ್ಷಗಳಿಂದಲೂ ಪ್ರದರ್ಶನ ಕಾಣುತ್ತಿದೆ’ ಎಂದಿದ್ದಾರೆ.

ರಣವೀರ್ ಸಿಂಗ್ ನಟನೆಯ ‘ಲೂಟೇರಾ’ ಸಿನಿಮಾವನ್ನು ಉಲ್ಲೇಖಿಸಿ ಪೋಸ್ಟರ್‌ವೊಂದನ್ನು ಸಿದ್ಧಪಡಿಸಿರುವ ಬಿಜೆಪಿಯು ಅದರಲ್ಲಿ ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರನ್ನು ‘ಲೂಟಿಕೋರ’ನನ್ನಾಗಿ ಬಿಂಬಿಸಿದೆ. ಈ ಪೋಸ್ಟರ್ ಅನ್ನು ತನ್ನ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿದೆ.

‘ವಂಚಕ ಸುಕೇಶ್ ಚಂದ್ರಶೇಖರ್, ಬಿಜೆಪಿ ನಾಯಕರಂತೆಯೇ ಮಾತನಾಡುತ್ತಿದ್ದಾರೆ. ಹೀಗಾಗಿ ಅವರನ್ನು ಬಿಜೆಪಿಯು ತನ್ನ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ನೇಮಿಸಲಿ’ ಎಂದು ಕೇಜ್ರಿವಾಲ್ ಕುಟುಕಿದ್ದರು.

ಇದಕ್ಕೆ ಪ್ರತಿಕ್ರಿಯಿಸಿರುವ ಪೂನಾವಾಲಾ ಅವರು, ‘ಕೇಜ್ರಿವಾಲ್ ಅಷ್ಟೊಂದು ಪ್ರಾಮಾಣಿಕ ವ್ಯಕ್ತಿಯಾಗಿದ್ದರೆ, ಸಚಿವರಾದ ಸತ್ಯೇಂದರ್ ಜೈನ್ ಹಾಗೂ ಕೈಲಾಶ್ ಗಹಲೋತ್ ಅವರೊಂದಿಗೆ ಸುಳ್ಳು ಪತ್ತೆ ಪರೀಕ್ಷೆ ಎದುರಿಸಲಿ. ಆ ಮೂಲಕ ಸುಕೇಶ್ ಮಾಡಿರುವ ಆರೋಪಗಳೆಲ್ಲಾ ಸುಳ್ಳು ಎಂದು ಸಾಬೀತುಪಡಿಸಲಿ’ ಎಂದು ಸವಾಲು ಹಾಕಿದ್ದಾರೆ.

# ವಿದ್ಯುತ್ ಟವರ್ ಏರಿದ ಎಎಪಿ ಮುಖಂಡ

**ನವದೆಹಲಿ:** ದೆಹಲಿ ಮಹಾನಗರ ಪಾಲಿಕೆ (ಎಂಸಿಡಿ) ಚುನಾವಣೆಯಲ್ಲಿ ಟಿಕೆಟ್ ನಿರಾಕರಿಸಿರುವುದಕ್ಕೆ ಬೇಸರಗೊಂಡು ಎಎಪಿಯ ಮಾಜಿ ಕೌನ್ಸಿಲರ್ ಹಸೀಬ್ ಉಲ್ ಹಸನ್ ಎಂಬುವವರು ಭಾನುವಾರ ವಿದ್ಯುತ್ ಟವರ್ ಹತ್ತಿ ಪ್ರತಿಭಟಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಕ್ಷದ ನಾಯಕರು ₹2ರಿಂದ ₹3 ಕೋಟಿಗೆ ಟಿಕೆಟ್ ಮಾರಾಟ ಮಾಡಿದ್ದಾರೆ ಎಂದು ಹಸೀಬ್ ಅವರು ಗಂಭೀರ ಆರೋಪ ಮಾಡಿದ್ದಾರೆ.

ಚುನಾವಣೆ ಸಂಬಂಧ ನನ್ನ ಬ್ಯಾಂಕ್ ಪಾಸ್‌ಬುಕ್ ಸೇರಿದಂತೆ ಮೂಲ ದಾಖಲೆಗಳನ್ನು ಪಕ್ಷದ ನಾಯಕರಾದ ಅತಿಶಿ, ದುರ್ಗೇಶ್ ಪಾಠಕ್ ಮತ್ತು ಸಂಜಯ್ ಸಿಂಗ್ ಅವರ ಪಡೆದುಕೊಂಡಿದ್ದು ಹಿಂದಿರುಗಿಸಿಲ್ಲ ಎಂದೂ ದೂರಿದ್ದಾರೆ.

‘ಚುನಾವಣೆಗೆ ನಾಮಪತ್ರ ಸಲ್ಲಿಸಲು ಸೋಮವಾರ ಕೊನೆಯ ದಿನವಾಗಿದ್ದು, ನನಗೇನಾದರೂ ಸಂಭವಿಸಿದರೆ ಅದಕ್ಕೆ ದುರ್ಗೇಶ್ ಪಾಠಕ್ ಮತ್ತು ಅತಿಶಿ ಅವರೇ ಜವಾಬ್ದಾರರು’ ಎಂದು ಹಸೀಬ್ ಅವರು ವಿದ್ಯುತ್ ಟವರ್ ಮೇಲಿನಿಂದ ಲೈವ್ ವಿಡಿಯೊದಲ್ಲಿ ಹೇಳಿದ್ದಾರೆ.

ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ತೆರಳಿ ಮನವೊಲಿಸಿದ ಬಳಿಕ ಅವರು ಟವರ್‌ನಿಂದ ಕೆಳಗಿಳಿದಿದ್ದಾರೆ.

‘ಮೂವರು ನಾಯಕರೂ ಭ್ರಷ್ಟರು. ನಾನು ವಿದ್ಯುತ್ ಟವರ್‌ಗೆ ಹತ್ತಿದ ಬಳಿಕವಷ್ಟೇ ಅವರು ನನ್ನ ದಾಖಲೆಗಳನ್ನು ಹಿಂತಿರುಗಿಸಿದ್ದಾರೆ’ ಎಂದಿದ್ದಾರೆ. ಈ ಕುರಿತು ಎಎಪಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಆರ್‌ಎಸ್‌ಎಸ್ ಮುಖಂಡ ಇಂದ್ರೇಶ್ ಕುಮಾರ್ ಹೇಳಿಕೆ

# ‘ಶೇ 99ರಷ್ಟು ಮುಸ್ಲಿಮರು ಹಿಂದೂಸ್ತಾನಿಗಳೇ’

ಇಂದ್ರೇಶ್ ಕುಮಾರ್

**ಠಾಣೆ (ಪಿಟಿಐ):** ‘ಪೂರ್ವಜರು, ಸಂಸ್ಕೃತಿ, ಸಂಪ್ರದಾಯ ಮತ್ತು ನೆಲದ ಮೂಲವನ್ನು ಪರಿಗಣಿಸಿದರೆ ಭಾರತದಲ್ಲಿರುವ ಶೇ 99ರಷ್ಟು ಮುಸಲ್ಮಾನರು ‘ಹಿಂದೂ ಸ್ತಾನಿ’ಗಳೇ ಆಗಿದ್ದಾರೆ’ ಎಂದು ಆರ್‌ಎಸ್‌ಎಸ್ ಮುಖಂಡ ಇಂದ್ರೇಶ್ ಕುಮಾರ್ ಹೇಳಿದ್ದಾರೆ.

**ಮುಖ್ಯಾಂಶಗಳು**
- **ಆರ್‌ಎಸ್‌ಎಸ್ ಎಂಆರ್‌ಎಂ ವಿಭಾಗ ಆಯೋಜಿಸಿದ್ದ ಕಾರ್ಯಕ್ರಮ**
- **ಮೋಹನ್ ಭಾಗವತ್ ಹೇಳಿಕೆ ಸಮರ್ಥನೆ**
- **‘ಎಲ್ಲ ಭಾರತೀಯರ ಡಿಎನ್‌ಎ ಒಂದೇ ಆಗಿದೆ’**

ಪೂರ್ವಜನರನ್ನು ಪರಿಗಣಿಸಿದರೆ ಎಲ್ಲ ಭಾರತೀಯರ ಡಿಎನ್‌ಎ ಒಂದೇ ಆಗಿದೆ ಎಂಬ ಆರ್‌ಎಸ್‌ಎಸ್ ಮುಖ್ಯಸ್ಥರಾದ ಮೋಹನ್ ಭಾಗವತ್ ಅವರ ಅಭಿಪ್ರಾಯವನ್ನು ಅವರು ಇದೇ ಸಂದರ್ಭದಲ್ಲಿ ಸಮರ್ಥಿಸಿಕೊಂಡರು.

ಆರ್‌ಎಸ್‌ಎಸ್‌ನ ಮುಸ್ಲಿಂ ವಿಭಾಗ ಮುಸ್ಲಿಂ ರಾಷ್ಟ್ರೀಯ ಮಂಚ್ (ಎಂಆರ್‌ಎಂ) ಇಲ್ಲಿ ಆಯೋಜಿಸಿದ್ದ ಎರಡು ದಿನದ ಕಾರ್ಯಾಗಾರದ ಸಮಾರೋಪದಲ್ಲಿ ಅವರು ಮಾತನಾಡಿದರು.

ದೇಶಕ್ಕಾಗಿ ಸಲ್ಲಿಸುವ ಕರ್ತವ್ಯವೇ ಪರಮೋಚ್ಚ ಎಂದು ನಾವು ಪರಿಗಣಿಸುತ್ತೇವೆ. ಉಳಿದಂತೆ ಎಲ್ಲವೂ ಪವಿತ್ರ ಗ್ರಂಥ ಕುರ್‌ಆನ್‌ನ ನಿರ್ದೇಶನದಂತೆ ನಡೆಯಲಿದೆ ಎಂದು ಇದ್ರೇಶ್ ಕುಮಾರ್ ಅವರು ಹೇಳಿರುವುದಾಗಿ ಎಂಆರ್‌ಎಂ ಹೇಳಿಕೆ ಬಿಡುಗಡೆ ಮಾಡಿದೆ.

‘ಇಂದ್ರೇಶ್ ಕುಮಾರ್ ಅವರು ಸಮಾನ ಡಿಎನ್‌ಎ ಕುರಿತ ಭಾಗವತ್ ಅವರ ಹೇಳಿಕೆ ಉಲ್ಲೇಖಿಸಿ ಇದರಲ್ಲಿ ‘ಡಿ’ ಎಂಬುದು ಕನಸು (ಡ್ರೀಮ್ಸ್), ‘ಎನ್’ – ರಾಷ್ಟ್ರ (ನೇಷನ್) ‘ಎ’ –ಪೂರ್ವಜರನ್ನು (ಆನ್‌ಸೆಸ್ಟರ್ಸ್) ಬಿಂಬಿಸಲಿದೆ ಎಂದರು’ ಎಂದು ಹೇಳಿಕೆ ತಿಳಿಸಿದೆ.

‘ನಮ್ಮ ಪೂರ್ವಜರು ಸಮಾನರೇ ಆಗಿದ್ದಾರೆ. ಮೂಲವೂ ಒಂದೇ ರಾಷ್ಟ್ರವಾಗಿದೆ. ಹೀಗಾಗಿ, ನಮ್ಮ ಡಿಎನ್‌ಎ ಕೂಡ ಒಂದೇ ಆಗಿದೆ’ ಎಂದು ಆರ್‌ಎಸ್‌ಎಸ್‌ನ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯರು ಆಗಿರುವ ಇಂದ್ರೇಶ್ ಕುಮಾರ್ ಹೇಳಿದರು.

ಉತ್ತರ ಪ್ರದೇಶದ ವಿವಿಧ 40 ನಗರಗಳಿಂದ 250ಕ್ಕೂ ಕಾರ್ಯಕರ್ತರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಎಂಆರ್‌ಎಂನ ರಾಷ್ಟ್ರೀಯ ಸಂಚಾಲಕರಾದ ಇರ್ಫಾನ್ ಅಲಿ ಪಿರ್ಜಾಡೆ, ವಿರಾಗ್ ಪಾಚ್‌ಪೋರೆ ಮತ್ತು ಇತರೆ ಪದಾಧಿಕಾರಿಗಳಿದ್ದರು.

ಎಂಆರ್‌ಎಂ 2002ರಲ್ಲಿ ಸ್ಥಾಪನೆಯಾಗಿದ್ದು, ತ್ರಿವಳಿ ತಲಾಖ್, ಜಮ್ಮು ಮತ್ತು ಕಾಶ್ಮೀರ, ಅಯೋಧ್ಯೆ, ಗೋಹತ್ಯೆ, ಭಯೋತ್ಪಾದನೆ ಸೇರಿ ವಿವಿಧ ವಿಷಯಗಳನ್ನು ಕುರಿತು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ.



**ಮಹಾಭಿಷೇಕ ಮೆರುಗು...** ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಬೆಟ್ಟದ ಬಳಗ ಟ್ರಸ್ಟ್‌ನಿಂದ ಭಾನುವಾರ ನಂದಿ ವಿಗ್ರಹಕ್ಕೆ ಕುಂಕುಮ ಅಭಿಷೇಕ ನೆರವೇರಿಸಲಾಯಿತು

## ಪಂಜಾಬ್: ಶಸ್ತ್ರಾಸ್ತ್ರ ಪ್ರದರ್ಶನ, ಹಿಂಸೆ ಪ್ರಚೋದಿಸುವ ಹಾಡು ನಿಷಿದ್ಧ

**ಚಂಡೀಗಡ (ಪಿಟಿಐ):** ಪಂಜಾಬ್‌ನ ಕಾನೂನು ಸುವ್ಯವಸ್ಥೆ ಬಗ್ಗೆ ವಿರೋಧ ಪಕ್ಷಗಳಿಂದ ವ್ಯಾಪಕ ಟೀಕೆ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ, ಶಸ್ತ್ರಾಸ್ತ್ರಗಳ ಸಾರ್ವಜನಿಕ ಪ್ರದರ್ಶನ ಮತ್ತು ಬಂದೂಕು, ಹಿಂಸೆಯನ್ನು ಉತ್ತೇಜಿಸುವ ಹಾಡುಗಳನ್ನು ಸರ್ಕಾರ ನಿಷೇಧಿಸಿ ಆದೇಶ ಹೊರಡಿಸಿದೆ.

‘ಮುಂದಿನ 3 ತಿಂಗಳ ಒಳಗಾಗಿ ಶಸ್ತ್ರಾಸ್ತ್ರ ಪರವಾನಗಿಯನ್ನು ಪರಿಶೀಲಿಸಲಾಗುತ್ತದೆ. ತಪ್ಪಾದ ವ್ಯಕ್ತಿಗಳಿಗೆ ಪರವಾನಗಿ ನೀಡಿರುವುದು ಪತ್ತೆಯಾದಲ್ಲಿ ಕೂಡಲೇ ಪರವಾನಗಿ ರದ್ದುಪಡಿಸಲಾಗುತ್ತದೆ’ ಎಂದು ಅಧಿಕೃತ ಆದೇಶದಲ್ಲಿ ತಿಳಿಸಿದೆ.

ಸಾರ್ವಜನಿಕ ಸ್ಥಳ, ಧಾರ್ಮಿಕ ಸ್ಥಳ, ವಿವಾಹ ಸಮಾರಂಭ ಮತ್ತಿತರ ಕಾರ್ಯಕ್ರಮಗಳಲ್ಲಿ ಶಸ್ತ್ರಾಸ್ತ್ರ ಕೊಂಡೊಯ್ಯಲು ಮತ್ತು ಪ್ರದರ್ಶಿಸಲು ಸಂಪೂರ್ಣವಾಗಿ ನಿಷೇಧ ಹೇರಲಾಗಿದೆ. ಹಾಗೆಯೇ, ಯಾವುದೇ ಸಮುದಾಯದ ವಿರುದ್ಧ ದ್ವೇಷ ಭಾಷಣ ಮಾಡುವವರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಸೂಚಿಸಲಾಗಿದೆ.

ಮುಂಬರುವ ದಿನಗಳಲ್ಲಿ ರಾಜ್ಯದಾದ್ಯಂತ ವಿವಿಧ ಪ್ರದೇಶಗಳಲ್ಲಿ ಅನಿರೀಕ್ಷಿತ ಶೋಧ ಕಾರ್ಯಾಚರಣೆ ಕೈಗೊಳ್ಳಲಾಗುತ್ತದೆ ಎಂದೂ ತಿಳಿಸಿದೆ.

ರಾಜ್ಯದಲ್ಲಿ ಇತ್ತೀಚೆಗೆ ಶಿವಸೇನಾ ನಾಯಕ ಸುಧೀರ್ ಸೂರಿ ಮತ್ತು ಡೇರಾ ಸಚ್ಚಾ ಸೌದಾ ಅನುಯಾಯಿ ಪರ್ದೀಪ್ ಸಿಂಗ್ ಅವರನ್ನು ಹತ್ಯೆ ಮಾಡಲಾಗಿದೆ.

ಈ ಬೆಳವಣಿಗೆ ನಂತರ ರಾಜ್ಯದ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ವಿರೋಧ ಪಕ್ಷಗಳು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿವೆ.

# ಕೋರ್ಸ್ ಆಯ್ಕೆಗೆ ‘ಮಾರ್ಗದರ್ಶನ’

**ಪೋಷಕರು, ವಿದ್ಯಾರ್ಥಿಗಳು ಏನು ಮಾಡಬೇಕು ?**

| ಪೋಷಕರು | ವಿದ್ಯಾರ್ಥಿಗಳು | ಪೋಷಕರು ಮತ್ತು ವಿದ್ಯಾರ್ಥಿಗಳು |
|---|---|---|
| ಪ್ರೌಢಾವಸ್ಥೆಯ ಮಕ್ಕಳೊಡನೆ ವಿಶ್ವಾಸವನ್ನು ಬೆಳೆಸಿಕೊಳ್ಳಿ. ಜೀವನಪರ್ಯಂತ ಅವರ ಸ್ನೇಹಿತರಂತೆ ವರ್ತಿಸಿ | ವೃತ್ತಿಯ ಆಯ್ಕೆ, ನಿಮ್ಮ ಸನ್ನದ್ಧತೆಯ ಬಗ್ಗೆ ಪೋಷಕರಿಗೆ ಮನವರಿಕೆ ಮಾಡಿ. | ವೃತ್ತಿ ಜೀವನದ ಗುರಿ ಯೋಜನೆಯನ್ನು ಚರ್ಚಿಸಿ. ಒಮ್ಮತದ ನಿರ್ಧಾರಕ್ಕೆ ಬನ್ನಿ |
| ನಿಮ್ಮ ಕನಸುಗಳು ಅಥವಾ ಅಭಿಪ್ರಾಯಗಳನ್ನು ಹೇರಬೇಡಿ. ಪೂರ್ವ-ಸಿದ್ಧತೆಯಿರಲಿ, ಪೂರ್ವ-ನಿರ್ಧಾರ ಬೇಡ | ಸ್ವತಂತ್ರವಾಗಿ ಯೋಚಿಸಿ. ಸಂಪೂರ್ಣ ಸಂಶೋಧನೆ ಮತ್ತು ಆತ್ಮಾವಲೋಕನದ ನಂತರ ವೃತ್ತಿಜೀವನವನ್ನು ನಿರ್ಧರಿಸಿ | ಕೋರ್ಸ್/ವೃತ್ತಿ ಆಯ್ಕೆ ಮಾಡುವಾಗ ಸ್ನೇಹಿತರು, ಸಹಪಾಠಿಗಳ ಸಲಹೆಗಳೇ ನಿರ್ಣಾಯಕವಾಗದಿರಲಿ |
| ಸಾಂಪ್ರದಾಯಿಕ ಕೋರ್ಸ್‌ಗಳಾಚೆಯೂ ಅವಕಾಶಗಳಿವೆ, ಜೀವನವಿದೆ(ಆಫ್‌ಬೀಟ್ ವೃತ್ತಿಗಳು) | ನಿಮ್ಮ ಅಭಿರುಚಿ, ಆಸಕ್ತಿ, ಸಾಮರ್ಥ್ಯ, ದೌರ್ಬಲ್ಯಗಳನ್ನು ಅರ್ಥಮಾಡಿಕೊಳ್ಳಿ, ಕನಿಷ್ಠ ಗಣಿತದ ಅಗತ್ಯವಿರುವ ಎಂಜಿನಿಯರಿಂಗ್ ಕೋರ್ಸ್‌ಗಳೂ ಇವೆ | ಮಾರ್ಗದರ್ಶಕರ ಸಲಹೆಗಳಿಗೆ ಪ್ರಾಮುಖ್ಯತೆ ನೀಡಿ |
| ಯೋಜನೆಗಳು ಅಂದುಕೊಂಡಂತೆ ಆಗದಿದ್ದಾಗ, ಮಕ್ಕಳನ್ನು ಪ್ರೋತ್ಸಾಹಿಸಿ, ಬೆಂಬಲಿಸಿ, ಪ್ರೇರೇಪಿಸಿ | ಪೋಷಕರು ಸದಾ ಕಾಲ ನಿಮ್ಮ ಒಳಿತನ್ನೇ ಬಯಸುವ ಸ್ನೇಹಿತರೆಂದು ಮರೆಯದಿರಿ | ವೃತ್ತಿಯೋಜನೆಯನ್ನು ಕಾರ್ಯಗತಗೊಳಿಸುವಾಗ ಹಿನ್ನಡೆಯಾದರೆ ಒಟ್ಟಾಗಿ, ಆತ್ಮವಿಶ್ವಾಸದಿಂದ ಎದುರಿಸಿ |
| ಮಕ್ಕಳಿಗೆ ನೀಡುವ ಸ್ವಾತಂತ್ರ್ಯ ಮತ್ತು ಮೇಲ್ವಿಚಾರಣೆಯ ನಡುವೆ ಸಮತೋಲನವನ್ನು ಸಾಧಿಸಿ | ಅಧ್ಯಯನ, ಹವ್ಯಾಸಗಳು/ಕ್ರೀಡೆ/ಫಿಟ್‌ನೆಸ್‌ಗಳೊಡನೆ ಸಮತೋಲನವಿರಲಿ | ಅಂತರ್-ವೈಯಕ್ತಿಕ ಸಂಪರ್ಕ, ಸಂವಹನ ನಿರಂತರವಾಗಿರಲಿ. |

**ಪ್ರದೀಪ್ ವೆಂಕಟರಾಮ್**

ಹಲವು ಶಾಲೆಗಳಲ್ಲಿ ಈಗ 10 ಮತ್ತು 12ನೇ (ದ್ವಿತೀಯ ಪಿಯುಸಿ) ತರಗತಿ ವಿದ್ಯಾರ್ಥಿಗಳಿಗೆ ‘ಕೌನ್ಸೆಲಿಂಗ್’ (ಮಾರ್ಗದರ್ಶನ) ನಡೆಯುತ್ತಿದೆ. ಇದು ಕೋರ್ಸ್ ಆಯ್ಕೆ, ವೃತ್ತಿ ಯೋಜನೆ ತಯಾರಿ ಸೇರಿದಂತೆ ಭವಿಷ್ಯದ ‘ಶೈಕ್ಷಣಿಕ ಪಯಣ’ಕ್ಕೆ ವಿದ್ಯಾರ್ಥಿಗಳಿಗೆ ಮಾರ್ಗ ತೋರುವ ಕಾರ್ಯಕ್ರಮ. ತಜ್ಞರು, ವಿದ್ಯಾರ್ಥಿಗಳು-ಪೋಷಕರೊಂದಿಗೆ ಚರ್ಚೆ ನಡೆಸಿ, ಇಬ್ಬರಲ್ಲೂ ಇಬಹುದಾದ ಆತಂಕ, ಗೊಂದಲಗಳನ್ನು ನಿವಾರಿಸಿ, ಸೂಕ್ತವಾದ ವೃತ್ತಿ ಮತ್ತು ಕೋರ್ಸ್ ಆಯ್ಕೆಗೆ ನೆರವಾಗುತ್ತಾರೆ.

## ಈ ಪ್ರಕ್ರಿಯೆ ಹೇಗಿರುತ್ತದೆ

ಸಾಮಾನ್ಯವಾಗಿ, ಶಾಲಾ ಕಾಲೇಜುಗಳಲ್ಲಿ ನಡೆಸುವ ಸಮೂಹ ಮಾರ್ಗದರ್ಶನ ಅಥವಾ ವೈಯಕ್ತಿಕ ಮಾರ್ಗದರ್ಶನದಲ್ಲಿ (ಒನ್ ಟು ಒನ್) ಮಾರ್ಗದರ್ಶಕರು ಹೀಗೆ ವಿಶ್ಲೇಷಿಸುತ್ತಾರೆ;

> ಶಾಲೆಗಳಲ್ಲಿ ಈಗ 10 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳಿಗೆ ಕೋರ್ಸ್ ಮತ್ತು ವೃತ್ತಿ ಆಯ್ಕೆಗೆ ಮಾರ್ಗದರ್ಶನ (ಕೌನ್ಸೆಲಿಂಗ್) ನೀಡುವ ಪ್ರಕ್ರಿಯೆ. ಆ ಪ್ರಕ್ರಿಯೆ ಹೇಗಿರುತ್ತದೆ? ವಿದ್ಯಾರ್ಥಿಗಳು- ಪೋಷಕರು ಹೇಗೆ ಸಿದ್ಧರಾಗಬೇಕು? ಇಲ್ಲಿದೆ ಮಾಹಿತಿ

## ವಿದ್ಯಾರ್ಥಿಯ ಮೌಲ್ಯಮಾಪನ

ವಿದ್ಯಾರ್ಥಿಯ ಜ್ಞಾನ ಮೌಲ್ಯಮಾಪನ ಮಾಡಲು ಆಪ್ಟಿಟ್ಯೂಡ್ ಟೆಸ್ಟ್ ಮಾಡಲಾಗುತ್ತದೆ. ಮೌಖಿಕ ಮತ್ತು ಅಮೌಖಿಕ ತಾರ್ಕಿಕತೆ, ಯಾಂತ್ರಿಕ ತಾರ್ಕಿಕತೆ, ಅಮೂರ್ತ ತಾರ್ಕಿಕತೆ, ಭಾಷಾ ಸಾಮರ್ಥ್ಯ, ಪರಿಮಾಣಾತ್ಮಕ ಸಾಮರ್ಥ್ಯ, ಜ್ಞಾಪಕ ಶಕ್ತಿ, ಸಾಮಾನ್ಯ ಜ್ಞಾನ ಇತ್ಯಾದಿಗಳನ್ನು ಪರೀಕ್ಷಿಸಲಾಗುತ್ತದೆ. ವಿದ್ಯಾರ್ಥಿಯ ಪ್ರತಿಭೆ, ಅಭಿರುಚಿ, ಆಸಕ್ತಿ, ಧೋರಣೆಗಳನ್ನು ಪರಿಗಣಿಸಿ, ವ್ಯಕ್ತಿತ್ವದ ಗುಣಲಕ್ಷಣಗಳನ್ನು ಗುರುತಿಸಿ, ಸೂಕ್ತವಾದ ವೃತ್ತಿ/ಕೋರ್ಸ್‌ಗಳನ್ನು ಸೂಚಿಸಲಾಗುತ್ತದೆ.

## ವಿದ್ಯಾರ್ಥಿಗಳ ಆಕಾಂಕ್ಷೆಗಳ ಪರಿಶೀಲನೆ

ಮಕ್ಕಳಿಗೆ ಚಿಕ್ಕವಯಸ್ಸಿನಲ್ಲೇ ಪೈಲಟ್, ಡಾಕ್ಟರ್, ಎಂಜಿನಿಯರ್ ಆಗುವ ಆಸೆಗಳಿರುತ್ತವೆ. ಪ್ರೌಢಾವಸ್ಥೆಗೆ ಬರುತ್ತಿದ್ದಂತೆ ಇಂತಹ ಕನಸುಗಳು ಗಟ್ಟಿಯಾಗುವುದೂ, ಬೇರೊಂದು ಕನಸುಗಳನ್ನು ಕಾಣುವುದೂ ಸಹಜ. ಹಾಗಾಗಿ, 10/12ನೇ ತರಗತಿಯ ಮಕ್ಕಳಿಗೆ ಅಗತ್ಯವಾದ ಅಭಿರುಚಿ, ಆಸಕ್ತಿ, ಕೌಶಲಗಳಿವೆಯೇ ಎಂದು ಮೌಲ್ಯಮಾಪನ ಮಾಡಬೇಕಾಗುತ್ತದೆ.

## ಪೋಷಕರ ಆಕಾಂಕ್ಷೆಗಳ ಪರಾಮರ್ಶೆ

- ಪೋಷಕರು ತಾವು ಅನುಸರಿಸುತ್ತಿರುವ ಅಥವಾ ಅನುಸರಿಸಬೇಕೆಂದಿದ್ದ ವೃತ್ತಿಯನ್ನು ಹೇರುವ ಧೋರಣೆಯನ್ನು ಇನ್ನೂ ಗಮನಿಸುತ್ತಿದ್ದೇವೆ. ಇದು ಯಾವ ಸಂದರ್ಭದಲ್ಲಿ ಮಾತ್ರ ಸೂಕ್ತವೆಂದು ಮಾರ್ಗದರ್ಶಕರು ವಿಶ್ಲೇಷಿಸುತ್ತಾರೆ.

## ಕೌಟುಂಬಿಕ ಹಿನ್ನೆಲೆಯೇನು?

- ಕುಟುಂಬದ ಮೌಲ್ಯಗಳು, ಅವಕಾಶಗಳು, ಸವಾಲುಗಳಿಗೂ ವೃತ್ತಿ/ಕೋರ್ಸ್ ಆಯ್ಕೆಗೂ ಹೊಂದಾಣಿಕೆಯಿರಬೇಕು. ಇಲ್ಲದಿದ್ದರೆ, ಭವಿಷ್ಯದಲ್ಲಿ ಆಂತರಿಕ ಸಂಘರ್ಷದಿಂದ ಜೀವನದಲ್ಲಿ ಅತೃಪ್ತಿಯಾಗಬಹುದು. ಹಾಗಾಗಿ, ಕುಟುಂಬ ಹಿನ್ನೆಲೆ ಪರಿಶೀಲಿಸಿ, ಅದಕ್ಕೆ ತೊಂದರೆಯಾಗದಂತೆ ಮಾರ್ಗದರ್ಶಕರು ಸಲಹೆ ನೀಡುತ್ತಾರೆ.

## ಯಾವ ವೃತ್ತಿ/ಕೋರ್ಸ್?

- ಮೇಲಿನ ಎಲ್ಲಾ ಅಂಶಗಳನ್ನು ವಿಶ್ಲೇಷಿಸಿ, ಯಾವ ಕೋರ್ಸ್, ವೃತ್ತಿ ಸೂಕ್ತ ಹಾಗೂ ಯಾವ ವೃತ್ತಿ ಸರಿಹೊಂದುವುದಿಲ್ಲ ಎಂಬ ಮಾರ್ಗದರ್ಶಕರು ತಿಳಿಸುತ್ತಾರೆ.

ಈ ಅಭಿಪ್ರಾಯಗಳನ್ನು ವಿದ್ಯಾರ್ಥಿಗಳಿಗೂ, ಪೋಷಕರಿಗೂ ಮನವರಿಕೆ ಮಾಡುವಾಗ ಸವಾಲಾಗುವುದೂ ಉಂಟು. ಏಕೆಂದರೆ, ಪೋಷಕರು ತಮ್ಮ ಮಕ್ಕಳನ್ನು ಯಾವ ವೃತ್ತಿ/ಕೋರ್ಸ್‌ಗೆ ಸೇರಿಸಬೇಕೆಂದು ಮೊದಲೇ ನಿರ್ಧರಿಸಿ ಮಾರ್ಗದರ್ಶನ ಪ್ರಕ್ರಿಯೆಯಲ್ಲಿ ಭಾಗಿಯಾಗುವುದುಂಟು. ಈ ಸಂದರ್ಭದಲ್ಲಿ, ಪ್ರತಿಷ್ಠಿತ ಪಿಯುಸಿ ಕಾಲೇಜಿನಲ್ಲಿ ನಡೆದ ಒಂದು ಘಟನೆಯನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ.

ಘಟನೆ ಹೀಗಿದೆ; ಶ್ರೀಮಂತ ಕುಟುಂಬದ ಪೋಷಕರೊಬ್ಬರು(ತಂದೆ), ತನ್ನ ಮಗಳನ್ನು ವೈದ್ಯಳನ್ನಾಗಿ ಮಾಡಬೇಕೆನ್ನುವ ಪೂರ್ವ-ನಿರ್ಧಾರದಿಂದಲೇ ಮಾರ್ಗದರ್ಶನಕ್ಕಾಗಿ ಬಂದಿದ್ದರು. ಆದರೆ, ವಿದ್ಯಾರ್ಥಿನಿಗೆ ವೈದ್ಯಕೀಯ ವೃತ್ತಿಗೆ ಬೇಕಾದ ಕೌಶಲಗಳು, ಅಭಿರುಚಿ, ಆಸಕ್ತಿಯಿರಲಿಲ್ಲ. ಜೊತೆಗೆ ಹೆಚ್ಚಿನ ಸಂಕೋಚ, ಅಂಜಿಕೆ. ನೀಟ್ ಪ್ರವೇಶ ಪರೀಕ್ಷೆಯಲ್ಲಿ ಮೆರಿಟ್ ಸೀಟ್ ಸಿಗುವ ಯಾವ ಸಾಧ್ಯತೆಯೂ ಇರಲಿಲ್ಲ. ‘ತಾನು ವೈದ್ಯಕೀಯ ವೃತ್ತಿ ನಿಭಾಯಿಸಲಾರೆ’ ಎಂಬುದು ಆಕೆಯ ಅಭಿಪ್ರಾಯವಾಗಿತ್ತು. ತಂದೆಗೆ, ಎಷ್ಟಾದರೂ ಡೊನೇಷನ್ ಕೊಟ್ಟು ಮಗಳನ್ನು ಓದಿಸಬೇಕೆಂಬ ಹಟ. ಮಾರ್ಗದರ್ಶಕರಾದ ನಮ್ಮದೂ, ವಿದ್ಯಾರ್ಥಿನಿಯ ಅಭಿಪ್ರಾಯವೇ ಆಗಿತ್ತು. ಕೊನೆಗೂ, ಮಗಳನ್ನು ವೈದ್ಯಳನ್ನಾಗಿ ಮಾಡಬೇಕೆಂಬ ತಂದೆಯ ನಿರ್ಧಾರವನ್ನು ಬದಲಿಸಲು ಹೆಣಗಾಡಬೇಕಾಯಿತು. ಹೀಗೆ ಕೌನ್ಸೆಲರ್‌ಗಳ ಅಭಿಪ್ರಾಯ ಸ್ವೀಕರಿಸದೇ, ಅದಕ್ಕೆ ತದ್ವಿರುದ್ಧವಾಗಿ ತೆಗೆದುಕೊಂಡ ಪೋಷಕರ ಕೆಲವು ನಿರ್ಧಾರಗಳು ತಪ್ಪಾಗಿರುವ ಉದಾಹರಣೆಗಳು ಸಾಕಷ್ಟಿವೆ.

ಹಾಗಾದರೆ, ವಿದ್ಯಾರ್ಥಿಗಳು ಮತ್ತು ಪೋಷಕರು, ಮಾರ್ಗದರ್ಶಕರು ನೀಡುವ ಸಲಹೆಗಳನ್ನು ಬಳಸಿಕೊಳ್ಳಲು ಯಾವ ರೀತಿ ಸಿದ್ಧರಾಬೇಕು. ಅದಕ್ಕೆ ಇಲ್ಲಿದೆ ಮಾಹಿತಿ;

## ವಿದ್ಯಾರ್ಥಿಗಳ, ಪೋಷಕರ ಪೂರ್ವ-ಸಿದ್ಧತೆಗಳು

- ಶಿಕ್ಷಣದ ಪ್ರಾಮುಖ್ಯವನ್ನು ವಿದ್ಯಾರ್ಥಿಗಳೂ, ಪೋಷಕರೂ ಅರಿತು, ಮುಕ್ತ ಮನಸ್ಸಿನಿಂದ ಚರ್ಚಿಸಿ, ವೃತ್ತಿಜೀವನದ ಆಯ್ಕೆಗಳನ್ನು ಪರಿಗಣಿಸಿ, ಮಾರ್ಗದರ್ಶನದ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು.
- ಮಕ್ಕಳಿಗೂ ಪೋಷಕರಿಗೂ ವಿಚಾರ ವಿನಿಮಯ ಮಾಡಲು ಸಕಾರಾತ್ಮಕವಾದ ಪರಿಸರವಿರಬೇಕು. ಒಬ್ಬರನ್ನೊಬ್ಬರು ನಿಂದಿಸದೆ, ಆರೋಗ್ಯಕರವಾಗಿ ಚರ್ಚೆಯಾಗಬೇಕು.
- ವೃತ್ತಿ/ಕೋರ್ಸ್/ಕಾಲೇಜು ಕುರಿತ ಅಪಾರವಾದ ಮಾಹಿತಿ ಜಾಲತಾಣದಲ್ಲಿ ಲಭ್ಯ. ಈ ಮಾಹಿತಿಯನ್ನು ಕಲೆಹಾಕಿ ವಿಶ್ಲೇಷಣೆ ಮಾಡಿದರೆ, ಎಲ್ಲಾ ಸಾಧ್ಯತೆಗಳು ಬೆಳಕಿಗೆ ಬಂದು, ಒಮ್ಮತದ ನಿರ್ಧಾರಕ್ಕೆ ಬರಬಹುದು.
- ನಿಮ್ಮ ನಿರ್ಧಾರ ಕುರಿತ ಸಂದೇಹಗಳು, ಸವಾಲುಗಳು, ಗೊಂದಲಗಳು ಸ್ವಾಭಾವಿಕ. ಇವುಗಳನ್ನು ಮಾರ್ಗದರ್ಶಕರೊಡನೆ ಚರ್ಚಿಸಬೇಕು.

## ಅಂತಿಮ ನಿರ್ಧಾರ ಹೇಗೆ?

ಮಾರ್ಗದರ್ಶನದ ಅಂತಿಮ ಘಟ್ಟದಲ್ಲಿ ಸೂಕ್ತವಾದ ವೃತ್ತಿ ಮತ್ತು ಕೋರ್ಸ್ ಮಾರ್ಗಸೂಚಿಯನ್ನು ನೀಡಲಾಗುತ್ತದೆ. ಮಾರ್ಗದರ್ಶಕರೊಡನೆ ಸಮಾಲೋಚಿಸಿ ಎರಡು ಆಯ್ಕೆಗಳನ್ನು (ಪ್ಲಾನ್ ಎ, ಪ್ಲಾನ್ ಬಿ) ಗಮನದಲ್ಲಿಟ್ಟುಕೊಳ್ಳುವುದು ಸೂಕ್ತ.

ಸಾಮಾನ್ಯವಾಗಿ, ಮಾರ್ಗದರ್ಶನ ಪ್ರಕ್ರಿಯೆಗೂ ಕೋರ್ಸ್ ಪ್ರವೇಶಕ್ಕೂ ಅಂತರವಿರುವುದು ಸಹಜ. ಹಾಗಾಗಿ, ಅಂತಿಮ ನಿರ್ಧಾರ ತೆಗೆದುಕೊಳ್ಳುವಾಗ ಮಾರ್ಗದರ್ಶಕರ ಸಲಹೆ, ಸೂಚನೆಗಳನ್ನು, ಅಗತ್ಯವಿದ್ದಲ್ಲಿ ಇನ್ನೊಮ್ಮೆ ವಿಶ್ಲೇಷಿಸಬಹುದು. ಆದರೆ, ನಿರ್ಧಾರಗಳು ಕೇವಲ ಭಾವನಾತ್ಮಕವಾಗಿರದೆ ತರ್ಕಬದ್ಧವಾಗಿರಲಿ.

ನಮ್ಮ ಬದುಕಿಗೊಂದು ಕೈಪಿಡಿ ಇಲ್ಲ; ಯಶಸ್ಸಿಗೆ ಇಂತದ್ದೇ ವೃತ್ತಿ ಮಾಡಬೇಕೆನ್ನುವ ನಿಯಮವಿಲ್ಲ. ಆದರೆ, ವೃತ್ತಿಯನ್ನು ನಮ್ಮ ಅಭಿರುಚಿಯಂತೆ, ಆಸಕ್ತಿಯಂತೆ ಆರಿಸಿ, ಪರಿಶ್ರಮದಿಂದ ಅನುಸರಿಸಿದರೆ, ಬದುಕಿನಲ್ಲಿ ಯಶಸ್ಸು, ಸಂತೃಪ್ತಿ ಸಿಗುವುದರಲ್ಲಿ ಸಂದೇಹವಿಲ್ಲ.

(ಲೇಖಕರು ಶಿಕ್ಷಣ ತಜ್ಞರು ಮತ್ತು ವೃತ್ತಿ ಸಲಹೆಗಾರರು)

---

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



**ಪ್ರದೀಪ್ ಕುಮಾರ್ ವಿ.**

## ಸಪ್ಲೈಚೈನ್ ಬೇಡಿಕೆಯಲ್ಲಿರುವ ಕ್ಷೇತ್ರ

**1. ನಾನು ಬಿಇ (ಎಲೆಕ್ಟ್ರಾನಿಕ್ಸ್ ಅಂಡ್ ಟೆಲಿಕಮ್ಯುನಿಕೇಷನ್) ಮಾಡಿದ್ದೇನೆ. ಆರಂಭದಲ್ಲಿ, ಮೂರು ವರ್ಷ ದತ್ತಾಂಶ ಸಂಗ್ರಹ ಸಂಸ್ಥೆಯಲ್ಲಿ ಕೆಲಸ ಮಾಡಿದೆ. ನಂತರ, ಅನಿವಾರ್ಯ ಕಾರಣಗಳಿಂದ ಸಪ್ಲೈ ಚೈನ್ ವಿಭಾಗದಲ್ಲಿ ಕೆಲಸ ಮಾಡಿದೆ. ಈಗ, ಕೆಲಸವಿಲ್ಲದೆ ಇದ್ದೇನೆ. ಸಪ್ಲೈ ಚೈನ್ ಕ್ಷೇತ್ರವನ್ನೇ ಆರಿಸಿಕೊಳ್ಳಲೇ? ಇದಕ್ಕಾಗಿ ಯಾವ ಕೋರ್ಸ್ ಮಾಡಬೇಕು? ಹೇಗೆ ಮುಂದುವರಿಯಬೇಕೋ ತಿಳಿಯುತ್ತಿಲ್ಲ. ಮಾರ್ಗದರ್ಶನ ಮಾಡಬಹುದೇ?**

**ಹೆಸರು, ಊರು ತಿಳಿಸಿಲ್ಲ.**

ನೀವು ಓದಿರುವ ಕೋರ್ಸಿಗೂ ಈವರೆಗೆ ಮಾಡಿರುವ ಉದ್ಯೋಗಕ್ಕೂ ನೇರವಾದ ಸಂಬಂಧವಿಲ್ಲ; ಆದರೆ ಚಿಂತೆಯಿಲ್ಲ. ನಮ್ಮ ಅಭಿಪ್ರಾಯದಂತೆ, ನಿಮ್ಮ ವೃತ್ತಿಜೀವನವನ್ನು ರೂಪಿಸಿಕೊಳ್ಳಲು ಮೂರು ಮಾರ್ಗಗಳಿವೆ:

- ದತ್ತಾಂಶ ಸಂಗ್ರಹ, ಪರಿಷ್ಕರಣೆ ಮತ್ತು ನಿರ್ವಹಣೆ ಬೇಡಿಕೆಯಲ್ಲಿರುವ ಕ್ಷೇತ್ರ. ಹಾಗಾಗಿ, ಈ ಕ್ಷೇತ್ರದಲ್ಲಿ ನಿಮ್ಮ ಅನುಭವದ ಆಧಾರದ ಮೇಲೆ, ಉದ್ಯೋಗವನ್ನು ಅರಸುವ ಸಾಧ್ಯತೆಯನ್ನು ಪರಿಶೀಲಿಸಿ. ಜೊತೆಗೆ ಸಂಜೆ ಕಾಲೇಜು/ಆನ್‌ಲೈನ್ ಮುಖಾಂತರ ಡೇಟಾ ಅನಲಿಟಿಕ್ಸ್ ಡಿಪ್ಲೊಮಾ ಕೋರ್ಸ್/ಎಂಬಿಎ (ಡೇಟಾ ಅನಲಿಟಿಕ್ಸ್) ಮಾಡಬಹುದು.
- ಸಪ್ಲೈ ಚೈನ್ ಕೂಡಾ ಬೇಡಿಕೆಯಲ್ಲಿರುವ ಕ್ಷೇತ್ರ. ಈ ಕ್ಷೇತ್ರದಲ್ಲಿ ಉದ್ಯೋಗವನ್ನು ಮಾಡುತ್ತಾ ಸಂಜೆ ಕಾಲೇಜು/ಆನ್‌ಲೈನ್ ಮುಖಾಂತರ ಎಂಬಿಎ (ಸಪ್ಲೈ ಚೈನ್) ಮಾಡಿ ವೃತ್ತಿಜೀವನವನ್ನು ರೂಪಿಸಿಕೊಳ್ಳಬಹುದು.
- ತಂತ್ರಜ್ಞಾನ ಕ್ಷೇತ್ರದಲ್ಲಿ ಇನ್ನೂ ಆಸಕ್ತಿಯಿದ್ದರೆ, ಎಂಇ/ಎಂಟೆಕ್ ಮಾಡಬಹುದು.

ವೃತ್ತಿಯೋಜನೆಯನ್ನು ಮಾಡುವ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/@ExpertCareerConsultantAuthor

**2. ಪತ್ರಿಕೋದ್ಯಮ ಕೋರ್ಸ್ ಮಾಡಿ ಕೆಲಸವಿಲ್ಲದೆ ಇದ್ದೇನೆ. ಒಳ್ಳೆಯ ಕಂಪನಿಯಲ್ಲಿ ಕೆಲಸ ಮಾಡಬೇಕು ಅಂದುಕೊಂಡಿದ್ದೇನೆ. ಮಾರ್ಗದರ್ಶನ ಮಾಡಿ ಸರ್.**

**ಹೆಸರು, ಊರು ತಿಳಿಸಿಲ್ಲ.**

ವೃತ್ತಿ ಜೀವನದಲ್ಲಿ ಯಶಸ್ವಿಯಾಗಬೇಕೆಂಬ ಹಂಬಲದ ಜೊತೆಗೆ ಆ ಕನಸುಗಳನ್ನು ಸಾಕಾರಗೊಳಿಸಲು ಸಕಾರಾತ್ಮಕವಾಗಿ ಪರಿಶ್ರಮ ಪಡಬೇಕಾಗುತ್ತದೆ. ಮಾಧ್ಯಮ ಕ್ಷೇತ್ರದಲ್ಲಿ ವೃತ್ತಿ ಜೀವನವನ್ನು ರೂಪಿಸಿಕೊಳ್ಳಲು ಪತ್ರಿಕೋದ್ಯಮ ಕೋರ್ಸ್ ಜೊತೆಗೆ ವೃತ್ತಿ ಸಂಬಂಧಿತ ಕೌಶಲಗಳಾದ ಸಂವಹನ (ಓದುವಿಕೆ, ಬರವಣಿಗೆ, ಮಾತುಗಾರಿಕೆ, ನಿರೂಪಣೆ ಇತ್ಯಾದಿ), ಭಾಷಾ ಪರಿಣತಿ, ವಿಶ್ಲೇಷಾತ್ಮಕ ಕೌಶಲ, ದಿಟ್ಟತನ, ಸಮಯದ ನಿರ್ವಹಣೆ ಇತ್ಯಾದಿಗಳನ್ನೂ ಬೆಳೆಸಿಕೊಳ್ಳಬೇಕು. ಯಾವುದೇ ವಿಚಾರವನ್ನು ಒಪ್ಪಿಕೊಳ್ಳುವ ಮುನ್ನ ತನಿಖೆ ಅಥವಾ ಪರಿಶೋಧನೆ ಮಾಡುವ ಮನಸ್ಥಿತಿ ಇರಬೇಕು. ಅತ್ಯಂತ ವಿಸ್ತಾರವಾದ ಈ ಕ್ಷೇತ್ರದಲ್ಲಿ ಮುದ್ರಣ ಮಾಧ್ಯಮ (ದಿನ ಪತ್ರಿಕೆಗಳು, ನಿಯತಕಾಲಿಕೆಗಳು ಇತ್ಯಾದಿ), ಟೆಲಿವಿಷನ್, ರೇಡಿಯೊ, ಸಾಮಾಜಿಕ ಮಾಧ್ಯಮ, ವೆಬ್‌ಸೈಟ್ಸ್, ಬ್ಲಾಗ್ಸ್, ವಿಡಿಯೊ, ಪಾಡ್‌ಕಾಸ್ಟ್ ಇತ್ಯಾದಿ ವಲಯಗಳಿವೆ.

**3. 2013ರಲ್ಲಿ ಬಿಸಿಎ ಮುಗಿಸಿದ್ದೇನೆ. 31 ವರ್ಷವಾಗಿದ್ದು, ಮದುವೆಯಾಗಿದ್ದೇನೆ. ಈಗ, ನನಗೆ ಉದ್ಯೋಗದ ಅವಶ್ಯಕತೆ ಇದೆ; ಆದರೆ, ಯಾವುದೇ ಕೆಲಸ ಸಿಗುತ್ತಿಲ್ಲ. ಈಗ ಏನು ಮಾಡಬೇಕು ತಿಳಿಯುತ್ತಿಲ್ಲ. ಮರಳಿ ಕೆಲಸ ಪಡೆಯಲು ಯಾವುದಾದರೂ ಕೋರ್ಸ್ ಮಾಡಬೇಕೆ? ದಯವಿಟ್ಟು ತಿಳಿಸಿ ಸರ್.**

**ಹೆಸರು, ಊರು ತಿಳಿಸಿಲ್ಲ.**

ಬದುಕಿನಲ್ಲಿ ಮುನ್ನಡೆಯಬೇಕು ಎನ್ನುವುದರ ಜೊತೆಗೆ ಸ್ಪಷ್ಟವಾದ ಗುರಿಯಿರಬೇಕು; ಅದನ್ನು ಸಾಧಿಸುವ ಆತ್ಮವಿಶ್ವಾಸವಿರಬೇಕು. ಐಟಿ ವಿಸ್ತಾರವಾದ ಕ್ಷೇತ್ರ. ಈ ಕ್ಷೇತ್ರದಲ್ಲಿರುವ ಆಕರ್ಷಕ ಮತ್ತು ವೈವಿಧ್ಯಮಯ ಉದ್ಯೋಗಾವಕಾಶಗಳನ್ನು ಬಳಸಿಕೊಳ್ಳಲು ವೃತ್ತಿಯೋಜನೆಯಿರಬೇಕು. ಆದ್ದರಿಂದ, ನಿಮ್ಮ ಸ್ವಾಭಾವಿಕ ಪ್ರತಿಭೆ, ಆಸಕ್ತಿ, ಅಭಿರುಚಿಯಂತೆ ವೃತ್ತಿಯೋಜನೆಯನ್ನು ಮಾಡಿದರೆ ನಿಮಗೆ ಯಾವ ಕ್ಷೇತ್ರ ಸೂಕ್ತವೆಂದು ಅರಿವಾಗುತ್ತದೆ. ಕ್ಷೇತ್ರದ ಆಯ್ಕೆಗೆಅನುಗುಣವಾಗಿ ಪ್ರೋಗ್ರಾಮಿಂಗ್, ಡೇಟಾ ಸೈಂಟಿಸ್ಟ್, ವೆಬ್ ಡೆವಲಪ್‌ಮೆಂಟ್, ಡಿಜಿಟಲ್ ಮಾರ್ಕೆಟಿಂಗ್, ಪ್ರಾಡಕ್ಟ್ ಮ್ಯಾನೇಜ್‌ಮೆಂಟ್, ಬ್ಲಾಕ್‌ಚೈನ್ ಮುಂತಾದಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸರ್ಟಿಫಿಕೆಟ್/ಡಿಪ್ಲೊಮಾ ಕೋರ್ಸ್ ಮಾಡಿದ ನಂತರ ಉದ್ಯೋಗವನ್ನು ಅರಸಬಹುದು.ಈಗ ಮನೆಯಿಂದಲೇ ಮಾಡಬಹುದಾದ ಅನೇಕ ವೃತ್ತಿಗಳೂ ಇವೆ.

ಉದಾಹರಣೆಗೆ, ವೆಬ್ ಡೆವಲಪ್‌ಮೆಂಟ್, ಯುಎಕ್ಸ್ ಡಿಸೈನರ್, ದತ್ತಾಂಶ ನಿರ್ವಹಣೆ, ವಿಷಯಾಭಿವೃದ್ಧಿ, ಅನುವಾದ, ಸಬ್‌ಟೈಟಲ್ಸ್, ಟ್ರಾನ್ಸ್ಕ್ರಿಪ್ಷನ್ ಇತ್ಯಾದಿಅವಕಾಶಗಳಿವೆ. ಹಾಗೂ, ನಿಮ್ಮ ವಯಸ್ಸಿಗೆ ಅನುಗುಣವಾಗಿ ಲಭ್ಯವಿರುವ ಸರ್ಕಾರಿ ವಲಯದ ಅವಕಾಶಗಳನ್ನೂ ಪರಿಶೀಲಿಸಿ.

ವೃತ್ತಿ ಸಂದರ್ಶನದಲ್ಲಿ ಸಫಲತೆಯನ್ನು ಪಡೆಯಲು ಸೂಕ್ತವಾದ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳಿ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=T_z3ngIeyWk

**ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ**

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

**ತಿದ್ದುಪಡಿ:** ಕಳೆದ ವಾರದ ಪ್ರಶ್ನೋತ್ತರದಲ್ಲಿ ಜಿಪಿಎಸ್‌ಟಿಆರ್ ಪರೀಕ್ಷೆಯ ಭಾಷಾ ಸಾಮರ್ಥ್ಯ ಪತ್ರಿಕೆಯ ಗರಿಷ್ಠ ಅಂಕಗಳು 150 ಎಂದು ತಿಳಿಸಲಾಗಿತ್ತು. ವಾಸ್ತವವಾಗಿ, ಈ ಪತ್ರಿಕೆಯ ಗರಿಷ್ಠ ಅಂಕಗಳು 100.

---

**ವಿದ್ಯಾರ್ಥಿ ವೇತನ ಕೈಪಿಡಿ**

## ಎಚ್‌ಡಿಎಫ್‌ಸಿ ಬಡ್ತೇ ಕದಮ್ ಸ್ಕಾಲರ್‌ಶಿಪ್ 2022-23

**ವಿವರ:** ಎಚ್‌ಡಿಎಫ್‌ಸಿ ಬಡ್ತೇ ಕದಮ್ ವಿದ್ಯಾರ್ಥಿವೇತನವು ಹಿಂದುಳಿದ ಹಿನ್ನೆಲೆಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತಮ್ಮ ಶಿಕ್ಷಣವನ್ನು ಮುಂದುವರಿಸಲು ಮತ್ತು ಪೂರ್ಣಗೊಳಿಸಲು ಸಹಾಯ ಮಾಡಲು ಹಣಕಾಸಿನ ನೆರವು ನೀಡುವ ಗುರಿಯನ್ನು ಹೊಂದಿದೆ. 11-12 ನೇ ತರಗತಿ, ಪದವಿಪೂರ್ವ ಕೋರ್ಸ್‌ಗಳು ಮತ್ತು ಸ್ಪರ್ಧಾತ್ಮಕ ಪರೀಕ್ಷೆಯ ತರಬೇತಿಯನ್ನು ಅನುಸರಿಸುತ್ತಿರುವ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ.

**ಅರ್ಹತೆ**

- ಪ್ರಸ್ತುತ 11 ರಿಂದ ಪದವಿಪೂರ್ವ (ಸಾಮಾನ್ಯ ಮತ್ತು ವೃತ್ತಿಪರ) ತರಗತಿಯಲ್ಲಿ ಓದುತ್ತಿರುವ ಭಾರತೀಯ ವಿದ್ಯಾರ್ಥಿಗಳು.
- 11-12 ನೇ ತರಗತಿಯಲ್ಲಿ ಅಧ್ಯಯನ ಮಾಡುತ್ತಿರುವ, ಪದವಿಪೂರ್ವ ಕೋರ್ಸ್‌ಗಳು, ಡಿಪ್ಲೊಮಾ/ಐಟಿಐ ಮತ್ತು ವೃತ್ತಿಪರ ಕೋರ್ಸ್‌ಗಳನ್ನು ಅನುಸರಿಸುತ್ತಿರುವ ವಿಕಲಾಂಗ ವಿದ್ಯಾರ್ಥಿಗಳು.
- ಮಾನ್ಯತೆ ಪಡೆದ ಕೋಚಿಂಗ್ ಸಂಸ್ಥೆಯಲ್ಲಿ ನೀಟ್, ಜೆಇಇ, ಕ್ಲಾಟ್ ಮತ್ತು ನಿಫ್ಟ್ ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ಅಭ್ಯರ್ಥಿಗಳು.
- ಹಿಂದಿನ ತರಗತಿ ಅಥವಾ ಬೋರ್ಡ್ ಪರೀಕ್ಷೆಗಳಲ್ಲಿ ಕನಿಷ್ಠ 60 % ಅಂಕಗಳನ್ನು (ಕೋಚಿಂಗ್ ವಿದ್ಯಾರ್ಥಿಗಳಿಗೆ 80 %) ಪಡೆದಿರಬೇಕು (ಗಮನಿಸಿ: ವಿಕಲಾಂಗ ವಿದ್ಯಾರ್ಥಿಗಳಿಗೆ ಕನಿಷ್ಠ ಅಂಕಗಳ ಅಗತ್ಯವಿಲ್ಲ).
- ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ರೂ. 6,00,000 ಕ್ಕಿಂತ ಕಡಿಮೆಯಿರಬೇಕು. (ಅಂಗವಿಕಲ ವಿದ್ಯಾರ್ಥಿಗಳಿಗೆ, ರೂ.8,00,000 ಕ್ಕಿಂತ ಕಡಿಮೆಯಿರಬೇಕು)

ಯಾವುದೇ ರೀತಿಯ ಬಿಕ್ಕಟ್ಟಿನ (ಒಂಟಿ ಪೋಷಕ, ಅನಾಥ, ಕುಟುಂಬದಲ್ಲಿ ಮಾರಣಾಂತಿಕ ಕಾಯಿಲೆ, ಇತ್ಯಾದಿ) ಸ್ಥಿತಿಯನ್ನು ಎದುರಿಸುತ್ತಿರುವ ವಿದ್ಯಾರ್ಥಿನಿಯರು ಮತ್ತು ವಿದ್ಯಾರ್ಥಿಗಳಿಗೆ ವಿಶೇಷ ಪರಿಗಣನೆಯನ್ನು ನೀಡಲಾಗುತ್ತದೆ.

**ಆರ್ಥಿಕ ನೆರವು:** ₹ 1,00,000ದ ವರೆಗೆ

**ಅರ್ಜಿ ಸಲ್ಲಿಕೆಗೆ ಕೊನೆ ದಿನ:** 30-11-2022

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

**ಹೆಚ್ಚಿನ ಮಾಹಿತಿಗೆ:** www.b4s.in/praja/HTPF12

---

# ಮಾನವನ ಸೂಕ್ಷ್ಮಜೀವಿ ಸಮೂಹ




ಮಾನವನಲ್ಲಿನ ಜೀವಕೋಶಗಳ ಶೇಕಡಾವಾರು ವಿಂಗಡಣೆ

**ಡಾ ಎಸ್. ಶಿಶುಪಾಲ**

**ಜೀವವೈವಿಧ್ಯದಲ್ಲಿ** ದಾಖಲೆಗೆ ಸಿಗದ ಜೀವಿಗಳೆಂದರೆ ಸೂಕ್ಷ್ಮಜೀವಿಗಳು. ಪರಿಸರದಲ್ಲಿ ಇವುಗಳದ್ದು ಉತ್ಕೃಷ್ಟ ಕೆಲಸವಾದರೂ ಕಣ್ಣಿಗೆ ಕಾಣದಿರುವುದರಿಂದ ನಿಕೃಷ್ಟ ಜೀವಿಗಳೆಂದು ಕಾಣಲಾಗುತ್ತದೆ. ಆಹಾರ ಸರಪಳಿಯಲ್ಲಿ ಅವುಗಳು ವಿಶೇಷ ಮಹತ್ವ ಪಡೆದಿವೆ. ಜೈವಿಕಭೂರಸಾಯನ ಚಕ್ರದಲ್ಲಿ ಪೂತಿಜೀವಿಗಳಾಗಿ (Saprotrophs) ತಮ್ಮ ಅಗಾಧ ಕ್ಷಮತೆಯಿಂದ ಸಾವಯವ ಪದಾರ್ಥಗಳನ್ನು ಜೀರ್ಣಿಸಿ ಎಲ್ಲಾ ಸಸ್ಯಗಳಿಗೆ ಲಭ್ಯವಾಗುವ ಧಾತುಗಳಾಗಿ ಮಾರ್ಪಡಿಸುತ್ತವೆ. ಕಣ್ಣಿಗೆ ಕಾಣುವ ಪ್ರತಿಯೊಂದು ಸಸ್ಯ ಮತ್ತು ಪ್ರಾಣಿಗಳಲ್ಲಿ ಸೂಕ್ಷ್ಮಜೀವಿಗಳು ಹರಡಿವೆಯೆಂದರೆ ಆಶ್ಚರ್ಯವಾಗಬಹುದಲ್ಲವೇ?

ಭೂಮಿಯಲ್ಲಿನ ಮಣ್ಣು, ನೀರು, ಗಾಳಿ ಎಲ್ಲದರಲ್ಲಿಯೂ ಸೂಕ್ಷಜೀವಿಗಳು ನೆಲೆಸಿವೆ. ಅವುಗಳನ್ನು ಸರ್ವಾಂತರಯಾಮಿಗಳು ಎನ್ನಬಹುದು. ಮಣ್ಣಿನ ಮೇಲ್ಪದರ, ಸಾಗರದ ತಳ, ಧ್ರುವ ಪ್ರದೇಶದ ಮಂಜುಗಡ್ಡೆ, ಮುಂತಾದ ಕಡೆ ಇವುಗಳ ಇರುವಿಕೆಯನ್ನು ಪತ್ತೆ ಹಚ್ಚಲಾಗಿದೆ. ಸಕಲ ಚರಾಚರವಸ್ತುಗಳಲ್ಲಿ ಅಣು-ರೇಣು ತೃಣಕಾಷ್ಟಗಳಲ್ಲಿಯೂ ಇವೆ.

ಒಂದು ಜೀವಿಯ ಅಥವಾ ಸ್ಥಳದಲ್ಲಿ ಇರುವ ಒಟ್ಟಾರೆ ಸೂಕ್ಷ್ಮಜೀವಿಗಳನ್ನು ಸೂಕ್ಷ್ಮಜೀವಿ ಸಮೂಹ (Microbiome) ಎನ್ನುವರು. ನಮ್ಮಲ್ಲಿರುವ ಒಟ್ಟು ಸೂಕ್ಷ್ಮಜೀವಿಗಳನ್ನು ಮನುಷ್ಯ ಸೂಕ್ಷ್ಮಜೀವಿ ಸಮೂಹ (Human microbiome) ಎನ್ನುತ್ತಾರೆ.

ಮನುಷ್ಯನ ದೇಹದಲ್ಲಿರಬಹುದಾದ ಸೂಕ್ಷ್ಮಜೀವಿಗಳ ಬಗ್ಗೆ ತಿಳಿಯಲು ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಜ್ಞಾನಿಗಳು ಮನುಷ್ಯ ಸೂಕ್ಷ್ಮಜೀವಿ ಸಮೂಹ ಅಧ್ಯಯನವೆಂಬ ಬೃಹತ್ ಸಂಶೋಧನಾ ಯೋಜನೆಯನ್ನು ಕೈಗೆತ್ತಿಕೊಂಡರು. ದೇಹವು ಮೂಳೆ-ಮಾಂಸದ ತಡಿಕೆ ಇದರ ಮೇಲಿದೆ ತೊಗಲಿನ ಹೊದಿಕೆ ಎಂದಷ್ಟೇ ತಿಳಿದಿದ್ದ ನಮಗೆ ಮಾನವನ ಶರೀರದಲ್ಲಿನ ಬ್ರಹ್ಮಾಂಡವನ್ನೇ ತಿಳಿಯುವಂತೆ ಈ ಯೋಜನೆಯ ಮಾಡಿವೆ.

ತಾಯಿಯ ಗರ್ಭಕೋಶವು ಸೂಕ್ಷ್ಮಜೀವಿ-ರಹಿತವಾಗಿರುತ್ತದೆ. ಮಗು ಹುಟ್ಟುವಾಗ ತಾಯಿಯ ಜನನೇಂದ್ರಿಯದಲ್ಲಿರುವ ಲಕ್ಷಾಂತರ ಸೂಕ್ಷ್ಮಜೀವಿಗಳು ಮಗುವಿನ ದೇಹವನ್ನು ಪ್ರವೇಶಿಸುತ್ತವೆ. ಮಗು ಉಸಿರಾಡಿದಂತೆ ಗಾಳಿಯಲ್ಲಿನ ಸೂಕ್ಷ್ಮಜೀವಿಗಳು ದೇಹವನ್ನು ಸೇರುತ್ತವೆ. ಮಗುವನ್ನು ಮೊದಲು ಮುಟ್ಟುವ ಸಂಬಂಧಿಗಳು, ಆಯಾ, ನರ್ಸ್, ಡಾಕ್ಟರ್ ಮತ್ತಿತರರು ಮಗುವಿಗೆ ತಮ್ಮಲ್ಲಿರುವ ಸೂಕ್ಷ್ಮಜೀವಿಗಳ ಉಡುಗೊರೆ ನೀಡುವರು. ಮಗುವಿಗೆ ಎದೆ ಹಾಲುಣಿಸುವಾಗ ತಾಯಿಯ ದೇಹದಿಂದ ಮಗುವಿನ ದೇಹಕ್ಕೆ ಸೂಕ್ಷ್ಮಜೀವಿಗಳು ಸೇರುತ್ತವೆ. ಮಗು ಬೆಳೆದಂತೆ ಉಸಿರಾಡುವ ಗಾಳಿ, ಸೇವಿಸುವ ಆಹಾರ, ಜೀವನಶೈಲಿ ಮತ್ತು ವಾಸಿಸುವ ಪರಿಸರಕ್ಕೆ ಅನುಗುಣವಾಗಿ ಈ ಜೀವಿಯ ಸಮೂಹ ಬದಲಾಗುವುದು. ಮಗುವಿನ ಒಂದು, ಎರಡರಿಂದ ಮೂರು ವರ್ಷಗಳಲ್ಲಿ ಸೂಕ್ಷ್ಮಜೀವಿಗಳೊಂದಿಗೆ ಅನ್ಯೋನ್ಯತೆ ಬೆಳೆಯುತ್ತದೆ.

ಒಬ್ಬ ಆರೋಗ್ಯವಂತ ಮಾನವನ ದೇಹವನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಕಂಡುಬಂದ ವಿಶೇಷವೇನೆಂದರೆ ನಮ್ಮಲ್ಲಿನ ಶೇ 75 ರಷ್ಟು ಜೀವಕೋಶಗಳು ಸೂಕ್ಷ್ಮಜೀವಿಗಳು (ಚಿತ್ರ -1). ದೇಹದ ಪ್ರತಿಯೊಂದು ಭಾಗವು ಈ ಜೀವಿಗಳಿಂದ ಆವೃತವಾಗಿದೆ (ಚಿತ್ರ -2). ನಮ್ಮ ದೇಹದಲ್ಲಿರುವ ಸೂಕ್ಷ್ಮಜೀವಿಗಳ ವಂಶವಾಹಿಗಳನ್ನು ವಿಶ್ಲೇಷಿಸಿದ್ದು ವಿವಿಧ ಪ್ರಭೇದಗಳನ್ನು ಗುರುತಿಸಲಾಗಿದೆ.

ನಮ್ಮ ಚಯಾಪಚಯ ಕ್ರಿಯೆಗಳಲ್ಲಿ ಮತ್ತು ದೇಹದ ಪ್ರತಿರೋಧಕ ಶಕ್ತಿಯನ್ನು ಹೆಚ್ಚಿಸುವಲ್ಲಿ ಕಾರ್ಯನಿರ್ವಹಿಸುತ್ತವೆ. ಪ್ರಮುಖವಾಗಿ ದಂಡಾಣುಗಳಲ್ಲಿ ಆಕ್ಟಿನೊಬ್ಯಾಕ್ಟೀರಿಯಾ, ಬ್ಯಾಕ್ಟೀರಿಯೊಡೆಟಿಸ್, ಫರ್ಮಿಕ್ಯೂಟ್ಸ್, ಪ್ರೊಟಿಯೋಬ್ಯಾಕ್ಟೀರಿಯಾ, ಸಯನೋಬ್ಯಾಕ್ಟೀರಿಯಾ ಗುಂಪುಗಳಲ್ಲಿ ವರ್ಗೀಕರಿಸಲಾಗಿದೆ. ನಾವು ಆರೋಗ್ಯಪೂರ್ಣವಾಗಿರಲು ಸೂಕ್ಷ್ಮಜೀವಿಗಳೇ ಕಾರಣ.




ಮಾನವನ ದೇಹದಲ್ಲಿ ಸೂಕ್ಷ್ಮಜೀವಿಗಳು

ನಾವು ತಿಂದಂತಹ ಆಹಾರದಲ್ಲಿನ ಹಲವಾರು ಸಂಕೀರ್ಣ ವಸ್ತುಗಳನ್ನು ಜೀರ್ಣಿಸಲು ಸಹಾಯಮಾಡುತ್ತವೆ. ನಮಗೆ ಅಗತ್ಯವಿರುವ ಹಲವಾರು ವಿಟಮಿನ್‌ಗಳನ್ನು ಉತ್ಪಾದಿಸುತ್ತವೆ. ಮನುಷ್ಯ ರೋಗಾಣುಗಳಿಗೆ ಮತ್ತು ಔಷಧಿಗಳಿಗೆ ಸ್ಪಂದಿಸುವ ರೀತಿ ಸೂಕ್ಷ್ಮಜೀವಿಗಳ ಮೇಲೆ ಅವಲಂಬಿತ ಪ್ರಕ್ರಿಯೆಗಳು. ಕರುಳಿನಲ್ಲಿರುವ ಸೂಕ್ಷ್ಮಜೀವಿ ಸಮೂಹಕ್ಕೆ ಧಕ್ಕೆ ಬಂದಾಗ ಹೊಟ್ಟೆನೋವು, ಅಜೀರ್ಣ, ಮಲಬದ್ಧತೆ, ಭೇದಿ, ಅಸ್ತಮಾ ಮತ್ತು ಸ್ಥೂಲಕಾಯ ದಂತಹ ರೋಗಗಳು ಕಾಣಿಸಿಕೊಳ್ಳುತ್ತವೆ. ನಮಗೆ ಬರುವ ರೋಗ-ರುಜಿನ ಮತ್ತು ಸಾವು ಸೂಕ್ಷ್ಮಜೀವಿಗಳೊಂದಿಲೇ ನಿರ್ಧರಿಸಲ್ಪಡುತ್ತವೆ.

ಅವೇ ನಮ್ಮ ಪೂರ್ವಜರಾಗಿದ್ದು ಭವಿಷ್ಯವನ್ನು ನಿರ್ಧರಿಸುವುವು. ವಿಶ್ವದಲ್ಲಿನ ಸಕಲ ಪ್ರಾಣಿ-ಸಸ್ಯಗಳು ನಾಶವಾದರೂ ಸೂಕ್ಷ್ಮಜೀವಿಗಳು ಮಾತ್ರ ಸುಲಭವಾಗಿ ನಾಶವಾಗದೇ ಮುಂದಿನ ಜೀವವಿಕಾಸಕ್ಕೆ ಅನುವು ಮಾಡಿಕೊಡುತ್ತವೆ. ಹೆಚ್ಚಿನವು ಮಿತ್ರರರೇ ಆಗಿದ್ದು ಕೆಲವು ಮಾತ್ರ ಮಾನವನ ಶತ್ರುಗಳೆನಿಸಿಕೊಂಡಿವೆ.

**(ಚಿತ್ರ -2 ಕೃಪೆ: ಸೈಂಟಿಫಿಕ್ ಅಮೇರಿಕನ್)**

(ಲೇಖಕರು: ಪ್ರಾಧ್ಯಾಪಕರು, ಸೂಕ್ಷ್ಮಜೀವಿಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾಲಯ)



## ಸುಭಾಷಿತ

ಉನ್ನತ ವ್ಯಕ್ತಿತ್ವವುಳ್ಳವರು ಸತ್ಯದ ಬಗ್ಗೆ ಕಾಳಜಿ ವಹಿಸಬೇಕೇ ವಿನಾ ಜನರು ಏನು ಯೋಚಿಸುತ್ತಾರೆ ಎಂದು ಅಲ್ಲ.
**-ಅರಿಸ್ಟಾಟಲ್**

# ಶಿಶುಮರಣ ಪ್ರಮಾಣ ಇಳಿಕೆ ಸ್ವಾಗತಾರ್ಹ ಲಿಂಗಾನುಪಾತ ಇಳಿಕೆ ಕಳವಳಕಾರಿ

**ಮಾದರಿ** ನೋಂದಣಿ ವ್ಯವಸ್ಥೆಯ (ಎಸ್ಆರ್ಎಸ್) ಸಾಂಖ್ಯಿಕ ವರದಿಯಲ್ಲಿ ಶಿಶು ಮರಣದ ಪ್ರಮಾಣ ಮತ್ತು ಮಕ್ಕಳ ಸ್ವಾಸ್ಥ್ಯಕ್ಕೆ ಸಂಬಂಧಿಸಿದಂತೆ ಆಶಾದಾಯಕ ಸುದ್ದಿ ಇದೆ. ಭಾರತದ ಪ್ರಧಾನ ನೋಂದಣಾಧಿಕಾರಿಯವರು ಈ ವರದಿಯನ್ನು ಇತ್ತೀಚೆಗೆ ಬಿಡುಗಡೆ ಮಾಡಿದ್ದಾರೆ. ಶಿಶು ಮರಣ ಪ್ರಮಾಣದಲ್ಲಿ (ಐಎಂಆರ್) ಇಳಿಕೆ ಆಗಿದೆ ಎಂಬುದರತ್ತ ಈ ವರದಿಯು ಬೆಳಕು ಚೆಲ್ಲಿದೆ. ಐದು ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣವು 2019ರಲ್ಲಿ ಪ್ರತೀ ಸಾವಿರ ಸಜೀವ ಜನನಕ್ಕೆ 35 ಇತ್ತು. ಅದು 2020ರಲ್ಲಿ 32ಕ್ಕೆ ಇಳಿದಿದೆ. ಐಎಂಆರ್ ಮತ್ತು ನವಜಾತ ಶಿಶು ಮರಣ ಪ್ರಮಾಣಗಳೆರಡೂ ಇಳಿಕೆ ಆಗಿವೆ. ನವಜಾತ ಶಿಶು ಮರಣ ಪ್ರಮಾಣವು ಪ್ರತೀ ಸಾವಿರ ಸಜೀವ ಜನನಗಳಿಗೆ 20ಕ್ಕೆ ಇಳಿದಿದೆ. ಮಿಜೋರಾಂ ಮತ್ತು ನಾಗಾಲ್ಯಾಂಡ್‌ನಲ್ಲಿ ಈ ಪ್ರಮಾಣವು ಅತ್ಯಂತ ಕಡಿಮೆ ಇದೆ. ಈ ರಾಜ್ಯಗಳಲ್ಲಿನ ಐಎಂಆರ್ ಪ್ರತೀ ಸಾವಿರ ಸಜೀವ ಜನನಗಳಿಗೆ ಕ್ರಮವಾಗಿ ಮೂರು ಮತ್ತು ನಾಲ್ಕು. ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಯನ್ನು (ಎಸ್‌ಡಿಜಿ) ನವಜಾತ ಶಿಶು ಮರಣ ಪ್ರಮಾಣದ ವಿಚಾರದಲ್ಲಿ ಆರು ರಾಜ್ಯಗಳು ಸಾಧಿಸಿವೆ. ಈ ರಾಜ್ಯಗಳಲ್ಲಿ ಶಿಶು ಮರಣ ಪ್ರಮಾಣವು 12ಕ್ಕಿಂತ ಕಡಿಮೆ ಇದೆ. 11 ರಾಜ್ಯಗಳಲ್ಲಿ ಐದು ವರ್ಷದೊಳಗಿನ ಶಿಶು ಮರಣ ಪ್ರಮಾಣವು 25ಕ್ಕಿಂತ ಕಡಿಮೆ ಇದೆ. ಐದು ವರ್ಷದೊಳಗಿನ ಶಿಶು ಮರಣ ಪ್ರಮಾಣವು ಕರ್ನಾಟಕ ಮತ್ತು ಉತ್ತರಪ್ರದೇಶದಲ್ಲಿ ತೀವ್ರವಾಗಿ ಕುಸಿದಿದೆ.



**ಶಿಶು ಮರಣ ಮತ್ತು ಲಿಂಗ ಅನುಪಾತದಲ್ಲಿ ರಾಜ್ಯಗಳ ನಡುವೆ ಅಂತರವನ್ನು ಕಡಿಮೆ ಮಾಡಬೇಕಿದೆ**

ಇದು ದೊಡ್ಡ ಸಾಧನೆಯೇ. ಆದರೆ, ಬೇರೆ ಕೆಲವು ವಿಚಾರಗಳಲ್ಲಿ ಕಳವಳವೂ ಉಂಟು. 2017ರಿಂದ 2019ರ ನಡುವೆ ರಾಷ್ಟ್ರಮಟ್ಟದಲ್ಲಿ ಲಿಂಗ ಅನುಪಾತವು ಮೂರು ಅಂಶಗಳಷ್ಟು ಏರಿಕೆ ಆಗಿದೆ. ಆದರೆ, 10 ರಾಜ್ಯಗಳಲ್ಲಿ ಲಿಂಗಾನುಪಾತವು ಕುಸಿದಿದೆ. ಕೇರಳದಲ್ಲಿ ಲಿಂಗಾನುಪಾತವು ಅತ್ಯಂತ ಹೆಚ್ಚು ಅಂದರೆ 974 ಇದೆ. ಉತ್ತರಾಖಂಡದಲ್ಲಿ ಅತ್ಯಂತ ಕಡಿಮೆ ಅಂದರೆ 844 ಇದೆ. ಜನನ ಸಂದರ್ಭದಲ್ಲಿ ಲಿಂಗಾನುಪಾತವು ಒಂದು ವೈದ್ಯಕೀಯ ದಾಖಲೆ ಮಾತ್ರವೇ ಅಲ್ಲ, ಇದು ಸಾಮಾಜಿಕ ಧೋರಣೆಗಳ ಸೂಚಕವೂ ಹೌದು. ಸಮಾಜದ ಉತ್ತಮ ಆರೋಗ್ಯಕ್ಕೆ ಲಿಂಗ ಸಮತೋಲನ ಬಹಳ ಮುಖ್ಯವಾದುದಾಗಿದೆ. ಕೆಲವು ರಾಜ್ಯಗಳಲ್ಲಿ ಲಿಂಗ ಅನುಪಾತವು ಕುಸಿದಿರುವುದರ ಕುರಿತು ಗಂಭೀರವಾದ ಅಧ್ಯಯನ ನಡೆಯಬೇಕಿದೆ ಎಂದು ಪರಿಣತರು ಸಲಹೆ ಕೊಟ್ಟಿದ್ದಾರೆ. ಇದು ಸಮಾಜದಲ್ಲಿ ನೆಲೆಯಾಗಿರುವ ಪ್ರವೃತ್ತಿ ಆಗಿರುವುದರಿಂದ ಈ ಕುರಿತು ಅಧ್ಯಯನ ಅಗತ್ಯ ಎಂದು ಪರಿಣತರು ಅಭಿಪ್ರಾಯಪಟ್ಟಿದ್ದಾರೆ. ಈ ಪ್ರವೃತ್ತಿಯು ದೇಶದಾದ್ಯಂತ ಇರುವ ವಾಸ್ತವವೇ ಆದರೂ ಹರಿಯಾಣ, ಪಂಜಾಬ್‌ನಂತಹ ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಹೆಚ್ಚು ಬಲವಾಗಿದೆ. ಬಹಳ ಕಷ್ಟಪಟ್ಟು ಈ ಪ್ರವೃತ್ತಿಯನ್ನು ಬದಲಾಯಿಸಲಾಗಿದೆ. ಹಾಗೆ ಸಿಕ್ಕ ಅನುಕೂಲವು ಕಳೆದುಹೋಗದಂತೆ ನೋಡಿಕೊಳ್ಳಬೇಕಾಗಿದೆ.

ಪ್ರಸವಪೂರ್ವ ಭ್ರೂಣ ಲಿಂಗ ಪತ್ತೆ ಮತ್ತು ಆಯ್ಕೆಯ ಗರ್ಭಪಾತವನ್ನು ಗರ್ಭಧಾರಣೆಪೂರ್ವ ಮತ್ತು ಪ್ರಸವಪೂರ್ವ ತಪಾಸಣೆ ತಂತ್ರಜ್ಞಾನ ಕಾಯ್ದೆ- 1994ರ ಅಡಿಯಲ್ಲಿ ನಿಷೇಧಿಸಲಾಗಿದೆ. ಹೆಣ್ಣು ಭ್ರೂಣ ಹತ್ಯೆ ತಡೆಯುವುದಕ್ಕೆ ಸಂಬಂಧಿಸಿ ಇವು ಅತ್ಯಂತ ಮಹತ್ವದ ಕ್ರಮಗಳಾಗಿವೆ. ಆದರೆ, ಈ ಕಾಯ್ದೆಯ ಕಣ್ಣು ತಪ್ಪಿಸಿ ಭ್ರೂಣ ಲಿಂಗ ಪತ್ತೆ ಮಾಡುವ ಹೊಸ ವಿಧಾನಗಳನ್ನು ಕಂಡುಕೊಳ್ಳಲಾಗಿದೆ ಎಂಬ ವರದಿಗಳು ಇವೆ. ಲಿಂಗ ಅನುಪಾತವು ಕುಸಿದಿರುವುದಕ್ಕೆ ಇದು ಕಾರಣ ಆಗಿರಬಹುದು. ಹೆಣ್ಣು ಮಕ್ಕಳ ಸಂರಕ್ಷಣೆಯನ್ನು ಪ್ರೋತ್ಸಾಹಿಸುವ ನೀತಿಗಳನ್ನು ರೂಪಿಸುವ ಅಗತ್ಯ ಇದೆ. ಅಂತಹ ನೀತಿಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬೇಕಿದೆ. ಶಿಶು ಮರಣ ಪ್ರಮಾಣವು ಇಳಿಕೆ ಆಗಿರುವುದು ಸಕಾರಾತ್ಮಕ ಅಂಶ. ಈ ಸಕಾರಾತ್ಮಕ ಅಂಶವು ಸುಸ್ಥಿರವಾಗಿ ಉಳಿಯಬೇಕಿದೆ. ಶಿಶು ಮರಣ ಮತ್ತು ಲಿಂಗ ಅನುಪಾತದಲ್ಲಿ ರಾಜ್ಯಗಳ ನಡುವೆ ಅಂತರವನ್ನು ಕಡಿಮೆ ಮಾಡಬೇಕಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವೆಯೂ ಅಂತರ ಇದೆ. ಅದನ್ನೂ ಸರಿಪಡಿಸಬೇಕಿದೆ. ಬಡವರ ಜೀವನಸ್ಥಿತಿಯನ್ನು ಉತ್ತಮಪಡಿಸುವುದು, ಅವರಿಗೆ ಅಗತ್ಯ ವೈದ್ಯಕೀಯ ಸೇವೆ ದೊರೆಯುವಂತೆ ಮಾಡುವುದು ಬಹಳ ಮುಖ್ಯವಾದುದಾಗಿದೆ. ಲಿಂಗ ಅನುಪಾತದ ವಿಚಾರದಲ್ಲಿ ಸಮಾಜದಲ್ಲಿ ಜಾಗೃತಿ ಮೂಡಿಸಬೇಕಿದೆ.

## ದಿನದ ಟ್ವೀಟ್

### ಏರಿಳಿತ ಕಂಡ ಟೂರ್ನಿ

**ಎರಡನೇ ಬಾರಿ ಟಿ20 ಕ್ರಿಕೆಟ್ ವಿಶ್ವಕಪ್ ಜಯಿಸಿದ ಇಂಗ್ಲೆಂಡ್‌ಗೆ ಅಭಿನಂದನೆಗಳು. ಇದೊಂದು ಅದ್ಭುತ ಸಾಧನೆ. ನಿಕಟ ಪೈಪೋಟಿಯಿದ್ದ ಫೈನಲ್‌ನಲ್ಲಿ ಪಾಕ್ ಬೌಲರ್ ಅಫ್ರಿದಿ (ಶಾಹೀನ್) ಗಾಯಗೊಳ್ಳದೇ ಇದ್ದಿದ್ದರೆ ಇನ್ನಷ್ಟು ರೋಚಕತೆ ಇರುತ್ತಿತ್ತು. ಏರಿಳಿತಗಳನ್ನು ಕಂಡ ವಿಶ್ವಕಪ್ ಟೂರ್ನಿ.**

**ಸಚಿನ್ ತೆಂಡೂಲ್ಕರ್,** ಕ್ರಿಕೆಟಿಗ

## ಕಿಡಿನುಡಿ

**ದೇಶದ ಮುಖ್ಯ ನ್ಯಾಯಮೂರ್ತಿಯಂತಹ ಹುದ್ದೆಯಲ್ಲಿದ್ದವರು ರಾಜ್ಯಸಭೆಗೆ ನಾಮನಿರ್ದೇಶನಗೊಳ್ಳುವುದಾಗಲೀ ಅಥವಾ ರಾಜ್ಯದ ರಾಜ್ಯಪಾಲರಾಗಿ ನೇಮಕಗೊಳ್ಳುವುದಾಗಲೀ ಸರಿ ಎಂದು ಅನಿಸುವುದಿಲ್ಲ ಎಂದು (ನಿವೃತ್ತ ಸಿಜೆಐ) ಯು.ಯು.ಲಲಿತ್ ಹೇಳಿದ್ದಾರೆ. ಅಧಿಕಾರಸ್ಥರಿಗೆ ಸತ್ಯವನ್ನು ಹೇಳಿದ್ದಕ್ಕೆ ಧನ್ಯವಾದಗಳು ಮೈಲಾರ್ಡ್!**

**ಮಹುವಾ ಮೊಯಿತ್ರಾ,** ಟಿಎಂಸಿ ಸಂಸದೆ

## 25 ವರ್ಷಗಳ ಹಿಂದೆ

ಶುಕ್ರವಾರ, 14-11-1997

• **ಸಂಸತ್ತಿನಲ್ಲಿ ಜೈನ್ ವರದಿ ಮಂಡನೆ: ಗುಪ್ತಾ ಸ್ಪಷ್ಟನೆ**

**ನವದೆಹಲಿ, ನ. 13 (ಪಿಟಿಐ)**- ರಾಜೀವ್ ಗಾಂಧಿ ಹತ್ಯೆ ಪ್ರಕರಣದ ತನಿಖೆ ಮಾಡುತ್ತಿರುವ ನ್ಯಾಯಮೂರ್ತಿ ಮಿಲಾಪ್ ಚಂದ್ ಜೈನ್ ಆಯೋಗದ ಮಧ್ಯಂತರ ವರದಿ ಹಾಗೂ ಅದನ್ನು ಆಧರಿಸಿ ತೆಗೆದುಕೊಂಡ ಕ್ರಮದ ವಿವರವನ್ನು ಸಂಸತ್‌ನ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲಾಗುವುದೆಂದು ಗೃಹ ಸಚಿವ ಇಂದ್ರಜಿತ್ ಗುಪ್ತಾ ಇಂದು ತಿಳಿಸಿದರು.

ವರದಿಯನ್ನು ತಡೆಹಿಡಿಯುವ ಅಥವಾ ಯಾರನ್ನೇ ರಕ್ಷಿಸುವ ಉದ್ದೇಶ ಸರ್ಕಾರಕ್ಕಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

• **ವಿವಾದ ಇತ್ಯರ್ಥಕ್ಕೆ ಕೇಸರಿ ಜತೆ ಗುಜ್ರಾಲ್ ಚರ್ಚೆ**

**ನವದೆಹಲಿ, ನ. 13**- ರಾಜೀವ್ ಗಾಂಧಿ ಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ಜೈನ್ ಆಯೋಗದ ಮಧ್ಯಂತರ ವರದಿಯ ಸೋರಿಕೆಯು ಎಬ್ಬಿಸಿರುವ ವಿವಾದಕ್ಕೆ ಪರಿಹಾರ ಕಂಡುಹಿಡಿಯಲು ಪ್ರಧಾನಿ ಐ.ಕೆ. ಗುಜ್ರಾಲ್ ಅವರು ಇಂದು ರಾತ್ರಿ ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಮತ್ತು ಇತರ ನಾಯಕರೊಡನೆ ಮಾತುಕತೆ ನಡೆಸಿದರು.

• **'6 ಸಾವಿರ ಮೆ.ವಾ. ವಿದ್ಯುತ್ ಉತ್ಪಾದನೆಗೆ ಅನುಮತಿ'**

**ತುಮಕೂರು, ನ. 13**- ಆರು ಸಾವಿರ ಮೆಗಾ ವಾಟ್ ವಿದ್ಯುತ್ ಉತ್ಪಾದನಾ ಯೋಜನೆಗಳಿಗೆ ಮಂಜೂರಾತಿ ದೊರಕಿದ್ದು, ಮುಂದಿನ ಮೂರು ವರ್ಷಗಳಲ್ಲಿ ಮೂರು ಸಾವಿರ ಮೆಗಾ ವಾಟ್ ಹೆಚ್ಚುವರಿ ವಿದ್ಯುತ್ ಉತ್ಪಾದಿಸಲಾಗುವುದು ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಹೇಳಿದರು.

ಕುಣಿಗಲ್ ತಾಲ್ಲೂಕಿನ ಅಂಚೆಪಾಳ್ಯದಲ್ಲಿ 220 ಕೆ.ವಿ. ಸಾಮರ್ಥ್ಯದ ವಿದ್ಯುತ್ ಸ್ವೀಕರಣಾ ಕೇಂದ್ರದ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ 5 ಮತ್ತು 6ನೇ ಸ್ಥಾವರದ ನಿರ್ಮಾಣ ಕಾರ್ಯವನ್ನು ಸದ್ಯದಲ್ಲೇ ಪ್ರಾರಂಭಿಸಲಾಗುವುದು ಎಂದರು.

## 50 ವರ್ಷಗಳ ಹಿಂದೆ

ಮಂಗಳವಾರ, 14-11-1972

• **ತಮಿಳುನಾಡು ವಿಧಾನಸಭೆ ವಿಸರ್ಜನೆಗೆ ಸ್ಪೀಕರ್ ಸಲಹೆ: 3 ವಾರ ಅಧಿವೇಶನ ಮುಂದಕ್ಕೆ**

**ಮದ್ರಾಸ್, ನ. 13**- ಉದ್ವಿಗ್ನಭರಿತ ವಾತಾವರಣದಲ್ಲಿ ಇಂದು ತನ್ನ ಚಳಿಗಾಲದ ಅಧಿವೇಶನ ಪ್ರಾರಂಭಿಸಿದ ತಮಿಳುನಾಡು ವಿಧಾನಸಭೆಯಲ್ಲಿ ಅಧ್ಯಕ್ಷ ಕೆ.ಎ. ಮತಿಯಳಗನ್ ಅವರು ಜನತೆಯಿಂದ 'ಹೊಸ ಆದೇಶ' ಪಡೆಯುವಂತೆ ಅಧಿಕಾರಾರೂಢ ಡಿಎಂಕೆ ಪಕ್ಷಕ್ಕೆ ಸಲಹೆ ನೀಡಿ, ಅತ್ಯಂತ ಅನಿರೀಕ್ಷಿತವಾಗಿ ಡಿಸೆಂಬರ್ 5ರವರೆಗೆ ಮುಂದಕ್ಕೆ ಹಾಕಿದರು.

ಡಿಎಂಕೆ ಖಜಾಂಚಿ ಸ್ಥಾನದಿಂದ ತೆಗೆದು ಹಾಕಲಾದುದರಿಂದ ರಾಜಕೀಯ ಬಿಕ್ಕಟ್ಟಿನ ಕಿಡಿ ಹೊತ್ತಿಕೊಂಡಿದೆ. ಎಂ.ಜಿ. ರಾಮಚಂದ್ರನ್ ಅವರು ಎತ್ತಿದ ಒಂದು ಕ್ರಿಯಾಲೋಪದ ಮೇಲೆ ಅಧ್ಯಕ್ಷರು ಮುಖ್ಯಮಂತ್ರಿ ಎಂ. ಕರುಣಾನಿಧಿ ಅವರಿಗೆ ಸಭೆಯನ್ನು ವಿಸರ್ಜಿಸಿ ಜನತೆಯಿಂದ ಹೊಸ ಆದೇಶ ಪಡೆಯುವ ಮೂಲಕ 'ಈ ವಿಶೇಷ ಪರಿಸ್ಥಿತಿಗೆ ವಿಶೇಷ ಪರಿಹಾರ' ಕಂಡುಹಿಡಿಯುವಂತೆ ಸೂಚಿಸಿದರು.

• **ಮೂರು ಬೃಹತ್ ಯೋಜನೆಗೆ 90 ಕೋಟಿ ರೂ. ವಿಶೇಷ ನೆರವು: ಕೇಂದ್ರಕ್ಕೆ ರಾಜ್ಯದ ಮನವಿ**

**ನವದೆಹಲಿ, ನ. 13**- ಮೂರು ದೊಡ್ಡ ನೀರಾವರಿ ಯೋಜನೆಗಳನ್ನು ಪೂರ್ಣ ಮಾಡುವುದಕ್ಕಾಗಿ 90 ಕೋಟಿ ರೂಪಾಯಿಗಳ ವಿಶೇಷ ನೆರವು ನೀಡುವಂತೆ ಕೇಂದ್ರ ಸರ್ಕಾರವನ್ನು ಮೈಸೂರು ಸರ್ಕಾರ ಕೋರಿದೆ.

'ಈ ಯೋಜನೆಗಳನ್ನು ಪೂರ್ಣ ಮಾಡುವುದಕ್ಕೆ 207 ಕೋಟಿ ರೂಪಾಯಿಗಳು ಬೇಕು' ಎಂದು ಮೈಸೂರು ರಾಜ್ಯದ ನೀರಾವರಿ ಖಾತೆಯ ಸ್ಟೇಟ್ ಸಚಿವ ಶ್ರೀ ಎಚ್.ಎನ್. ನಂಜೇಗೌಡ ಅವರು ಪತ್ರಕರ್ತರಿಗೆ ತಿಳಿಸಿದರು.

ಕೃಷ್ಣಾ ಮೇಲ್ದಂಡೆ, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳನ್ನು ಪೂರ್ಣ ಮಾಡುವುದರಿಂದ ಮೈಸೂರು ರಾಜ್ಯದ ಉತ್ತರ ಭಾಗದ ಅತ್ಯಂತ ಬೆಂಗಾಡು ಪ್ರದೇಶಕ್ಕೆ ತುಂಬಾ ಲಾಭದಾಯಕವಾಗುತ್ತದೆ.

### ನಕ್ಷತ್ರಗಳ ಅಧ್ಯಯನಕ್ಕೆ ಇದೀಗ ತೆರೆದುಕೊಂಡಿವೆ ವೈವಿಧ್ಯಮಯ ಹಾದಿಗಳು

# ಹೊಸ ನಕ್ಷತ್ರಕ್ಕೆ ಹೆಸರಿಡುವಿರಾ?

**ವಿಶ್ಲೇಷಣೆ**

**ಬಿ.ಎಸ್.ಶೈಲಜಾ**

'ನಮ್ಮ ಗುರುಗಳ ಹೆಸರಿನ ನಕ್ಷತ್ರ ತೋರಿಸಿ'- ಇಂತಹದ್ದೊಂದು ಕೋರಿಕೆಯನ್ನು ತಾರಾಲಯದಲ್ಲಿ ಈಗ್ಗೆ ಹಲವಾರು ವರ್ಷಗಳ ಹಿಂದೆ ಪದೇಪದೇ ಎದುರಿಸಬೇಕಾಯಿತು. ಇದು ಒಂದು ವಿಚಿತ್ರವಾದ ಸಮಸ್ಯೆ. ಏಕೆಂದರೆ, ಅವರ ಕೈಯಲ್ಲಿದ್ದ ಪ್ರಮಾಣಪತ್ರದಲ್ಲಿ ಅವರ ಗುರುಗಳ ಹೆಸರನ್ನು ನಮೂದಿಸಿ ಒಂದು ಸಂಖ್ಯೆಯನ್ನು ಕೊಟ್ಟಿರುತ್ತಿದ್ದರು. ಅದೇ ನಕ್ಷತ್ರದ ಸಂಖ್ಯೆಯಾಗಿದ್ದು, ಅದನ್ನು ಕೊಟ್ಟರೆ ತಾರಾಲಯದಲ್ಲಿ ಅದು ಯಾವ ನಕ್ಷತ್ರ ಎಂದು ತಿಳಿದುಕೊಳ್ಳಬಹುದು ಎಂಬುದು ಅವರ ನಂಬಿಕೆ. ಹಾಗೆಂದ ಮಾತ್ರಕ್ಕೆ ಅವರೆಲ್ಲ ತಿಳಿವಳಿಕಸ್ಥರಲ್ಲ ಎಂದಲ್ಲ. ವಿದೇಶಿಯರೂ ಇದ್ದರು. ಅಧ್ಯಾತ್ಮ ಕಲಿಯಲು ಇಲ್ಲಿಗೆ ಬಂದವರು. ಹೀಗಾಗಿ, ಆ ಪ್ರಮಾಣಪತ್ರದ ಮೂಲವನ್ನೇ ಕೆದಕುವ ಜವಾಬ್ದಾರಿ ನನಗಂಟಿತು. ಅದಕ್ಕೆ ಅವರು ಬಹಳಷ್ಟು ಡಾಲರ್ ತೆತ್ತಿದ್ದರು ಎಂದ ಕೂಡಲೇ ಕಗ್ಗಂಟು ಬಿಡಿಸಿತು. ಸಮುದ್ರದ ದಡದಲ್ಲಿ ನಿಂತು ಒಂದು ಹಿಡಿ ಮರಳನ್ನು ಮಾರಿದವನೊಬ್ಬ, ದುಡ್ಡು ಕೊಟ್ಟು ಕೊಂಡವರು ಇವರೆಲ್ಲ!

ಹಾಗಾದರೆ ನಕ್ಷತ್ರಗಳಿಗೆ ಹೆಸರಿಲ್ಲವೇ? ಇದೆಯಲ್ಲಾ- ಅಶ್ವಿನಿ, ಭರಣಿ ಮಾತ್ರವಲ್ಲ ಲುಬ್ಧಕ, ಅಗಸ್ತ್ಯ... ಹೀಗೆ. ಈಗೇಕೆ ಹೊಸ ಹೆಸರುಗಳಿಲ್ಲ?

ಎಲ್ಲ ದೇಶಗಳ ಖಗೋಳ ವಿಜ್ಞಾನಿಗಳೂ ಸೇರಿ ಸ್ಥಾಪಿಸಿಕೊಂಡ ಅಂತರರಾಷ್ಟ್ರೀಯ ಖಗೋಳ ಒಕ್ಕೂಟ (ಐಎಯು) 2019ರಲ್ಲಿ ಶತಮಾನೋತ್ಸವ ಕಂಡಿತು. ಇದರಲ್ಲಿ ಎಲ್ಲ ಶಾಖೆಗಳಿಗೂ ಒಂದೊಂದು ಸಮಿತಿ ಇದೆ. ಭೂಮಿಯ ಚಲನೆಯಿಂದ ಹಿಡಿದು ಕಪ್ಪುಕುಳಿಗಳ ಅಧ್ಯಯನದವರೆಗಿನ ಪ್ರತಿಯೊಂದು ಶಾಖೆಯಲ್ಲೂ ಪರಿಣತರ ಸಮಿತಿಯಿದೆ. ಈ ವರ್ಷ ಡಿಸೆಂಬರ್ 31ಕ್ಕೆ ಗಡಿಯಾರವನ್ನು ಒಂದು ಸೆಕೆಂಡ್ ಮುಂದೆ ಹಾಕಬೇಕೆ, ಹೊಸದಾಗಿ ಕಂಡುಹಿಡಿದ ಚುಕ್ಕೆ ಸೂಪರ್‌ನೋವಾ ಹೌದೇ ಅಲ್ಲವೇ, ಕಪ್ಪುಕುಳಿಯ ಹೊಸ ಸಿದ್ಧಾಂತದ ದೋಷಗಳೇನು, ಅನುಕೂಲಗಳೇನು ಎಂಬಂತಹ ಎಲ್ಲ ವಿಷಯಗಳನ್ನೂ ಈ ಒಕ್ಕೂಟ ನಿರ್ಧರಿಸುತ್ತದೆ. ಹಾಗೆಯೇ ಯುದ್ಧ ಮುಂತಾದ ಸಂದರ್ಭಗಳಲ್ಲಿ ಸಹಯೋಗದ ಕಾರ್ಯಕ್ರಮಗಳಿಗೆ ಧಕ್ಕೆ ಉಂಟಾಗದ ಹಾಗೆ ನೋಡಿಕೊಳ್ಳುತ್ತದೆ.

ಇದರಲ್ಲಿ ಒಂದು ಸಮಿತಿಯು ಇತಿಹಾಸ, ಸಂಸ್ಕೃತಿ ಹಾಗೂ ಪರಂಪರೆಯ ಕೊಡುಗೆಗಳನ್ನು ಪರಿಶೀಲಿಸುತ್ತದೆ. ಬೇರೆ ಬೇರೆ ಪದ್ಧತಿಗಳಲ್ಲಿ ನಕ್ಷತ್ರದ ಹೆಸರುಗಳ ಮೂಲ, ನಕ್ಷತ್ರಪುಂಜಗಳ (ಕಾನ್‌ಸ್ಟಲೇಷನ್) ಹೆಸರುಗಳ ಮೂಲಗಳನ್ನು ಸಂಗ್ರಹಿಸಿ 1928ರಲ್ಲಿ ಇಡೀ ಖಗೋಳವನ್ನೇ 88 ನಕ್ಷತ್ರಪುಂಜಗಳನ್ನಾಗಿ ಅದು ಮರುವಿಂಗಡಣೆ ಮಾಡಿತು. ಅಂದರೆ ಆಕಾಶದಲ್ಲಿ ಗಡಿಗಳನ್ನು ಗುರುತಿಸಿತು. ಇನ್ನು ಮುಂದೆ ಯಾವುದೇ ಹೊಸ ಹೆಸರುಗಳನ್ನು ಇಡುವಂತಿಲ್ಲ. ಈ ಹೆಸರುಗಳೇ ಈಗ ಎಲ್ಲೆಲ್ಲೂ ಚಾಲ್ತಿಯಲ್ಲಿವೆ. ಯುರೋಪ್ ಮೂಲದ ಹೆಸರುಗಳೇ ಅವು ಎಂಬುದು ಸ್ಪಷ್ಟ.

ಚೀನಾದಲ್ಲಿ ನಕ್ಷತ್ರಗಳ ನಕ್ಷೆಗಳೂ ಇವೆ, ಹೆಸರುಗಳೂ ಇವೆ. ಭಾರತದ ಹೆಸರುಗಳು 12 ನಕ್ಷತ್ರಪುಂಜಗಳಿಗೆ ಮತ್ತು 27 ನಕ್ಷತ್ರಗಳಿಗೆ ಮಾತ್ರ ಇವೆ. ಆಗ ಅನೇಕ ದೇಶಗಳ ಕೊಡುಗೆ ಬಿಟ್ಟುಹೋಗಿತ್ತು. ಆದ್ದರಿಂದ ಈ ಸಂಗ್ರಹಣಾ ಕಾರ್ಯ ಈಗಲೂ ಮುಂದುವರಿಯುತ್ತಿದೆ.

ನಕ್ಷತ್ರಗಳಿಗೆ ಹೆಸರಿಡುವ ಕಾರ್ಯ ಇಷ್ಟು ಸುಲಭವಾಗಿ ಪರಿಹಾರವಾಗುವುದಲ್ಲ. ಎಲ್ಲ ನಕ್ಷತ್ರಗಳಿಗೂ ಒಂದೇ ಹೆಸರನ್ನು ಇಡುವುದು ಸಾಧ್ಯವಿಲ್ಲ. ನಮ್ಮಲ್ಲಿ ಒಂದೇ ನಕ್ಷತ್ರಕ್ಕೆ ಹಲವಾರು ಹೆಸರುಗಳಿವೆ. ಬೇರೆ ಸಂಸ್ಕೃತಿಗಳಲ್ಲಿ ಬೇರೆ ಬೇರೆ ಹೆಸರುಗಳಿವೆ. ನಕ್ಷೆಗಳೂ ಇವೆ. ಇದೀಗ ದಕ್ಷಿಣ ಅಮೆರಿಕ, ನ್ಯೂಜಿಲೆಂಡ್, ಆಗ್ನೇಯ ಏಷ್ಯಾದಂತಹ ದೇಶಗಳ ಮೂಲ ನಿವಾಸಿಗಳು ಬಳಸುತ್ತಿದ್ದ ಹೆಸರುಗಳು ಬೆಳಕಿಗೆ ಬರುತ್ತಿವೆ.

ಬುಧ, ಶುಕ್ರ ಮತ್ತು ಚಂದ್ರನ ಮೇಲಿನ ಕುಳಿಗಳಿಗೆ ಖ್ಯಾತ ವಿಜ್ಞಾನಿಗಳ ಹೆಸರನ್ನು ಇರಿಸಿ ಅವರಿಗೆ ಗೌರವ ಸಲ್ಲಿಸಲಾಗಿದೆ. ಕ್ಷುದ್ರಗ್ರಹಗಳಿಗೆ ಹೆಸರನ್ನು ಇಡುವ ಆಯ್ಕೆ ಅದನ್ನು ಕಂಡುಹಿಡಿದವರಿಗೆ ಮಾತ್ರ.

ಎರಡು ಶತಮಾನಗಳಿಂದ ಈಚೆಗೆ ನಕ್ಷತ್ರಗಳ ಅಧ್ಯಯನ ಬಿರುಸಿನಿಂದ ಸಾಗುತ್ತಿದೆ. ಯಾವುದೇ ಒಂದು ನಕ್ಷತ್ರದ ವಿಶೇಷ ಲಕ್ಷಣವನ್ನು ಅಧ್ಯಯನ ಮಾಡಿದವರ ಹೆಸರು ಆಯಾ ನಕ್ಷತ್ರಕ್ಕೆ ಸೇರುತ್ತದೆ. ಉದಾಹರಣೆಗೆ, ಎಲ್ಲ ನಕ್ಷತ್ರಗಳಿಗಿಂತ ಒಂದು ನಕ್ಷತ್ರ ಅತಿ ವೇಗವಾಗಿ ಚಲಿಸುತ್ತಿದೆ ಎಂಬುದನ್ನು ನೂರು ವರ್ಷಗಳ ಹಿಂದೆ ಎಡ್ವರ್ಡ್ ಬರ್ನಾರ್ಡ್ ಕಂಡುಹಿಡಿದರು. ಅದಕ್ಕೆ ಬರ್ನಾರ್ಡ್ ನಕ್ಷತ್ರ ಎಂದೇ ಹೆಸರು. ಈಗ್ಗೆ 50 ವರ್ಷಗಳ ಹಿಂದೆ ವಾನ್ ಕೆಂಪ್ ಎಂಬ ವಿಜ್ಞಾನಿ ನಕ್ಷತ್ರವೊಂದನ್ನು ಅಧ್ಯಯನ ಮಾಡಿ ಅದಕ್ಕೆ ಗ್ರಹ ಇರಬಹುದು ಎಂದು ಸೂಚಿಸಿದ್ದರು. ಆ ನಕ್ಷತ್ರಕ್ಕೆ ಅವರದೇ ಹೆಸರಿದೆ. ಆಗ ಇನ್ನೂ ಅನ್ಯಗ್ರಹಗಳ ಅಸ್ತಿತ್ವ ಖಚಿತವಾಗಿರಲಿಲ್ಲ. ಬೆಂಗಳೂರಿನಲ್ಲಿ ಕುಳಿತು ದೆಹಲಿಯಲ್ಲಿರುವ ಸಾಸಿವೆ ಕಾಳನ್ನು ಹುಡುಕುವಂತಹ ಕೆಲಸ ಆಗಿನ್ನೂ ಆರಂಭವಾಗಿರಲಿಲ್ಲ. ಈಗ ಇದಕ್ಕಾಗಿ ವೈವಿಧ್ಯಮಯ ಹಾದಿಗಳು ತೆರೆದುಕೊಂಡಿವೆ.

ನಮ್ಮ ಸೌರಮಂಡಲಕ್ಕೆ ಸೇರದೆ ಬೇರೆ ನಕ್ಷತ್ರಗಳನ್ನು ಪರಿಭ್ರಮಿಸುವ ಗ್ರಹಗಳಿಗೆ 'ಅನ್ಯಗ್ರಹಗಳು' (ಎಕ್ಸೋ ಪ್ಲಾನೆಟ್ಸ್) ಎಂಬ ಹೊಸ ಹೆಸರು ರೂಢಿಗೆ ಬಂದಿದೆ. ಎಕ್ಸ್‌ಟ್ರಾ ಸೋಲಾರ್ ಪ್ಲಾನೆಟ್ಸ್ ಎಂಬುದರ ಹ್ರಸ್ವ ರೂಪ. ಇದು ಈಗ ಮುಂಚೂಣಿಯಲ್ಲಿರುವ ಸಂಶೋಧನಾ ಕ್ಷೇತ್ರ. ನೇರವಾಗಿ ಚಿತ್ರ ತೆಗೆದು ಹುಡುಕುವುದಂತೂ ಅಸಾಧ್ಯ. ಆದರೆ ವೇಗದ ಅಳತೆ, ಪ್ರಕಾಶದಲ್ಲಿ ನಿಯಮಿತ ಏರಿಳಿತ, ಗ್ರಾವಿಟೇಷನಲ್ ಲೆನ್ಸಿಂಗ್... ಹೀಗೆ ಹುಡುಕಾಟಗಳ ಬಗೆಬಗೆಯ ವಿಧಾನಗಳಿವೆ. ಎರಡು ದಶಕಗಳ ಪ್ರಯತ್ನದ ಫಲಿತಾಂಶಗಳು ಹೊರಬೀಳುತ್ತಿವೆ. ಹಾಗಾಗಿ ಈಚಿನ ದಿನಗಳಲ್ಲಿ ಹೊಸ ಗ್ರಹ ಕಂಡುಹಿಡಿಯಲಾಯಿತು ಎಂಬ ಸುದ್ದಿ ಆಗಾಗ್ಗೆ ಕೇಳುತ್ತಿರುತ್ತದೆ. 10 ವರ್ಷಗಳ ಕೆಳಗೆ ಆಗೊಮ್ಮೆ ಈಗೊಮ್ಮೆ ಒಂದೊಂದು ಸುದ್ದಿ ಕೇಳುತ್ತಿತ್ತು. ಈಗ ಕೆಪ್ಲರ್ ಎಂಬ ಅಂತರಿಕ್ಷ ನೌಕೆ ಆಕಾಶದ ಒಂದು ಚಿಕ್ಕ ಭಾಗವನ್ನು ಹುಡುಕಿ 5,000ಕ್ಕೂ ಹೆಚ್ಚು ಅನ್ಯಗ್ರಹಗಳನ್ನು ಪತ್ತೆ ಮಾಡಿದೆ.

ಆ ನಕ್ಷತ್ರಗಳಿಗೆ ಪಟ್ಟಿಯಲ್ಲಿನ ಐದಾರು ಅಂಕಿಗಳ ಕ್ರಮಸಂಖ್ಯೆ ಮಾತ್ರ ಇರುತ್ತದೆ. ಈ ನಕ್ಷತ್ರಗಳಿಗೆ ಮತ್ತು ಅವುಗಳ ಗ್ರಹಗಳಿಗೆ ಹೊಸ ಹೆಸರುಗಳನ್ನು ಇಡಲು ಒಕ್ಕೂಟ ಒಂದು ಯೋಜನೆ ಹಾಕಿದೆ. ಎರಡು ವರ್ಷಗಳ ಕೆಳಗೆ ಹೆಸರುಗಳನ್ನು ಆಹ್ವಾನಿಸಿ ಕೆಲವನ್ನು ಆಯ್ಕೆ ಮಾಡಿತು. ಬಿಭಾ ಚೌಧುರಿ ಎಂಬ ಭಾರತದ ಹೆಸರು ಆಗ ಆಯ್ಕೆಯಾಗಿದೆ. ಕಣಭೌತ ವಿಜ್ಞಾನಕ್ಕೆ ಮಹತ್ವದ ಕೊಡುಗೆ ನೀಡಿದ್ದರು ಈ ವಿಜ್ಞಾನಿ. ಮರೆತುಹೋಗಿದ್ದ ಅವರ ಹೆಸರು ಆಗ ಪ್ರಸ್ತಾಪಕ್ಕೆ ಬಂದಿದ್ದರಿಂದ ಎಲ್ಲರಿಗೂ ಆಕೆಯ ಮಹತ್ವದ ಸಂಶೋಧನೆಯ ಬಗ್ಗೆ ತಿಳಿಯುವಂತಾಯಿತು.

ಅಂತರರಾಷ್ಟ್ರೀಯ ಖಗೋಳ ವಿಜ್ಞಾನ ಒಕ್ಕೂಟ ಈ ವರ್ಷ ಪುನಃ ಹೆಸರುಗಳನ್ನು ಆಹ್ವಾನಿಸಿದೆ. 20 ನಕ್ಷತ್ರಗಳನ್ನು ಜೊತೆಗೆ ಅವುಗಳ ಗ್ರಹಗಳ ವಿವರಗಳನ್ನು ಅದು ವೆಬ್‌ಸೈಟ್‌ನಲ್ಲಿ ಹೆಸರಿಸಿದೆ. ಯಾರು ಬೇಕಾದರೂ ತಮ್ಮ ಸಂಸ್ಕೃತಿಯಲ್ಲಿನ ಹೆಸರುಗಳನ್ನು ಗ್ರಹ ಮತ್ತು ಅದರ ನಕ್ಷತ್ರಕ್ಕೆ ಸೂಚಿಸಬಹುದು. ಅದಕ್ಕೆ ಕೆಲವು ನಿಬಂಧನೆಗಳಿವೆ. https://www.nameexoworlds.iau.org/2022edition ವೆಬ್‌ಸೈಟ್‌ನಲ್ಲಿ ವಿವರಗಳಿವೆ. ಗೂಗಲ್ ಮಾಡುವುದಾದರೆ Name EXOworlds IAU 2022 ಎಂಬ ಪದಗಳನ್ನು ಕೊಡಿ.

ಈ ಬಾರಿ ಯಾವುದೇ ವ್ಯಕ್ತಿಯ ಹೆಸರನ್ನು ಸೂಚಿಸುವಂತಿಲ್ಲ. ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ಖಗೋಳಕ್ಕೆ ಸಂಬಂಧಿಸಿದ ಹೆಸರುಗಳಾಗಬೇಕು. ಹೆಸರುಗಳ ವೈಶಿಷ್ಟ್ಯವನ್ನು ತಿಳಿಸುವ ಜವಾಬ್ದಾರಿಯೂ ಇದೆ. ಆದರೆ ಇದು ಯಾರ ಉತ್ಸಾಹಕ್ಕೂ ತಣ್ಣೀರೆರಚುವಂತಹುದೇನೂ ಅಲ್ಲ. ನೀವು ಸೂಚಿಸುವ ಹೆಸರುಗಳನ್ನು ಒಕ್ಕೂಟ ಒಂದು ಸಲಹಾ ಸಮಿತಿಗೆ ತಲುಪಿಸುತ್ತದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ಹೆಸರು ಸ್ಪರ್ಧಿಸುತ್ತದೆ. ಡಿಸೆಂಬರ್ 11 ಕೊನೆಯ ದಿನಾಂಕ, ನೆನಪಿರಲಿ.

## ಚುರುಮುರಿ



### ಸ್ಥಾವರವೇ ಸತ್ಯ!

• ಸುಮಂಗಲಾ

'ಪ್ರತಿಮಾ ಲೋಕಕ್ಕೆ ಸುಸ್ವಾಗತ!'

'ಪ್ರತಿಮೆಯೇ ಉಸಿರು, ಪ್ರತಿಮೆಯೇ ಪ್ರಗತಿ!'

ಬೆಕ್ಕಣ್ಣ ಇನ್ನೂ ಒಂದಿಷ್ಟು ಓದಿತು. 'ಹೆಂಗದಾವು ಸ್ಲೋಗನ್ನು' ಎಂದು ಮೀಸೆ ಹಾರಿಸುತ್ತ ಕೇಳಿತು.

'ಏನಲೇ... ಸ್ಲೋಗನ್ ಸ್ಪರ್ಧೆವಳಗ ಭಾಗವಹಿಸಲಾಕೆ ಹತ್ತೀಯೇನು?'

'ಸ್ಪರ್ಧೆ ಅಲ್ಲ... ಸ್ಟ್ಯಾಚ್ಯೂಸ್ & ಸ್ಲೋಗನ್ಸ್ ಅಂತ ಕನ್‌ಸಲ್ಟನ್ಸಿ ಶುರು ಮಾಡೀನಿ. ಕಮಲಕ್ಕನ ಮನಿಯವ್ರಿಗೆ ಹಿಂತಾ ಸ್ಲೋಗನ್ನು ಬರೆದುಕೊಟ್ಟು ರೊಕ್ಕ ಮಾಡತೀನಿ. ಕೆಂಪೇಗೌಡರು ಮತ್ತು ಮೋದಿಮಾಮನ ನಡುವೆ ಸಾಮ್ಯತೆ ಐತಿ, ಇಬ್ಬರೂ ಧರ್ಮಾಧಿಪತಿಗಳು ಅಂತ ಅಶ್ವತ್ಥಂಕಲ್ಲು ಹೇಳ್ಯಾರ' ಅಂದಿತು.

'ಕೆಂಪೇಗೌಡರು ಬೆಂಗಳೂರಿನಾಗೆ ಸಾವಿರ ಕೆರೆ ಕಟ್ಟಿಸಿದ್ದರಂತೆ. ಹೊಸದಾಗಿ ಕೆರೆ ಕಟ್ಟಿಸೂದು ಬ್ಯಾಡ, ಗುಳುಂ ಮಾಡೂ ಮಂದಿಯಿಂದ ಇರೋ ಕೆರೆಗಳನ್ನಾರೂ ಬಚಾವ್ ಮಾಡ್ರಿ ಅಂತ ನಿಮ್ಮ ಮೋದಿಮಾಮಗೆ ಹೇಳಲೇ'.

'ಬೆಂಗಳೂರಿನಾಗೆ ಕೆರೆಗೇನು ಬರ? ರಸ್ತೆವಳಗ ಸಾವಿರಾರು ಗುಂಡಿ ಬಿದ್ದಾವಲ್ಲ, ಮಳೆ ಬಂದರೆ ನೀರು ತುಂಬಿ ಅವೇ ಕೆರೆಯಾಗತೈತಿ. ಇನ್ನೆಂಥ ಕೆರೆ ಬೇಕು?'

ಉಡಾಫೆಯಿಂದ ಹೇಳಿದ ಬೆಕ್ಕಣ್ಣ 'ನಾವ್ಯಾರು ಗೊತ್ತೈತಿಲ್ಲೋ... ಕೆರೆ ಕಟ್ಟಿಸಿದವರ ಪ್ರತಿಮೆಯನ್ನೇ ಕಟೆದು ನಿಲ್ಲಿಸುವವರು ನಾವು' ಎಂದು ಗರ್ವದಿಂದ ಎದೆ ತಟ್ಟಿಕೊಂಡಿತು.

'ಮಂಗ್ಯಾನಂಥವ್ನೆ... ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ ಅಂತ ಜಗಕ್ಕೇ ಸಾರಿದ ನಾಡಿನವರು ನಾವು. ನೀ ನೋಡಿದರ ಪ್ರತಿಮೆಯೇ ಪ್ರಗತಿ ಅಂತ ವದರಾಕೆ ಹತ್ತಿಯಲ್ಲ' ಎಂದು ಬೈದೆ.

'ಸ್ಥಾವರಕ್ಕಳಿವುಂಟು ಅಂತ ಸಾರಿದವರ ಪ್ರತಿಮೆಯನ್ನೇ ಗದಗ್, ಬೀದರಿನಲ್ಲಿ ಸ್ಥಾಪಿಸಿದೀವಿ, ಇನ್ನಾ ಏನು ಬೇಕು? ಕಾಂಗಿಗಳ ಕಾಲದಾಗೆ ಹಿಂತಾ ಒಂದಾರೂ ಪ್ರತಿಮೆ ಇತ್ತೇನು? ಕೋಟಿಗಟ್ಟಲೆ ಖರ್ಚು ಮಾಡಿ, ನಮ್ಮ ದೇಶದ ಎಲ್ಲಾ ಮಹಾಪುರುಷರ ನೂರಿನ್ನೂರು ಅಡಿ ಎತ್ತರದ ಪ್ರತಿಮೆ ನಿಲ್ಲಿಸಿ, ವರ್ಲ್ಡ್ ರೆಕಾರ್ಡ್ ಮಾಡೂದೇ ಪ್ರಗತಿ' ಗುರುಗುಟ್ಟಿದ ಬೆಕ್ಕಣ್ಣ ಇನ್ನೂ ಯಾವ ರಾಜ್ಯದಲ್ಲಿ ಯಾರ ಪ್ರತಿಮೆ ನಿಲ್ಲಿಸಬೇಕಿದೆ ಎಂದು ಪಟ್ಟಿ ಮಾಡತೊಡಗಿತು!

## ಸಂಗತ

# ದೇಶ ಕಟ್ಟಿದ ಮಾದರಿ ಕಾಯಕ

### ತಪ್ಪುಗಳ ಆಚೆಗೂ ವಿಸ್ತರಿಸಿಕೊಳ್ಳುವ ನೆಹರೂ ಅವರ ವ್ಯಕ್ತಿತ್ವ ಮಹತ್ವದ್ದು

• ಅರವಿಂದ ಚೊಕ್ಕಾಡಿ

**ಆನಂದ** ಭವನ ಎಸ್ಟೇಟ್‌ನ ಅರಮನೆಯಂತಹ ಮನೆಯಲ್ಲಿ ಬೆಳೆದ ಬಾಲಕನೊಬ್ಬ ಸೈಮನ್ ಕಮಿಷನ್ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಲಾಠಿ ಏಟಿಗೆ ಮೂರ್ಛೆ ತಪ್ಪಿದ್ದು, ಭಾರತದ ಸ್ವಾತಂತ್ರ್ಯಕ್ಕಾಗಿ ಸುಮಾರು 9 ವರ್ಷ ಸೆರೆಮನೆಯಲ್ಲಿ ಕಳೆದದ್ದು ಊಹಿಸಿಕೊಳ್ಳಲು ಕಷ್ಟವಾಗುವ ಇತಿಹಾಸ. ಏಕೆಂದರೆ ಆಗರ್ಭ ಶ್ರೀಮಂತರು ಸಾಮಾನ್ಯವಾಗಿ ಇಂತಹ ಸಂಕಷ್ಟಗಳಿಗೆ ತಮ್ಮನ್ನು ಒಡ್ಡಿಕೊಳ್ಳುವುದು ತೀರಾ ಕಡಿಮೆ. ಆದರೆ ಜವಾಹರಲಾಲ್ ನೆಹರೂ ತಮ್ಮನ್ನು ಆ ರೀತಿಯ ಸಂಕಷ್ಟಗಳಿಗೆ ಒಡ್ಡಿಕೊಂಡಿದ್ದರು ಮತ್ತು ತಮ್ಮ ಖಾಸಗಿ ಸಂಪತ್ತಿನ ಬಹುಪಾಲನ್ನು ದೇಶಕ್ಕಾಗಿ ಅರ್ಪಿಸಿದ್ದರು.

ತಾರುಣ್ಯದಲ್ಲಿ ಥಿಯೊಸಾಫಿಕಲ್ ಸೊಸೈಟಿಯಿಂದ ಪ್ರಭಾವಿತರಾಗಿ ನೆಹರೂ, ಹಿಂದೂ ಮತ್ತು ಬೌದ್ಧ ಧಾರ್ಮಿಕ ಸಾಹಿತ್ಯದ ಅಭ್ಯಾಸದಲ್ಲಿ ತೊಡಗಿದ್ದು ಭಾರತವನ್ನು ಅವರು ಅರ್ಥ ಮಾಡಿಕೊಳ್ಳಲು ಸಹಾಯಕವಾಗಿತ್ತು ಎಂಬುದನ್ನು 'ಡಿಸ್ಕವರಿ ಆಫ್ ಇಂಡಿಯಾ' ಸೂಚಿಸುತ್ತದೆ. ಈ ಸಾಂಸ್ಕೃತಿಕ ಸೂಕ್ಷ್ಮತೆಯು ಸ್ವತಃ ತಾನು ಹಿಂದಿಯ ಪರವಾಗಿಯೇ ಇದ್ದರೂ ಹಿಂದಿಯನ್ನು ಒಲ್ಲದವರ ಮೇಲೆ ಹೇರದೆ ಇರುವ ಎಚ್ಚರವನ್ನು ನೆಹರೂ ಅವರಲ್ಲಿ ತಂದಿತ್ತು.

ನೆಹರೂ ಸಮಾಜವಾದಿ ಆಗಿದ್ದರೂ ಅವರು ಜಾರಿಗೆ ತಂದ ಆರ್ಥಿಕ ನೀತಿಯು ಕೆನೇಶಿಯನ್ ಆರ್ಥಿಕತೆಯ ಮಾದರಿಯನ್ನು ಹೋಲುತ್ತದೆ. ಇದು, ಸರ್ಕಾರವೇ ನಿರ್ವಹಿಸಬೇಕಾದ ಆರ್ಥಿಕ ಸಂಗತಿಗಳನ್ನು ಸರ್ಕಾರವೇ ನಿರ್ವಹಿಸುವುದಕ್ಕೂ, ಖಾಸಗಿ ಘಟಕಗಳು ನಿರ್ವಹಿಸಿ ಆರ್ಥಿಕ ಅಭಿವೃದ್ಧಿಯನ್ನು ತೀವ್ರಗೊಳಿಸಬಹುದಾದ ಕ್ಷೇತ್ರಗಳನ್ನು ಖಾಸಗಿಯವರು ನಿರ್ವಹಿಸುವುದಕ್ಕೂ ಸೂಕ್ತವಾದ ವಿಶಿಷ್ಟ ಆರ್ಥಿಕತೆಯ ಮಾದರಿಯೊಂದನ್ನು ನಿರ್ವಹಿಸಿಕೊಟ್ಟಿತ್ತು.

ಬ್ರಿಟಿಷರ ವಿರುದ್ಧ ನಡೆದ ಹಲವು ರೈತ ಬಂಡಾಯಗಳು, ಕಾಶ್ಮೀರದಲ್ಲಿ ರಾಜ ಹರಿಸಿಂಗ್ ವಿರುದ್ಧ ನಡೆದ ರೈತ ಬಂಡಾಯ ಈ ಎಲ್ಲಕ್ಕೂ ಕಾರಣ ರೈತರ ಮೇಲೆ ಹಾಕುತ್ತಿದ್ದ ತೆರಿಗೆ. ಬ್ರಿಟಿಷರು ಸುಮಾರು ಶೇ 60ರಷ್ಟು ತೆರಿಗೆಯನ್ನು ಹಾಕಿದ್ದರು. 10 ಕ್ವಿಂಟಲ್ ಭತ್ತ ಬೆಳೆದ ರೈತ 6 ಕ್ವಿಂಟಲ್ ಅನ್ನು ಸರ್ಕಾರಕ್ಕೆ ಕೊಟ್ಟರೆ ಉಳಿಯುವುದರಲ್ಲಿ ಕುಟುಂಬ ನಿರ್ವಹಣೆ ಮತ್ತು ಬೇಸಾಯದ ಖರ್ಚನ್ನು ನಿರ್ವಹಿಸಬೇಕಿತ್ತು. ಈ ಅತಿಯಾದ ತೆರಿಗೆಗಳನ್ನು ತೆರವುಗೊಳಿಸಲು ನೆಹರೂ ಪ್ರಾರಂಭಿಸಿದ್ದರು. ಮನಮೋಹನ್ ಸಿಂಗ್ ನೇತೃತ್ವದ ಮೊದಲ ಅವಧಿಯ ಸರ್ಕಾರದಲ್ಲಿ ಅದು ಪೂರ್ಣಗೊಂಡು ಕೃಷಿರಂಗವು ತೆರಿಗೆಯಿಂದ ನಿರಾಳ ಭಾವ ಪಡೆಯಿತು.

ನೆಹರೂ ನೇತೃತ್ವದ ಸರ್ಕಾರದ ನಿರ್ಮಾಣಗಳಾದ ಬೃಹತ್ ನೀರಾವರಿ ಯೋಜನೆಗಳು, ಕೃಷಿಯ ಆಧುನೀಕರಣ ಎಲ್ಲವೂ ಭಾರತದ ಆಹಾರದ ಸ್ವಾವಲಂಬನೆಗೆ ಕಾರಣ. ಬ್ರಿಟಿಷರು ಪೂರ್ತಿ ಲೂಟಿ ಹೊಡೆದು ಬಿಟ್ಟು ಹೋದ ಹತಾಶ ದೇಶದ ಪ್ರಧಾನಿಯಾಗಿ ಅದರ ಮರುಸಂಕಲ್ಪದ ಕನಸನ್ನು ಜನರಲ್ಲಿ ಬಿತ್ತಿದ ನೆಹರೂ ಪ್ರಾತಃಸ್ಮರಣೀಯರಾಗಿದ್ದಾರೆ. ನೆಹರೂ ಅವರಿಗೆ ಮನುಷ್ಯರು ಮನುಷ್ಯರಷ್ಟೇ ಆಗಿದ್ದರು. ಹಿಂದೂ, ಮುಸ್ಲಿಮರಾಗಿರಲಿಲ್ಲ. ಇದರರ್ಥ ಮುಸ್ಲಿಂ ಲೀಗ್‌ನ ರಾಜಕೀಯವನ್ನು ಅವರು ಎದುರಿಸಲಿಲ್ಲ ಎಂದಲ್ಲ.

ಸೈನಿಕ ಬಲದಲ್ಲಿ ದುರ್ಬಲವಾಗಿದ್ದ ಭಾರತವನ್ನು ಸಶಕ್ತಗೊಳಿಸಲು 1949ರಲ್ಲಿ ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯನ್ನು ಸ್ಥಾಪಿಸಲಾಯಿತು. ಹೋಮಿ ಜಹಾಂಗೀರ್ ಭಾಭಾ ಅವರೊಂದಿಗಿದ್ದ ವೈಯಕ್ತಿಕ ಸ್ನೇಹವನ್ನು ಬಳಸಿಕೊಂಡು 1948ರಲ್ಲಿ ಪರಮಾಣು ಆಯೋಗವನ್ನು ನೆಹರೂ ಸ್ಥಾಪಿಸಿದರು. 1962ರಲ್ಲಿ ಸ್ಥಾಪಿಸಲಾದ ಇಸ್ರೊದ ಪ್ರಾರಂಭದ ದಿನಗಳಲ್ಲಿ ಭಾರತದ ಕೃತಕ ಉಪಗ್ರಹಗಳನ್ನು ಫ್ರಾನ್ಸ್, ರಷ್ಯಾಕ್ಕೆ ಕೊಂಡೊಯ್ದು ಉಡ್ಡಯನ ಮಾಡಬೇಕಿತ್ತು. ಇವತ್ತು ಇಸ್ರೊವೇ ಅನ್ಯ ದೇಶಗಳ ಕೃತಕ ಉಪಗ್ರಹಗಳನ್ನು ಉಡಾವಣೆ ಮಾಡಿಕೊಡುತ್ತದೆ. ಈ ಅಗಾಧ ಬೆಳವಣಿಗೆಯು ನೆಹರೂ ದೂರದೃಷ್ಟಿಯ ಫಲವೇ ಆಗಿದೆ.



ಇಂದು ಸಾಮಾಜಿಕ ನ್ಯಾಯದ ನೆಲೆಯಲ್ಲಿ ಎಲ್ಲರೂ ಒಪ್ಪುವ ಕಾರ್ಮಿಕ ಹಿತರಕ್ಷಣೆ, ಜಾತೀಯತೆಯ ನಿರ್ಮೂಲನೆ, ರೈತ ಕಲ್ಯಾಣ, ಅಸ್ಪೃಶ್ಯತೆ ನಿಷೇಧದಂತಹ ವಿಚಾರಗಳ ನಡಾವಳಿಗಳನ್ನು 1931ರಲ್ಲಿ ಕಾಂಗ್ರೆಸ್ ಅಧಿವೇಶನದಲ್ಲಿ ಮಂಡಿಸಿ ಅನುಮತಿಯನ್ನು ಪಡೆದಿದ್ದವರು ನೆಹರೂ. ಈಗ ಶಾಲಾ ಕಾಲೇಜುಗಳಲ್ಲಿ ವಾಚಿಸಲಾಗುವ ಸಂವಿಧಾನದ ಪ್ರಸ್ತಾವನಾ ಬರಹವು ಸಂವಿಧಾನ ಸಭೆಯಲ್ಲಿ ನೆಹರೂ ಅವರು ಮಂಡಿಸಿದ 'ಆಬ್ಜೆಕ್ಟಿವ್ ರೆಸಲ್ಯೂಷನ್'ನ ಭಾಗವಾಗಿತ್ತು. ದುರ್ಬಲ ವರ್ಗಗಳಿಗೆ ಮೀಸಲಾತಿ ಸೌಲಭ್ಯವನ್ನು ನೆಹರೂ ನೇತೃತ್ವದ ಸರ್ಕಾರವೇ ಜಾರಿಗೆ ತಂದಿತ್ತು. ಆದರೆ ಪ್ರತಿಭೆಯ ಬಗ್ಗೆ ಅವರಿಗೆ ಎಷ್ಟು ಕಾಳಜಿ ಇತ್ತು ಎಂದರೆ 1961ರಲ್ಲಿ ಅವರು ಮುಖ್ಯಮಂತ್ರಿಗಳಿಗೆ ಬರೆದ ಪತ್ರದಲ್ಲಿ, ಮೀಸಲಾತಿಯು ಪ್ರತಿಭಾವಂತರನ್ನು ದ್ವಿತೀಯ ಅಥವಾ ತೃತೀಯ ದರ್ಜೆಯವರಾಗದಂತೆ ನೋಡಿಕೊಳ್ಳಬೇಕು ಎಂದಿದ್ದರು.

ಅಧಿಕಾರಸ್ಥಾನದಲ್ಲಿ ಇದ್ದವರ ಕೆಲವು ನಿರ್ಧಾರಗಳು ಆ ಕ್ಷಣಕ್ಕೆ ಸೂಕ್ತ ಎನಿಸಿದರೂ, ನಂತರದ ದಿನಗಳಲ್ಲಿ ಕೆಟ್ಟ ಪರಿಣಾಮಗಳನ್ನು ಉಂಟುಮಾಡುವುದು ಸಹಜ. ಪಾಕ್ ಆಕ್ರಮಿತ ಕಾಶ್ಮೀರವು ನೆಹರೂ ಅವರಿಂದಲೇ ಸೃಷ್ಟಿಯಾದ ಸಮಸ್ಯೆಗಳಲ್ಲಿ ಒಂದು. ಇಂತಹ ತಪ್ಪುಗಳ ಬಗ್ಗೆ ನೆಹರೂ ಅವರು ಜಯಪ್ರಕಾಶ್ ನಾರಾಯಣ ಅವರೊಂದಿಗೆ, 'ನನ್ನಿಂದ ಆಗಿರಬಹುದಾದ ತಪ್ಪುಗಳಿಗೆ ಕಾರಣ ನನಗೂ ಪ್ರಧಾನ ಮಂತ್ರಿಯಾಗಿ ಕೆಲಸ ಮಾಡಿದ ಅನುಭವ ಇಲ್ಲದಿರುವುದೇ ಆಗಿದೆ' ಎಂದಿರುವುದು ದಾಖಲಾಗಿದೆ. ಆದರೆ ಅಂತಹ ತಪ್ಪುಗಳ ಆಚೆಗೂ ವಿಸ್ತರಿಸಿಕೊಳ್ಳುವ ನೆಹರೂ ಅವರ ವ್ಯಕ್ತಿತ್ವ ಮಹತ್ವದ್ದು.

ನೆಹರೂ ಅವರ ಬಗ್ಗೆ ಅವರ ಒಡನಾಡಿ ರಾಮಧಾರಿ ಸಿಂಹ ಅವರು, 'ಭಾರತೀಯರು ಧಾರ್ಮಿಕ ನಂಬಿಕೆಗಳನ್ನು ನೆಚ್ಚಿಕೊಳ್ಳದ ಒಬ್ಬ ವ್ಯಕ್ತಿಯನ್ನು ವ್ಯಾಪಕವಾಗಿ ಆದರಿಸಿದ್ದರೆ ಅದು ನೆಹರೂ ಅವರೊಬ್ಬರೇ' ಎಂದು ಬರೆದಿದ್ದಾರೆ.

## ವಾಚಕರ ವಾಣಿ

### 'ಹಿಂದೂ' ಪದ ಮತ್ತು ಸಮಷ್ಟಿ ಪ್ರಜ್ಞೆ

'ಹಿಂದೂ' ಪದ ಬಳಕೆಯಲ್ಲಿರುವುದರಿಂದ ಆ ಪದ ಎಲ್ಲಿಂದ ಬಂತು, ಹೇಗೆ ಬಂತು ಅನ್ನುವ ಹುಡುಕಾಟದ ಅಗತ್ಯ ಈಗ ಇಲ್ಲ. ಸಂಶಯಾಸ್ಪದ ತೀರ್ಮಾನಗಳಿಂದ ವರ್ತಮಾನ ಮತ್ತು ಭವಿಷ್ಯದಲ್ಲಿ ಮತ್ತೆ ಗೊಂದಲ ಮಾಡಿಕೊಳ್ಳಬಾರದು. ಈಗಾಗಲೇ ಆ ಪದಕ್ಕೊಂದು ಅರ್ಥದ ವ್ಯಾಪ್ತಿ ದಕ್ಕಿದೆ. ಸುಪ್ರೀಂ ಕೋರ್ಟ್ 'ಹಿಂದೂ' ಪದವನ್ನು ಒಂದು ಜೀವನ ಕ್ರಮ ಎಂದು ವ್ಯಾಖ್ಯಾನಿಸಿದೆ. ಈಗ ಆಚರಣೆಯಲ್ಲಿರುವ ಜೀವನ ಕ್ರಮವು ನಮಗೆ ತಿಳಿದದ್ದೇ ಆಗಿದ್ದು, ಶ್ರೇಣೀಕೃತ ಹಿಂದುತ್ವಕ್ಕೆ ಬದಲಾಗಿ ಸಮಷ್ಟಿ ಭಾವವನ್ನು ಒಳಗೊಂಡ ಭಾರತೀಯತೆಯ ತತ್ವಕ್ಕೆ ಪುಷ್ಟಿ ನೀಡಬೇಕು ಎಂದು ಸಂಸ್ಕೃತಿ ಚಿಂತಕ ಜಿ. ರಾಮಕೃಷ್ಣ ಅವರು ಸ್ಪಷ್ಟಪಡಿಸಿರುವ ಅಭಿಪ್ರಾಯ (ಪ್ರ.ವಾ., ನ. 12) ಚೆನ್ನಾಗಿದೆ. ಇದೇ ಸಂದರ್ಭದಲ್ಲಿ ಡಾ. ಆರತೀ ಬಿ.ವಿ. ಅವರು 'ಹಿಂದೂ' ಪದವನ್ನು ಧರ್ಮ ಎನ್ನುವ ಅರ್ಥಕ್ಕೆ ತಳುಕು ಹಾಕಿ ಆ ಶಬ್ದವನ್ನು ಸನಾತನಕ್ಕೆ ಎಳೆದು ತಂದಿರುವುದು ಸರಿ ಕಾಣುವುದಿಲ್ಲ.

'ಹಿಂದೂ' ಪದದ ಹಿಂದೆ ಅಡಗಿ ಕುಳಿತಿರುವ ಶ್ರೇಣೀಕೃತ ತತ್ವಕ್ಕೆ ಬದಲಾಗಿ, ನಾವು ಭಾರತೀಯರು ಅನ್ನುವ ಪರಿಕಲ್ಪನೆಯನ್ನು ಆ ಪದಕ್ಕೆ ತಂದುಕೊಡಲು ಸಾಧ್ಯವೇ? ಆದ್ದರಿಂದ ತಮಗೆ ಸರಿ ಕಂಡ ಅನಿಸಿಕೆಗಳನ್ನು ಚರ್ಚಿಸಲು, ಆಚರಿಸಲು ಬಿಡಿ. ಅದುವೇ ಪ್ರಜಾಪ್ರಭುತ್ವದ ಸೌಂದರ್ಯ.

**ತಾ.ಸಿ.ತಿಮ್ಮಯ್ಯ,** ಬೆಂಗಳೂರು

### ಡಬಲ್ ಎಂಜಿನ್ ಸರ್ಕಾರ ಎಂಬ ಮಿಥ್ಯೆ

ಉನ್ನತ ಸ್ಥಾನಗಳನ್ನು ಅಲಂಕರಿಸಿರುವ ಅನೇಕರು ಹಾಗೂ ಬಿಜೆಪಿಯ ಹಲವು ನಾಯಕರು, ಡಬಲ್ ಎಂಜಿನ್ ಸರ್ಕಾರ ಎಂದು ಆಗಿಂದಾಗ್ಗೆ ಹೇಳುತ್ತಿರುವುದು ಅಷ್ಟೇನೂ ಸರಿಕಾಣದು. ಇದೊಂದು ರೀತಿಯಲ್ಲಿ ಹಾಸ್ಯಾಸ್ಪದ ಎನಿಸುತ್ತದೆ. ಈ ಮಹಾಶಯರ ಪ್ರಕಾರ, ರಾಜ್ಯ ಮತ್ತು ಕೇಂದ್ರದಲ್ಲಿ ಒಂದೇ ಪಕ್ಷದ ನೇತೃತ್ವದ ಸರ್ಕಾರ ಇದ್ದರೆ ಅದನ್ನು ಡಬಲ್ ಎಂಜಿನ್ ಸರ್ಕಾರ ಎಂದು ಕರೆಯಲಾಗುತ್ತದೆ. ಈ ಗುಣ ವಿಶೇಷಣವನ್ನು ಉತ್ತರಪ್ರದೇಶ ಮತ್ತು ಕರ್ನಾಟಕದ ಬಗ್ಗೆ ಪದೇ ಪದೇ ಒತ್ತಿ ಹೇಳಲಾಗುತ್ತಿದೆ. ಕರ್ನಾಟಕದಲ್ಲಿ ಮುಂದಿನ ವರ್ಷ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಹೀಗಾಗಿ ಮತದಾರರನ್ನು ಓಲೈಸಲು ಕೆಲವು ನಾಯಕರು ಅನಗತ್ಯವಾದರೂ ಪದೇ ಪದೇ ಈ ಪುಂಗಿಯನ್ನು ಊದುತ್ತಿರುವುದು ಅಸಹ್ಯಕರವಾಗಿದೆ.

ಒಕ್ಕೂಟ ರಾಷ್ಟ್ರವಾದ ಭಾರತದಲ್ಲಿ ವಿವಿಧ ಜಾತಿ ಮತ್ತು ಪಂಗಡಗಳಿಗೆ ಸೇರಿರುವ ಕೋಟ್ಯಂತರ ಜನರಿದ್ದಾರೆ. ಕೇಂದ್ರ ಮತ್ತು ರಾಜ್ಯಗಳಲ್ಲಿ ಒಂದೇ ಪಕ್ಷದ ನೇತೃತ್ವದ ಸರ್ಕಾರ ಇರಬೇಕು ಎಂದು ನಮ್ಮ ರಾಜ್ಯಾಂಗದಲ್ಲಿ ಎಲ್ಲಿಯೂ ಹೇಳಿಲ್ಲ. ದೇಶದ ವಿವಿಧ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ಅಧಿಕಾರದಲ್ಲಿವೆ. ತಮಗೆ ಇಷ್ಟ ಬಂದ ಪಕ್ಷವನ್ನು ಅಧಿಕಾರಕ್ಕೆ ತರುವುದು ಆಯಾ ರಾಜ್ಯದ ಮತದಾರ ಪ್ರಭುಗಳ ತೀರ್ಮಾನ. ಅದುಬಿಟ್ಟು ಡಬಲ್ ಎಂಜಿನ್ ಸರ್ಕಾರ ಇದ್ದರೆ ಮಾತ್ರ ಅಭಿವೃದ್ಧಿ ಸಾಧ್ಯ ಎಂಬುದು ಪ್ರಜಾಪ್ರಭುತ್ವ ವಿರೋಧಿ ಧೋರಣೆ. ಒಂದು ವೇಳೆ ನೀವು ಬೇರೆ ಪಕ್ಷಕ್ಕೆ ಮತ ನೀಡಿದರೆ, ನಿಮ್ಮ ರಾಜ್ಯದ ಅಭಿವೃದ್ಧಿಗೆ ಕೇಂದ್ರ ಸರ್ಕಾರದ ನೆರವು ಸಿಗುವುದಿಲ್ಲ ಎಂಬ ಪರೋಕ್ಷ ಸೂಚನೆಯನ್ನು ಸಹ ಡಬಲ್ ಎಂಜಿನ್ ಸರ್ಕಾರದ ಪ್ರವರ್ತಕರು ನೀಡುತ್ತಿದ್ದಾರೆ. ಆದ್ದರಿಂದ ನಾಯಕರು ಇನ್ನು ಮುಂದಾದರೂ ಡಬಲ್ ಎಂಜಿನ್ ಸರ್ಕಾರ ಎಂಬ ಅನರ್ಥಕ ಪದವನ್ನು ಬಳಸದಿರುವುದು ಒಳ್ಳೆಯದು.

**ಕೆ.ವಿ.ವಾಸು,** ಮೈಸೂರು

### ವೇತನ ಆಯೋಗವೂ ಜನವಿರೋಧಿ ಕ್ರಮವೂ

ರಾಜ್ಯದ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೊಸ ಆಯೋಗವನ್ನು ರಚಿಸಿದ್ದಾರೆ. ಈ ಸಂದರ್ಭದಲ್ಲಿ ಅವರು 'ಪ್ರತಿದಿನ ಒಂದು ಗಂಟೆ ಹೆಚ್ಚು ಕೆಲಸ ಮಾಡಿ' ಎಂದು ಕರೆ ನೀಡಿದ್ದಾರೆ. ಅದರ ಬದಲು ಅವರು 'ಜನರಿಗೆ ಕಿರುಕುಳ ನೀಡಬೇಡಿ, ಲಂಚಕ್ಕಾಗಿ ಪೀಡಿಸಬೇಡಿ' ಎಂದು ತಾಕೀತು ಮಾಡಬೇಕಿತ್ತು. 2001ರಲ್ಲಿ ಕೇಂದ್ರ ಜಾಗೃತ ಆಯುಕ್ತ ಎನ್.ವಿಠಲ್ ಅವರು ಬೆಂಗಳೂರಿನ ಕಾರ್ಯಕ್ರಮವೊಂದರಲ್ಲಿ ಮಾಡಿದ ಭಾಷಣದಲ್ಲಿ, 'ಅಕ್ಷರಸ್ಥರನ್ನು ಸಾಕ್ಷರರು ಎನ್ನುತ್ತೇವೆ. ಆದರೆ ಸಾಕ್ಷರಾ ಎನ್ನುವುದನ್ನು ತದ್ವಿರುದ್ಧವಾಗಿ ಓದಿದರೆ ರಾಕ್ಷಸ ಎಂದಾಗುತ್ತದೆ. ಪ್ರತೀ ಸರ್ಕಾರಿ ಕಚೇರಿಯಲ್ಲಿಯೂ ಅಕ್ಷರಸ್ಥರೇ ಜನರ ಪಾಲಿಗೆ ರಾಕ್ಷಸರಾಗುತ್ತಿದ್ದಾರೆ' ಎಂಬ ಅರ್ಥ ಬರುವ ಶ್ಲೋಕವನ್ನು ಉದ್ಧರಿಸಿ ಆಕ್ರೋಶ ವ್ಯಕ್ತಪಡಿಸಿದ್ದರು.

ಸರ್ಕಾರಿ ನೌಕರರ ಒರಟು ನಡವಳಿಕೆಯಿಂದ ಜನ ರೋಸಿ ಹೋಗಿದ್ದಾರೆ. ಕೆಲವು ಹಿರಿಯ ನಾಗರಿಕರು 'ಇವರಿಗಿಂತ ಬ್ರಿಟಿಷರೇ ಉತ್ತಮವಾಗಿದ್ದರು' ಎಂದು ಹೇಳುತ್ತಿರುತ್ತಾರೆ. ಜನರ ತೆರಿಗೆ ಹಣದಲ್ಲಿ ಸರ್ಕಾರವು ನೌಕರರಿಗೆ ಪ್ರತೀ ತಿಂಗಳು ತಪ್ಪಿಸದೆ ಸಂಬಳ ನೀಡುತ್ತದೆ. ನಿವೃತ್ತಿ ನಂತರ ವಿವಿಧ ಸೌಲಭ್ಯಗಳ ಜೊತೆಗೆ ಕೂರಿಸಿ ಪಿಂಚಣಿಯನ್ನೂ ನೀಡುತ್ತದೆ. ಸರ್ಕಾರದ ಬಜೆಟ್ಟಿನ ಬಹುಪಾಲು ಹಣ ಇವರ ಸಂಬಳ-ಸಾರಿಗೆಗೇ ಹೋಗುತ್ತದೆ. ಇಷ್ಟಾದರೂ ಇವರು ಸಾರ್ವಜನಿಕರ ಸೇವೆ ಮಾಡುವ ಬದಲು ಅವರಿಗೆ ದ್ರೋಹ ಮಾಡುತ್ತಿದ್ದಾರೆ. ರಾಜ್ಯದ ಜನರ ವಿಶ್ವಾಸವನ್ನು ಕಳೆದುಕೊಂಡಿರುವ ಸರ್ಕಾರಿ ನೌಕರರ ವೇತನವನ್ನು ಏರಿಸುವ ಅಗತ್ಯವೇ ಇರಲಿಲ್ಲ. ಕೋವಿಡ್‌ನಂತಹ ದುರಿತ ಕಾಲದಲ್ಲಿ ಲಕ್ಷಾಂತರ ಜನರ ಬದುಕು ನಾಶವಾಯಿತು. ಅನೇಕ ಉದ್ಯಮಿಗಳೂ ಶ್ರೀಮಂತರೂ ದಿವಾಳಿಯಾದರು. ಆದರೆ ಸರ್ಕಾರಿ ನೌಕರರಿಗೆ ಮಾತ್ರ ಸಂಬಳ ತಪ್ಪಿರಲಿಲ್ಲ. ದೇಶದಲ್ಲಿ ಬದುಕಿನ ಭದ್ರತೆ ಇರುವುದು ಸರ್ಕಾರಿ ನೌಕರರಿಗೆ ಮಾತ್ರ. ಆದ್ದರಿಂದ ಮುಖ್ಯಮಂತ್ರಿ ಹೊಸ ವೇತನ ಆಯೋಗವನ್ನು ರಚಿಸಿರುವುದು ಜನವಿರೋಧಿ ಕ್ರಮವಾಗಿದೆ.

**ಸಿ.ರುದ್ರಪ್ಪ,** ಬೆಂಗಳೂರು

### ಭತ್ತ ಖರೀದಿ ಕೇಂದ್ರ ಆರಂಭವಾಗಲಿ

ರಾಜ್ಯದ ಬಹುತೇಕ ಕಡೆ ಭತ್ತ ಕಟಾವು ಅಂತಿಮ ಹಂತ ತಲುಪಿದೆ. ಆದರೂ ರಾಜ್ಯ ಸರ್ಕಾರವು ಖರೀದಿ ಕೇಂದ್ರವನ್ನೂ ಆರಂಭಿಸಿಲ್ಲ, ಬೆಂಬಲ ಬೆಲೆಯನ್ನೂ ಘೋಷಿಸಿಲ್ಲ. ಹೀಗಾಗಿ, ರೈತರು ತಾವು ಬೆಳೆದ ಬಹುಪಾಲು ಭತ್ತವನ್ನು ಕಳೆದ ಬಾರಿಯಂತೆ ಮಿಲ್‌ಗಳಿಗೆ ನೀಡಲು ಆರಂಭಿಸಿದ್ದಾರೆ. ಪ್ರತಿಬಾರಿಯೂ ರೈತರು ಕಟಾವು ಮಾಡಿದ ಭತ್ತವು ಮಧ್ಯವರ್ತಿಗಳ ಕೈಸೇರಿದ ಬಳಿಕ ಸರ್ಕಾರ ಬೆಂಬಲ ಬೆಲೆ ಘೋಷಿಸುವುದು, ಖರೀದಿ ಕೇಂದ್ರ ಆರಂಭಿಸುವುದನ್ನು ಮಾಡಿಕೊಂಡು ಬಂದಿದೆ. ಈ ಬಾರಿಯೂ ಇಂತಹುದೇ ಕಥೆ. ಸಣ್ಣ ಹಿಡುವಳಿದಾರರಿಗೆ ಕಟಾವು ಮಾಡಿದ ಭತ್ತವನ್ನು ಸಂಗ್ರಹಿಸಿ ಇಟ್ಟುಕೊಂಡು ಸರ್ಕಾರ ಖರೀದಿ ಕೇಂದ್ರ ತೆರೆಯುವವರೆಗೂ ಕಾಯಲು ಬೇಕಾದ ವ್ಯವಸ್ಥೆ ಇಲ್ಲದಿರುವುದರಿಂದ, ಕಟಾವು ಆಗುತ್ತಿದ್ದಂತೆಯೇ ಭತ್ತವನ್ನು ಮಾರಾಟ ಮಾಡುತ್ತಾರೆ. ಇದರಿಂದ ಮಧ್ಯವರ್ತಿಗಳಿಗೆ ಲಾಭ ಆಗುತ್ತದೆ. ಭತ್ತದ ಬೆಳೆಗಾರರಿಗೆ ನೇರ ಪ್ರಯೋಜನ ಸಿಗುವಂತೆ ಆಗಬೇಕಾದರೆ ಕೂಡಲೇ ಭತ್ತ ಖರೀದಿ ಕೇಂದ್ರ ತೆರೆಯಬೇಕಾಗಿದೆ.

**ವಿಜಯಕುಮಾರ್ ಎಚ್.ಕೆ.,** ರಾಯಚೂರು

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ಸಿಲಿಕಾನ್ ವ್ಯಾಲಿಯಲ್ಲಿ ಬಿರುಗಾಳಿ

## ನೌಕರಿಗೆ ಕತ್ತರಿ

ಪ್ರಜಾವಾಣಿ ವಾರ್ತೆ

‘ಮೆಟಾಕ್ಕೆ ಸೇರಿಕೊಳ್ಳುವುದಕ್ಕಾಗಿ ಎರಡು ದಿನಗಳ ಹಿಂದೆ ನಾನು ಕೆನಡಾಕ್ಕೆ ಸ್ಥಳಾಂತರಗೊಂಡೆ. ಕೆಲಸಕ್ಕೆ ಸೇರಿದ ಎರಡೇ ದಿನಗಳಲ್ಲಿ ನನ್ನ ಪಯಣ ಕೊನೆಗೊಂಡಿತು. ಭಾರಿ ಉದ್ಯೋಗ ಕಡಿತವು ನನ್ನನ್ನೂ ಬಾಧಿಸಿದೆ. ಈಗ, ಅತ್ಯಂತ ಕ್ಲಿಷ್ಟಕರ ಸನ್ನಿವೇಶದಲ್ಲಿರುವ ಎಲ್ಲರ ಬಗ್ಗೆಯೂ ನನಗೆ ಮರುಕ ಇದೆ. ನನ್ನ ಭವಿಷ್ಯ ಏನು? ಪ್ರಾಮಾಣಿಕವಾಗಿ ಹೇಳುವುದಾದರೆ ನನಗೆ ಏನೂ ಗೊತ್ತಿಲ್ಲ. ಮುಂದೆ ಏನಾಗಲಿದೆ ಎಂಬುದನ್ನಷ್ಟೇ ಎದುರು ನೋಡುತ್ತಿದ್ದೇನೆ. ಯಾವುದೇ ಹುದ್ದೆ ಅಥವಾ ಸಾಫ್ಟ್‌ವೇರ್ ಎಂಜಿನಿಯರ್ ನೇಮಕಾತಿ ಕುರಿತು ತಿಳಿದರೆ ನನಗೆ ಮಾಹಿತಿ ಕೊಡಿ (ಭಾರತ ಅಥವಾ ಕೆನಡಾ)’. ಹಿಮಾಂಶು ವಿ. ಎಂಬವರು ಸಾಮಾಜಿಕ ಜಾಲತಾಣದಲ್ಲಿ ಹೇಳಿಕೊಂಡ ಮಾತು ಇದು. ಇದು ಇವರೊಬ್ಬರ ಕತೆಯಲ್ಲ, ಇಂತಹ ನೋವನ್ನು ಸಿಲಿಕಾನ್ ವ್ಯಾಲಿಯ ವಿವಿಧ ಕಂಪನಿಗಳಲ್ಲಿ ಕೆಲಸ ಮಾಡಿ, ಈಗ ಕೆಲಸ ಕಳೆದುಕೊಂಡ ಹಲವರು ತೋಡಿಕೊಂಡಿದ್ದಾರೆ.

ತಂತ್ರಜ್ಞಾನ ಕ್ಷೇತ್ರ ಎಂಬುದು ಅಕ್ಷಯ ಪಾತ್ರೆ ಎಂಬ ಮಿಥ್ಯೆ ಒಡೆದು ಹೋಗಿದೆ. ಅಮೆರಿಕದ ಸಿಲಿಕಾನ್ ವ್ಯಾಲಿಯ ಪ್ರತಿಷ್ಠಿತ ಕಂಪನಿಗಳೆಲ್ಲವೂ ತಮ್ಮ ನೌಕರರನ್ನು ಹೊರಗಟ್ಟುತ್ತಿವೆ. ನೇಮಕಾತಿಯನ್ನು ಸ್ಥಗಿತಗೊಳಿಸಿವೆ. ಯುವ ವೃತ್ತಿಪರರು ತತ್ತರಿಸಿದ್ದಾರೆ.

ಫೇಸ್‌ಬುಕ್‌ನ ಮಾತೃಸಂಸ್ಥೆ ‘ಮೆಟಾ ಪ್ಲಾಟ್‌ಫಾರ್ಮ್ಸ್’ ತನ್ನ ನೌಕರರಲ್ಲಿ ಶೇ 13ರಷ್ಟು ಮಂದಿಯನ್ನು ಮನೆಗೆ ಕಳುಹಿಸಿದೆ. 11 ಸಾವಿರಕ್ಕೂ ಹೆಚ್ಚು ಮಂದಿ ನೌಕರಿ ಕಳೆದುಕೊಂಡು ಅತಂತ್ರರಾಗಿದ್ದಾರೆ. ಮೆಟಾ ಪ್ಲಾಟ್‌ಫಾರ್ಮ್ಸ್‌ನ ಅಧ್ಯಕ್ಷ ಮಾರ್ಕ್ ಜುಕರ್‌ಬರ್ಗ್ ಅವರು ಕಳೆದ ಬುಧವಾರ ಕಂಪನಿಯ ನೌಕರರಿಗೆ ಕಳುಹಿಸಿದ ಸಂದೇಶ ಹೀಗಿತ್ತು:

‘ಮೆಟಾದ ಇತಿಹಾಸದಲ್ಲಿಯೇ ಅತ್ಯಂತ ಕಷ್ಟಕರವಾದ ಕೆಲವು ಬದಲಾವಣೆಗಳ ಮಾಹಿತಿಯನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ಕಂಪನಿಯ ನೌಕರ ಬಲವನ್ನು ಶೇ 13ರಷ್ಟು ಕುಗ್ಗಿಸಲು ತೀರ್ಮಾನಿಸಿದ್ದೇನೆ. ಕೆಲವು ಖರ್ಚು ವೆಚ್ಚಗಳನ್ನು ಕಡಿತ ಮತ್ತು ಇತರ ಹೆಚ್ಚುವರಿ ಕ್ರಮಗಳ ಮೂಲಕ ಕಂಪನಿಯು ಇನ್ನಷ್ಟು ದಕ್ಷವಾಗಲಿದೆ. ನೇಮಕಾತಿ ಸ್ಥಗಿತವು ಈ ತ್ರೈಮಾಸಿಕದಲ್ಲಿಯೂ ಮುಂದುವರಿಯಲಿದೆ. ಕಂಪನಿಯು ಈಗಿನ ಸ್ಥಿತಿಗೆ ಬಂದಿರುವುದರ ಹೊಣೆಯನ್ನು ನಾನೇ ಹೊತ್ತುಕೊಳ್ಳುತ್ತೇನೆ. ಇದು ಎಲ್ಲರಿಗೂ ಕಷ್ಟದ ಸಂದರ್ಭ ಎಂಬುದು ನನಗೆ ಗೊತ್ತಿದೆ. ಬಾಧಿತರಾದ ಎಲ್ಲರ ಕ್ಷಮೆ ಯಾಚಿಸುತ್ತೇನೆ’ ಎಂಬ ಸಂದೇಶವು ಹಲವರ ಬಾಳಿಗೆ ಕತ್ತಲೆ ಕವಿಯುವಂತೆ ಮಾಡಿದೆ.



ತಂತ್ರಜ್ಞಾನ ಕ್ಷೇತ್ರದ ಕಂಪನಿಗಳ ಈಗಿನ ಸ್ಥಿತಿಗೆ ಪರೋಕ್ಷವಾಗಿ ಕೋವಿಡ್ ಕಾರಣ ಎಂದು ಹೇಳಲಾಗುತ್ತಿದೆ. ಕೋವಿಡ್‌ನಿಂದಾದ ಲಾಕ್‌ಡೌನ್ ಮತ್ತು ಸಂಚಾರ ನಿರ್ಬಂಧ ತಂತ್ರಜ್ಞಾನದ ಮೇಲಿನ ಅವಲಂಬನೆಯನ್ನು ಹೆಚ್ಚಿಸಿದವು. ‘ಮನೆಯಿಂದಲೇ ಕೆಲಸ’ ಎಂಬ ಪರಿಕಲ್ಪನೆ ಕೂಡ ತಂತ್ರಜ್ಞಾನ ಕಂಪನಿಗಳ ವಿಸ್ತರಣೆಗೆ ಅನುವು ಮಾಡಿಕೊಟ್ಟಿತು. ಅದುವೇ ವಾಸ್ತವ ಎಂದು ಭಾವಿಸಿದ ಹಲವು ಕಂಪನಿಗಳು ವಿಸ್ತರಣೆಗಾಗಿ ವಿಪರೀತ ಹೂಡಿಕೆ ಮಾಡಿವೆ. ನೇಮಕಾತಿಯನ್ನು ಕೂಡ ಎಗ್ಗಿಲ್ಲದೆ ಮಾಡಲಾಯಿತು. ಆದರೆ, ಈಗ ಜಗತ್ತು ಬಹುಪಾಲು ಕೋವಿಡ್‌ಪೂರ್ವದ ಸ್ಥಿತಿಗೆ ಮರಳಿದೆ. ಕೆಲಸವು ಮನೆಯಿಂದ ಕಚೇರಿಗೆ ಸ್ಥಳಾಂತರಗೊಂಡಿದೆ. ತಂತ್ರಜ್ಞಾನ, ಇ–ಕಾಮರ್ಸ್ ಇತ್ಯಾದಿ ಮೇಲಿನ ಅವಲಂಬನೆ ತಗ್ಗಿದೆ.

ಇದರ ಜೊತೆಗೆ ಜಗತ್ತು ಮತ್ತೊಂದು ಆರ್ಥಿಕ ಹಿಂಜರಿತದತ್ತ ಸಾಗುತ್ತಿದೆ ಎಂಬ ಭೀತಿಯೂ ಮೂಡಿದೆ. ‘ಆರ್ಥಿಕ ಹಿಂಜರಿತ ಉಂಟಾಗಲಿದೆಯೇ ಎಂಬ ಪ್ರಶ್ನೆ ಈಗ ಇಲ್ಲ. ಆರ್ಥಿಕ ಹಿಂಜರಿತ ಯಾವಾಗ ಕಾಣಿಸಿಕೊಳ್ಳಲಿದೆ ಎಂಬುದಷ್ಟೇ ಈಗಿರುವ ಪ್ರಶ್ನೆ’ ಎಂದು ಹಲವು ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ. ಜಗತ್ತಿನ ಬಹುತೇಕ ದೇಶಗಳ ಕೇಂದ್ರೀಯ ಬ್ಯಾಂಕುಗಳು ಬಡ್ಡಿದರವನ್ನು ಸತತವಾಗಿ ಏರಿಸಿ, ಹಣದುಬ್ಬರನ್ನು ನಿಯಂತ್ರಿಸಲು ಏದುಸಿರು ಬಿಡುತ್ತಿವೆ. ಹಾಗಾಗಿಯೇ 2023ರಲ್ಲಿ ಜಗತ್ತು ಆರ್ಥಿಕ ಹಿಂಜರಿತಕ್ಕೆ ಒಳಗಾಗಬಹುದು ಎಂದು ವಿಶ್ವ ಬ್ಯಾಂಕ್ ಹೇಳಿದೆ.

ಅಮೆರಿಕ, ಭಾರತ, ಬ್ರಿಟನ್ ಮುಂತಾದ ಪ್ರಮುಖ ಆರ್ಥಿಕತೆಗಳು ಹಣದುಬ್ಬರದಿಂದ ಬಸವಳಿದಿವೆ. ಅಮೆರಿಕವು ಸತತ ಎರಡು ತ್ರೈಮಾಸಿಕಗಳಲ್ಲಿ ನಕಾರಾತ್ಮಕ ಪ್ರಗತಿ ದಾಖಲಿಸಿದೆ. ಅಮೆರಿಕದಲ್ಲಿ ಗ್ರಾಹಕ ವಸ್ತುಗಳ ಬೇಡಿಕೆ ಪಾತಾಳಕ್ಕೆ ಕುಸಿದಿದೆ. ಅಲ್ಲಿ ಈಗ ಹಣದುಬ್ಬರವು 7.7ರಷ್ಟಿದೆ. ಕಳೆದ ತಿಂಗಳು ಇದು ಶೇ 8.2ರಷ್ಟಿತ್ತು. ಇದು 40 ವರ್ಷಗಳಲ್ಲೇ ಗರಿಷ್ಠವಾಗಿದೆ.

ಜಗತ್ತು ಆರ್ಥಿಕ ಹಿಂಜರಿತದತ್ತ ಸಾಗುವುದಕ್ಕೆ ಕೋವಿಡ್ ಸಾಂಕ್ರಾಮಿಕವೂ ಒಂದು ಕಾರಣ ಎಂದು ಆರ್ಥಿಕ ತಜ್ಞರು ಹೇಳುತ್ತಿದ್ದಾರೆ. ಸಾಂಕ್ರಾಮಿಕ ಸಂದರ್ಭದಲ್ಲಿ ಆದ ಉದ್ಯೋಗ ನಷ್ಟ, ಉತ್ಪಾದನೆ ಕಡಿತ, ಆದಾಯ ಕುಸಿತದ ಪರಿಣಾಮವು ಈಗ ಕಾಣಿಸಿಕೊಳ್ಳುತ್ತಿದೆ. ಉಕ್ರೇನ್ ಮೇಲೆ ರಷ್ಯಾ ಆಕ್ರಮಣದ ಪರಿಣಾಮವೂ ಇದೆ. ಹೀಗಾಗಿಯೇ ಅಮೆರಿಕ ಮತ್ತು ಇತರೆಡೆಗಳ ತಂತ್ರಜ್ಞಾನ ಕಂಪನಿಗಳು ವೆಚ್ಚ ಕಡಿತದ ಭಾಗವಾಗಿ ನೌಕರರ ಸಂಖ್ಯೆಯನ್ನು ಕಡಿಮೆ ಮಾಡುತ್ತಿವೆ. ಮುಂದೆ ಬರಬಹುದಾದ ಆರ್ಥಿಕ ಹಿಂಜರಿತವು ಎಷ್ಟು ತೀವ್ರವಾಗಿರಲಿದೆ ಎಂಬುದನ್ನು ಈಗ ಅಂದಾಜಿಸಲು ಆಗದು ಎಂಬುದು ಹಲವು ಅರ್ಥಶಾಸ್ತ್ರಜ್ಞರ ಅಭಿಮತ.

### ● ಉದ್ಯೋಗಿಗಳ ಜತೆ ಮಸ್ಕ್ ಚೆಲ್ಲಾಟ

**ಟ್ವಿಟರ್ 50%**

ಪ್ರಮುಖ ಸಾಮಾಜಿಕ ಜಾಲತಾಣವಾದ ‘ಟ್ವಿಟರ್’ ಖರೀದಿ ಪ್ರಕ್ರಿಯೆ ಮುಗಿಯುತ್ತಿದ್ದಂತೆಯೇ, ವಿಶ್ವದ ಅತಿ ಶ್ರೀಮಂತ ಉದ್ಯಮಿ ಇಲಾನ್ ಮಸ್ಕ್ ಮಾಡಿದ ಮೊದಲ ಕೆಲಸವೆಂದರೆ, ಸಂಸ್ಥೆಯ ಸಿಇಒ ಪರಾಗ್ ಅಗ್ರವಾಲ್, ಸಿಎಫ್‌ಒ ನೆಡ್ ಸೆಗೆಲ್, ನೀತಿ ಮುಖ್ಯಸ್ಥೆ ವಿಜಯಾ ಗಡ್ಡೆ ಸೇರಿದಂತೆ ಅರ್ಧದಷ್ಟು ಉದ್ಯೋಗಿಗಳನ್ನು ಕೆಲಸದಿಂದ ತೆಗೆದುಹಾಕುವ ಆದೇಶ ಹೊರಡಿಸಿದ್ದು. ಭಾರತದ ಸುಮಾರು 300 ಉದ್ಯೋಗಿಗಳು ಕೆಲಸ ಕಳೆದುಕೊಂಡಿದ್ದಾರೆ. ಇದಾದ ಬಳಿಕ, ಅತ್ಯಗತ್ಯದ ಕೆಲಸಗಳನ್ನು ನಿರ್ವಹಿಸಲು ಕೆಲಸಗಾರರೇ ಇಲ್ಲದ ಪರಿಸ್ಥಿತಿ ನಿರ್ಮಾಣವಾಯಿತು. ಹೀಗಾಗಿ, ತಕ್ಷಣವೇ ಕೆಲವು ಉದ್ಯೋಗಿಗಳನ್ನು ವಾಪಸ್ ಬರುವಂತೆ ಸೂಚಿಸಲಾಯಿತು. ನ.4ರಂದು ಕೆಲಸದಿಂದ ತೆಗೆಯುವ ಆದೇಶ ಹೊರಡಿಸುವ ಮುನ್ನ, ಸಂಸ್ಥೆಯಲ್ಲಿ ಒಟ್ಟು 7,500 ಜನರು ಕೆಲಸ ಮಾಡುತ್ತಿದ್ದರು. ಮಸ್ಕ್ ಒಡೆತನದ ಟೆಸ್ಲಾ ಕಂಪನಿಯ ಆಟೊಪೈಲಟ್ ವಿಭಾಗದ ಶೇ 10ರಷ್ಟು ನೌಕರರನ್ನೂ ತೆಗೆದುಹಾಕಲು ನಿರ್ಧರಿಸಲಾಗಿದೆ.

### ● ಶೇ 13ರಷ್ಟು ಉದ್ಯೋಗಿಗಳು ಮನೆಗೆ

**ಮೆಟಾ 11,000**

ಜನಪ್ರಿಯ ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನ ಮಾತೃಸಂಸ್ಥೆ ಮೆಟಾ ತನ್ನ 11,000ಕ್ಕೂ ಹೆಚ್ಚು ಸಿಬ್ಬಂದಿಯನ್ನು ಕಚೇರಿಯಿಂದ ಹೊರನಡೆಯುವಂತೆ ಸೂಚಿಸಿ, ತಂತ್ರಜ್ಞಾನ ವಲಯದಲ್ಲಿ ಸಂಚಲನ ಸೃಷ್ಟಿಸಿತು. 18 ವರ್ಷಗಳ ಸಂಸ್ಥೆಯ ಇತಿಹಾಸದಲ್ಲಿ ಉದ್ಯೋಗಿಗಳನ್ನು ತೆಗೆದುಹಾಕಿದ್ದು ಇದು ಮೊದಲು. ಮೆಟಾದ ಅಡಿಯಲ್ಲಿ ಕೆಲಸ ಮಾಡುತ್ತಿದ್ದ ಶೇ 13ರಷ್ಟು ಉದ್ಯೋಗಿಗಳ ಕೆಲಸ ಕಳೆದುಕೊಂಡಿದ್ದು, ಇದು ಅಮೆರಿಕದ ಐಟಿ ಕಂಪನಿಗಳಲ್ಲೇ ಅತಿದೊಡ್ಡ ಉದ್ಯೋಗನಷ್ಟ ಎನಿಸಿಕೊಂಡಿದೆ.

### ● ಅರ್ಧದಷ್ಟು ನೌಕರರಿಗೆ ಕೆಲಸವಿಲ್ಲ

**ಸ್ನ್ಯಾಪ್ 20%**

‘ಸ್ನ್ಯಾಪ್‌ಚಾಟ್’ ಆ್ಯಪ್ ಅಭಿವೃದ್ಧಿಪಡಿಸಿರುವ ‘ಸ್ನ್ಯಾಪ್’ ಸಂಸ್ಥೆಯು ಇದೇ ಆಗಸ್ಟ್‌ನಲ್ಲಿ ಶೇ 20ರಷ್ಟು ಉದ್ಯೋಗ ಕಡಿತದ ಘೋಷಣೆ ಮಾಡಿತ್ತು. ಸಂಸ್ಥೆಯಲ್ಲಿ 6,400 ಜನರು ಕೆಲಸ ಮಾಡುತ್ತಿದ್ದು, ಸಂಸ್ಥೆಯ ಷೇರುಗಳು ಮಾರುಕಟ್ಟೆಯಲ್ಲಿ ಶೇ 80ರಷ್ಟು ಕುಸಿತ ಕಂಡಿರುವುದೇ ಈ ಕಠಿಣ ನಿರ್ಧಾರಕ್ಕೆ ಕಾರಣ ಎಂದು ಹೇಳಿಕೆ ನೀಡಿತ್ತು. ಸಂಸ್ಥೆಯು ದೀರ್ಘಕಾಲ ಉಳಿಯಬೇಕಾದರೆ ಈ ಕ್ರಮ ಅನಿವಾರ್ಯ ಎಂದು ಉದ್ಯೋಗಿಗಳಿಗೆ ಕಳುಹಿಸಿದ್ದ ಇಮೇಲ್‌ನಲ್ಲಿ ವಿವರಣೆ ನೀಡಿತ್ತು.

### ● ತಂತ್ರಜ್ಞಾನ ಕ್ಷೇತ್ರದ ಬೃಹತ್ ಕಂಪನಿಯಿಂದಲೂ ಕೆಲಸಕ್ಕೆ ಕತ್ತರಿ

**ಮೈಕ್ರೊಸಾಫ್ಟ್ 1,000**

ತಂತ್ರಜ್ಞಾನ ಕ್ಷೇತ್ರದ ಬೃಹತ್ ಕಂಪನಿ ಮೈಕ್ರೊಸಾಫ್ಟ್ ಉದ್ಯೋಗಿಗಳ ಮರು ಹೊಂದಾಣಿಕೆ ಉದ್ದೇಶದಿಂದ ಕೆಲವರನ್ನು ಕೆಲಸದಿಂದ ತೆಗೆಯುವ ನಿರ್ಧಾರವನ್ನು ಪ್ರಕಟಿಸಿದೆ. 1.80 ಲಕ್ಷ ಜನರು ಸಂಸ್ಥೆಯ ಉದ್ಯೋಗಿಗಳಾಗಿದ್ದು ಇದರಲ್ಲಿ ಶೇ 1ರಷ್ಟು ಜನರನ್ನು ಮನೆಗೆ ಕಳುಹಿಸಲು ನಿರ್ಧರಿಸಿದೆ. ಈ ಪೈಕಿ ಸರಿಸುಮಾರು 1,000 ಉದ್ಯೋಗಿಗಳು ಕೆಲಸ ಕಳೆದುಕೊಂಡಿದ್ದಾರೆ ಎಂದು ‘ಆಕ್ಸಿಯೋಸ್’ ವರದಿ ಮಾಡಿದೆ.

### ● ಚಿಪ್ ಕಂಪನಿಯ ಕಠಿಣ ಕ್ರಮ

**ಇಂಟೆಲ್ 20%**

ಕಂಪ್ಯೂಟರ್ ಚಿಪ್ ತಯಾರಿಕಾ ಕಂಪನಿ ಇಂಟೆಲ್, ವೆಚ್ಚ ಕಡಿತ ಉದ್ದೇಶದಿಂದ ತನ್ನ ಶೇ 20ರಷ್ಟು ಉದ್ಯೋಗಿಗಳನ್ನು ಕಡಿತಗೊಳಿಸಲು ನಿರ್ಧರಿಸಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಕೋವಿಡ್ ನಂತರ ಉಂಟಾದ ಆರ್ಥಿಕ ಬಿಕ್ಕಟ್ಟು ಸರಿಪಡಿಸಿಕೊಳ್ಳಲು ಇಂಟೆಲ್ ಈ ನಿರ್ಧಾರಕ್ಕೆ ಬಂದಿದೆ.

### ● ಹಣಕಾಸು ಸಂಸ್ಥೆಯೂ ಹೊರತಲ್ಲ

**ಸ್ಟ್ರಿಪ್ 7,000**

ಅಮೆಜಾನ್, ಉಬರ್‌ನಂತಹ ಸಂಸ್ಥೆಗಳಿಗೆ ಪಾವತಿ ಪ್ರಕ್ರಿಯೆ ಸಾಫ್ಟ್‌ವೇರ್ ಒದಗಿಸುತ್ತಿರುವ ಐರಿಷ್–ಅಮೆರಿಕನ್ ಹಣಕಾಸು ಸೇವಾ ಸಂಸ್ಥೆಯಾದ ‘ಸ್ಟ್ರಿಪ್’ ಸಹ ತನ್ನ ಶೇ 14ರಷ್ಟು ಉದ್ಯೋಗಿಗಳಿಗೆ (ಸುಮಾರು 7,000) ಮನೆ ದಾರಿ ತೋರಿಸಿದೆ. ಇದಕ್ಕೆ ಹಣದುಬ್ಬರ, ಅಧಿಕ ಬಡ್ಡಿದರಗಳ ಕಾರಣಗಳನ್ನು ಕಂಪನಿ ಪಟ್ಟಿ ಮಾಡಿದೆ.

### ● ‘ಉತ್ತಮ’ವಾಗದ ನೌಕರರ ಬದುಕು

**ಬೆಟರ್ 3,000**

ಅಮೆರಿಕ ಮೂಲದ ಹಣಕಾಸು ಸೇವಾ ಸಂಸ್ಥೆ ಬೆಟರ್ ಕಳೆದ ವರ್ಷ ಒಂದೇ ಝೂಮ್ ಮೀಟಿಂಗ್‌ನಲ್ಲಿ 900 ಉದ್ಯೋಗಿಗಳನ್ನು ತೆಗೆದು ಹಾಕಿತ್ತು. ಈ ವರ್ಷ 3000ಕ್ಕೂ ಅಧಿಕ ಜನರಿಗೆ ಕೆಲಸ ಇಲ್ಲ ಎಂದು ತಿಳಿಸಿದೆ. ಕಾರ್ಯಕ್ಷಮತೆ ಸರಿಯಿಲ್ಲ ಎಂಬ ಕಾರಣ ನೀಡಿ ಉದ್ಯೋಗಿಗಳನ್ನು ವಜಾಗೊಳಿಸಿದೆ. 2021ರ ಡಿಸೆಂಬರ್ ಬಳಿಕ ತನ್ನ ಶೇ 50ರಷ್ಟು ಸಿಬ್ಬಂದಿಯನ್ನು ಕಂಪನಿ ತೆಗೆದುಹಾಕಿದೆ.

### ● ಉದ್ಯೋಗಿಗಳಿಗೆ ಕೈಕೊಟ್ಟ ‘ಲಿಫ್ಟ್’

**ಲಿಫ್ಟ್ 13%**

‘ಇ-ಟ್ಯಾಕ್ಸಿ’ ಎಂಬ ಆ್ಯಪ್ ಮೂಲಕ ಕಾರ್ಯಾಚರಣೆ ನಡೆಸುವ ಸಾರಿಗೆ ಸೇವಾ ಸಂಸ್ಥೆ ಲಿಫ್ಟ್ ತನ್ನ 683 ಉದ್ಯೋಗಿಗಳಿಗೆ ಕೈ ಕೊಟ್ಟಿದೆ. ಅಂದರೆ ಸಂಸ್ಥೆಯ ಶೇ 13ರಷ್ಟು ಉದ್ಯೋಗಿಗಳು ಕೆಲಸ ಕಳೆದುಕೊಂಡಿದ್ದಾರೆ. ಇದೇ ವರ್ಷದ ಸೆಪ್ಟೆಂಬರ್‌ನಲ್ಲಿ ಹೊಸ ನೇಮಕಾತಿಗೆ ತಡೆ ಪ್ರಕಟಿಸಿತ್ತು.

### ● ಕೆಲಸ ಕಳೆದ ಯುದ್ಧ

**ಕೊಂಡೆ ನಾಸ್ಟ್ 90%**

ವೋಗ್, ವ್ಯಾನಿಟಿ ಫೇರ್‌ನಂತಹ ಜನಪ್ರಿಯ ಪ್ರಕಟಣೆಗಳ ಮಾತೃಸಂಸ್ಥೆ ‘ಕೊಂಡೆ ನಾಸ್ಟ್’ ಮಾಧ್ಯಮ ಸಂಸ್ಥೆಯು ರಷ್ಯಾದ ವೋಗ್ ಮತ್ತು ಇತರ ಪ್ರಕಟಣೆಗಳನ್ನು ರಷ್ಯಾದಲ್ಲಿ ನಿಲ್ಲಿಸಿದೆ. ಇದಕ್ಕಾಗಿ ಕೆಲಸ ಮಾಡುತ್ತಿದ್ದ ಶೇ 90ರಷ್ಟು ಉದ್ಯೋಗಿಗಳನ್ನು ತೆಗೆದುಹಾಕಲು ಮುಂದಾಗಿದೆ. ಇದಕ್ಕೆ ರಷ್ಯಾ–ಉಕ್ರೇನ್ ಯುದ್ಧದ ಕಾರಣ ನೀಡಿದೆ.

### ಎಲ್ಲೆಲ್ಲಿ ಉದ್ಯೋಗ ನಷ್ಟ...

| | |
|---|---|
| ಓಪನ್‌ಡೋರ್ ಟೆಕ್ನಾಲಜಿ | 550 |
| ಸೀಗೇಟ್ | 300 |
| ಫಿಲಿಪ್ಸ್ | 1,100 |
| ಟಿಕ್‌ಟಾಕ್ | 100 |
| ವಾಲ್‌ಮಾರ್ಟ್ | 200 |
| ಕ್ಲಿಯರ್ | 200 |
| ನೆಟ್‌ಫ್ಲಿಕ್ಸ್ | 150 |
| ಲಿಡೊ ಲರ್ನಿಂಗ್ | 200 |
| ಫರ್ಲೆನ್ಕೊ | 200 |
| ಟ್ರೆಲ್ | 300 |
| ಫೋರ್ಡ್ | 580 |
| ನೂಮ್ | 500 |
| ರಾಬಿನ್‌ಹುಡ್ | 300 |
| ಟೆಸ್ಕೊ | 1,600 |
| ಕ್ಲಾರ್ನಾ | 700 |
| ಪ್ರಿಮಾರ್ಕ್ | 400 |
| ರಾಯಲ್ ಮೇಲ್ | 700 |
| ನೆಸ್ಲೆ | 100 |
| ಚೈಮ್ | 160 |
| ಕಾಯಿನ್‌ಬೇಸ್ | 1,100 |
| ದಿದಿ | 20% |
| ಒಕೆಕ್ರೆಡಿಟ್ | 40% |

### ಹೊಸ ನೇಮಕಾತಿಗೆ ತಡೆ

ಇ–ಮಾರುಕಟ್ಟೆಯ ಬೃಹತ್ ಕಂಪನಿ ಅಮೆಜಾನ್, ಲಾಭ ಇರುವ ವಿಭಾಗಗಳಿಗೆ ನೌಕರರನ್ನು ವರ್ಗ ಮಾಡಿ, ಮರು ಹೊಂದಾಣಿಕೆ ಮಾಡಿದೆ. ಕೆಲವು ವಿಭಾಗಗಳನ್ನು ಮುಚ್ಚಿದೆ. ಹೊಸ ನೇಮಕಾತಿಗಳಿಗೂ ತಡೆ ನೀಡಿದೆ. ಪ್ರಮುಖ ತಂತ್ರಜ್ಞಾನ ಕಂಪನಿ ಆ್ಯಪಲ್, ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗ ಹೊರತುಪಡಿಸಿ, ಉಳಿದ ನೇಮಕಾತಿ ಸ್ಥಗಿತಗೊಳಿಸಿದೆ.

### ಬೆಳೆಯುತ್ತಲೇ ಇದೆ ಪಟ್ಟಿ

ನೌಕರರನ್ನು ತೆಗೆದುಹಾಕುವ ಪ್ರವೃತ್ತಿ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಈ ಪಟ್ಟಿಗೆ ಪ್ರತಿದಿನವೂ ಹೊಸ ಕಂಪನಿ ಸೇರುತ್ತಿದೆ. ಮಾರ್ಗನ್ ಸ್ಟ್ಯಾನ್ಲಿ, ಜಾನ್ಸನ್ ಅಂಡ್ ಜಾನ್ಸನ್, ವಾರ್ನರ್ ಬ್ರದರ್ಸ್ ಡಿಸ್ಕವರಿ, ಬಿಯಾಂಡ್ ಮೀಟ್, ಇವಿ ನವೋದ್ಯಮ ಅರೈವಲ್ ಮೊದಲಾದ ಸಂಸ್ಥೆಗಳು ಮುಂದಿನ ದಿನಗಳಲ್ಲಿ ನೌಕರರ ಉದ್ಯೋಗಕ್ಕೆ ಕತ್ತರಿ ಹಾಕಲಿವೆ.

ಆಧಾರ: ವಿಶ್ವಬ್ಯಾಂಕ್ ಜಾಲತಾಣ, ಮೆಟಾ ಜಾಲತಾಣ, ಇನ್‌ವೆಂಟಿಯಾ, ಪಿಟಿಐ, ರಾಯಿಟರ್ಸ್

ವೇದವ್ಯಾಸರ ಶಿವಪುರಾಣಸಾರ 274

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

## ಶಿವನ ಮಹಿಮೆ ಬಣ್ಣಿಸಿದ ನಾರದ

ಹಿಮವಂತ ಕನ್ಯಾದಾನಮಾಡಲು ಸಿದ್ಧನಾದ. ಪುರೋಹಿತರನ್ನುದ್ದೇಶಿಸಿ, ‘ಕನ್ಯಾದಾನ ಕಾಲದಲ್ಲಿ ಆಗಬೇಕಾದ ಗೋತ್ರಪ್ರವರವಾಚನ, ಮಹಾಸಂಕಲ್ಪ, ಮಂಗಳಾಷ್ಟಕ ಮೊದಲಾದವನ್ನು ಸಂಕಲ್ಪಪೂರ್ವಕವಾಗಿ ಮಾಡಿಸಿರಿ’ ಎಂದು ಪ್ರಾರ್ಥಿಸಿದ. ಸಂಕಲ್ಪಪೂಜೆ ನಂತರ ಹಿಮವಂತ, ‘ಶಂಕರ, ನಿನ್ನ ಗೋತ್ರವನ್ನೂ ಪ್ರವರವನ್ನೂ ಕುಲವನ್ನೂ ಮತ್ತು ಹೆಸರು, ವೇದ, ಶಾಖೆ ಎಲ್ಲವನ್ನೂ ಹೇಳು’ ಎಂದು ಪ್ರಾರ್ಥಿಸಿದ. ಹಿಮವಂತನ ಮಾತನ್ನು ಕೇಳಿ ಶಿವ, ಸುಮ್ಮನೆ ನಿಂತ. ನಿರುತ್ತರನಾದ ಶಿವನನ್ನು ಅಲ್ಲಿದ್ದ ದೇವತೆಗಳು, ಮುನಿಗಳು, ಗಂಧರ್ವರು, ಯಕ್ಷರು, ಸಿದ್ಧರು ನೋಡುತ್ತಿರುವಾಗ ನಾರದ ಒಂದು ಚಮತ್ಕಾರವನ್ನು ಮಾಡಿದ.

ಶಿವನು ಮನಸ್ಸಿನಲ್ಲಿಯೇ ನಾರದನಿಗೆ ಸೂಚಿಸಿದ್ದರಿಂದ ಆತ ತನ್ನ ವೀಣೆಯನ್ನು ನುಡಿಸತೊಡಗಿದ. ಹಿಮವಂತ, ವಿಷ್ಣು, ಬ್ರಹ್ಮ, ದೇವತೆಗಳು, ಮುನಿಗಳು ಮತ್ತಿತರರೆಲ್ಲರು ವೀಣೆಯನ್ನು ನುಡಿಸಬೇಡವೆಂದು ತಡೆದರೂ, ವೀಣೆ ಬಾರಿಸುವುದನ್ನು ನಾರದ ನಿಲ್ಲಿಸಲೇ ಇಲ್ಲ. ಆಗ ಹಿಮವಂತ ಕೋಪಗೊಂಡು ಬಲಾತ್ಕಾರವಾಗಿ ತಡೆಯಲು ಮುಂದಾದ. ಆಗ ನಾರದ ಹೇಳಿದ, ‘ಎಲೈ ಹಿಮವಂತ, ನಿನಗೆ ತಿಳಿವಳಿಕೆಯೇ ಇಲ್ಲವಲ್ಲಾ. ಮಹೇಶ್ವರನ ವಿಷಯದಲ್ಲಿ ನೀನು ತುಂಬಾ ಉದಾಸೀನನಾಗಿ ವರ್ತಿಸುತ್ತಿರುವೆ. ಗೋತ್ರವನ್ನು ಹೇಳುವಂತೆ ನೀನು ಸಾಕ್ಷಾತ್ ಶಿವನನ್ನೇ ಪ್ರಶ್ನಿಸುತ್ತಿರುವೆ. ಸಮಯೋಚಿತವಲ್ಲದ ನಿನ್ನ ಮಾತು ಈ ಕಲ್ಯಾಣಸಮಯದಲ್ಲಿ ತುಂಬಾ ಅವಮಾನವನ್ನು ಮಾಡುವಂತಹುದು. ಶಿವನ ಗೋತ್ರ, ಕುಲ, ನಾಮಗಳನ್ನು, ಹರಿ-ಬ್ರಹ್ಮರೇ ತಿಳಿಯಲಾರರು ಎಂದ ಮೇಲೆ, ಉಳಿದವರು ಹೇಗೆ ತಿಳಿಯಲು ಸಾಧ್ಯ? ಶಿವ ಹೇಳಿದರೂ, ಅದನ್ನು ಅರ್ಥೈಸುವ ಶಕ್ತಿ ನಮ್ಮಗ್ಯಾರಿಗೂ ಇಲ್ಲ. ಶಿವನ ದಿನವೊಂದರ ಕಾಲಮಾನದಲ್ಲಿ ಕೋಟಿಬ್ರಹ್ಮರು ಲಯವನ್ನು ಹೊಂದುತ್ತಾರೆ. ಅಂತಹ ಶಿವನ ಕುಲಗೋತ್ರ ನಾಮ ತಿಳಿಯ ಬಯಸಿದ್ದೀಯಲ್ಲ ನಿನಗೆ ಬುದ್ಧಿ ಇದೆಯೇ? ಪಾರ್ವತಿಯ ತಪಸ್ಸಿನ ಮಹಿಮೆಯಿಂದ ಮದುಮಗನಂತೆ ಪ್ರತ್ಯಕ್ಷವಾಗಿರುವ ಪರಮಾತ್ಮನನ್ನು ಅಳಿಯನಾಗಿ ಪಡೆಯುತ್ತಿರುವುದು ನಿನ್ನ ನೂರಾರು ಜನ್ಮದ ಪುಣ್ಯದ ಫಲ. ಇಂಥ ಫಲ ಸಿಕ್ಕಿದ್ದಕ್ಕೆ ಸಂತೋಷಪಡುವ ಬದಲು, ಅವನ ಕುಲಗೋತ್ರ ನೋಡುತ್ತಿರುವುದು ಸರಿಯೇ? ಇವನು ರೂಪವಿಲ್ಲದ ಪರಬ್ರಹ್ಮ ವಸ್ತು. ನಿರ್ಗುಣ ವ್ಯಕ್ತಿ. ಪ್ರಕೃತಿ ಸಂಬಂಧವು ಇವನಿಗಿಲ್ಲ. ಶಿವನಿಗೆ ಆಕಾರವೂ ವಿಕಾರಗಳೂ ಇಲ್ಲ. ಮಾಯೆಯನ್ನು ತನ್ನ ಅಧೀನದಲ್ಲಿಟ್ಟುಕೊಂಡಿರುವ ಸರ್ವೋತ್ಕೃಷ್ಟ. ಹೀಗಾಗಿ ಶಿವನಿಗೆ ಕುಲಗೋತ್ರ, ಹೆಸರು ಯಾವುದೂ ಇಲ್ಲ. ಆತ ಸರ್ವಸ್ವತಂತ್ರನಾದ ಭಕ್ತವತ್ಸಲ. ತನ್ನಿಚ್ಛೆಯಿಂದಲೇ ಶಿವನು ಸಗುಣನಾಗಿ, ಸುಂದರ ಶರೀರವುಳ್ಳವನೂ ಆಗುವನು. ಅನೇಕ ಹೆಸರುಗಳನ್ನು ಪಡೆಯುವನು. ವಸ್ತುತಃ ಗೋತ್ರಗಳಿಲ್ಲದವನಾದರೂ ಶಿವನು ತನ್ನಿಚ್ಛೆಯಿಂದ ಒಳ್ಳೆಯ ಗೋತ್ರದಲ್ಲಿ ಜನಿಸುವನು. ಒಳ್ಳೆಯ ಕುಲದಲ್ಲಿ ಹುಟ್ಟುವನು. ಇಂತಹ ಪರವಸ್ತುವಾದ ಶಿವನು ಪಾರ್ವತಿಯ ತಪಸ್ಸಿನ ಮಹಿಮೆಯಿಂದ ನಿನ್ನ ಅಳಿಯನಾಗಲು ಬಂದಿರುವನು. ಲೀಲಾಮಯನಾದ ಶಿವನು ಜಗತ್ತೆಲ್ಲವನ್ನೂ ಮೋಹಗೊಳಿಸಬಲ್ಲವನು. ಇಂತಹ ಶಿವನ ಸ್ವರೂಪವನ್ನು ವಿಷ್ಣು-ಬ್ರಹ್ಮರೂ ಅರಿಯಲಾರರು. ಹಿಂದೆ ಮಹಾಲಿಂಗರೂಪನಾಗಿ ಜಗತ್ತಿಗೆ ಆವಿರ್ಭವಿಸಿದ ಸಂದರ್ಭದಲ್ಲಿ ಶಿವನ ಶಿರಸ್ಸನ್ನು ಬ್ರಹ್ಮ ಸಹ ನೋಡಲಾಗಲಿಲ್ಲ. ಹರಿ ಪಾತಾಳದವರೆಗೆ ಹೋದರೂ ಶಿವನ ಪಾದವನ್ನು ಕಂಡುಹಿಡಿಯಲಾಗಲಿಲ್ಲ. ಹೀಗಿರುವಾಗ ಶಿವನ ಕುಲಮೂಲ ಹುಡುಕುವೆಯಾ’ ಎಂದು ನಾರದ ಹಿಮವಂತನನ್ನು ಪ್ರಶ್ನಿಸಿದ. ●

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ತಮಿಳುನಾಡಿನಲ್ಲಿ** ಮಹಿಳಾ ಕಾಲೇಜಿಗೆ ನುಗ್ಗಿ ವಿದ್ಯಾರ್ಥಿಗಳು ದಾಂದಲೆ ನಡೆಸಿದ್ದಾರೆ ಎನ್ನಲಾದ ಎರಡು ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ. ಮುಸ್ಲಿಂ ಹುಡುಗರ ಉಪಟಳ ಮಿತಿ ಮೀರಿದ್ದು, ಹಿಂದೂ ಹುಡುಗಿಯರಿಗೆ ಕಿರುಕುಳ ನೀಡಲಾಗುತ್ತಿದೆ ಎಂಬುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತವಾಗುತ್ತಿದೆ. ತಮಿಳುನಾಡು ಬಿಜೆಪಿ ಘಟಕದ ಮುಖ್ಯಸ್ಥ ಅಣ್ಣಾಮಲೈ ಅವರು ಮಧ್ಯಪ್ರವೇಶಿಸಿ ಮಹಿಳೆಯರಿಗೆ ನ್ಯಾಯ ಕೊಡಿಸಬೇಕು ಎಂದು ಸಾಮಾಜಿಕ ಜಾಲತಾಣ ಬಳಕೆದಾರರು ಆಗ್ರಹಿಸಿದ್ದಾರೆ. ಆದರೆ, ಈ ಎರಡೂ ಪ್ರಕರಣಗಳಲ್ಲಿ ಕೋಮುದ್ವೇಷ ಕಂಡುಬಂದಿಲ್ಲ.

✓ **ಈ ಎರಡೂ** ವಿಡಿಯೊಗಳು ಪ್ರತ್ಯೇಕ ಘಟನೆಗೆ ಸಂಬಂಧಿಸಿವೆ. ಮಹಿಳಾ ಕಾಲೇಜಿಗೆ ನುಗ್ಗಿದ ಹುಡುಗರ ಗುಂಪೊಂದು ಭದ್ರತಾ ಸಿಬ್ಬಂದಿ ಹಾಗೂ ಕೆಲವು ವಿದ್ಯಾರ್ಥಿನಿಯರ ಮೇಲೆ ಹಲ್ಲೆ ನಡೆಸಿದ್ದ ದೃಶ್ಯ ಒಂದು ವಿಡಿಯೊದಲ್ಲಿದೆ. ಈ ಪ್ರಕರಣ ಸಂಬಂಧ 10 ಜನರನ್ನು ಬಂಧಿಸಲಾಗಿದೆ ಎಂದು ಮದುರೈ ಡಿಸಿಪಿ ತಿಳಿಸಿದ್ದಾರೆ. ಆರೋಪಿಗಳು ಮುಸ್ಲಿಂ ಧರ್ಮದವರು ಎಂದು ಅವರು ಹೇಳಿಲ್ಲ. ಮತ್ತೊಂದು ವಿಡಿಯೊದಲ್ಲಿ ವಿದ್ಯಾರ್ಥಿನಿಯೊಬ್ಬರ ತಂದೆಯ ಮೇಲೆ ಹುಡುಗರ ಗುಂಪು ಹಲ್ಲೆ ಮಾಡುವ ದೃಶ್ಯವಿದೆ. ಅಂತ್ಯಕ್ರಿಯೆ ಮೆರವಣಿಗೆ ನಡೆಯುತ್ತಿದ್ದು, ಶಾಂತವಾಗಿ ವರ್ತಿಸುವಂತೆ ತಿಳಿಹೇಳಿದ್ದ ವ್ಯಕ್ತಿಯ ಮೇಲೆ ಹುಡುಗರು ಹಲ್ಲೆ ನಡೆಸಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಆರು ಜನರನ್ನು ಬಂಧಿಸಲಾಗಿದ್ದು, ಇವರಲ್ಲಿ ಯಾರೂ ಮುಸ್ಲಿಂ ಧರ್ಮೀಯರಿಲ್ಲ ಎಂಬುದು ಎಫ್‌ಐಆರ್‌ನಿಂದ ತಿಳಿದುಬಂದಿದೆ. ಎರಡೂ ಪ್ರಕರಣಗಳಲ್ಲಿ ಭಾಗಿಯಾದವರು ಮುಸ್ಲಿಮೇತರರು ಎಂದು ‘ಇಂಡಿಯಾಟುಡೇ’ ವರದಿ ಮಾಡಿದೆ.

## ಗುಂಡಣ್ಣ

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ನವೆಂಬರ್ 14, 2022

**ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ:** ಕಾರ್ತಿಕ ಕೃಷ್ಣಷಷ್ಠಿ ಗಂ. 27-24 ನಕ್ಷತ್ರ: ಪುನರ್ವಸು ಗಂ. 13-15 ಯೋಗ: ಶುಭ ಗಂ. 23-42, ಕರಣ: ಗರಜೆ ಗಂ. 14-08, ತುಲಾ ಮಾಸದ 27 ನೇ ದಿನ. ರಾಹುಕಾಲ : ಬೆಳಿಗ್ಗೆ 07-30 – 09-00

**ಸೂರ್ಯೋದಯ :** 06-33 ಸೂರ್ಯಾಸ್ತ : 05-57

ಮುಸ್ಲಿಂ ದಿನಾಂಕ : 18 ರಬಿಯುಸ್ಸಾನಿ

**ದಿನ ವಿಶೇಷ :** ಮಕ್ಕಳ ದಿನಾಚರಣೆ (ನೆಹರೂ ಜನ್ಮದಿನ)

**ಅದೃಷ್ಟ ಸಂಖ್ಯೆ :** 4, 7

**ಮೇಷ:** ತಾಂತ್ರಿಕ ವಿಷಯಗಳ ಸಲಹೆಗಾರರಿಗೆ ಹೆಚ್ಚಿನ ಮನ್ನಣೆ ದೊರೆಯುವುದು. ವಿದೇಶದಲ್ಲಿನ ಶಿಕ್ಷಣಾವಕಾಶವನ್ನು ಪಡೆದುಕೊಳ್ಳುವ ಉತ್ತಮ ಅವಕಾಶ ಈ ದಿನ ನಿಮ್ಮದಾಗುವುದು. ಖರ್ಚಿನಲ್ಲಿ ಹಿಡಿತವಿರುವುದು ಉತ್ತಮ.

**ವೃಷಭ:** ಕುಟುಂಬದಲ್ಲಿ ಹಿರಿಯರ ಆರೋಗ್ಯ ದಿನದಿಂದ ದಿನಕ್ಕೆ ಉತ್ತಮವಾಗುವುದರಿಂದ ಮನಸ್ಸಿಗೆ ನೆಮ್ಮದಿ ಇರುವುದು. ಅಧಿಕಾರಿಗಳಿಗೆ ಕೆಲಸದಲ್ಲಿ ಒತ್ತಡ ಹೆಚ್ಚಲಿದೆ. ಮಾರಾಟ ಪ್ರತಿನಿಧಿಗಳಿಗೆ ಉತ್ತಮವಾದ ಸ್ಪಂದನೆ ಸಿಗುವುದು.

**ಮಿಥುನ:** ನಾಲ್ಕಾರು ದಿನದ ಹಿಂದೆ ಪ್ರಾರಂಭಿಸಿದ್ದ ಒಂದು ಯೋಜನೆ ಈ ದಿನ ನಿಶ್ಚಿತ ಹಂತ ತಲುಪಿ ಮನಸ್ಸಿಗೆ ಹೆಚ್ಚಿನ ಸಮಾಧಾನವಾಗುವುದು. ರೇಷ್ಮೆ ಉತ್ಪಾದಕರು ಆದಾಯದಲ್ಲಿ ಗಣನೀಯ ಸುಧಾರಣೆ ಕಾಣುವರು.

**ಕರ್ಕಾಟಕ:** ವಿದೇಶಿ ವ್ಯಾಪಾರದಲ್ಲಿ ಜಾಸ್ತಿ ಬಂಡವಾಳ ಹೂಡುವುದು ಸರಿಯಲ್ಲ. ವಿವಾದಕ್ಕೆ ಆಸ್ಪದವಾಗದಂತೆ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸಫಲರಾಗುವಿರಿ. ಕೆಲಸಗಳಿಗೆ ಅರ್ಜಿ ತುಂಬಲು ಸೂಕ್ತ ಸಮಯವಾಗಿದೆ.

**ಸಿಂಹ:** ನೀವು ಹೆಚ್ಚಿನ ಯಶಸ್ಸು ಪಡೆಯಲು ಕೆಲವೊಂದು ಶೀಘ್ರ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುವುದು. ಸ್ವಂತ ಉದ್ಯಮಿಗಳಿಗೆ ತಮ್ಮ ಕಾರ್ಯಕ್ಷೇತ್ರ ವಿಸ್ತರಿಸಲು ಎಲ್ಲಾ ರೀತಿಯ ಸಹಾಯ ಸಹಕಾರ ಒದಗಿ ಬರುವುದು.

**ಕನ್ಯಾ:** ನೀವು ಅಳವಡಿಸಿಕೊಂಡ ಹೊಸ ಯೋಜನೆಗಳಿಂದ ಜೀವನದಲ್ಲಿ ಉತ್ತಮ ಪ್ರಗತಿಯನ್ನು ಕಾಣಲು ಉಪಯೋಗವಾಗುವುದು. ಮನೆ ಖರೀದಿ ಅಥವಾ ನಿವೇಶನ ಖರೀದಿಯ ನಿಮ್ಮ ಯೋಜನೆ ಈಡೇರುವುದು.

**ತುಲಾ:** ಆರಂಭದಲ್ಲಿ ಕೆಲಸಗಳು ನಿರೀಕ್ಷಿತ ಹಾದಿಯಲ್ಲಿ ಸಾಗುವುದರಿಂದ ಧೈರ್ಯ ಹೆಚ್ಚುತ್ತದೆ. ಆದರೆ ಮುಕ್ತಾಯದ ಹಂತದ ಬಗ್ಗೆ ಗಮನವಿರಲಿ. ತಾಂತ್ರಿಕ ಪದವೀಧರರಿಗೆ ಹೆಚ್ಚಿನ ಬೇಡಿಕೆ ಇದ್ದು ಒಳ್ಳೆಯ ಅವಕಾಶಗಳು ಒದಗಿ ಬರಲಿವೆ.

**ವೃಶ್ಚಿಕ:** ದೇವರ ಕೆಲಸಗಳಿಗಾಗಿ ಹಣ ವ್ಯಯವಾದರೂ, ಆದಾಯದಲ್ಲಿ ಕೊರತೆಯೇನು ಬರಲಾರದು. ನಿರುದ್ಯೋಗಿಗಳಿಗೆ ಭಾಗ್ಯೋದಯವಾಗಿ ಕೆಲಸ ದೊರೆಯುವ ಸಂಭವವಿದೆ. ಕಾರ್ಮಿಕ ವರ್ಗದವರ ಬೇಡಿಕೆಗಳು ಈಡೇರಲಿದೆ.

**ಧನು:** ಸ್ವಲ್ಪ ಪರಿಶ್ರಮ ಕೂಡ ಕಾರ್ಯಸಾಧನೆಯಲ್ಲಿ ಹೆಚ್ಚಿನ ಫಲ ನೀಡಲಿದೆ. ವಿವಾಹ ವಯಸ್ಕ ಯೋಗ್ಯರಿಗೆ ನೂತನ ಸಂಬಂಧಗಳು ಕಂಡು ಬರುತ್ತದೆ. ಮಹಿಳೆಯರಿಗೆ ತಮ್ಮ ನೌಕರಿಯಲ್ಲಿ ಸಣ್ಣ-ಪುಟ್ಟ ಸಮಸ್ಯೆ ಎದುರಾಗಬಹುದು.

**ಮಕರ:** ಯಾವುದೇ ವಾದ ವಿವಾದಗಳು ನಡೆದರೂ ಕಾರ್ಯ ಸಾಧನೆಗೆ ಅಡ್ಡಿಯಾಗದು. ಸಾಹಿತಿ ಹಾಗೂ ಕಲಾವಿದರಿಗೆ ಇಂದು ಉತ್ತಮವಾದ ಗೌರವ ದೊರಕಲಿದೆ. ಕ್ರೀಡಾಪಟುಗಳಿಗೆ ಕ್ರೀಡೆಯಲ್ಲಿ ಪ್ರಗತಿ ಕಂಡು ಬರುವುದು.

**ಕುಂಭ:** ದೇವರ ಕೃಪೆಯಿಂದ ಎಲ್ಲ ಕೆಲಸಗಳು ನೆರವೇರಿ ಅಡೆತಡೆಗಳು ನಿರ್ಮೂಲವಾಗುವುದು. ದೂರ ಸಂಚಾರ ಮನಸ್ಸಿಗೆ ನೆಮ್ಮದಿ ತರುತ್ತದೆ. ಹೊಸಪರಿಚಯವು ಮಂಗಳ ಕಾರ್ಯಕ್ಕೆ ಕಾರಣವಾಗಲಿದೆ.

**ಮೀನ:** ಸಂಶೋಧನಾಗಾರರಿಗೆ ಒಳ್ಳೆಯ ದಿನ. ಧನ ಹೂಡಿಕೆಯಲ್ಲಿ ಶುದ್ಧ ಹಸ್ತವಾಗಿರುವುದು ನಿಮ್ಮ ಶ್ರೇಯಸ್ಸಿಗೆ ಮೂಲ ಕಾರಣವಾಗುತ್ತದೆ. ಲಾಭ-ನಷ್ಟಗಳೆರಡು ಸಮಾನವಾಗಿದ್ದರೂ ಆರ್ಥಿಕ ಭಯ ಹುಟ್ಟುವ ಸನ್ನಿವೇಶವಿದೆ.

## ಬೆರಗಿನ ಬೆಳಕು

ಗುರುರಾಜ ಕರಜಗಿ

### ದಕ್ಕಿದ್ದೆಷ್ಟು ?

ಮತಿಗರ್ಥವಾದೊಡೇಂ? ಸ್ಮೃತಿಯೊಳದು ನೆಲಸಿರಲಿ
ಸತತ ಸಂಧಾನದಲಿ ಪರಮಾರ್ಥವಿರಲಿ ||
ಶತಲಕ್ಷಧನದ ಲೆಕ್ಕವ ಬಾಯಿ ನುಡಿದೊಡೇಂ? |
ಭೃತಿಯೆಷ್ಟು ವೆಚ್ಚಕ್ಕೆ – ಮಂಕುತಿಮ್ಮ || 755 ||

**ಪದ-ಅರ್ಥ:** ಮತಿಗರ್ಥವಾದೊಡೇಂ = ಮತಿಗೆ(-ಬುದ್ಧಿಗೆ) + ಅರ್ಥವು + ಆದೊಡೇಂ(ಆದರೇನು), ಸ್ಮೃತಿಯೊಳದು = ಸ್ಮೃತಿಯೊಳು(ನೆನಪಿನಲ್ಲಿ) + ಅದು, ಭೃತಿಯೆಷ್ಟು = ಕೂಲಿ ಎಷ್ಟು, ಸಂಪಾದನೆ ಎಷ್ಟು.

**ವಾಚ್ಯಾರ್ಥ:** ಬುದ್ಧಿಗೆ ಎಷ್ಟು ಹೊಳೆದರೇನು? ಅದು ಅಂತರಂಗದಲ್ಲಿ ಆಳವಾಗಿ ನೆನಪಿನಲ್ಲಿರಲಿ. ಸದಾಕಾಲದ ಕರ್ತವ್ಯದಲ್ಲಿ ಪರಮಾರ್ಥ ಚಿಂತನೆ ಇರಲಿ. ಎಷ್ಟು ಕೋಟಿ ಲೆಕ್ಕವ ಬಾಯಿಯಲ್ಲಿ ಹೇಳಿದರೇನು, ಖರ್ಚಿಗೆ ಆಗುವಷ್ಟು ಸಂಭಾವನೆ ಇದೆಯೆ?

**ವಿವರಣೆ:** ದೇಶದ ಬಜೆಟ್ ಸಿದ್ಧವಾಗುತ್ತಿತ್ತು. ಆಗ ಹಣಕಾಸುಮಂತ್ರಿಗಳು ಇಲಾಖೆಯ ಅಧಿಕಾರಿಗಳೊಂದಿಗೆ ಹಣದಹಂಚಿಕೆಯ ಬಗ್ಗೆ ಮಾತನಾಡುತ್ತಿದ್ದರು. ಯಾವ ಖಾತೆಗೆ, ಎಷ್ಟುಹಣವನ್ನು ಮೀಸಲಾಗಿಡಬೇಕು ಎಂಬುದರ ಚಿಂತನೆನಡೆಯುತ್ತಿತ್ತು. ಶಿಕ್ಷಣ ವಿಭಾಗಕ್ಕೆ ಹೆಚ್ಚು ಹಣ ನೀಡಬೇಕೆಂದು-ಕಾರ್ಯದರ್ಶಿಗಳು ಒತ್ತಾಯದ ಬೇಡಿಕೆ ಸಲ್ಲಿಸುತ್ತಿದ್ದರು. ಅವರು ಅತ್ಯಂತ ಪ್ರಾಮಾಣಿಕ ಅಧಿಕಾರಿ. ಇಲಾಖೆಯ ಅಭಿವೃದ್ಧಿಗಾಗಿ, ಕೊಸರಾಡಿ, ಚೌಕಾಶಿ ಮಾಡಿ ಹೆಚ್ಚು ಹಣ ಪಡೆದುಕೊಂಡರು. ಮನೆಗೆ ಬಂದು ಹೆಂಡತಿಗೆ ಸಂತೋಷದಿಂದ ಹೇಳಿದರು, “ಅಂತೂ ನಮ್ಮಇಲಾಖೆಗೆ ಮತ್ತೆ ಹನ್ನೊಂದು ಸಾವಿರ ಕೋಟಿ ಹೆಚ್ಚು ಹಣದೊರಕುತ್ತದೆ”. ಮನೆಯಾಕೆ ಹೇಳಿದಳು, “ಹೌದು, ನಿಮ್ಮಇಲಾಖೆಗೆ ಅಷ್ಟು ಸಾವಿರ ಕೋಟಿ ಬಂತೇನೋ ಸರಿ, ಆದರೆ ನಾವುಮನೆಯ ಸಾಲದ ಕಂತನ್ನು ಮೂರು ತಿಂಗಳಿಂದಕಟ್ಟಿಲ್ಲವೆಂದು ನೋಟೀಸ್ ಬಂದಿದೆ. ಅದಕ್ಕೆ ಏನು ಮಾಡುವುದು-ಚಿಂತೆಯಾಗಿದೆ”. ಅದು ವಾಸ್ತವ. ಸಾವಿರ ಕೋಟಿಗಳ ಆದಾಯದಬಗ್ಗೆ ಮಾತನಾಡಿದ ವ್ಯಕ್ತಿಗೆ ಮನೆಯ ಸಾಲದ ಕಂತು ಕಟ್ಟಲಾಗದ ಪರಿಸ್ಥಿತಿ. ಇಲಾಖೆಯ ಖರ್ಚಿಗಾಗಿ ಸಾವಿರಾರು ಕೋಟಿಗಳನ್ನುಬಳಸುವ ವ್ಯಕ್ತಿಗೆ ತನ್ನ ಪುಟ್ಟ ವೈಯಕ್ತಿಕ ಸಾಲದ ಹೊರೆ ಹೊರಲಾಗದು. ಅಂದರೆ, ಕೋಟಿ ಕೋಟಿ ಧನದ ನಡುವೆಯೇಇದ್ದವನಿಗೆ ಸ್ವತ: ದಕ್ಕಿದ್ದು ಬಹಳ ಅಲ್ಪ.ಇದನ್ನು ಕಗ್ಗ ಹೇಳುತ್ತದೆ, ಬಾಯಿಯಿಂದ ಎಷ್ಟು ದೊಡ್ಡಮೊತ್ತವನ್ನು ಹೇಳಿದರೇನು ಫಲ, ನಿನಗೆ ದಕ್ಕಿದ್ದು ಎಷ್ಟು? ಇದೇ ವಿಷಯವನ್ನು ಅದು ಅಧ್ಯಾತ್ಮಿಕ ತಿಳುವಳಿಕೆಗೂಹೋಲಿಸುತ್ತದೆ. ಎಷ್ಟು ಓದಿದರೆ, ಎಷ್ಟು ವಿಷಯವನ್ನು ಬುದ್ಧಿ-ಚಮತ್ಕಾರಗಳಿಂದ ತಿಳಿದುಕೊಂಡು, ಅದನ್ನು ಅಂತರ್ಯದಲ್ಲಿ ಇಳಿಸಿಕೊಳ್ಳದಿದ್ದರೆ ಫಲವೇನು? ಅದು ಸಮುದ್ರದತಳದಲ್ಲಿರುವ ಬೆಣಚುಕಲ್ಲಿನಂತೆ, ಆ ಕಲ್ಲು ಶತಮಾನಗಳಿಂದ ನೀರಿನಲ್ಲಿಯೇ ಮುಳುಗಿದೆ, ನೀರಿನ ಅಲೆಗಳಿಂದ ಉಜ್ಜಿ, ಉಜ್ಜಿ, ನುಣುಪಾಗಿದೆ. ಆದರೆ ಅದನ್ನು ಒಡೆದು ನೋಡಿದರೆ ನೀರಿನಒಂದಂಶವೂ ಇಲ್ಲ! ಆದ್ದರಿಂದ ಪ್ರತಿನಿತ್ಯದ ವ್ಯವಹಾರಗಳಲ್ಲಿ, ಕರ್ತವ್ಯಗಳಲ್ಲಿಪರಮಾರ್ಥವಿರಲಿ, ಬ್ರಹ್ಮವಸ್ತುವಿನ ಚಿಂತನೆ ಇರಲಿ. ಸಕಲಶಾಸ್ತ್ರಗಳನ್ನು ಓದಿ ಮಸ್ತಕದಲ್ಲಿ ತುಂಬಿಕೊಂಡದ್ದು, ಮನದೊಳಗೆ, ನಡೆಯೊಳಗೆ ಇಳಿಯದಿದ್ದರೆ, ಕೋಟಿ ಹಣದ ಬಗ್ಗೆ ಮಾತನಾಡುವ ವ್ಯಕ್ತಿ, ಖರ್ಚಿಗೆ ಹಣವಿಲ್ಲದಂತೆ ಒದ್ದಾಡಿದಸ್ಥಿತಿಯೇ ಹೌದು. ನಾವು ಪರವಸ್ತುವಿನ ಬಗ್ಗೆ ಎಷ್ಟುಅನುಸಂಧಾನ ಮಾಡುತ್ತೇವೋ ಅಷ್ಟೇ ನಮಗೆ ದಕ್ಕುವುದು.

## ಪದಬಂಧ 5138

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಪ್ರವಾಸದ ವೇಳೆಯಲ್ಲಿ ಆದ ಸುಸ್ತು (3)
3.ಸಡಿಲವಾದುದನ್ನು ಹೀಗೆ ಹೇಳಿ (3)
5.ಕೊಳೆ ಬಿದ್ದು ಉಂಟಾದ ಗುರುತು (2)
6.ವ್ಯಾಪಾರದಲ್ಲಿ ಕೊಂಡುಕೊ (4)
7.ನದಿ ಸಮುದ್ರಕ್ಕೆ ಸೇರುವೆಡೆಯ ಮೆಕ್ಕಲುಭೂಮಿ (7)
10.ಅನಿರೀಕ್ಷಿತ ಘಟನೆ (4)
11.ಸಂತತಿಯಲ್ಲಿ ಸಾಧು ಬಂದಿದ್ದಾನಲ್ಲಾ! (2)
13.ಗಂಡು ಕುರಿ ಇಲ್ಲಿದೆ (3)
14.ಹಣದಲ್ಲಿರುವ ಪ್ರಾಣ! (3)

**ಮೇಲಿಂದ ಕೆಳಕ್ಕೆ**

1.ಪ್ರತಿಕೂಲದಲ್ಲಿ ನಕಲು ಹುಡುಕಿ! (2)
2.ಬಲೆ ಹಿಡಿದಿರುವ ಈಕೆ ಸಶಕ್ತಳು (3)
4.ನಸುಕಿನಲ್ಲಿ ಬಿದ್ದಿರುವ ಸ್ವಪ್ನ (3)
5.ಕದದ ಹತ್ತಿರ ನಡೆದ ಯುದ್ಧ (3)
6.ಖನಿಯಲ್ಲಿ ಸಿಕ್ಕಿದುದು (3)
8.ಮುನಿದು ಕುಳಿತಿರುವ ಅಜ್ಜ! (3)
9.ಮಿತದಲ್ಲಿನ ಸ್ಪಂದನ ಗೊತ್ತಾಯಿತೇ? (3)
10.ಆಟದಲ್ಲಿ ಗಟ್ಟಿಯಾದ ಕೂಗು! (3)
11.ದೇಹ ನೋಡಿದಾಗಲೇ ಈ ಅನುಮಾನ! (3)
12.ಗುಣಗಾನ ಮಾಡುತ್ತಿರುವವನ ಸ್ವಭಾವ (2)



### 5137ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**

1.ಬಾಧಕ 3.ಪದರ
5.ಪತಿ 6.ವರ್ತಕ
7.ನೆಪ 9.ಯುವತಿ
10.ಯಳವೀ 11.ಕೆರ
13.ಹಣಿಗೆ 15.ಮಾನ
16.ಕಟಾವು 17.ಲುಬ್ಧಕ

**ಮೇಲಿಂದ ಕೆಳಕ್ಕೆ:**

1.ಬಾಣಂತಿ 2.ಕಕವ
3.ಪದಕ 4.ರವಾನೆ
5.ಪಳೆಯುಳಿಕೆ
8.ಪದವೀದಾನ
12.ರಕ್ಷಕ 13.ಹಗೇವು
14.ಗೆದ್ದಲು 15.ಮಾಸಿಕ

## ಸುಡೊಕು 5524

| | | | | | | | | |
|---|---|---|---|---|---|---|---|---|
| | | | | 5 | | 7 | | 2 |
| | | | 6 | | 7 | | 8 | 1 |
| | | 7 | | 3 | | 6 | | 9 |
| | 6 | | | 1 | | 8 | | 7 |
| 7 | | 9 | 5 | | 3 | | 1 | |
| | 8 | | | 9 | | 3 | | 5 |
| | 7 | | 3 | | 1 | | | |
| 5 | | 6 | | 2 | | | 7 | |
| | 3 | | 9 | | 5 | | | 8 |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5523 ಸುಡೊಕು

| | | | | | | | | |
|---|---|---|---|---|---|---|---|---|
| 5 | 6 | 1 | 8 | 7 | 4 | 2 | 9 | 3 |
| 3 | 7 | 2 | 6 | 1 | 9 | 8 | 5 | 4 |
| 9 | 8 | 4 | 5 | 2 | 3 | 1 | 6 | 7 |
| 1 | 2 | 5 | 7 | 3 | 6 | 4 | 8 | 9 |
| 4 | 3 | 8 | 2 | 9 | 5 | 6 | 7 | 1 |
| 6 | 9 | 7 | 4 | 8 | 1 | 3 | 2 | 5 |
| 8 | 1 | 9 | 3 | 5 | 2 | 7 | 4 | 6 |
| 7 | 4 | 3 | 9 | 6 | 8 | 5 | 1 | 2 |
| 2 | 5 | 6 | 1 | 4 | 7 | 9 | 3 | 8 |

## 2023ರ ಅಂತ್ಯಕ್ಕೆ ಮಸೀದಿ ಕಾಮಗಾರಿ ಪೂರ್ಣ: ಟ್ರಸ್ಟ್

ಲಖನೌ (ಪಿಟಿಐ): ಸುಪ್ರೀಂಕೋರ್ಟ್ ತೀರ್ಪಿನ ಅನುಸಾರ ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ಮಸೀದಿಯ ಕಾಮಗಾರಿಯು ಜನವರಿ 26, 2023ರ ನಂತರ ಆರಂಭವಾಗಲಿದೆ. ಅದೇ ವರ್ಷ ಡಿಸೆಂಬರ್ ವೇಳೆಗೆ ಪೂರ್ಣಗೊಳ್ಳಲಿದೆ ಎಂದು ಮಸೀದಿ ನಿರ್ಮಾಣ ಹೊಣೆ ಹೊತ್ತಿರುವ ಟ್ರಸ್ಟ್ ತಿಳಿಸಿದೆ.

‘ಅಯೋಧ್ಯೆ ಅಭಿವೃದ್ಧಿ ಪ್ರಾಧಿಕಾರದಿಂದ ಈ ತಿಂಗಳ ಅಂತ್ಯದ ಒಳಗೆ ಮಸೀದಿ, ಆಸ್ಪತ್ರೆ, ಗ್ರಂಥಾಲಯ ಮತ್ತು ಸಂಶೋಧನಾ ಕೇಂದ್ರದ ನಕ್ಷೆಗೆ ಅನುಮೋದನೆ ದೊರಕಲಿದೆ ಎಂದು ಭಾವಿಸಿದ್ದೇವೆ. ನಂತರ ಮಸೀದಿ ನಿರ್ಮಾಣ ಕಾರ್ಯ ಆರಂಭವಾಗಲಿದೆ. ಮಸೀದಿ ಕಾಮಗಾರಿಯು 2023ರ ಡಿಸೆಂಬರ್ ವೇಳೆಗೆ ಪೂರ್ಣಗೊಳ್ಳಬಹುದು’ ಎಂದು ಇಂಡೊ ಕಲ್ಚರ್ ಫೌಂಡೇಶನ್ ಟ್ರಸ್ಟ್ ಕಾರ್ಯದರ್ಶಿ ಅಥಾರ್ ಹುಸೇನ್ ತಿಳಿಸಿದ್ದಾರೆ.

‘ಮಸೀದಿ ಮತ್ತಿತರ ಕಟ್ಟಡಗಳ ನಿರ್ಮಾಣದಲ್ಲಿ ದೇಣಿಗೆ ಸಂಗ್ರಹಿಸುವ ಪ್ರಯತ್ನಗಳು ನಡೆಯುತ್ತಿವೆ’ ಎಂದು ಅವರು ತಿಳಿಸಿದ್ದಾರೆ.

2019ರಲ್ಲಿ ರಾಮ ಜನ್ಮಭೂಮಿ-ಬಾಬರಿ ಮಸೀದಿ ವಿವಾದದಲ್ಲಿ ಐತಿಹಾಸಿಕ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, ಅಯೋಧ್ಯೆಯ ವಿವಾದಿತ ಜಾಗದಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ಅವಕಾಶ ನೀಡಿ, ಮಸೀದಿ ನಿರ್ಮಾಣಕ್ಕೆ ಪ್ರತ್ಯೇಕ ಐದು ಎಕರೆ ಭೂಮಿಯನ್ನು ಮಂಜೂರು ಮಾಡಲು ಸೂಚಿಸಿತ್ತು.

## ‘ಸ್ವತಂತ್ರ ನ್ಯಾಯಾಂಗಕ್ಕೆ ಕೊಲಿಜಿಯಂ ಅನಿವಾರ್ಯ’

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಯಮೂರ್ತಿಗಳ ನೇಮಕಾತಿ ಮಾಡುವ ಕೊಲಿಜಿಯಂ ವ್ಯವಸ್ಥೆಯು ಸ್ವತಂತ್ರ ನ್ಯಾಯಾಂಗಕ್ಕೆ ಅನಿವಾರ್ಯ ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್ ಅವರು ಪ್ರತಿಪಾದಿಸಿದ್ದಾರೆ.

ಸುಪ್ರೀಂ ಕೋರ್ಟ್‌ನ 49ನೇ ಮುಖ್ಯ ನ್ಯಾಯಮೂರ್ತಿಯಾಗಿ 74 ದಿನಗಳ ಕಾರ್ಯಭಾರ ಮುಗಿಸಿ ನವೆಂಬರ್ 9ರಂದು ನಿವೃತ್ತರಾದ ಅವರು, ಕೊಲಿಜಿಯಂ ದುರುಪಯೋಗವಾದ ರೀತಿಯಲ್ಲಿ ವ್ಯವಸ್ಥೆಗಳು ಬೇಕು ಎಂದು ಸಲಹೆ ನೀಡಿದ್ದಾರೆ.

‘ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಅನುಮೋದನೆ ನೀಡಿದ್ದ ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗದ ಕಾಯ್ದೆ (ಎನ್‌ಜೆಎಸಿ) ಅಸಾಂವಿಧಾನಿಕ ಎಂಬುದಾಗಿ ಸುಪ್ರೀಂ ಕೋರ್ಟ್ ಪರಿಗಣಿಸಿದೆ. ಸರ್ಕಾರವು ಮತ್ತೆ ಆ ಕಾಯ್ದೆ ಜಾರಿಗೆ ಮುಂದಾದರೆ, ಅದು ಅವರ ಪರಮಾಧಿಕಾರ. ಈಗ ಅಸ್ತಿತ್ವದಲ್ಲಿರುವ ಕೊಲಿಜಿಯಂ ವ್ಯವಸ್ಥೆಯನ್ನೇ ನಾವು ಅನುಸರಿಸಬೇಕಿದೆ’ ಎಂದು ಅವರು ಹೇಳಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ಕೊಲಿಜಿಯಂ ವ್ಯವಸ್ಥೆ ಅತ್ಯುತ್ತಮವಾಗಿದ್ದು, ಅದನ್ನು ಸರಿಪಡಿಸಬೇಕಾದ ಅಗತ್ಯವಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಎನ್‌ಜೆಎಸಿ ತೀರ್ಪಿನ ಪ್ರಕಾರ ಸುಪ್ರೀಂ ಕೋರ್ಟ್‌ನಲ್ಲಿ ಸ್ಥಾಪಿಸಲಾಗಿರುವ ಕಾರ್ಯಾಲಯವು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುವಂತೆ ಆಗಬೇಕು ಎಂದಿದ್ದಾರೆ.



**ಕೊಲಿಜಿಯಂನ ಎಲ್ಲ ಸದಸ್ಯರೂ ನೇಮಕಾತಿ ಪ್ರಕ್ರಿಯೆಯಲ್ಲಿ ತಮ್ಮ ಒಳನೋಟ ನೀಡುತ್ತಾರೆ. ಹೀಗಾಗಿಯೇ ಸಿಜೆಐ ಎನ್.ವಿ. ರಮಣ ಅವರ ಅವಧಿಯಲ್ಲಿ 250 ನ್ಯಾಯಮೂರ್ತಿಗಳ ನೇಮಕಾತಿ ಸಾಧ್ಯವಾಗಿದೆ**

**ಯು.ಯು. ಲಲಿತ್**
ನಿವೃತ್ತ ಮುಖ್ಯ ನ್ಯಾಯಮೂರ್ತಿ

ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು, ಕೊಲಿಯಂ ವ್ಯವಸ್ಥೆಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರು. ನ್ಯಾಯಮೂರ್ತಿಗಳು ನ್ಯಾಯದಾನ ಮಾಡುವುದಕ್ಕಿಂತ ಹೆಚ್ಚಾಗಿ ತಮ್ಮ ಹೆಚ್ಚಿನ ಸಮಯವನ್ನು ನ್ಯಾಯಮೂರ್ತಿ ನೇಮಕಾತಿ ನಿರ್ಧಾರ ತೆಗೆದುಕೊಳ್ಳುವುದರಲ್ಲೇ ಕಳೆಯುತ್ತಾರೆ ಎಂದು ಆರೋಪಿಸಿದ್ದರು. ಸಚಿವರ ಹೇಳಿಕೆ ಅವರ ವೈಯಕ್ತಿಕ ಅಭಿಪ್ರಾಯ ಎಂದರು.

### ಗುಜರಾತ್: ಕಾಂಗ್ರೆಸ್, ಎಎಪಿಯಿಂದ ಹಳೆ ಪಿಂಚಣಿ ಯೋಜನೆ ಜಾರಿ ಭರವಸೆ

# ನೌಕರರ ಮತ ಸೆಳೆಯಲು ‘ಒಪಿಎಸ್’

ಅಹಮದಾಬಾದ್ (ಪಿಟಿಐ): ಸರ್ಕಾರಿ ನೌಕರರಿಗೆ ಹಳೇ ಪಿಂಚಣಿ ಯೋಜನೆ (ಒಪಿಎಸ್) ಮರುಜಾರಿಗೊಳಿಸಬೇಕು ಎಂಬ ಬೇಡಿಕೆಯೇ ಗುಜರಾತ್ ವಿಧಾನಸಭೆಗೆ ನಡೆಯುವ ಚುನಾವಣೆಯಲ್ಲಿ ಪ್ರಮುಖ ವಿಷಯವಾಗುವ ಸೂಚನೆಗಳಿವೆ.

ಅಧಿಕಾರಕ್ಕೆ ಬಂದರೆ ಒಪಿಎಸ್ ಅನ್ನು ಮರುಜಾರಿಗೊಳಿಸಲಾಗುವುದು ಎಂದು ಕಾಂಗ್ರೆಸ್ ಮತ್ತು ಆಮ್ ಆದ್ಮಿ ಪಾರ್ಟಿ (ಎಎಪಿ) ಈಗಾಗಲೇ ಭರವಸೆ ನೀಡಿವೆ. ಈ ಮೂಲಕ ಸರ್ಕಾರಿ ನೌಕರರ ಮತಗಳನ್ನು ಸೆಳೆಯುವ ವಿಶ್ವಾಸವನ್ನು ಹೊಂದಿವೆ.

ಗುಜರಾತ್ ವಿಧಾನಸಭೆಗೆ ಡಿಸೆಂಬರ್ 1 ಮತ್ತು 5ರಂದು ಎರಡು ಹಂತದಲ್ಲಿ ಮತದಾನ ನಡೆಯಲಿದೆ. ಗುಜರಾತ್‌ನ ಬಿಜೆಪಿ ಸರ್ಕಾರ ಏಪ್ರಿಲ್ 1, 2005ರ ನಂತರ ಸೇವೆಗೆ ಸೇರುವ ನೌಕರರಿಗೆ ಅನ್ವಯಿಸುವಂತೆ ಎನ್‌ಪಿಎಸ್ ಜಾರಿಗೊಳಿಸಿದೆ.

ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್) ಜಾರಿಗೆ ಸರ್ಕಾರಿ ನೌಕರರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಪ್ರತಿಭಟನೆಗಳು ನಡೆದಿವೆ. ಏಪ್ರಿಲ್ 2005ಕ್ಕೂ ಮೊದಲು ಸೇರಿರುವ ನೌಕರರಿಗೆ ಎನ್‌ಪಿಎಸ್ ಅನ್ವಯಿಸದು ಎಂದು ಸರ್ಕಾರ ಸ್ಪಷ್ಟನೆ ನೀಡಿತ್ತು.

**ಬಿಜೆಪಿಗೆ ಬಂಡಾಯ ಭೀತಿ:** ಗುಜರಾತ್‌ನಲ್ಲಿ ಆಡಳಿತರೂಢ ಬಿಜೆಪಿಗೆ ಬಂಡಾಯದ ಭೀತಿ ಎದುರಾಗಿದ್ದು, ಪಕ್ಷದ ಐವರು ನಾಯಕರು ಪಕ್ಷೇತರರಾಗಿ ಚುನಾವಣೆಗೆ ಸ್ಪರ್ಧಿಸುವುದಾಗಿ ಬೆದರಿಕೆಯೊಡ್ಡಿದ್ದಾರೆ. ಇವರಲ್ಲಿ ಒಬ್ಬ ಹಾಲಿ ಶಾಸಕರೂ ಸೇರಿದ್ದಾರೆ.

ಈ ಐವರಿಗೆ ಪಕ್ಷ ಟಿಕೆಟ್ ನಿರಾಕರಿಸಿತ್ತು. ಬೆಂಬಲಿಗರ ಸಲಹೆ ಪಡೆದು ಮುಂದಿನ ನಿರ್ಧಾರ ಕೈಗೊಳ್ಳುತ್ತೇವೆ ಎಂದು ಹೆಚ್ಚಿನವರು ತಿಳಿಸಿದ್ದಾರೆ. ಮಾಜಿ ಶಾಸಕ, ಬುಡಕಟ್ಟು ಜನಾಂಗದ ಮುಖಂಡ ಹರ್ಷದ್ ವಾಸವ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ.

**ಚುನಾವಣೆಗೆ ಸ್ಪರ್ಧಿಸುವುದಿಲ್ಲ;** ಬೆಟ್ಟಿಯಾ (ಪಿಟಿಐ): ಬಿಹಾರ ಚುನಾವಣೆಯಲ್ಲಿ ‘ಉತ್ತಮ ಪರ್ಯಾಯ’ ರೂಪಿಸುವ ಸಂಕಲ್ಪ ತೊಟ್ಟಿರುವ ರಾಜಕೀಯ ಕಾರ್ಯತಂತ್ರರಾದ ಪ್ರಶಾಂತ್ ಭೂಷಣ್, ಸ್ವತಃ ಚುನಾವಣೆಗೆ ಸ್ಪರ್ಧಿಸುವ ಸಾಧ್ಯತೆಗಳನ್ನು ತಳ್ಳಿಹಾಕಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಏಕೆ ಚುನಾವಣೆಗೆ ಸ್ಪರ್ಧಿಸಲಿ. ನನಗೆ ಅಂತಹ ಆಕಾಂಕ್ಷೆ ಇಲ್ಲ ಎಂದು ಅವರು ಈ ಕುರಿತ ಪ್ರತಿಕ್ರಿಯಿಸಿದರು.

ಪ್ರಸ್ತುತ ಪ್ರಶಾಂತ್ ಕಿಶೋರ್ ಅವರು ರಾಜ್ಯದಲ್ಲಿ 3,500 ಕಿ.ಮೀ. ಅಂತರದ ಪಾದಯಾತ್ರೆಯನ್ನು ಹಮ್ಮಿಕೊಂಡಿದ್ದಾರೆ. ಎಲ್ಲ ಜಿಲ್ಲೆಗಳಲ್ಲಿ ಪಾದಯಾತ್ರೆ ನಡೆಯಲಿದ್ದು, ಪ್ರತಿಕ್ರಿಯೆ ಆಧರಿಸಿ ಕಾರ್ಯತಂತ್ರ ರೂಪಿಸಲಾಗುವುದು ಎಂದು ತಿಳಿಸಿದರು.

ಪಂಜಾಬ್ ಮುಖ್ಯಮಂತ್ರಿ, ಎಎಪಿ ಮುಖಂಡ ಭಗವಂತ್ ಮಾನ್ ಅವರು ಗುಜರಾತ್ ವಿಧಾನಸಭೆ ಚುನಾವಣೆಯ ಪ್ರಚಾರದ ಭಾಗವಾಗಿ ಗಿರ್ ಸೋಮನಾಥ್ ಜಿಲ್ಲೆಯಲ್ಲಿ ಭಾನುವಾರ ರೋಡ್ ಶೋ ನಡೆಸಿದರು –ಪಿಟಿಐ ಚಿತ್ರ

ಪ್ರಜಾ ಮತ
ಜನತಂತ್ರದ ಹಬ್ಬ 2022

## ಹಿಮಾಚಲ ಪ್ರದೇಶದಲ್ಲಿ ಶೇ 75.6 ಮತದಾನ

ನವದೆಹಲಿ (ಪಿಟಿಐ): ಹಿಮಾಚಲ ಪ್ರದೇಶದ ವಿಧಾನಸಭೆಗೆ ಶನಿವಾರ ನಡೆದ ಒಂದೇ ಹಂತದ ಚುನಾವಣೆಯಲ್ಲಿ ಶೇ 75.6ರಷ್ಟು ಮತದಾನವಾಗಿದೆ. ಅಂಚೆ ಮತಪತ್ರಗಳು ಇನ್ನೂ ಬರುತ್ತಿದ್ದು, ಅಂಕಿ–ಅಂಶ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಭಾನುವಾರ ಚುನಾವಣಾ ಅಧಿಕಾರಿಗಳು ತಿಳಿಸಿದ್ದಾರೆ.

ಒಟ್ಟು ಮತದಾನದಲ್ಲಿ ಶೇ76.8ರಷ್ಟು ಮಹಿಳಾ ಮತದಾರರು, ಶೇ72.4 ಪುರುಷ ಮತದಾರರು ಹಾಗೂ ಶೇ 68.4ರಷ್ಟು ತೃತೀಯ ಲಿಂಗಿ ಮತದಾರರು ತಮ್ಮ ಹಕ್ಕುಚಲಾಯಿಸಿದ್ದಾರೆ. ಮತದಾರರ ಪಟ್ಟಿಯಲ್ಲಿ ಒಟ್ಟು ಪುರುಷರು 27.88 ಲಕ್ಷ, ಮಹಿಳೆಯರು 27.36 ಲಕ್ಷ ಹಾಗೂ ತೃತೀಯಲಿಂಗಿಗಳು 38 ಜನ ನೋಂದಣಿ ಮಾಡಿಕೊಂಡಿದ್ದರು ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೀಶ್ ಗಾರ್ಗ್ ತಿಳಿಸಿದ್ದಾರೆ.

ಡೂನ್ ವಿಧಾನಸಭಾ ಕ್ಷೇತ್ರದಲ್ಲಿ ಅತಿ ಹೆಚ್ಚು ಶೇ85.25ರಷ್ಟು ಮತದಾನವಾಗಿದ್ದು, ಶಿಮ್ಲಾ ವಿಧಾನಸಭಾ ಕ್ಷೇತ್ರದಲ್ಲಿ ಅತಿ ಕಡಿಮೆ ಶೇ 62.53ರಷ್ಟು ಮತದಾನವಾಗಿದೆ.

2017ರ ವಿಧಾನಸಭಾ ಚುನಾವಣೆಯಲ್ಲಿ ಶೇ75.57ರಷ್ಟು ಮತದಾನವಾಗಿತ್ತು.

## ಕಂಭಾಲಿಯಾ: ಗಢವಿ ಸ್ಪರ್ಧೆ

ಅಹಮದಾಬಾದ್ (ಪಿಟಿಐ): ಗುಜರಾತ್ ಮುಖ್ಯಮಂತ್ರಿ ಹುದ್ದೆಯ ಎಎಪಿ ಅಭ್ಯರ್ಥಿ ಈಸುದಾನ್ ಗಢವಿ ಅವರು ತಮ್ಮ ತವರು ಜಿಲ್ಲೆ ದೇವಭೂಮಿ ದ್ವಾರಕಾದ ಕಂಭಾಲಿಯಾ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ ಎಂದು ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಭಾನುವಾರ ಘೋಷಿಸಿದ್ದಾರೆ.



ಈಸುದಾನ್

‘ರೈತರು, ನಿರುದ್ಯೋಗಿ ಯುವಜನರು, ಮಹಿಳೆಯರು ಉದ್ಯಮಿಗಳ ಪರವಾಗಿ ಇಷ್ಟು ವರ್ಷ ಧ್ವನಿ ಎತ್ತುತ್ತಿದ್ದ ಈಸುದಾನ್ ಗಢವಿ ಅವರು ಕಂಭಾಲಿಯಾದಿಂದ ಸ್ಪರ್ಧಿಸಲಿದ್ದಾರೆ. ಕೃಷ್ಣನ ಪವಿತ್ರ ನಾಡಿಗೆ ಹೊಸ ಮತ್ತು ಉತ್ತಮವಾದ ಮುಖ್ಯಮಂತ್ರಿ ದೊರೆಯಲಿದ್ದಾರೆ’ ಎಂದು ಕೇಜ್ರಿವಾಲ್ ಟ್ವೀಟ್‌ನಲ್ಲಿ ಹೇಳಿದ್ದಾರೆ.

ಈ ಟ್ವೀಟ್‌ಗೆ ಗಢವಿ ಅವರು ನೀಡಿದ ಪ್ರತಿಕ್ರಿಯೆ ಹೀಗಿದೆ: ‘ನೀವು ಮತ್ತು ಗುಜರಾತ್‌ನ ಜನರು ಇಟ್ಟಿರುವ ವಿಶ್ವಾಸದಿಂದಾಗಿ ಕೊನೆಯುಸಿರಿನ ತನಕ ಗುಜರಾತ್ ಜನರ ಸೇವೆ ಮಾಡುತ್ತೇನೆ’. ಸುದ್ದಿವಾಹಿನಿಯಲ್ಲಿ ನಿರೂಪಕರಾಗಿದ್ದ ಗಢವಿ ಅವರನ್ನು ಎಎಪಿಯ ಮುಖ್ಯಮಂತ್ರಿ ಅಭ್ಯರ್ಥಿ ಎಂದು ನ. 4ರಂದು ಘೋಷಿಸಲಾಗಿತ್ತು.


ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.



9ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಕೆ.ಸಿ.ನಂಜೇಗೌಡ

ಇಂತಿ: ಕೆ.ಹೆಚ್.ಲಕ್ಷ್ಮಮ್ಮ, ಎನ್.ಎಸ್ ಕುಮಾರ್, ರಾಧಾ, ಕೆ.ಎನ್.ರಘುನಾಥ ಕುಟುಂಬ


## ಜಿ 20 ಶೃಂಗಸಭೆ: ಪ್ರಮುಖ ಚರ್ಚೆಗಳಲ್ಲಿ ಪಾಲ್ಗೊಳ್ಳಲಿರುವ ಪ್ರಧಾನಿ ಮೋದಿ

ನವದೆಹಲಿ: ಇಂಡೊನೇಷ್ಯಾದ ಬಾಲಿಯಲ್ಲಿ ನಡೆಯಲಿರುವ ಜಿ20 ನಾಯಕರ ಶೃಂಗಸಭೆಯಲ್ಲಿ ಆಹಾರ ಮತ್ತು ಇಂಧನ ಭದ್ರತೆ, ಡಿಜಿಟಲ್ ರೂಪಾಂತರ ಮತ್ತು ಆರೋಗ್ಯ ವಿಷಯಗಳ ಕುರಿತ ಚರ್ಚೆಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳುವರು ಎಂದು ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾತ್ರಾ ಭಾನುವಾರ ತಿಳಿಸಿದ್ದಾರೆ.

ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಮೋದಿ ಅವರು ಸೋಮವಾರ ಬಾಲಿಗೆ ತೆರಳಲಿದ್ದಾರೆ ಎಂದೂ ಹೇಳಿದ್ದಾರೆ.

ಶೃಂಗಸಭೆಯಲ್ಲಿ ಉಕ್ರೇನ್ ಯುದ್ಧ ಮತ್ತು ಅದರ ಪರಿಣಾಮಗಳು ಸೇರಿದಂತೆ ಜಾಗತಿಕ ಮಟ್ಟದ ವಿವಿಧ ಸವಾಲುಗಳ ಕುರಿತು ಚರ್ಚೆ ನಡೆಯುವ ಸಾಧ್ಯತೆ ಇದೆ ಎಂದಿದ್ದಾರೆ.

ಜಾಗತಿಕ ಆರ್ಥಿಕತೆ, ಇಂಧನ, ಪರಿಸರ ಮೊದಲಾದ ವಿಚಾರಗಳ ಬಗ್ಗೆ ಮೋದಿ ಅವರು ಇತರ ನಾಯಕರ ಜೊತೆ ಮಾತುಕತೆ ನಡೆಸುವರು ಎಂದೂ ವಿವರಿಸಿದ್ದಾರೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್, ಬ್ರಿಟನ್ ಪ್ರಧಾನಿ ರಿಷಿ ಸುನಕ್, ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್, ಜರ್ಮನಿಯ ಚಾನ್ಸೆಲರ್ ಒಲಾಫ್ ಸ್ಕಾಲ್ಜ್ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಪಾಲ್ಗೊಳ್ಳುವರು.

ಇಂಡೊನೇಷ್ಯಾ ಅಧ್ಯಕ್ಷ ಜೊಕೊ ವಿಡೊಡೊ ಅವರ ಆಹ್ವಾನದ ಮೇರೆಗೆ ಮೋದಿ ಅವರು ಈ ಶೃಂಗಸಭೆಯಲ್ಲಿ ಭಾಗವಹಿಸುತ್ತಿದ್ದು, ಬಾಲಿಯಲ್ಲಿ 45 ಗಂಟೆಗಳ ವಾಸ್ತವ್ಯದ ಅವಧಿಯಲ್ಲಿ ಅವರು 20 ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವರು ಎಂದು ಮೂಲಗಳು ತಿಳಿಸಿವೆ. ಭಾರತವು ಡಿಸೆಂಬರ್ 1 ರಿಂದ ಔಪಚಾರಿಕವಾಗಿ ಜಿ 20 ಅಧ್ಯಕ್ಷ ಸ್ಥಾನವನ್ನು ವಹಿಸಿಕೊಳ್ಳಲಿದೆ.

## ಪಾದಚಾರಿ ಮಾರ್ಗದಲ್ಲಿ ಸ್ಫೋಟ: 6 ಸಾವು

ಇಸ್ತಾಂಬುಲ್ (ಎಪಿ):ಇಲ್ಲಿನ ಜನಪ್ರಿಯ ಪಾದಚಾರಿ ಮಾರ್ಗವಾದ ಇಸ್ತಿಕಾಲ್ ಅವೆನ್ಯೂದಲ್ಲಿ ಭಾನುವಾರ ಸಂಜೆ ಸಂಭವಿಸಿದ ಸ್ಫೋಟದಲ್ಲಿ 6 ಜನ ಮೃತರಾಗಿದ್ದು, 38 ಮಂದಿ ಗಾಯಗೊಂಡಿದ್ದಾರೆ ಎಂದು ಇಸ್ತಾಂಬುಲ್ ಗವರ್ನರ್ ಅಲಿ ಯರ್ಲಿಕಾಯಾ ಟ್ವೀಟ್ ಮಾಡಿದ್ದಾರೆ.

ಇಸ್ತಿಕಾಲ್ ಅವೆನ್ಯೂದಲ್ಲಿ ರೆಸ್ಟೋರೆಂಟ್, ಅಂಗಡಿಗಳಿವೆ. ಇದು ಹೆಚ್ಚಿನ ಪ್ರವಾಸಿಗರು, ಸ್ಥಳೀಯರಿಂದ ಕಿಕ್ಕಿರಿದ ರಸ್ತೆಯಾಗಿದೆ. ಭಾನುವಾರ ಸಂಜೆ ಸುಮಾರು 4.30ಕ್ಕೆ ಸ್ಫೋಟ ನಡೆದಿದೆ.

### ಸಂಕ್ಷಿಪ್ತ ಸುದ್ದಿ

## ನೂರ್ ಇನಾಯತ್ ಖಾನ್ ಜೀವನಗಾಥೆ ಲಂಡನ್‌ನಲ್ಲಿ ಪ್ರದರ್ಶನ

ಲಂಡನ್: ಎರಡನೇ ಮಹಾಯುದ್ಧದಲ್ಲಿ ಬ್ರಿಟನ್ ಪರ ಗೂಢಚಾರಿಕೆ ಮಾಡಿ, ಜರ್ಮನಿಯಲ್ಲಿ ದಾರುಣವಾಗಿ ಹತ್ಯೆಯಾಗಿದ್ದ ಟಿಪ್ಪು ವಂಶಸ್ಥೆ, ನೂರ್ ಇನಾಯತ್ ಖಾನ್ ಅವರ ಜೀವನಗಾಥೆ ಲಂಡನ್ ವೇದಿಕೆಯಲ್ಲಿ ಪ್ರದರ್ಶನಗೊಂಡಿದೆ.

ಇದೇ ತಿಂಗಳು ಸೌತ್ ವರ್ಕ್ ರಂಗಮಂದಿರದಲ್ಲಿ ಸೂಫಿ ಪ್ರಿಯೆ, ಬ್ರಿಟನ್ ಪರ ಗೂಢಚಾರಿಣಿ ಅವರ ಜೀವನ ಚರಿತ್ರೆಯ ‘ನೂರ್’ ಪ್ರದರ್ಶನಗೊಂಡಿದೆ.

## ಫೋರ್ಟ್ ಬೆಂಡ್ ಕೌಂಟಿ ಜಡ್ಜ್ ಆಗಿ ಕೆ.ಪಿ. ಜಾರ್ಜ್ ಮರು ಆಯ್ಕೆ

ಹೂಸ್ಟನ್ (ಪಿಟಿಐ): ಭಾರತ ಮೂಲದ ಅಮೆರಿಕನ್ನರಾದ, ಡೆಮಾಕ್ರಟಿಕ್ ಪಕ್ಷದ ಕೆ.ಪಿ.ಜಾರ್ಜ್ ಅವರು ಫೋರ್ಟ್ ಬೆಂಡ್ ಕೌಂಟಿ ನ್ಯಾಯಮೂರ್ತಿಯಾಗಿ ಮತ್ತೊಂದು ಅವಧಿಗೆ ಆಯ್ಕೆಯಾಗಿದ್ದಾರೆ.

57 ವರ್ಷದ ಜಾರ್ಜ್ ಅವರು ಚಲಾಯಿತ ಒಟ್ಟು ಮತಗಳಲ್ಲಿ ಶೇ 52ರಷ್ಟು ಮತ ಪಡೆದು ಆಯ್ಕೆಯಾದರು. ರಿಪಬ್ಲಿಕನ್ ಪಕ್ಷದ ಟ್ರೆವರ್ ನೆಹ್ಲ್ ಪ್ರತಿಸ್ಪರ್ಧಿಯಾಗಿದ್ದರು.

ಜಾರ್ಜ್ ಅವರು ಮೂಲತಃ ಕೇರಳದ ಪತ್ತನಂತಿಟ್ಟಾ ಬಳಿಯ ಕೊಕ್ಕತೋಡು ಗ್ರಾಮದವರು. ಪದವಿ ಶಿಕ್ಷಣದ ಬಳಿಕ ಉದ್ಯೋಗ ಅರಸಿ ಮುಂಬೈಗೆ ತೆರಳಿದರು. ಹಣಕಾಸು ಸಂಸ್ಥೆಯ ಉದ್ಯೋಗಿಯಾಗಿ 1993ರಲ್ಲಿ ನ್ಯೂಯಾರ್ಕ್‌ಗೆ ತೆರಳಿದರು. ಅಂದಿನಿಂದ ಕುಟುಂಬದೊಂದಿಗೆ ಅಲ್ಲಿಯೇ ನೆಲೆಸಿದ್ದಾರೆ. ಅಮೆರಿಕದ ಈ ಪ್ರಮುಖ ಸ್ಥಾನಕ್ಕೆ ಏರಿದ ಭಾರತ ಮೂಲದ ಅಮೆರಿಕ ಸಮುದಾಯದ ಮೊದಲಿಗರು ಆಗಿದ್ದಾರೆ.

## ರಷ್ಯಾ ಪಡೆಗಳನ್ನು ಹಿಮ್ಮೆಟ್ಟಿಸುವೆವು: ಝೆಲೆನ್‌ಸ್ಕಿ ಪ್ರತಿಜ್ಞೆ

ಮಿಕೋಲಾಯಿವ್, ಉಕ್ರೇನ್ (ಎಪಿ): ‘ರಷ್ಯಾ ಸೇನಾಪಡೆಗಳನ್ನು ದೇಶದಿಂದ ಸಂಪೂರ್ಣವಾಗಿ ಹಿಮ್ಮೆಟ್ಟಿಸುತ್ತೇವೆ’ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ತಿಳಿಸಿದ್ದಾರೆ.

ರಷ್ಯಾವು ಕೆರ್ಸಾನ್‌ನಿಂದ ತನ್ನ ಸೇನಾಪಡೆ ಹಿಂದಕ್ಕೆ ಕರೆಸಿಕೊಂಡ ಬಳಿಕ ಈ ಪ್ರದೇಶಕ್ಕೆ ಮರಳಿರುವ ಸ್ಥಳೀಯರು ಪರಸ್ಪರ ಅಪ್ಪಿಕೊಂಡು, ಮುತ್ತಿಟ್ಟು, ಉಕ್ರೇನ್‌ನ ಧ್ವಜ ಹಿಡಿದು ಸಂಭ್ರಮಿಸಿದ್ದರು.

ಈ ಸಂಭ್ರಮದ ಬೆನ್ನಲ್ಲೇ ಶನಿವಾರ ವಿಡಿಯೊ ಭಾಷಣ ಮಾಡಿರುವ ಝೆಲೆನ್‌ಸ್ಕಿ, ‘ಸ್ಥಳೀಯರು ಪರಸ್ಪರ ಅಪ್ಪಿಕೊಂಡು ಸಂಭ್ರಮಿಸುತ್ತಿರುವ ಇಂತಹ ದೃಶ್ಯಗಳನ್ನು ನಾವು ಮುಂದೆಯೂ ಕಾಣುತ್ತೇವೆ’ ಎಂದಿದ್ದಾರೆ.

## ₹32 ಕೋಟಿ ಮೌಲ್ಯದ ಚಿನ್ನ ವಶ: 7 ಮಂದಿ ಬಂಧನ

ಮುಂಬೈ (ಪಿಟಿಐ): ಇಲ್ಲಿನ ಛತ್ರಪತಿ ಶಿವಾಜಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾನುವಾರ ಪ್ರತ್ಯೇಕ ಕಾರ್ಯಾಚರಣೆ ನಡೆಸಿರುವ ಕಸ್ಟಮ್ಸ್ ಅಧಿಕಾರಿಗಳು ₹32 ಕೋಟಿ ಮೌಲ್ಯದ 61 ಕೆ.ಜಿ.ಚಿನ್ನ ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ 7 ಮಂದಿಯನ್ನು ಬಂಧಿಸಿದ್ದಾರೆ.

‘ಕಸ್ಟಮ್ಸ್ ಇಲಾಖೆಯು ಒಂದು ದಿನದಲ್ಲಿ ಇಷ್ಟು ಮೊತ್ತದ ಚಿನ್ನ ಜಪ್ತಿ ಮಾಡಿರುವುದು ನಿಲ್ದಾಣದ ಇತಿಹಾಸದಲ್ಲೇ ಮೊದಲು’ ಎಂದು ಅಧಿಕಾರಿಗಳು ಹೇಳಿದ್ದಾರೆ.

## ಮರಾಠಿ ನಟಿ ಕಲ್ಯಾಣಿ ಕುರಾಲೆ ಜಾವೇದ್ ಸಾವು

ಕೊಲ್ಹಾಪುರ (ಪಿಟಿಐ): ಬೈಕ್‌ಗೆ ಕಾಂಕ್ರಿಟ್ ಮಿಕ್ಸರ್ ಟ್ರ್ಯಾಕ್ಟರ್ ಡಿಕ್ಕಿ ಹೊಡೆದು ನಟಿ ಕಲ್ಯಾಣಿ ಕುರಾಲೆ ಜಾವೇದ್(32) ಅವರು ಸಾವಿಗೀಡಾಗಿರುವ ಘಟನೆ ಕೊಲ್ಹಾಪುರ ಜಿಲ್ಲೆಯಲ್ಲಿ ನಡೆದಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

‘ತುಜ್ಯತ್ ಜೀವ್ ರಂಗಲಾ’ ಮರಾಠಿ ಧಾರವಾಹಿಯಲ್ಲಿ ಕಾಣಿಸಿಕೊಳ್ಳುತ್ತಿದ್ದ ಕಲ್ಯಾಣಿ ಅವರು ಶನಿವಾರ ಮನೆಗೆ ಬೈಕ್‌ನಲ್ಲಿ ತೆರಳುವಾಗ ಸಾಂಗ್ಲಿ–ಕೊಲ್ಹಾಪುರ ಹೆದ್ದಾರಿಯ ಹಾಲೊಂಡಿ ಬಳಿ ಈ ಘಟನೆ ಸಂಭವಿಸಿದೆ. ಆಸ್ಪತ್ರೆಗೆ ಕರೆದೊಯ್ಯುವಾಗ ದಾರಿ ಮಧ್ಯೆಯಲ್ಲಿ ಅವರು ಕೊನೆಯುಸಿರೆಳೆದಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ.

## ಮುಕ್ತ ಕಾರ್ಯವಿಧಾನ ಉತ್ತೇಜಿಸುವಲ್ಲಿ ಇಎಎಸ್ ಪಾತ್ರ ಮಹತ್ವದ್ದು: ಧನಕರ್

ನಾಮ್ ಪೆನ್ (ಪಿಟಿಐ): ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರು ಆಹಾರ ಮತ್ತು ಇಂಧನ ಭದ್ರತೆ ಕುರಿತ ಜಾಗತಿಕ ಕಾಳಜಿಗಳ ಕುರಿತು ಭಾನುವಾರ ಮಾತನಾಡಿದ್ದಾರೆ.

17ನೇ ಪೂರ್ವ ಏಷ್ಯಾ ಸಮ್ಮೇಳನದಲ್ಲಿ (ಇಎಎಸ್) ಪಾಲ್ಗೊಂಡಿರುವ ಅವರು, ‘ಇಂಡೊ–ಪೆಸಿಫಿಕ್ ವಲಯದಲ್ಲಿ ಉಚಿತ, ಮುಕ್ತ ಮತ್ತು ಒಳಗೊಳ್ಳುವಿಕೆಯ ಕಾರ್ಯವಿಧಾನ ಉತ್ತೇಜಿಸುವಲ್ಲಿ ಇಎಎಸ್‌ನ ಪಾತ್ರ ಮಹತ್ವದ್ದಾಗಿದೆ’ ಎಂದು ಒತ್ತಿ ಹೇಳಿದ್ದಾರೆ.

‘ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷಕ್ಕೆ (2023) ಎಲ್ಲರೂ ತಮ್ಮದೇ ಆದ ಕೊಡುಗೆಗಳನ್ನು ನೀಡಬೇಕು’ ಎಂದು ಇಎಎಸ್ ಸದಸ್ಯ ರಾಷ್ಟ್ರಗಳಿಗೆ ಮನವಿ ಮಾಡಿದ್ದಾರೆ.

ಜಗದೀಪ್ ಧನಕರ್ ಅವರು ಅಮೆರಿಕ ಅಧ್ಯಕ್ಷ ಜೋ ಬೈಡನ್ ಜೊತೆ ಚರ್ಚಿಸಿದರು–ಪಿಟಿಐ ಚಿತ್ರ

**ಬ್ಲಿಂಕೆನ್ ಜೊತೆ ಜೈಶಂಕರ್ ಚರ್ಚೆ:** ಸಮ್ಮೇಳನದಲ್ಲಿ ಭಾಗವಹಿಸಿರುವ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್ ಅವರನ್ನು ಭೇಟಿಯಾಗಿ ಉಕ್ರೇನ್ ಬಿಕ್ಕಟ್ಟಿನ ಕುರಿತು ಚರ್ಚಿಸಿದ್ದಾರೆ.

### ವಿಂಟೇಜ್ ಯುದ್ಧ ವಿಮಾನಗಳ ಪರಸ್ಪರ ಡಿಕ್ಕಿ

# ವೈಮಾನಿಕ ಪ್ರದರ್ಶನ ವೇಳೆ ಅಪಘಾತ: 6 ಸಾವು

ಡಲ್ಲಾಸ್ (ಅಮೆರಿಕ) (ಎಪಿ): ಡಲ್ಲಾಸ್‌ನಲ್ಲಿ ಶನಿವಾರ ನಡೆದ ವೈಮಾನಿಕ ಪ್ರದರ್ಶನದ ವೇಳೆ ಎರಡು ಸೇನೆಯ ಎರಡು ವಿಂಟೇಜ್ ಯುದ್ಧ ವಿಮಾನಗಳು ಪರಸ್ಪರ ಡಿಕ್ಕಿಯಾಗಿದ್ದು, ಆರು ಮಂದಿ ಮೃತಪಟ್ಟಿದ್ದಾರೆ.

ಬೋಯಿಂಗ್ ಬಿ–17 ಮತ್ತು ಬೆಲ್ ಪಿ–63 ಕಿಂಗ್ ಕೋಬ್ರಾ ಯುದ್ಧ ವಿಮಾನಗಳ ನಡುವೆ ಅಪಘಾತ ಸಂಭವಿಸಿದೆ ಎಂದು ಫೆಡರಲ್ ಏವಿಯೇಷನ್‌ನ ಆಡಳಿತ ಹೇಳಿಕೆ ನೀಡಿದೆ. ಆದರೆ, ಮೃತರ ವಿವರಗಳನ್ನು ತಿಳಿಸಿಲ್ಲ.

ಆಗಸದಲ್ಲಿ ವಿಮಾನಗಳು ಡಿಕ್ಕಿಯಾಗಿ ಪತನಗೊಂಡಿದ್ದು, ಆ ಸ್ಥಳದಲ್ಲಿ ದಟ್ಟ ಜ್ವಾಲೆ ಮತ್ತು ಕಪ್ಪು ಹೊಗೆ ಆವರಿಸಿತ್ತು. ವಿಮಾನ ಅಪಘಾತ ಕುರಿತ ವಿಡಿಯೊಗಳು ಜಾಲತಾಣದಲ್ಲಿ ಸಾಕಷ್ಟು ಹಂಚಿಕೆಯಾಗಿವೆ.

**ಮುಖ್ಯಾಂಶಗಳು**

- ಮೃತರ ವಿವರಗಳನ್ನು ಬಹಿರಂಗಪಡಿಸದ ಫೆಡರಲ್ ಏವಿಯೇಷನ್ ಆಡಳಿತ
- ಏರ್ ಶೋ ಏರ್ಪಡಿಸಿದ್ದ ಹಾಂಕ್ ಕೋಟ್ಸ್ ಕಂಪನಿ
- ವಿಮಾನಗಳ ಭಗ್ನಾವಶೇಷ ಮಾತ್ರ ಉಳಿದಿವೆ

ದುರಂತದಲ್ಲಿ ವಿಮಾನಗಳ ಭಗ್ನಾವಶೇಷಗಳು ಮಾತ್ರ ಉಳಿದಿದ್ದು, ಪ್ರದರ್ಶನ ವೀಕ್ಷಿಸಲು ಸೇರಿದ್ದ ಜನರಿಗೆ ಯಾವುದೇ ಹಾನಿಯಾದ ಬಗ್ಗೆ ವರದಿಯಾಗಿಲ್ಲ ಎಂದು ದಲ್ಲಾಸ್‌ನ ಅಗ್ನಿಶಾಮಕ ದಳ ತಿಳಿಸಿದೆ.

2011ರಲ್ಲಿ ರೆನೊದಲ್ಲಿ ಸಂಭವಿಸಿದ್ದ ವಿಂಟೇಜ್ ಯುದ್ಧ ವಿಮಾನಗಳ ಅಪಘಾತದಲ್ಲಿ 11 ಜನರು ಮೃತಪಟ್ಟಿದ್ದರು. ಆ ನಂತರ ವೈಮಾನಿಕ ಪ್ರದರ್ಶನದಲ್ಲಿ ಹಳೆ ಯುದ್ಧವಿಮಾನಗಳ ಬಳಕೆ ವೇಳೆ ಸುರಕ್ಷತೆ ಕುರಿತು ಹೆಚ್ಚಿನ ಆತಂಕ ವ್ಯಕ್ತವಾಗಿದೆ.

ವಿಶ್ವಯುದ್ಧ–2ರ ಅವಧಿಯ ಯುದ್ಧವಿಮಾನಗಳ ಅಪಘಾತ ಸಂಬಂಧ 1982ರಿಂದ ಈವರೆಗೆ 21 ಅಪಘಾತಗಳು ಸಂಭವಿಸಿದ್ದು, ಸುಮಾರು 23 ಜನರು ಮೃತಪಟ್ಟಿದ್ದಾರೆ.

ಏರ್ ಶೋ ಏರ್ಪಡಿಸಿದ್ದ ಹಾಂಕ್ ಕೋಟ್ಸ್ ಕಂಪನಿಯ ಪ್ರಕಾರ, ‘ಬಿ–17 ವಿಮಾನದಲ್ಲಿ 4–5 ಕುಳಿತುಕೊಳ್ಳಬಹುದು. ಪಿ–63 ಕಿಂಗ್ ಕೋಬ್ರಾ ಯುದ್ಧ ವಿಮಾನದಲ್ಲಿ ಒಬ್ಬ ಪೈಲಟ್ ಕುಳಿತುಕೊಳ್ಳಬಹುದು.


ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಬೇಕಾಗಿದ್ದಾರೆ! ಬೈಕ್ ಚಾಲಕರು
(Full Time & Part Time)
ಬೇಕಾಗಿರುವ ದಾಖಲೆಗಳು – Bike, Valid DL, RC ಹಾಗು Android Phone
ನೀವು ಬೈಕ್ ಹೊಂದಿದ್ದೀರಾ? ಕೆಲಸ ಹುಡುಕುತ್ತಿದ್ದೀರಾ? ಸಮಯ ಸಿಕ್ಕಾಗ ಬೈಕ್ ಚಲಾಯಿಸಿ ಹಾಗು
4 ಗಂಟೆಗಳಲ್ಲಿ Rs.1000/- ಸಂಪಾದಿಸಿ! ಈಗಲೇ ಕರೆ ಮಾಡಿ:
080-45686913

Part-Time Jobs

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆಮಾಡಿ: 9611225266/ 9611225388

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000-20,000 ಗಳಿಸಿ.(ಕೊರಿಯರ್ ಇದೆ). 8884686860, 8884686861.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು, ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611224633/ 9611225344

General

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿ ಇದೆ. 10,000-15,000. 8951315839, 9880545002

ಭವಿಷ್ಯ

Astrology

“ಕೆಲಸಆದ ನಂತರ ಕಾಣಿಕೆ” ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಹ್ಮತಂತ್ರವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ,ಗುಟ್ಟಹಳ್ಳಿ. ಬೆಂ.9620201188

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಶ್ರೀ ದುರ್ಗಾದೇವಿ ಆರಾಧನೆಯಿಂದ ಆರೋಗ್ಯ, ಸಂತಾನ, ಶತ್ರುಕಾಟ, ಲೈಂಗಿಕ ಸಮಸ್ಯೆ ಹಾಗೂ ಸ್ತ್ರೀ ಪುರುಷ ವಶೀಕರಣ 3 ದಿನದಲ್ಲಿ ಮಾಡಿಕೊಡುತ್ತಾರೆ. ಫೋನಿನ ಮೂಲಕ ನೇರ ಪರಿಹಾರ. ಶ್ರೀ ಆಚಾರ್ಯ: 9945995681

ವ್ಯಾಪಾರ

Business Offers

General

SUYAMB MANAGEMENT, A Genuine Share Market Trading Company offers Genuine and Principle Safe Returns for your investment. 6% a Month Fixed Returns. For Details please call 90709 90709. Successful 5th Year. All Investments supported with Legal Document. 90709 90709.

Machinery & Tools

START YOUR Own Business. Paper Plates, Paper Cups. Fully Automatic Machines Manufactured in Bangalore. 'Guru Enterprises': 9845049816

ಪ್ರವಾಸ

Travel

21.12.22/ 28.12.22ರಿಂದ 7/9ದಿನಗಳ ವಿಮಾನ ಮತ್ತು ಎಸಿ.ಬಸ್ಸಿನಲ್ಲಿ ಕಾಶಿವಿಶ್ವನಾಥೇಶ್ವರ, ಬೈದ್ಯನಾಥೇಶ್ವರ,2 ಜ್ಯೋತಿರ್ಲಿಂಗ ಸಮೇತ ಗಯಾ,ನೈಮಿಷಾರಣ್ಯ, ಅಲಹಾಬಾದ್,ಅಯೋಧ್ಯ ಹಾಗು 14/12/2022ರಿಂದ 13ದಿನಗಳ ಪಂಚರಾಮಕ್ಷೇತ್ರ, ಸಮೇತ ಅನ್ನವರಂ,ಸಿಂಹಾಚಲಂ, ಶ್ರೀರಾಮಾನುಜಪ್ರತಿಮೆ ಕೂಡಲೇ ವಿಚಾರಿಸಿ:–ವಿಷ್ಣನ್ ಟ್ರಾವೆಲ್ ಲೈನ್ಸ್.164/3 ಆರ್.ವಿ.ರಸ್ತೆ ಬೆಂಗಳೂರು–04. ಸಂಪರ್ಕಿಸಿ ಷಣ್ಮುಗಾನಂದ: 8105657052/ 9480182865.

ಶ್ರೀರಾಜರಾಜೇಶ್ವರಿ ಟೂರ್ಸ್ 9739618243 9743895346. 01.12.2022 7ದಿನ ಕೇರಳ ಪ್ರವಾಸ. 02.01.2023 6ದಿನ ಭುವನೇಶ್ವರ್ ಪುರಿಜಗನ್ನಾಥ್ ಕೊನಾರ್ಕ್ 3 ಶಕ್ತಿಪೀಠಗಳು.

22.11.2022 ಮಧ್ಯಪ್ರದೇಶ, ಗುಜರಾತ್, ಜ್ಯೋತಿರ್ಲಿಂಗ ಪ್ರವಾಸ 22.12.2022 ತಮಿಳುನಾಡು, ಕೇರಳ, ಶಿರಡಿ, ಪ್ರವಾಸ ಕರ್ನಾಟಕ ಹೆರಿಟೇಜ್ ಟೂರ್ಸ (ಹನುಮಂತನಗರ) 9845035349, 9482435755

ಕಾರ್ತಿಕಮಾಸದ ವಿಶೇಷ ಪ್ರವಾಸ: 18.11.2022 ರಿಂದ 16 ದಿನಗಳ ಅಷ್ಟಜ್ಯೋತಿರ್ಲಿಂಗ ಗುಜರಾತ್ ಮಧ್ಯಪ್ರದೇಶ ಮಹಾರಾಷ್ಟ್ರ,ಮೌಂಟ್‌ಅಬು ಇತ್ಯಾದಿ. ಊಟ ವಸತಿಯೊಂದಿಗೆ ಸಂಪರ್ಕಿಸಿ: ಜೈರಾಮ್ ಟೂರ್ಸ್ ವಿ.ವಿ.ಪುರಂ ಬೆಂಗಳೂರು-4. 9342514289

20.11.2022 5ದಿನಗಳು ರಾಮೇಶ್ವರಂ,ಕನ್ಯಾಕುಮಾರಿ ಪ್ರವಾಸ.,16.12.2022 17ದಿನಗಳು ಗುಜರಾತ್ ಭಾವನಗರ,ಅಷ್ಟಜ್ಯೋತಿರ್ಲಿಂಗ., 24.12.2022 10ದಿನಗಳು ಉಜ್ಜೈನಿ,ಓಂಕಾರೇಶ್ವರ ಮಹಾರಾಷ್ಟ್ರಪ್ರವಾಸ. ಆರ್.ಗಾಂಧಿ ಟೂರ್ಸ್(ರಿ) 9945445809, 9902433500, 6363416487

ಸೋಮನಾಥ್ ದ್ವಾರಕಾ ಮಾತ್ರಗಯಾ ಉಜ್ಜಯಿನಿ ಓಂಕಾರೇಶ್ವರ್ ಅಷ್ಟ ಜ್ಯೋತಿರ್ಲಿಂಗಗಳು 03.12.2022 23.01.2023 ರಿಂದ 15/10 ದಿನಗಳು ಮಾಘ ಸ್ನಾನದ ಪ್ರಯುಕ್ತ ಕಾಶಿ,ಪ್ರಯಾಗ ನೈಮೀಶಾರಣ್ಯ,ಚಿತ್ರಕೂಟ,ಗಯಾ 26.01.2023 ರಿಂದ 8 ದಿನಗಳು. ವಿಯವಾಡ,ಭದ್ರಾಚಲಂ ಅನ್ನಾವರಂ ಪಂಚರಾಮ ಮಂದಿರಗಳು 02.02.2023 ರಿಂದ 10 ದಿನಗಳು. ಸಿಕ್ಕಿಂ,ಡಾರ್ಜಲಿಂಗ್ ಗೌಹಾಟಿ ಕೊಲ್ಕತ್ತ,ಪುರಿ ಭುವನೇಶ್ವರ್ 02.02.2023 ರಿಂದ 14 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
*conditions apply
WWW.DHCLASSIFIEDS.COM
For more information Contact: 9731810277 9901641752 9845114560 9886213331 | 080 - 45557163 / 164
Email: dhclassifieds@deccanherald.co.in

### ಇಂಗ್ಲೆಂಡ್‌ಗೆ ಎರಡನೇ ಬಾರಿ ವಿಶ್ವಕಪ್: ಪಾಕಿಸ್ತಾನಕ್ಕೆ ನಿರಾಶೆ; ಸ್ಯಾಮ್, ಸ್ಟೋಕ್ಸ್ ಮಿಂಚು

# ಮೆಲ್ಬರ್ನ್‌ನಲ್ಲಿ ಮೆರೆದ ಬಟ್ಲರ್ ಬಳಗ

ಮೆಲ್ಬರ್ನ್(ಪಿಟಿಐ): ಮೂರು ದಶಕಗಳ ಹಿಂದಿನ ಇತಿಹಾಸ ಮರುಕಳಿಸಲಿಲ್ಲ. ಮೆಲ್ಬರ್ನ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಜೊಸ್ ಬಟ್ಲರ್ ನಾಯಕತ್ವದ ಇಂಗ್ಲೆಂಡ್ ಬಳಗವು ಚರಿತ್ರೆಯ ಪುಸ್ತಕದಲ್ಲಿ ನೂತನ ಅಧ್ಯಾಯ ಬರೆಯಿತು.

ಭಾನುವಾರ ಈ ಐತಿಹಾಸಿಕ ಕ್ರೀಡಾಂಗಣದಲ್ಲಿ ಪಾಕಿಸ್ತಾನದ ಎದುರು 5 ವಿಕೆಟ್‌ಗಳ ಭರ್ಜರಿ ಜಯ ದಾಖಲಿಸಿದ ಇಂಗ್ಲೆಂಡ್ ಟಿ20 ವಿಶ್ವಕಪ್ ತನ್ನದಾಗಿಸಿಕೊಂಡಿತು. ಮೂವತ್ತು ವರ್ಷಗಳ ಹಿಂದೆ ಇದೇ ಕ್ರೀಡಾಂಗಣದಲ್ಲಿ ಏಕದಿನ ವಿಶ್ವಕಪ್ ಟೂರ್ನಿ ಫೈನಲ್ ನಡೆದಿತ್ತು. ಆಗಲೂ ಪಾಕ್ ಮತ್ತು ಇಂಗ್ಲೆಂಡ್ ಮುಖಾಮುಖಿಯಾಗಿದ್ದವು. ಇಮ್ರಾನ್ ಖಾನ್ ನಾಯಕತ್ವದ ಪಾಕ್ ಚಾಂಪಿಯನ್ ಆಗಿತ್ತು.

ಈ ಟೂರ್ನಿಯ ಸೆಮಿಫೈನಲ್‌ಗಳಲ್ಲಿ ಪಾಕಿಸ್ತಾನವು ನ್ಯೂಜಿಲೆಂಡ್ ಎದುರು ಹಾಗೂ ಇಂಗ್ಲೆಂಡ್ ತಂಡವು ಭಾರತದ ಎದುರು ಗೆದ್ದು ಫೈನಲ್ ಪ್ರವೇಶಿಸಿದಾಗ 30 ವರ್ಷಗಳ ಹಿಂದಿನ ಇತಿಹಾಸ ಮರುಕಳಿಸುವ ನಿರೀಕ್ಷೆ ಪಾಕ್ ಅಭಿಮಾನಿಗಳಲ್ಲಿ ಮೂಡಿತ್ತು. ಆದರೆ ಇಂಗ್ಲೆಂಡ್ ತಂಡದ ವೇಗಿ ಸ್ಯಾಮ್ ಕರನ್ (12ಕ್ಕೆ3) ಹಾಗೂ ಆಲ್‌ರೌಂಡರ್ ಬೆನ್ ಸ್ಟೋಕ್ಸ್ (52; 49ಎ, 4X5, 6X1) ಇಂಗ್ಲೆಂಡ್ ಗೆಲುವಿನ ರೂವಾರಿಗಳಾದರು.

ಅಭಿಮಾನಿಗಳು ಕಿಕ್ಕಿರಿದು ಸೇರಿದ್ದ ಎಂಸಿಜಿಯಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸ್ಯಾಮ ಕರನ್ ಹಾಗೂ ಆದಿಲ್ ರಶೀದ್ (22ಕ್ಕೆ2) ಅವರ ಅಮೋಘ ಬೌಲಿಂಗ್ ಮುಂದೆ ಅಗ್ರಕ್ರಮಾಂಕದ ಬ್ಯಾಟರ್‌ಗಳು ಕುಸಿದರು. ಇದರಿಂದಾಗಿ ಪಾಕ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 137 ರನ್ ಗಳಿಸಿತು.

ಇಂಗ್ಲೆಂಡ್ ತಂಡದ ಬೆನ್ ಸ್ಟೋಕ್ಸ್ ಹಾಗೂ ಲಿಯಾಮ್ ಲಿವಿಂಗ್‌ಸ್ಟೋನ್ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡಕ್ಕೆ ಶಾಹೀನ್ ಆಫ್ರಿದಿ ಮೊದಲ ಓವರ್‌ನಲ್ಲಿಯೇ ಪೆಟ್ಟುಕೊಟ್ಟರು. ಇನ್ನೊಂದು ಬದಿಯಿಂದ ಹ್ಯಾರಿಸ್ ರವೂಫ್ (23ಕ್ಕೆ2) ಪರಿಣಾಮಕಾರಿ ದಾಳಿ ನಡೆಸಿದರು. ಇದರಿಂದಾಗಿ ತಂಡವು 5.3 ಓವರ್‌ಗಳಲ್ಲಿ 45 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಕ್ರೀಸ್‌ಗೆ ಬಂದ ಬೆನ್ ಸ್ಟೋಕ್ಸ್ ಆತಂಕ ದೂರ ಮಾಡಿದರು. ಅವರಿಗೆ ಹ್ಯಾರಿ ಬ್ರೂಕ್ ಹಾಗೂ ಮೋಯಿನ್ ಅಲಿ ಕೂಡ ಜೊತೆ ನೀಡಿದರು. ಇದರಿಂದಾಗಿ ತಂಡವು 19 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 138 ರನ್ ಗಳಿಸಿ ಗೆದ್ದಿತು. ಚುಟುಕು ವಿಶ್ವಕಪ್ ಇತಿಹಾಸದಲ್ಲಿ ಇಂಗ್ಲೆಂಡ್ ತಂಡವು ಎರಡನೇ ಬಾರಿ ಪ್ರಶಸ್ತಿ ಜಯಿಸಿತು. 2019ರಲ್ಲಿ ಏಕದಿನ ಕ್ರಿಕೆಟ್ ಫೈನಲ್‌ನಲ್ಲಿಯೂ ಇಂಗ್ಲೆಂಡ್ ಜಯಿಸಲು ಬೆನ್ ಸ್ಟೋಕ್ಸ್ ಅವರ ಆಟವೇ ಕಾರಣವಾಗಿತ್ತು.

ತೊಡೆಯ ಸ್ನಾಯುಸೆಳೆತದಿಂದ ಬಳಲಿದ ಆಫ್ರಿದಿಗೆ ಕೇವಲ 2.1 ಓವರ್‌ಗಳ ಬೌಲಿಂಗ್ ಮಾಡಲು ಸಾಧ್ಯವಾಯಿತು. ನಸೀಂ ಶಾ ಹಾಗೂ ಮೊಹಮ್ಮದ್ ವಾಸೀಂ ಜೂನಿಯರ್ ದುಬಾರಿಯಾದರು. ಸಣ್ಣ ಮೊತ್ತವನ್ನು ಬೆನ್ನಟ್ಟಿದ ಇಂಗ್ಲೆಂಡ್‌ಗೆ ತಡೆಯೊಡ್ಡಲು ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ.

## ಸ್ಕೋರ್ ಕಾರ್ಡ್

**ಪಾಕಿಸ್ತಾನ 8ಕ್ಕೆ 137 (20 ಓವರ್)**
ರಿಜ್ವಾನ್ ಬಿ ಕರನ್ 15 (14 ಎ., 6X1), ಬಾಬರ್ ಸಿ ಮತ್ತು ಬಿ ರಶೀದ್ 32 (28 ಎ., 4X2), ಹ್ಯಾರಿಸ್ ಸಿ ಸ್ಟೋಕ್ಸ್ ಬಿ ರಶೀದ್ 8 (12 ಎ., 4X1), ಮಸೂದ್ ಸಿ ಲಿವಿಂಗ್‌ಸ್ಟೋನ್ ಬಿ ಕರನ್ 38 (28 ಎ., 4X2, 6X1), ಇಫ್ತಿಕಾರ್ ಸಿ ಬಟ್ಲರ್ ಬಿ ಸ್ಟೋಕ್ಸ್ 0 (6 ಎ.), ಶಾದಾಬ್ ಸಿ ವೋಕ್ಸ್ ಬಿ ಜೋರ್ಡನ್ 20 (14 ಎ., 4X2), ನವಾಜ್ ಸಿ ಲಿವಿಂಗ್‌ಸ್ಟೋನ್ ಬಿ ಕರನ್ 5 (7 ಎ.,), ವಸೀಂ ಸಿ ಲಿವಿಂಗ್‌ಸ್ಟೋನ್ ಬಿ ಜೋರ್ಡನ್ 4 (8 ಎ.), ಶಾಹೀನ್ ಶಾ ಔಟಾಗದೆ 5 (3 ಎ., 4X1), ರವೂಫ್ ಔಟಾದೆ 1 (1 ಎ.)
**ಇತರೆ** 9 (ಬೈ1, ಲೆಗ್‌ಬೈ1, ನೋಬಾಲ್ 1, ವೈಡ್ 6)
**ವಿಕೆಟ್ ಪತನ:** 1–29 (ಮೊಹಮ್ಮದ್ ರಿಜ್ವಾನ್; 4.2), 2–45 (ಮೊಹಮ್ಮದ್ ಹ್ಯಾರಿಸ್; 7.1), 3–84 (ಬಾಬರ್ ಅಜಂ; 11.1), 4–85 (ಇಫ್ತಿಕಾರ್ ಅಹ್ಮದ್; 12.2), 5–121 (ಶಾನ್ ಮಸೂದ್; 16.3), 6–123 (ಶಾದಾಬ್ ಖಾನ್; 17.2), 7–129 (ಮೊಹಮ್ಮದ್ ನವಾಜ್; 18.3), 8–131 (ಮೊಹಮ್ಮದ್ ವಸೀಂ; 19.3)
**ಬೌಲಿಂಗ್:** ಬೆನ್ ಸ್ಟೋಕ್ಸ್ 4–0–32–1, ಕ್ರಿಸ್ ವೋಕ್ಸ್ 3–0–26–0, ಸ್ಯಾಮ್ ಕರನ್ 4–0–12–3, ಆದಿಲ್ ರಶೀದ್ 4–1–22–2, ಕ್ರಿಸ್ ಜೋರ್ಡನ್ 4–0–27–2, ಲಿಯಾಮ್ ಲಿವಿಂಗ್‌ಸ್ಟೋನ್ 1–0–16–0

**ಇಂಗ್ಲೆಂಡ್ 5ಕ್ಕೆ 138 (19 ಓವರ್)**
ಬಟ್ಲರ್ ಸಿ ರಿಜ್ವಾನ್ ಬಿ ರವೂಫ್ 26 (17 ಎ., 4X3, 6X1), ಹೇಲ್ಸ್ ಬಿ ಶಾಹೀನ್ 1 (2 ಎ.), ಸಾಲ್ಟ್ ಸಿ ಇಫ್ತಿಕಾರ್ ಬಿ ರವೂಫ್ 10 (9 ಎ., 4X2), ಸ್ಟೋಕ್ಸ್ ಔಟಾಗದೆ 52 (49 ಎ., 4X5, 6X1), ಬ್ರೂಕ್ ಸಿ ಶಾಹೀನ್ ಬಿ ಶಾದಾಬ್ 20 (23 ಎ., 4X1), ಮೊಯೀನ್ ಬಿ ವಸೀಂ 19 (12 ಎ., 4X3), ಲಿವಿಂಗ್‌ಸ್ಟೋನ್ ಔಟಾಗದೆ 1 (2 ಎ.)
**ಇತರೆ** 9 (ಲೆಗ್ ಬೈ 1, ವೈಡ್ 8)
**ವಿಕೆಟ್ ಪತನ:** 1–7 (ಅಲೆಕ್ಸ್ ಹೇಲ್ಸ್; 0.6), 2–32 (ಫಿಲ್ ಸಾಲ್ಟ್; 3.3), 3–45 (ಜೋಸ್ ಬಟ್ಲರ್; 5.3), 4–84 (ಹ್ಯಾರಿ ಬ್ರೂಕ್; 12.3), 5–132 (ಮೊಯೀನ್ ಅಲಿ; 18.2)
**ಬೌಲಿಂಗ್:** ಶಾಹೀನ್ ಶಾ ಅಫ್ರಿದಿ 2.1–0–13–1, ನಸೀಂ ಶಾ 4–0–30–0, ಹ್ಯಾರಿಸ್ ರವೂಫ್ 4–0–23–2, ಶಾದಾಬ್ ಖಾನ್ 4–0–20–1, ಮೊಹಮ್ಮದ್ ವಸೀಂ 4–0–38–1, ಇಫ್ತಿಕಾರ್ ಅಹ್ಮದ್ 0.5–0–13–0

**ಫಲಿತಾಂಶ: ಇಂಗ್ಲೆಂಡ್‌ಗೆ 5 ವಿಕೆಟ್ ಗೆಲುವು**
**ಪಂದ್ಯ ಹಾಗೂ ಟೂರ್ನಿ ಶ್ರೇಷ್ಠ ಆಟಗಾರ: ಸ್ಯಾಮ್ ಕರನ್**

ಕಪ್ ಹಾಗೂ ತಮ್ಮ ಮಗಳೊಂದಿಗೆ ಇಂಗ್ಲೆಂಡ್ ನಾಯಕ ಜೊಸ್ ಬಟ್ಲರ್ (ಎಡಚಿತ್ರ). ಸೋಲಿನ ನಿರಾಶೆಯಲ್ಲಿ ಪಾಕಿಸ್ತಾನ ತಂಡದ ಮೊಹಮ್ಮದ್ ರಿಜ್ವಾನ್, ನಸೀಂ ಶಾ ಮತ್ತು ಸಹ ಆಟಗಾರರು– ಎಎಫ್‌ಪಿ ಚಿತ್ರಗಳು

**296** ಭಾರತದ ವಿರಾಟ್ ಕೊಹ್ಲಿ ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟರ್

**15** ಶ್ರೀಲಂಕೆಯ ವಣಿಂದು ಹಸರಂಗಾ ಅವರು ಟೂರ್ನಿಯಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದರು

**189.68** ಸೂರ್ಯಕುಮಾರ್ ಯಾದವ್ ಟೂರ್ನಿಯಲ್ಲಿ ಮಾಡಿದ ಸ್ಟ್ರೈಕ್‌ರೇಟ್

- **2,** ಇಂಗ್ಲೆಂಡ್ ಜಯಿಸಿದ ಟಿ20 ವಿಶ್ವಕಪ್‌ಗಳು. ವೆಸ್ಟ್ ಇಂಡೀಸ್ ದಾಖಲೆ ಸರಿಗಟ್ಟಿದೆ
- **16,** ಸ್ಪರ್ಧಿಸಿದ ತಂಡಗಳು
- **45,** ಆಯೋಜನೆಗೊಂಡ ಒಟ್ಟು ಪಂದ್ಯಗಳು
- **4,** ಟೂರ್ನಿಯಲ್ಲಿ ಅತಿಹೆಚ್ಚು ಅರ್ಧಶತಕಗಳನ್ನು ದಾಖಲಿಸಿದ ವಿರಾಟ್ ಕೊಹ್ಲಿ

**₹13.25 ಕೋಟಿ** ವಿಜೇತ ತಂಡಕ್ಕೆ ಲಭಿಸಿದ ನಗದು ಬಹುಮಾನ

## ಸ್ಯಾಮ್ ಶ್ರೇಷ್ಠ ಆಟಗಾರ

ಮೆಲ್ಬರ್ನ್ (ಪಿಟಿಐ): ಇಂಗ್ಲೆಂಡ್ ತಂಡದ ಎಡಗೈ ವೇಗಿ ಸ್ಯಾಮ್ ಕರನ್ ಟಿ20 ವಿಶ್ವಕಪ್ ಟೂರ್ನಿಯ ಶ್ರೇಷ್ಠ ಆಟಗಾರ ಗೌರವಕ್ಕೆ ಪಾತ್ರರಾಗಿದ್ದಾರೆ.

ಈ ವರ್ಷದ ಆರಂಭದಲ್ಲಿ ಗಂಭೀರ ಗಾಯದಿಂದ ಚೇತರಿಸಿಕೊಂಡು ಕ್ರಿಕೆಟ್ ಮರಳಿದ್ದರು. ಟೂರ್ನಿಯಲ್ಲಿ ಒಟ್ಟು 13 ವಿಕೆಟ್‌ಗಳನ್ನು ಅವರು ಗಳಿಸಿದ್ದಾರೆ. ಫೈನಲ್ ಪಂದ್ಯದಲ್ಲಿ ಅವರು ಮೂರು ವಿಕೆಟ್ ಗಳಿಸಿದರು.

'ಎಂ.ಸಿ.ಜಿಯ ಸ್ಕ್ವೇರ್ ಬೌಂಡರಿಲೈನ್ ದೊಡ್ಡ ಅಂತರ ಹೊಂದಿವೆ. ಈ ಕ್ರೀಡಾಂಗಣ ಹಾಗೂ ಪಿಚ್‌ಗೆ ತಕ್ಕಂತೆ ಬೌಲಿಂಗ್ ಮಾಡಲು ಬಹಳಷ್ಟು ಅಭ್ಯಾಸ ಬೇಕು. ಇದೊಂದು ಕಠಿಣ ಸವಾಲಾಗಿತ್ತು. ನಿಧಾನಗತಿಯ ಎಸೆತಗಳ ಮೂಲಕ ಬ್ಯಾಟರ್‌ಗಳಲ್ಲಿ ಗೊಂದಲ ಮೂಡಿಸುವಲ್ಲಿ ಸಫಲನಾದೆ' ಎಂದು ಸ್ಯಾಮ್ ಕರನ್ ಅವರು ಹೇಳಿದರು.

'ಬೆನ್ ಸ್ಟೋಕ್ಸ್ ಜೊತೆಗೆ ಆಡುತ್ತಿರುವುದು ನನ್ನ ಅದೃಷ್ಟ. ತಂಡದ ಗೆಲುವಿಗೆ ಸ್ಟೋಕ್ಸ್ ಕೊಡುವ ಕಾಣಿಕೆ ಬಹಳ ದೊಡ್ಡದು' ಎಂದು ಶ್ಲಾಘಿಸಿದರು.

ಸ್ಯಾಮ್ ಕರನ್

**ಸೋಲಿನ ಲಗೇಜ್ ಹೊರಲಾಗದು:** ಯಾವುದೇ ಸೋಲಿನ ಭಾರವನ್ನು ಹೆಚ್ಚು ಸಮಯ ಹೊರಲು ಸಾಧ್ಯವಿಲ್ಲ. ಆ ನಿರಾಶೆಯಿಂದ ಕಲಿತ ಪಾಠದ ಮೂಲಕ ದೊಡ್ಡ ಗೆಲುವು ಸಾಧಿಸಿದಾಗಲೇ ಸಂತೃಪ್ತಿ ಭಾವ ಎಂದು ಇಂಗ್ಲೆಂಡ್ ತಂಡದ ಆಲ್‌ರೌಂಡರ್ ಬೆನ್ ಸ್ಟೋಕ್ಸ್ ಹೇಳಿದ್ದಾರೆ.

ವಿಶ್ವಕಪ್ ಟೂರ್ನಿಯ ಗುಂಪು ಹಂತದಲ್ಲಿ ಐರ್ಲೆಂಡ್ ವಿರುದ್ಧದ ಸೋಲಿನಿಂದ ಕಲಿತ ಪಾಠದ ಕುರಿತು ಅವರು ಸುದ್ದಿಗಾರರೊಂದಿಗೆ ಹಂಚಿಕೊಂಡರು.

## ಮ್ಯಾಕ್ಸ್‌ವೆಲ್‌ಗೆ ಗಾಯ; ಭಾರತ ಪ್ರವಾಸಕ್ಕೆ ಅಲಭ್ಯ


ಮ್ಯಾಕ್ಸ್‌ವೆಲ್

ಮೆಲ್ಬರ್ನ್ (ಪಿಟಿಐ): ಆಸ್ಟ್ರೇಲಿಯಾ ತಂಡದ ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಭಾನುವಾರ ಕಾಲಿನ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ಭಾರತ ವಿರುದ್ಧದ ಸರಣಿಗೆ ಅಲಭ್ಯರಾಗುವ ಸಾಧ್ಯತೆಯಿದೆ.

ಶನಿವಾರ ಗೆಳೆಯನ ಹುಟ್ಟುಹಬ್ಬ ಆಚರಣೆ ವೇಳೆ ಮ್ಯಾಕ್ಸ್‌ವೆಲ್, ವಿಲಕ್ಷಣ ರೀತಿಯಲ್ಲಿ ಕಾಲಿಗೆ ಗಾಯಮಾಡಿಕೊಂಡಿದ್ದರು.

'ಹುಟ್ಟುಹಬ್ಬದ ಸಂಭ್ರಮದಲ್ಲಿದ್ದ ಇಬ್ಬರೂ ಮನೆಯ ಹಿತ್ತಲಲ್ಲಿ ಓಡಿದಾಗ ಜಾರಿ ಬಿದ್ದಿದ್ದಾರೆ. ಈ ವೇಳೆ ಮ್ಯಾಕ್ಸ್‌ವೆಲ್ ಅವರ ಎಡಗಾಲಿನ ಮೇಲೆಯೇ ಗೆಳೆಯ ಬಿದ್ದದ್ದರಿಂದ ಮೂಳೆ ಮುರಿದಿದೆ' ಎಂದು ಆಸ್ಟ್ರೇಲಿಯಾದ ವೆಬ್‌ಸೈಟ್‌ವೊಂದು ವರದಿ ಮಾಡಿದೆ.

ಆಸ್ಟ್ರೇಲಿಯಾ ತಂಡ ಮುಂದಿನ ಫೆಬ್ರುವರಿ– ಮಾರ್ಚ್ ತಿಂಗಳಲ್ಲಿ ಭಾರತ ಪ್ರವಾಸ ಮಾಡಲಿದ್ದು, ನಾಲ್ಕು ಟೆಸ್ಟ್ ಮತ್ತು ಮೂರು ಏಕದಿನ ಪಂದ್ಯಗಳನ್ನು ಆಡಲಿದೆ.

ಶಸ್ತ್ರಚಿಕಿತ್ಸೆಗೆ ಒಳಗಾಗಿರುವುದರಿಂದ ಮ್ಯಾಕ್ಸ್‌ವೆಲ್ ಕೆಲವು ತಿಂಗಳು ಅಂಗಳದಿಂದ ದೂರವುಳಿಯಬೇಕಾಗಿದೆ. ಇಂಗ್ಲೆಂಡ್ ವಿರುದ್ಧ ಗುರುವಾರ ಆರಂಭವಾಗುವ ಏಕದಿನ ಸರಣಿಯಿಂದ ಅವರು ಹೊರಬಿದ್ದಿದ್ದಾರೆ. ಡಿ.13 ರಿಂದ ಫೆ.4ರ ವರೆಗೆ ನಡೆಯಲಿರುವ ಬಿಗ್ ಬ್ಯಾಷ್ ಟೂರ್ನಿಯಲ್ಲಿ ಆಡುವ ಅವಕಾಶವನ್ನೂ ಕಳೆದುಕೊಳ್ಳಲಿದ್ದಾರೆ.

ಇಂಗ್ಲೆಂಡ್ ವಿರುದ್ಧದ ಸರಣಿಗೆ ಮ್ಯಾಕ್ಸ್‌ವೆಲ್ ಬದಲು ಸೀನ್ ಅಬಾಟ್ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ.

# ಕ್ರಿಕೆಟ್: ಜಯ ತಂದಿತ್ತ ನಿಕಿನ್ ಜೋಸ್, ಕೌಶಿಕ್

ಕೋಲ್ಕತ್ತ: ನಿಕಿನ್ ಜೋಸ್ (96 ರನ್) ಮತ್ತು ವಿ.ಕೌಶಿಕ್ (27ಕ್ಕೆ 4) ಅವರ ಉತ್ತಮ ಆಟದ ನೆರವಿನಿಂದ ಕರ್ನಾಟಕ ತಂಡ, ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಸತತ ಎರಡನೇ ಗೆಲುವು ಸಾಧಿಸಿತು.

ಕೋಲ್ಕತ್ತದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಮಯಂಕ್ ಅಗರವಾಲ್ ಬಳಗ 66 ರನ್‌ಗಳಿಂದ ವಿದರ್ಭ ತಂಡವನ್ನು ಮಣಿಸಿತು. ಕರ್ನಾಟಕ ತನ್ನ ಆರಂಭಿಕ ಪಂದ್ಯದಲ್ಲಿ ಶನಿವಾರ, ಮೇಘಾಲಯ ವಿರುದ್ಧ ಗೆದ್ದಿತು.

ಮೊದಲು ಬ್ಯಾಟ್ ಮಾಡಿದ ರಾಜ್ಯ ತಂಡ ನಿಗದಿತ ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 314 ರನ್ ಪೇರಿಸಿತು. ಆರಂಭಿಕ ಬ್ಯಾಟರ್‌ಗಳಾದ ಆರ್. ಸಮರ್ಥ್ (19) ಮತ್ತು ಮಯಂಕ್ (9) ಅವರು ಬೇಗನೇ ಔಟಾದರೂ ಮಧ್ಯಮ ಕ್ರಮಾಂಕದಲ್ಲಿ ನಿಕಿನ್ ಜೋಸ್ ಆಸರೆಯಾದರು.

ನಿಕಿನ್ ಜೋಸ್

ಅವರಿಗೆ ಅನುಭವಿ ಮನೀಷ್ ಪಾಂಡೆ (44 ರನ್, 39 ಎ.) ಮತ್ತು ಸತತ ಎರಡನೇ ಅರ್ಧಶತಕ ಗಳಿಸಿದ ಶ್ರೇಯಸ್ ಗೋಪಾಲ್ (56 ರನ್, 43 ಎ.) ತಕ್ಕ ಸಾಥ್ ನೀಡಿದರು. 121 ಎಸೆತಗಳನ್ನು ಎದುರಿಸಿದ ನಿಕಿನ್, ಕೇವಲ ನಾಲ್ಕು ರನ್‌ಗಳಿಂದ ಶತಕ ತಪ್ಪಿಸಿಕೊಂಡರು.

ಸವಾಲಿನ ಗುರಿ ಬೆನ್ನಟ್ಟಿದ ವಿದರ್ಭ ತಂಡ ವಿ.ಕೌಶಿಕ್ (27ಕ್ಕೆ 4) ಮತ್ತು ವಿದ್ವತ್ ಕಾವೇರಪ್ಪ (40ಕ್ಕೆ 3) ಅವರ ಚುರುಕಿನ ದಾಳಿಗೆ ನಲುಗಿತು. ತಂಡದ ಮೊತ್ತ 51 ಆಗುವಷ್ಟರಲ್ಲಿ ಏಳು ವಿಕೆಟ್‌ಗಳು ಬಿದ್ದಾಗ, ಕರ್ನಾಟಕ ಸುಲಭ ಗೆಲುವನ್ನು ನಿರೀಕ್ಷಿಸಿತ್ತು.

ಆದರೆ ಕೊನೆಯ ಕ್ರಮಾಂಕದಲ್ಲಿ ಸೊಗಸಾದ ರೀತಿಯಲ್ಲಿ ಪ್ರತಿರೋಧ ಒಡ್ಡಿದ ಅಕ್ಷಯ್ ಕರ್ಣೇವಾರ್ (ಔಟಾಗದೆ 104, 131 ಎಸೆತ) ಮತ್ತು ದರ್ಶನ್ ನಾಲ್ಕಂಡೆ (57) ಅವರು ಕರ್ನಾಟಕದ ಗೆಲುವನ್ನು ಅಲ್ಪ ತಡವಾಗಿಸಿದರು. ಇವರಿಬ್ಬರು ಎಂಟನೇ ವಿಕೆಟ್‌ಗೆ 140 ರನ್ ಸೇರಿಸಿದರು. ಕರ್ನಾಟಕ ತನ್ನ ಮುಂದಿನ ಪಂದ್ಯದಲ್ಲಿ ಮಂಗಳವಾರ ಜಾರ್ಖಂಡ್ ವಿರುದ್ಧ ಪೈಪೋಟಿ ನಡೆಸಲಿದೆ.

**ಸಂಕ್ಷಿಪ್ತ ಸ್ಕೋರ್:** ಕರ್ನಾಟಕ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 314 (ನಿಕಿನ್ ಜೋಸ್ 96, ಮನೀಷ್ ಪಾಂಡೆ 44, ಶ್ರೇಯಸ್ ಗೋಪಾಲ್ 56, ಮನೋಜ್ ಭಾಂಡಗೆ 23, ಕೆ.ಗೌತಮ್ ಔಟಾಗದೆ 30, ದರ್ಶನ್ ನಾಲ್ಕಂಡೆ 74ಕ್ಕೆ 3, ಅಕ್ಷಯ್ ಕರ್ಣೇವಾರ್ 57ಕ್ಕೆ 2). ವಿದರ್ಭ 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 248 (ಅಕ್ಷಯ್ ಕರ್ಣೇವಾರ್ ಔಟಾಗದೆ 104, ದರ್ಶನ್ ನಾಲ್ಕಂಡೆ 57, ಉಮೇಶ್ ಯಾದವ್ 18, ವಿ.ಕೌಶಿಕ್ 27ಕ್ಕೆ 4, ವಿದ್ವತ್ ಕಾವೇರಪ್ಪ 40ಕ್ಕೆ 3, ಶ್ರೇಯಸ್ ಗೋಪಾಲ್ 38ಕ್ಕೆ 1) ಫಲಿತಾಂಶ: ಕರ್ನಾಟಕಕ್ಕೆ 66 ರನ್ ಗೆಲುವು

# ಎಫ್‌ಪಿಐ: ₹ 18,979 ಕೋಟಿ ಮೌಲ್ಯದ ಷೇರು ಖರೀದಿ

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ದೇಶದ ಷೇರುಪೇಟೆಯಲ್ಲಿ ನವೆಂಬರ್ 1 ರಿಂದ 11ರವರೆಗಿನ ಅವಧಿಯಲ್ಲಿ ₹ 18,979 ಕೋಟಿ ಹೂಡಿಕೆ ಮಾಡಿದ್ದಾರೆ. ಅಮೆರಿಕದ ಹಣದುಬ್ಬರ ಇಳಿಕೆ ಮತ್ತು ಡಾಲರ್ ಮೌಲ್ಯ ಏರಿಕೆಯು ತುಸು ತಗ್ಗಿದ್ದರಿಂದ ಇಷ್ಟು ಮೊತ್ತ ಹೂಡಿಕೆ ಮಾಡಿದ್ದಾರೆ.

ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ಅಕ್ಟೋಬರ್‌ನಲ್ಲಿ ₹ 8 ಕೋಟಿ ಮತ್ತು ಸೆಪ್ಟೆಂಬರ್‌ನಲ್ಲಿ ₹ 7,624 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದರು. 2022ರಲ್ಲಿ ಈವರೆಗೆ ಒಟ್ಟು ₹ 1.5 ಲಕ್ಷ ಕೋಟಿ ಬಂಡವಾಳ ಹೊರಹರಿವು ಆದಂತಾಗಿದೆ.

ಸಾಲಪತ್ರ ಮಾರುಕಟ್ಟೆಯಿಂದ ನವೆಂಬರ್ 1 ರಿಂದ 11ರವರೆಗಿನ ಅವಧಿಯಲ್ಲಿ ₹2,784 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

'ಅಮೆರಿಕದ ಹಣದುಬ್ಬರವು ಇಳಿಮುಖ ಹಾದಿ ಹಿಡಿಯುವ ಸೂಚನೆ ನೀಡಿದೆ. ಡಾಲರ್ ಮತ್ತು ಬಾಂಡ್ ಗಳಿಕೆಯೂ ಕಡಿಮೆ ಆಗುತ್ತಿದೆ. ಹೀಗಾಗಿ ಮುಂಬರುವ ದಿನಗಳಲ್ಲಿ ವಿದೇಶಿ ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಖರೀದಿಗೆ ಮುಂದಾಗುವ ಸಾಧ್ಯತೆ ಇದೆ' ಎಂದು ಜಿಯೋಜಿತ್ ಹಣಕಾಸು ಸೇವೆಗಳ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

'ಅಮೆರಿಕದ ಡಾಲರ್ ಎದುರು ರೂಪಾಯಿ ದೃಢವಾಗಿರುವುದು ಸಹ ಭಾರತದ ಷೇರುಪೇಟೆಗಳಲ್ಲಿ ಬಂಡವಾಳ ತೊಡಗಿಸುವಂತೆ ವಿದೇಶ ಹೂಡಿಕೆದಾರರಿಗೆ ಉತ್ತೇಜನ ನೀಡಿದೆ' ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ತಿಳಿಸಿದ್ದಾರೆ.

'ಹಣದುಬ್ಬರ ನಿಯಂತ್ರಿಸಲು ಆರ್‌ಬಿಐ ತೆಗೆದುಕೊಳ್ಳುತ್ತಿರುವ ಕ್ರಮಗಳು, ತೆರಿಗೆ ಸಂಗ್ರಹದಲ್ಲಿನ ಹೆಚ್ಚಳ, ಖರೀದಿ ಸಾಮರ್ಥ್ಯವು ಕೋವಿಡ್ ಪೂರ್ವದ ಮಟ್ಟಕ್ಕೆ ಮರಳಿರುವ ಕಾರಣಗಳಿಂದಾಗಿ ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆಗಳಲ್ಲಿ ಭಾರತವನ್ನು ಉತ್ತಮ ಸ್ಥಿತಿಯಲ್ಲಿ ನಿಲ್ಲುವಂತೆ ಮಾಡಿದೆ' ಎಂದು ಬಿಡಿಒ ಇಂಡಿಯಾದ ಪಾಲುದಾರ ಮನೋಜ್ ಪುರೋಹಿತ್ ಹೇಳಿದ್ದಾರೆ.

'ಚೀನಾವು ಸದ್ಯ ಆರ್ಥಿಕ ಮತ್ತು ರಾಜಕೀಯ ಅನಿಶ್ಚಿತತೆ ಎದುರಿಸುತ್ತಿದೆ. ಹೀಗಾಗಿ ದೊಡ್ಡ ಪ್ರಮಾಣದ ಬಂಡವಾಳ ಹೂಡಿಕೆಯಲ್ಲಿ ಒಂದಷ್ಟು ಭಾರತದ ಕಡೆಗೆ ಹರಿದುಬರುತ್ತಿದೆ. ಇದರಿಂದಾಗಿಯೂ ಭಾರತವು ಈಕ್ವಿಟಿ ಹೂಡಿಕೆಗೆ ಆದ್ಯತೆಯಾಗಿದೆ' ಎಂದು ಅವರು ತಿಳಿಸಿದ್ದಾರೆ.

## ಜಿಯೊ ಭಾರತದ ಪ್ರಬಲ ಟೆಲಿಕಾಂ ಬ್ರ್ಯಾಂಡ್

ನವದೆಹಲಿ (ಪಿಟಿಐ): ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಜಿಯೊ ಭಾರತದ ದೂರಸಂಪರ್ಕ ವಲಯದ ಪ್ರಬಲ ಬ್ರ್ಯಾಂಡ್ ಆಗಿ ಹೊರಹೊಮ್ಮಿದೆ.

ಟ್ರಸ್ಟ್ ರಿಸರ್ಚ್ ಅಡ್ವೈಸರಿ (ಟಿಆರ್‌ಎ) ಕಂಪನಿಯು '2022ರಲ್ಲಿ ಹೆಚ್ಚು ಜನ ಬಯಸುವ ಬ್ರ್ಯಾಂಡ್'ಗಳ ಕುರಿತು ವರದಿ ಬಿಡುಗಡೆ ಮಾಡಿದೆ. ಆ ಪ್ರಕಾರ, ದೂರಸಂಪರ್ಕ ವಿಭಾಗದಲ್ಲಿ ಜಿಯೊ ಮೊದಲ ಸ್ಥಾನದಲ್ಲಿದ್ದು, ಭಾರ್ತಿ ಏರ್‌ಟೆಲ್, ವೊಡಾಫೋನ್ ಐಡಿಯಾ ಮತ್ತು ಬಿಎಸ್‌ಎನ್‌ಎಲ್ ನಂತರದ ಸ್ಥಾನ ಪಡೆದುಕೊಂಡಿವೆ.

ಉಡುಪು ವಿಭಾಗದಲ್ಲಿ ಅತಿ ಹೆಚ್ಚು ಇಷ್ಟಪಡುವ ಬ್ರ್ಯಾಂಡ್‌ಗಳ ಪೈಕಿ ಅಡಿಡಾಸ್‌ಗೆ ಮೊದಲ ಸ್ಥಾನ. ನೈಕ್, ರೇಮಂಡ್ಸ್, ಅಲೆನ್ ಸೋಲಿ ಮತ್ತು ಪೀಟರ್ ಇಂಗ್ಲೆಂಡ್ ನಂತರದ ಸ್ಥಾನದಲ್ಲಿವೆ.

**ವಾಹನ ವಿಭಾಗ:** ಬಿಎಂಡಬ್ಲ್ಯುಗೆ ಮೊದಲ ಸ್ಥಾನ ದೊರೆತಿದೆ. ಟೊಯೋಟ, ಹುಂಡೈ ಮತ್ತು ಹೋಂಡಾ ಕ್ರಮವಾಗಿ ಎರಡು, ಮೂರು ಮತ್ತು ನಾಲ್ಕನೇ ಸ್ಥಾನ ಪಡೆದುಕೊಂಡಿವೆ.

ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳಲ್ಲಿ ಎಲ್‌ಐಸಿ ಮುಂಚೂಣಿಯಲ್ಲಿದೆ. ಎಸ್‌ಬಿಐ (2), ಐಸಿಐಸಿಐ ಬ್ಯಾಂಕ್ (3) ನಂತರದ ಸ್ಥಾನದಲ್ಲಿವೆ.

**ಇಂಧನ:** ಎಚ್‌ಪಿಸಿಎಲ್ ಮೊದಲ ಸ್ಥಾನದಲ್ಲಿದ್ದರೆ, ಇಂಡಿಯನ್ ಆಯಿಲ್ ಮತ್ತು ಅದಾನಿ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.

ಆಹಾರ ಮತ್ತು ಪಾನೀಯ ವಿಭಾಗದಲ್ಲಿ ಅಮೂಲ್ ಮತ್ತು ನೆಸ್‌ಕೆಫೆ, ಎಫ್‌ಎಂಸಿಜಿ ವಿಭಾಗದಲ್ಲಿ ಫಾಗ್, ಲ್ಯಾಕ್ಮೆ, ನಿವಿಯಾ ಮತ್ತು ಕೋಲ್ಗೇಟ್ ಸ್ಥಾನ ಪಡೆದುಕೊಂಡಿವೆ. ಇಂಟರ್ನೆಟ್ ವಿಭಾಗದಲ್ಲಿ ಅಮೆಜಾನ್ ಬ್ರ್ಯಾಂಡ್ ಮೊದಲ ಸ್ಥಾನದಲ್ಲಿದ್ದರೆ, ಫೇಸ್‌ಬುಕ್, ಫ್ಲಿಪ್‌ಕಾರ್ಟ್ ಮತ್ತು ಗೂಗಲ್ ನಂತರದ ಸ್ಥಾನದಲ್ಲಿವೆ.

## ವಾರಾಂತ್ಯಕ್ಕೆ ಮತ್ತೆ ಬ್ಲೂ ಟಿಕ್ ಸಾಧ್ಯತೆ: ಇಲಾನ್ ಮಸ್ಕ್

ಬೆಂಗಳೂರು (ರಾಯಿಟರ್ಸ್): ಟ್ವಿಟರ್ ಖಾತೆಯ ಹೆಸರಿನ ಮುಂದೆ ಬ್ಲೂ ಟಿಕ್ ವಾರಾಂತ್ಯದ ವೇಳೆಗೆ ಮತ್ತೆ ಕಾಣಿಸಿಕೊಳ್ಳುವ ಸಾಧ್ಯತೆ ಇದೆ ಎಂದು ಕಂಪನಿಯ ಮಾಲೀಕ ಇಲಾನ್ ಮಸ್ಕ್ ಶನಿವಾರ ಟ್ವೀಟ್ ಮಾಡಿದ್ದಾರೆ.

ಬ್ಲೂ ಟಿಕ್ ಸೇವೆಗೆ ತಿಂಗಳಿಗೆ 8 ಡಾಲರ್ ಪಾವತಿಸಬೇಕು ಎಂದು ಮಸ್ಕ್ ಈಚೆಗಷ್ಟೇ ಘೋಷಿಸಿದ್ದರು. ಆ ಬಳಿಕ ನಕಲಿ ಖಾತೆಗಳ ಸಂಖ್ಯೆಯಲ್ಲಿ ಭಾರಿ ಏರಿಕೆ ಕಂಡುಬಂದಿದ್ದರಿಂದ ಬ್ಲೂ ಟಿಕ್ ಚಂದಾದಾರಿಕೆ ಸೇವೆಯನ್ನು ಶುಕ್ರವಾರ ಸ್ಥಗಿತಗೊಳಿಸಲಾಗಿದೆ. ಮಸ್ಕ್ ಅವರ ಟೆಸ್ಲಾ, ಸ್ಪೇಸ್ ಎಕ್ಸ್ ಸೇರಿದಂತೆ ಹಲವು ಜನಪ್ರಿಯ ಕಂಪನಿಗಳ ಖಾತೆಗಳ ನಕಲಿ ಖಾತೆಗಳು ಸೃಷ್ಟಿಯಾಗಿದ್ದವು.

ಜಾಹೀರಾತುದಾರರನ್ನು ಉಳಿಸಿಕೊಳ್ಳಲು ಮಸ್ಕ್ ಹರಸಾಹಸಪಡುತ್ತಿದ್ದಾರೆ. ಬ್ಲೂ ಟಿಕ್‌ಗೆ ಬಳಕೆದಾರರಿಂದ ಮಾಸಿಕ ಶುಲ್ಕ ಪಡೆಯುವ ಮೂಲಕ ಟ್ವಿಟರ್‌ಗೆ ಆದಾಯದ ಹೊಸ ಮೂಲವನ್ನು ಸೃಷ್ಟಿಸುವ ಉದ್ದೇಶವನ್ನು ಮಸ್ಕ್ ಹೊಂದಿದ್ದಾರೆ.

# ₹399ಕ್ಕೆ ಅಂಚೆ ಇಲಾಖೆಯ ₹10 ಲಕ್ಷ ವಿಮೆ

**ಹಣಕಾಸು ಸಾಕ್ಷರತೆ**
**ರಾಜೇಶ್ ಕುಮಾರ್ ಟಿ.ಆರ್.**

ಹಣಕಾಸು ನಿರ್ವಹಣೆಯಲ್ಲಿ ಪ್ರಮುಖವಾದದ್ದು ಆರ್ಥಿಕ ಭದ್ರತೆ. ಆರ್ಥಿಕ ಭದ್ರತೆಗೆ ಬುನಾದಿಯೇ ಇನ್ಶುರೆನ್ಸ್. ಬಹುತೇಕರು ಸರಿಯಾದ ತಿಳಿವಳಿಕೆ ಇಲ್ಲದೆ ವಿಮೆಯಿಂದ ಯಾವುದೇ ಪ್ರಯೋಜನವಿಲ್ಲ ಎಂದು ಹೇಳುತ್ತಾರೆ. ಇನ್ನು ಕೆಲವರು ದುಬಾರಿ ಪ್ರೀಮಿಯಂ ಕಟ್ಟಲು ಸಾಧ್ಯವಿಲ್ಲದ ಕಾರಣಕ್ಕೆ ವಿಮೆಯಿಂದ ದೂರ ಉಳಿಯುತ್ತಾರೆ. ವಿಮೆ ದುಬಾರಿ ಎನ್ನುವವರಿಗಾಗಿ ಇದೀಗ ಅಂಚೆ ಇಲಾಖೆ ಹೊಸ ಗುಂಪು ಅಪಘಾತ ವಿಮೆ ಯೋಜನೆಯನ್ನು ಜಾರಿಗೆ ತಂದಿದೆ. ಕೇವಲ ₹ 299 ಅಥವಾ ₹ 399 ವಾರ್ಷಿಕ ಪ್ರೀಮಿಯಂ ಕಟ್ಟಿದರೆ ಸಾಕು ₹ 10 ಲಕ್ಷ ಮೊತ್ತದ ಆ್ಯಕ್ಸಿಡಂಟ್ ಕವರೇಜ್ ಲಭಿಸುತ್ತದೆ. ಬನ್ನಿ ಅಂಚೆ ಇಲಾಖೆಯ ಈ ಹೊಸ ಗುಂಪು ವಿಮೆ ಯೋಜನೆ ಬಗ್ಗೆ ಇನ್ನಷ್ಟು ತಿಳಿಯೋಣ.

**ಅನಿಶ್ಚಿತ ಸಂದರ್ಭಗಳನ್ನು ಎದುರಿಸಲು ಬೇಕು ವಿಮೆ:** ಜೀವನ ಅನಿಶ್ಚಿತತೆಗಳ ಗೂಡು. ಅಪಘಾತದಂತಹ ತುರ್ತು ಸಂದರ್ಭಗಳು ಯಾರಿಗೆ ಬೇಕಾದರೂ ಎದುರಾಗಬಹುದು. ಅದನ್ನು ನಿಯಂತ್ರಿಸಲು ಯಾರಿದಲೂ ಸಾಧ್ಯವಿಲ್ಲ. ಆದರೆ ಖಂಡಿತವಾಗಿಯೂ ಅಪಘಾತದಂತಹ ಸಂದರ್ಭಗಳನ್ನು ಎದುರಿಸಲು ಆರ್ಥಿಕ ಸುರಕ್ಷತೆಗಾಗಿ ಪ್ರತಿಯೊಬ್ಬರೂ ವಿಮೆ ಮಾಡಿಸಿಕೊಂಡು ಒಂದಿಷ್ಟು ತಯಾರಿ ಮಾಡಿಕೊಳ್ಳಬಹುದು.

**ಏನಿದು ಅಂಚೆ ಇಲಾಖೆಯ ₹ 10 ಲಕ್ಷದ ವಿಮೆ:** ಅಂಚೆ ಇಲಾಖೆ ವ್ಯಾಪ್ತಿಯಲ್ಲಿ ಬರುವ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ಇದೀಗ ತನ್ನ ಗ್ರಾಹಕರಿಗಾಗಿ ₹ 10 ಲಕ್ಷದ ಕವರೇಜ್ ಇರುವ ವೈಯಕ್ತಿಕ ಗುಂಪು ಅಪಘಾತ ವಿಮೆ ಯೋಜನೆ ಜಾರಿಗೊಳಿಸಿದೆ. ಇಂಡಿಯಾ ಪೋಸ್ಟ್ ಪೇಮೆಂಟ್ಸ್‌ನ ಎಲ್ಲ ಗ್ರಾಹಕರಿಗೆ ಇದು ಅನ್ವಯವಾಗಲಿದೆ. 18 ರಿಂದ 65 ವಯಸ್ಸಿನ ಎಲ್ಲ ಗ್ರಾಹಕರು ವಾರ್ಷಿಕ ಪ್ರೀಮಿಯಂ ಕಟ್ಟುವ ಮೂಲಕ ಈ ವಿಮೆ ಪಡೆದುಕೊಳ್ಳಬಹುದಾಗಿದೆ. ಉನ್ನತ ದರ್ಜೆಯ ಪ್ಲಾನ್‌ನ ಪ್ರೀಮಿಯಂ ₹ 399 ಆಗಿದ್ದು ಬೇಸಿಕ್ ಪ್ಲಾನ್‌ನ ಪ್ರೀಮಿಯಂ ₹ 299 ಇದೆ. ಪ್ರತಿ ವರ್ಷ ನಿಗದಿತ ಪ್ರೀಮಿಯಂ ಕಟ್ಟಿ ಪಾಲಿಸಿ ನವೀಕರಣ ಮಾಡಿಕೊಳ್ಳಬಹುದಾಗಿದೆ. ಅಂಚೆ ಕಚೇರಿಗಳಲ್ಲಿ ಈ ಯೋಜನೆ ಜಾರಿಯಲ್ಲಿದ್ದು ಕೈವೈಸಿ ದಾಖಲೆ ನೀಡಿ ಅರ್ಹರು ವಿಮೆ ಪಡೆದುಕೊಳ್ಳಬಹುದಾಗಿದೆ. ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಖಾತೆ ಹೊಂದುವ ಯಾರುಬೇಕಾದರೂ ಈ ವಿಮೆ ಪಡೆದುಕೊಳ್ಳಬಹುದಾಗಿದೆ.

**ವಿಮೆ ಪರಿಹಾರದ ವಿವರ:** ಅಪಘಾತದಿಂದ ಸಾವು, ಭಾಗಶಃ ಅಂಗವೈಕಲ್ಯತೆ, ಶಾಶ್ವತ ಅಂಗವೈಕಲ್ಯತೆಗೆ ಇದರಲ್ಲಿ ₹ 10 ಲಕ್ಷ ಕವರೇಜ್ ಲಭಿಸಲಿದೆ. ಇದಲ್ಲದೆ ಅಪಘಾತದ ಚಿಕಿತ್ಸೆಗೆಗಾಗಿ ₹ 30 ಸಾವಿರದಿಂದ ₹ 60 ಸಾವಿರದವರೆಗೆ ಕ್ಲೇಮ್ ಮಾಡಿಕೊಳ್ಳಬಹುದಾಗಿದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

**ಅಂಚೆ ಇಲಾಖೆ ಅಪಘಾತ ವಿಮೆಯ ಮಾಹಿತಿ**

| ವಿವರಗಳು | ಪರಿಹಾರ |
|---|---|
| ಅಪಘಾತದಿಂದ ಸಾವು | ₹10 ಲಕ್ಷ |
| ಅಪಘಾತದಿಂದ ಶಾಶ್ವತ ಅಂಗವೈಕಲ್ಯತೆ | ₹10 ಲಕ್ಷ |
| ಅಪಘಾತದಿಂದ ಭಾಗಶಃ ಅಂಗವೈಕಲ್ಯತೆ | ₹10 ಲಕ್ಷ |
| ಅಪಘಾತದ ಕಾರಣಕ್ಕೆ ಆಸ್ಪತ್ರೆಗೆ ದಾಖಲಾದರೆ | ₹60 ಸಾವಿರದ ವರೆಗೆ |
| ಅಪಘಾತದ ಕಾರಣಕ್ಕೆ ಹೊರರೋಗಿಯಾಗಿ ಚಿಕಿತ್ಸೆ ಪಡೆದರೆ | ₹30 ಸಾವಿರದವರೆಗೆ |

## ಸತತ 4ನೇ ವಾರ ಜಿಗಿದ ಸೂಚ್ಯಂಕ

ಸತತ ನಾಲ್ಕನೇ ವಾರ ಷೇರುಪೇಟೆಗಳ ಸೂಚ್ಯಂಕಗಳು ಜಿಗಿತ ಕಂಡಿವೆ. ನವೆಂಬರ್ 11ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಉತ್ತಮ ಗಳಿಕೆ ದಾಖಲಿಸಿವೆ. ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.38 ರಷ್ಟು ಜಿಗಿದಿದೆ. ನಿಫ್ಟಿ ಶೇ 1.28 ರಷ್ಟು ಹೆಚ್ಚಳ ಕಂಡಿದೆ.

ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಉತ್ಸಾಹ, ಅಮೆರಿಕದಲ್ಲಿ ನಿರೀಕ್ಷಿತ ಪ್ರಮಾಣಕ್ಕಿಂತ ಕಡಿಮೆ ಹಣದುಬ್ಬರ, ವಿದೇಶಿ ಹೂಡಿಕೆದಾರರಿಂದ ಖರೀದಿ ಭರಾಟೆ, ರೂಪಾಯಿ ಮೌಲ್ಯದಲ್ಲಿ ಚೇತರಿಕೆ, ಕಂಪನಿಗಳಿಂದ ನಿರೀಕ್ಷಿತ ಲಾಭಾಂಶ ಸೇರಿದಂತೆ ಹಲವು ಅಂಶಗಳು ಷೇರುಪೇಟೆ ಸೂಚ್ಯಂಕಗಳು ಮೇಲೇಳಲು ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 6.5, ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 3, ಮತ್ತು ನಿಫ್ಟಿ ಲೋಹ ಮತ್ತು ಬ್ಯಾಂಕ್ ಸೂಚ್ಯಂಕಗಳ ತಲಾ ಶೇ 2 ರಷ್ಟು ಜಿಗಿದಿವೆ. ಮತ್ತೊಂದೆಡೆ ನಿಫ್ಟಿ ಫಾರ್ಮಾ ಶೇ 3 ಮತ್ತು ನಿಫ್ಟಿ ವಾಹನ ಸೂಚ್ಯಂಕ ಶೇ 1.7 ರಷ್ಟು ಕುಸಿದಿವೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಖರೀದಿ ಭರಾಟೆ ಮುಂದುವರಿಸಿದ್ದಾರೆ. ಈ ವಾರ ₹ 6,329.63 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 2,255.91 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಜೊಮಾಟೊ, ನೈಕಾ, ಬ್ಯಾಂಕ್ ಆಫ್ ಬರೋಡ, ಬ್ರಿಟಾನಿಯಾ ಇಂಡಸ್ಟ್ರೀಸ್, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಪಂಜಾಬ್ ನ್ಯಾಷನಲ್ ಬ್ಯಾಂಕ್ ಹೆಚ್ಚಳ ದಾಖಲಿಸಿವೆ. ಬಿಎಸ್‌ಇ ಮಿಡ್ ಕ್ಯಾಪ್ ಸೂಚ್ಯಂಕ ಶೇ 0.7 ರಷ್ಟು ಕುಸಿದಿದೆ. ರಾಮ್ಕೊ ಸಿಮೆಂಟ್ಸ್, ಅರಬಿಂದೊ ಫಾರ್ಮಾ, ಟ್ಯೂಬ್ ಇನ್‌ವೆಸ್ಟ್‌ಮೆಂಟ್ ಆಫ್ ಇಂಡಿಯಾ, ದೀಪಕ್ ನೈಟ್ರೇಟ್ ಮತ್ತು ಜುಬ್ಲಿಯಂಟ್ ಫುಡ್ ವರ್ಕ್ಸ್ ಕುಸಿತ ದಾಖಲಿಸಿವೆ. ಯುನಿಯನ್ ಬ್ಯಾಂಕ್ ಆಫ್ ಇಂಡಿಯ, ಸಂವರ್ಧನಾ ಮದರ್ ಸನ್ ಇಂಟರ್‌ನ್ಯಾಷನಲ್, ಸುಪ್ರೀಂ ಇಂಡಸ್ಟ್ರೀಸ್, ಮತ್ತು ಎಂಡೂರೆನ್ಸ್ ಟೆಕ್ನಾಲಜೀಸ್ ಶೇ 7 ರಿಂದ ಶೇ 21 ರಷ್ಟು ಜಿಗಿದಿವೆ.

ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 0.4 ರಷ್ಟು ಕುಸಿದಿದೆ. ಟಿಸಿಪಿಎಲ್ ಪ್ಯಾಕಿಂಗ್, ಹೋಂಡಾ ಇಂಡಿಯಾ ಪವರ್ ಪ್ರಾಡಕ್ಟ್ಸ್, ಕಾಮಧೇನು ಎಚ್ ಎಲ್ ವಿ, ಫ್ಯೂಚರ್ ರಿಟೇಲ್, ಸಾಂಗ್ವಿ ಮೂವರ್ಸ್, ನ್ಯೂಲ್ಯಾಂಡ್ ಲ್ಯಾಬೊರೇಟರೀಸ್, ಎಸ್ ಎಂ ಎಸ್ ಫಾರ್ಮಾಸ್ಯೂಟಿಕಲ್ಸ್, ಎಪ್ ಐಇಎಂ ಇಂಡಸ್ಟ್ರೀಸ್, ಲುಮ್ಯಾಕ್ಸ್ ಇಂಡಸ್ಟ್ರೀಸ್, ಎಂಪಿಸಿ, ಇಂದ್ರಪ್ರಸ್ಥ ಮೆಡಿಕಲ್ ಕಾರ್ಪೊರೇಷನ್, ಹಿಂದುಸ್ತಾನ್ ಫುಡ್ಸ್, ಟೈಮೆಕ್ಸ್ ಗ್ರೂಪ್ ಇಂಡಿಯಾ, ಕೆಪಿಐ ಗ್ರೀನ್ ಎನರ್ಜಿ, ಸ್ವಾನ್ ಎನರ್ಜಿ, ಧುನ್ಸೇರಿ ವೆಂಚರ್ಸ್ ಶೇ 15 ರಿಂದ ಶೇ 23 ರಷ್ಟು ಜಿಗಿದಿವೆ. ಕ್ರೆಸಾಂಡಾ ಸಲ್ಯೂಷನ್, ಟೀಮ್ ಲೀಸ್ ಸರ್ವೀಸಸ್, ಎನ್. ಆರ್ ಅಗರ್ವಾಲ್ ಇಂಡಸ್ಟ್ರೀಸ್, ಡಿಎಂಸಿಸಿ ಸ್ಪೆಷಾಲಿಟಿ ಕೆಮಿಕಲ್ಸ್, ಕ್ಯಾಂಪಸ್ ಆಕ್ಟೀವ್ ವೇರ್, ಎವರೆಸ್ಟ್ ಇಂಡಸ್ಟ್ರೀಸ್ ಎನ್. ಆರ್. ಬಿ. ಬೇರಿಂಗ್ಸ್ ಶೇ 15ರಿಂದ ಶೇ 18 ರಷ್ಟು ಕುಸಿದಿವೆ.

**ಮುನ್ನೋಟ:** ಈ ವಾರ ಬಿಪಿಎಲ್, ಅಬೋಟ್ ಇಂಡಿಯಾ, ಅಂಜನಿ ಫುಡ್ಸ್, ಭಾರತ್ ಅಗ್ರಿ, ಬಯೋಕಾನ್, ಬಿರ್ಲಾ ಟೈಯರ್ಸ್, ಬಿನ್ನಿ ಮಿಲ್ಸ್, ಬ್ರೂಕ್ಸ್, ಕೆಮ್ ಟೆಕ್, ಕಾಂಕ್ರೀಟ್, ಕನ್ಕರೋಡ್, ಡಿಶ್ ಟಿವಿ, ಯುರೇಕಾ ಫೋರ್ಬ್ಸ್, ಗಾರ್ನೆಟ್, ಜೆನೆಸಿಸ್, ಗ್ಲಾನ್ಸ್, ಗೋದ್ರೇಜ್ ಇಂಡಸ್ಟ್ರೀಸ್ ಲಿ., ಗೋಕುಲ್, ಗುಡ್ ಇಯರ್, ಗ್ರಾಸಿಮ್, ಹೆಲ್ದಿ ಲೈಫ್, ಹೈಟೆಕ್, ಜೆ.ಎಂ. ಫೈನಾನ್ಶಿಯಲ್, ಜ್ಯೋತಿ ಲ್ಯಾಬ್ಸ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಜಾಗತಿಕ ವಿದ್ಯಮಾನಗಳು ಮತ್ತು ದೇಶಿಯ ಬೆಳವಣಿಗೆಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

## 9 ಕಂಪನಿಗಳ ಗಳಿಕೆ ₹2.12 ಲಕ್ಷ ಕೋಟಿ

ನವದೆಹಲಿ (ಪಿಟಿಐ): ನವೆಂಬರ್ 11ಕ್ಕೆ ಕೊನೆಗೊಂಡ ವಾರದಲ್ಲಿ ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತ ಪ್ರಮುಖ 10 ಕಂಪನಿಗಳಲ್ಲಿ ಒಂಬತ್ತು ಕಂಪನಿಗಳ ಮಾರುಕಟ್ಟೆ ಮೌಲ್ಯ ₹2.12 ಲಕ್ಷ ಕೋಟಿ ಹೆಚ್ಚಾಗಿದೆ. ಹಿಂದುಸ್ತಾನ್ ಯೂನಿಲಿವರ್ ಲಿಮಿಟೆಡ್ (ಎಚ್‌ಯುಎಲ್) ಮಾತ್ರ ನಷ್ಟ ಕಂಡಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಮಾರುಕಟ್ಟೆ ಮೌಲ್ಯವು ₹63,462 ಕೋಟಿಯಷ್ಟು ಗರಿಷ್ಠ ಏರಿಕೆ ಕಂಡಿದೆ. ಇದರಿಂದಾಗಿ ಬ್ಯಾಂಕ್‌ನ ಒಟ್ಟು ಬಂಡವಾಳ ಮೌಲ್ಯವು ₹8.97 ಲಕ್ಷ ಕೋಟಿಗೆ ತಲುಪಿದೆ.

ಟಾಟಾ ಕನ್ಸಲ್ಟನ್ಸಿ ಸರ್ವೀಸಸ್ (ಟಿಸಿಎಸ್) ಮಾರುಕಟ್ಟೆ ಮೌಲ್ಯ ₹36,517 ಕೋಟಿ ಹೆಚ್ಚಾಗಿ ₹12.13 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಎಚ್‌ಡಿಎಫ್‌ಸಿ ಲಿಮಿಟೆಡ್‌ನ ಮಾರುಕಟ್ಟೆ ಮೌಲ್ಯ ₹29,422 ಕೋಟಿಯಷ್ಟು ಹೆಚ್ಚಾಗಿದೆ. ರಿಲಯನ್ಸ್ ಇಂಡಸ್ಟ್ರೀಸ್ ಮಾರುಕಟ್ಟೆ ಮೌಲ್ಯ ₹26,317 ಕೋಟಿ ಏರಿಕೆ ಆಗಿದೆ. ಇನ್ಫೊಸಿಸ್ (₹23,626 ಕೋಟಿ), ಅದಾನಿ ಎಂಟರ್‌ಪ್ರೈಸಸ್ (₹20,103 ಕೋಟಿ) ಮಾರುಕಟ್ಟೆ ಮೌಲ್ಯದಲ್ಲಿಯೂ ಏರಿಕೆ ಆಗಿದೆ. ಎಚ್‌ಯುಎಲ್‌ಗೆ ₹3,912 ಕೋಟಿ ನಷ್ಟವಾಗಿದ್ದು, ಮಾರುಕಟ್ಟೆ ಮೌಲ್ಯವು ₹5.88 ಲಕ್ಷ ಕೋಟಿಗೆ ಇಳಿಕೆ ಕಂಡಿದೆ.

ಅತ್ಯಂತ ಮೌಲ್ಯಯುತ ಕಂಪನಿಗಳ ಪಟ್ಟಿಯಲ್ಲಿ ರಿಲಯನ್ಸ್ ಮೊದಲ ಸ್ಥಾನದಲ್ಲಿದೆ.

## 5ಜಿ: ಆ್ಯಪಲ್‌ನಿಂದ ಬೀಟಾ ವರ್ಷನ್

ನವದೆಹಲಿ (ಪಿಟಿಐ): ಆ್ಯಪಲ್ ಕಂಪನಿಯು ತನ್ನ ಸಾಧನಗಳಲ್ಲಿ 5ಜಿ ಲಭ್ಯವಾಗುವಂತೆ ಅಧಿಕೃತವಾಗಿ ಸಾಫ್ಟ್‌ವೇರ್ ಬಿಡುಗಡೆ ಮಾಡುವುದಕ್ಕೂ ಮೊದಲೇ ಪ್ರಾಯೋಗಿಕ ಬಳಕೆಗೆ ಬೀಟಾ ವರ್ಷನ್ ನೀಡಿದೆ. ಬೀಟಾ ವರ್ಷನ್ ಅಪ್‌ಡೇಟ್ ಮಾಡುತ್ತಿದ್ದಂತೆಯೇ 5ಜಿ ಸಂಪರ್ಕ ಲಭ್ಯವಾಗಲಿದೆ. ಬಳಕೆದಾರರು ಜಾಲತಾಣದಲ್ಲಿ ಹೆಸರು ದಾಖಲಿಸಿಕೊಂಡು ಸಾಫ್ಟ್‌ವೇರ್ ಡೌನ್ಲೋಡ್ ಮಾಡಿಕೊಳ್ಳಬೇಕು ಎಂದು ಮೂಲಗಳು ತಿಳಿಸಿವೆ.

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

ಬೆಂಗಳೂರು

| | |
|---|---|
| 100 ಮೊಟ್ಟೆಗೆ | ₹540 |
| ಮೊಟ್ಟೆಗೆ | ₹70 |

ಮೈಸೂರು

| | |
|---|---|
| 100 ಮೊಟ್ಟೆಗೆ | ₹540 |

**ರಾಮನಗರ ರೇಷ್ಮೆಗೂಡು ಧಾರಣೆ**

ಮಿಶ್ರತಳಿ (ಸಿ.ಬಿ) ₹480-656
ದ್ವಿತಳಿ (ಬಿ.ವಿ) ₹505-826

'ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು ಚಾಂಪಿಯನ್‌ಷಿಪ್'ಗೆ ತೆರೆ: ಗಮನಸೆಳೆದ ಲಿನೇಶಾ

# ನವನೀತ್ ಗೌಡ, ಶೃಂಗಿ ಮಿಂಚು

ಪ್ರಜಾವಾಣಿ ವಾರ್ತೆ

ಜೈನ್ ವಿ.ವಿಯ ಶೃಂಗಿ ರಾಜೇಶ್ ಬಾಂದೇಕರ್ –ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

**ಬೆಂಗಳೂರು:** ಗ್ಲೋಬಲ್ ಈಜು ಕೇಂದ್ರದ ಲಿನೇಶಾ ಎ.ಕೆ. ಹಾಗೂ ಡಾಲ್ಫಿನ್ ಅಕ್ವಾಟಿಕ್ಸ್‌ನ ಆರ್. ನವನೀತ್ ಗೌಡ ಅವರು ನೆಟ್ಟಕಲ್ಲಪ್ಪ ಈಜು ಕೇಂದ್ರದ (ಎನ್‌ಎಸಿ) ದಶಮಾನೋತ್ಸವ ಅಂಗವಾಗಿ ಆಯೋಜಿಸಿದ್ದ 'ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು ಚಾಂಪಿಯನ್‌ಷಿಪ್'ನ ಕೊನೆಯ ದಿನ ಮಿಂಚಿದರು.

ಬೆಂಗಳೂರಿನ ಉತ್ತರಹಳ್ಳಿ ಮುಖ್ಯರಸ್ತೆ, ಪದ್ಮನಾಭನಗರದಲ್ಲಿರುವ ಈಜು ಕೇಂದ್ರದಲ್ಲಿ ಭಾನುವಾರ ನಡೆದ ಮಹಿಳೆಯರ 50 ಮೀಟರ್ಸ್ ಬ್ರೆಸ್ಟ್‌ಸ್ಟ್ರೋಕ್ ಹಾಗೂ ಬಾಲಕಿಯರ ಒಂದನೇ ಗುಂಪಿನ 100 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಲಿನೇಶಾ ಚಿನ್ನ ಗೆದ್ದರು.

ನವನೀತ್ ಗೌಡ ಅವರು ಬಾಲಕರ ಎರಡನೇ ಗುಂಪಿನ 200 ಮೀ. ಮೆಡ್ಲೆ ಮತ್ತು 100 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಅಗ್ರಸ್ಥಾನ ಗಳಿಸಿದರು.

ಜೈನ್ ವಿಶ್ವವಿದ್ಯಾಲಯದ ಶೃಂಗಿ ರಾಜೇಶ್ ಬಾಂದೇಕರ್ ಅವರು ಮಹಿಳೆಯರ 100 ಮೀ. ಬ್ರೆಸ್ಟ್‌ಸ್ಟ್ರೋಕ್ ಮತ್ತು 100 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಪಡೆದರು.

**ಫಲಿತಾಂಶಗಳು:** ಪುರುಷರು: ಮುಕ್ತ ವಿಭಾಗ: 50 ಮೀ. ಬ್ರೆಸ್ಟ್‌ಸ್ಟ್ರೋಕ್: ಎಸ್. ಧನುಶ್ (ಏಸಸ್, ಕಾಲ: 28.82 ಸೆ.)–1, ಲೋಹಿತ್ ಎಂ. (ಡಾಲ್ಫಿನ್ ಅಕ್ವಾಟಿಕ್ಸ್)–2, ಸುನೀಶ್ ಎಸ್ (ಗ್ಲೋಬಲ್ ಈಜು ಕೇಂದ್ರ)–3. 50 ಮೀ.ಫ್ರೀಸ್ಟೈಲ್: ಪವನ್ ಗುಪ್ತಾ (ಎಸ್‌ಡಿಎಟಿ ಡಾಲ್ಫಿನ್; ಕಾಲ: 24.46 ಸೆ.–1, ಶಿವ ಎಸ್. (ಬಿಎಸಿ)–2, ಪ್ರಥಮ್ ಶರ್ಮಾ (ಡಾಲ್ಫಿನ್ ಅಕ್ವಾಟಿಕ್ಸ್)–3.

ಬಾಲಕರ ಗುಂಪು 1: 100 ಮೀ. ಬ್ರೆಸ್ಟ್‌ಸ್ಟ್ರೋಕ್: ನಯನ್ ವಿಘ್ನೇಶ್ (ನೆಟ್ಟಕಲ್ಲಪ್ಪ ಈಜು ಕೇಂದ್ರ, 1 ನಿ. 9.02 ಸೆ.)–1, ಸೂರ್ಯ ಜೋಯಪ್ಪ ಓ. ಆರ್. (ಬಸವನಗುಡಿ)–2, ಸುಯೋಗ್ ಗೌಡ (ಎನ್‌ಎಸಿ)–3. 100 ಮೀ. ಫ್ರೀಸ್ಟೈಲ್: ಶಿವಾಂಕ್ ವಿಶ್ವನಾಥ್ (ರೇ ಸೆಂಟರ್; ಕಾಲ: 55.98 ಸೆ.)–1, ರಿಷಭ್ ಸಿಂಗ್ (ಡಾಲ್ಫಿನ್)–2, ಆರ್.ಅಕ್ಷಯ್ ಶೇಟ್ (ಗ್ಲೋಬಲ್ ಸ್ವಿಮ್ ಸೆಂಟರ್)–3

ಬಾಲಕರ ಗುಂಪು 2: 200 ಮೀ. ಮೆಡ್ಲೆ: ಆರ್. ನವನೀತ್ ಗೌಡ (ಡಾಲ್ಫಿನ್, 2 ನಿ. 23.65ಸೆ.)–1, ರಾಘವ್ ಸ್ವಚ್ಛಂದಮ್ (ನೆಟ್ಟಕಲ್ಲಪ್ಪ ಈಜು ಕೇಂದ್ರ)–2, ದರ್ಶನ್ ಎಸ್. (ಬಸವನಗುಡಿ)–3. 100 ಮೀ. ಬ್ರೆಸ್ಟ್‌ಸ್ಟ್ರೋಕ್: ನವನೀತ್ ಗೌಡ (ಡಾಲ್ಫಿನ್, 1 ನಿ. 15.47 ಸೆ.)–1, ಜೆ. ಗಣೇಶ್ ಚಕ್ರಧಾರ್ (ಡಾಲ್ಫಿನ್)–2, ಆರ್. ದರ್ಶನ್ (ಏಸಸ್)–3. 200 ಮೀ. ಫ್ರೀಸ್ಟೈಲ್: ಎಸ್. ದಕ್ಷಣ್ (ಬಿಎಸಿ; ಕಾಲ: 2 ನಿ. 06.58 ಸೆ.)–1, ದರ್ಶನ್ ಎಸ್. (ಬಿಎಸಿ)–2, ಕುಶಾಲ್ ಕೆ. (ಬಿಎಸಿ)–3. 100 ಮೀ. ಫ್ರೀಸ್ಟೈಲ್: ಕುಶಾಲ್ ಕೆ. (ಬಿಎಸಿ; ಕಾಲ: 59.08 ಸೆ.)–1, ಆರ್.ನವನೀತ್ ಗೌಡ (ಡಾಲ್ಫಿನ್)–2, ದರ್ಶನ್ ಎಸ್. (ಬಿಎಸಿ)–3.

18 ವರ್ಷಕ್ಕಿಂತ ಮೇಲಿನವರು: 100 ಮೀ. ಬ್ರೆಸ್ಟ್‌ಸ್ಟ್ರೋಕ್: ಎಸ್. ಧನುಷ್ (ಏಸಸ್, 1 ನಿ. 6.14ಸೆ.)–1, ಲೋಹಿತ್ ಎಂ. (ಡಾಲ್ಫಿನ್)–2, ಸುನೀಶ್ ಎಸ್. (ಗ್ಲೋಬಲ್)–3. 400 ಮೀ. ಫ್ರೀಸ್ಟೈಲ್: ಧ್ಯಾನ್ ಬಾಲಕೃಷ್ಣ (ಬಸವನಗುಡಿ, 4 ನಿ. 23.79 ಸೆ.)–1, ಮಿತೇಶ್ ಕುಂಟೆ (ಎನ್‌ಎಸಿ)–2, ಮನೋಜ್ ನಾಯಕ್ ಬಿ. (ಬಸವನಗುಡಿ)–3. 100 ಮೀ. ಫ್ರೀಸ್ಟೈಲ್: ಪವನ್ ಗುಪ್ತಾ (ಎಸ್‌ಡಿಎಟಿ ಡಾಲ್ಫಿನ್; ಕಾಲ: 54.49 ಸೆ.)–1, ವಸುರಾಂ ಎಂ. (ಗ್ಲೋಬಲ್ ಸ್ವಿಮ್ ಸೆಂಟರ್)–2, ಮನೋಜ್ ನಾಯಕ (ಬಿಎಸಿ)–3.

**ಮಹಿಳೆಯರು:** ಮುಕ್ತ ವಿಭಾಗ: 50 ಮೀ. ಬ್ರೆಸ್ಟ್‌ಸ್ಟ್ರೋಕ್: ಲಿನೇಶಾ ಎ.ಕೆ. (ಗ್ಲೋಬಲ್, 35.04)–1, ಇ.ಎಸ್. ಸಮನ್ವಿ (ಬಸವನಗುಡಿ)–2, ಜರಾ ಜಬ್ಬಾರ್ (ಡಾಲ್ಫಿನ್)–3. 50 ಮೀ. ಫ್ರೀಸ್ಟೈಲ್: ಶಾಲಿನಿ ಆರ್.ದೀಕ್ಷಿತ್ (ಡಾಲ್ಫಿನ್; 27.57 ಸೆ.)–1, ರುಜುಲಾ ಎಸ್. (ಡಾಲ್ಫಿನ್)–2, ಅಶ್ಮಿತಾ ಚಂದ್ರ (ಡೆಕ್ಕನ್ ಇಂಟರ್‌ನ್ಯಾಷನಲ್ ಸ್ಕೂಲ್)–3

18 ವರ್ಷಕ್ಕಿಂತ ಮೇಲಿನವರು: 100 ಮೀ. ಬ್ರೆಸ್ಟ್‌ಸ್ಟ್ರೋಕ್: ಶೃಂಗಿ ರಾಜೇಶ್ ಬಾಂದೇಕರ್ (ಜೈನ್ ವಿವಿ, 1 ನಿ. 22.06 ಸೆ.)–1, ಅನುಮತಿ ಚೌಗುಲೆ (ಜೈನ್ ವಿವಿ)–2, ಜರಾ ವಿಲಿಯಮ್ಸ್ (ಡಾಲ್ಫಿನ್)–3. 400 ಮೀ. ಫ್ರೀಸ್ಟೈಲ್: ಆದ್ಯಾ ನಾಯಕ್ (ರೇ, 4 ನಿ. 55.14ಸೆ.)–1, ಅನುಮತಿ ಚೌಗುಲೆ (ಜೈನ್ ವಿವಿ)–2, ಕ್ಷಿತಿಜ್ ಕೆ. (ಬಸವನಗುಡಿ)–3. 100 ಮೀ. ಫ್ರೀಸ್ಟೈಲ್: ಶೃಂಗಿ ರಾಜೇಶ್ ಬಾಂದೇಕರ್ (ಜೈನ್ ವಿವಿ; ಕಾಲ: 1 ನಿ. 02.49 ಸೆ.)–1, ಆದ್ಯಾ ನಾಯಕ್ (ರೇ ಸೆಂಟರ್)–2, ಜರಾ ವಿಲಿಯಮ್ಸ್ (ಡಾಲ್ಫಿನ್)–3

ಬಾಲಕಿಯರ ಗುಂಪು 1: 100 ಮೀ. ಬ್ರೆಸ್ಟ್‌ಸ್ಟ್ರೋಕ್: ಲಿನೇಶಾ ಎ.ಕೆ. (ಗ್ಲೋಬಲ್, 1 ನಿ. 19.51 ಸೆ.)–1, ಜರಾ ಜಬ್ಬಾರ್ (ಡಾಲ್ಫಿನ್)–2, ಮೇಘಾಂಜಲಿ (ಗ್ಲೋಬಲ್)–3. 100 ಮೀ. ಫ್ರೀಸ್ಟೈಲ್: ಶಾಲಿನಿ ಆರ್.ದೀಕ್ಷಿತ್ (ಡಾಲ್ಫಿನ್; 1 ನಿ.01.9 ಸೆ.)–1, ಲಿನೇಶಾ ಎ.ಕೆ. (ಗ್ಲೋಬಲ್ ಸ್ವಿಮ್ ಸೆಂಟರ್)–2, ಆರುಷಿ ಅಗರವಾಲ್ (ಡಾಲ್ಫಿನ್)–3.

ಬಾಲಕಿಯರ ಗುಂಪು 2: 200 ಮೀ. ಮೆಡ್ಲೆ: ನೈಶಾ (ಬಸವನಗುಡಿ, 2 ನಿ. 37.60 ಸೆ.)–1, ದಯನಿತಾ ಎಸ್. (ರೇ ಈಜು ಕೇಂದ್ರ)–2, ಶ್ರೀ ಚರಣಿ ತುಮು (ಗ್ಲೋಬಲ್)–3. 200 ಮೀ. ಫ್ರೀಸ್ಟೈಲ್: ಶ್ರೀ ಚರಣಿ ತುಮು (ಗ್ಲೋಬಲ್; 2 ನಿ. 17.62 ಸೆ.)–1, ನೈಶಾ (ಬಿಎಸಿ)–2, ರುಜುಲಾ ಎಸ್. (ಡಾಲ್ಫಿನ್)–3. 100 ಮೀ. ಬ್ರೆಸ್ಟ್‌ಸ್ಟ್ರೋಕ್: ಮಿಹಿಕಾ ದತ್ತ (ಡಾಲ್ಫಿನ್, 1 ನಿ. 21.90 ಸೆ.)–1, ಇ.ಎಸ್ ಸಮನ್ವಿ (ಬಸವನಗುಡಿ)–2, ಶ್ರೀ ಚರಣಿ ತುಮು (ಗ್ಲೋಬಲ್)–3. 100 ಮೀ. ಫ್ರೀಸ್ಟೈಲ್: ರುಜುಲಾ ಎಸ್. (ಡಾಲ್ಫಿನ್; 1 ನಿ. 03.41)–1, ನೈಶಾ (ಬಿಎಸಿ)–2, ಆರ್ನ ಎಂ.ಪಿ. (ಬಿಎಸಿ)–3

# ಅಗ್ರಸ್ಥಾನಕ್ಕೇರಿದ ಬೆಂಗಳೂರು

## ಪ್ರೊ ಕಬಡ್ಡಿ ಲೀಗ್: ತಮಿಳ್ ತಲೈವಾಸ್ ವಿರುದ್ಧ ಗೆಲುವು

**ಪುಣೆ:** ರೇಡರ್‌ಗಳಾದ ವಿಕಾಸ್ ಖಂಡೋಲ ಮತ್ತು ಭರತ್ ಅವರ ಮಿಂಚಿನ ಆಟದ ಬಲದಿಂದ ಬೆಂಗಳೂರು ಬುಲ್ಸ್ ತಂಡ ಪ್ರೊ ಕಬಡ್ಡಿ ಲೀಗ್‌ನಲ್ಲಿ ತಮಿಳ್ ತಲೈವಾಸ್ ತಂಡವನ್ನು 40–34 ರಲ್ಲಿ ಮಣಿಸಿತು.

ಬಾಳೇವಾಡಿಯ ಶಿವಛತ್ರಪತಿ ಕ್ರೀಡಾ ಸಂಕೀರ್ಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ವಿಕಾಸ್ 17 ಹಾಗೂ ಭರತ್ 14 ಪಾಯಿಂಟ್ಸ್ ಗಳಿಸಿದರು. ಈ ಗೆಲುವಿನ ಮೂಲಕ ಬುಲ್ಸ್ 13 ಪಂದ್ಯಗಳಿಂದ 46 ಪಾಯಿಂಟ್ಸ್‌ಗಳೊಂದಿಗೆ ಮತ್ತೆ ಅಗ್ರಸ್ಥಾನಕ್ಕೇರಿತು.

ಪ್ರಥಮಾರ್ಧ ಕೊನೆಗೊಂಡಾಗ 18–19 ರಲ್ಲಿ ಹಿನ್ನಡೆಯಲ್ಲಿ ಬುಲ್ಸ್ ತಂಡ ಎರಡನೇ ಅವಧಿಯಲ್ಲಿ ಪುಟಿದೆದ್ದು ನಿಂತಿತು. ವಿಕಾಸ್ ಮತ್ತು ಭರತ್ ಅವರನ್ನು ಕಟ್ಟಿಹಾಕಲು ಎದುರಾಳಿ ತಂಡದವರು ವಿಫಲರಾದರು. ತಲೈವಾಸ್ ತಂಡದ ನರೇಂದರ್ 10 ಪಾಯಿಂಟ್ಸ್ ಗಳಿಸಿದರು.

**ಪಾಯಿಂಟ್ಸ್ ಪಟ್ಟಿ**
(ಅಗ್ರ ಆರು ತಂಡಗಳು)

| ತಂಡ | ಪಂದ್ಯ | ಜಯ | ಸೋಲು | ಟೈ | ಪಾಯಿಂಟ್ |
|---|---|---|---|---|---|
| ಬೆಂಗಳೂರು | 13 | 8 | 4 | 1 | 46 |
| ಪುಣೇರಿ | 13 | 7 | 4 | 2 | 44 |
| ಜೈಪುರ | 13 | 8 | 5 | 0 | 43 |
| ಮುಂಬಾ | 13 | 8 | 5 | 0 | 43 |
| ಯುಪಿ | 13 | 6 | 5 | 2 | 44 |
| ಪಟ್ನಾ | 13 | 6 | 5 | 2 | 38 |

ಮುಂಬಾಗೆ ಗೆಲುವು: ದಿನದ ಮೊದಲ ಪಂದ್ಯದಲ್ಲಿ ಯು ಮುಂಬಾ 36–23 ರಲ್ಲಿ ಪಟ್ನಾ ಪೈರೇಟ್ಸ್ ತಂಡವನ್ನು ಮಣಿಸಿತು. ಇದರೊಂದಿಗೆ ಪೈರೇಟ್ಸ್ ತಂಡದ ಸತತ ಐದು ಪಂದ್ಯಗಳ ಗೆಲುವಿನ ಓಟಕ್ಕೆ ತೆರೆಬಿತ್ತು.

13 ಪಾಯಿಂಟ್ಸ್ ಗಳಿಸಿದ ಗುಮಾನ್ ಸಿಂಗ್ ಅವರು ಮುಂಬಾ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಆಶೀಶ್ 6 ಹಾಗೂ ರಿಂಕು 4 ಪಾಯಿಂಟ್ಸ್ ಗಳಿಸಿದರು. ಪ್ರಥಮಾರ್ಧದಲ್ಲಿ ಮುಂಬಾ 18–13 ರಲ್ಲಿ ಮುನ್ನಡೆ ಸಾಧಿಸಿತ್ತು. ಹಿಂದಿನ ಪಂದ್ಯಗಳಲ್ಲಿ ಪೈರೇಟ್ಸ್ ಪರ ಮಿಂಚಿದ್ದ ರೋಹಿತ್ ಗುಲಿಯಾ ಮತ್ತು ಸಚಿನ್ ಕ್ರಮವಾಗಿ 7 ಹಾಗೂ ಪಾಯಿಂಟ್ಸ್ ತಂದುಕೊಟ್ಟರು.

**ಇಂದಿನ ಪಂದ್ಯಗಳು: ಬೆಂಗಾಲ್ ವಾರಿಯರ್ಸ್– ಪುಣೇರಿ ಪಲ್ಟನ್**

**ಗುಜರಾತ್ ಜೈಂಟ್ಸ್– ಹರಿಯಾಣ ಸ್ಟೀಲರ್ಸ್**

# 12 ಶಸ್ತ್ರಚಿಕಿತ್ಸೆಯಾದರೂ 'ಛಲ' ಬಿಡದ 13ರ ಬಾಲಕ

## ರಾಷ್ಟ್ರಮಟ್ಟದ ಈಜು ಸ್ಪರ್ಧೆಗಳಲ್ಲಿ ಅನಿಕೇತ್ ಸಾಧನೆ

• ಇಮಾಮ್‌ಹುಸೇನ್ ಗೂಡುನವರ

ಅನಿಕೇತ್ ಚಿದಂಬರ ಪಿಲನಕರ್

**ಈಜು ನನ್ನ ಬದುಕಿನಲ್ಲಿ ಭರವಸೆ ಮೂಡಿಸಿದೆ. ಮುಂದಿನ ವರ್ಷಗಳಲ್ಲಿ ಪ್ಯಾರಾ ಒಲಿಂಪಿಕ್ಸ್, ಏಷ್ಯನ್ ಗೇಮ್ಸ್‌ಗಳಲ್ಲಿ ಗೆದ್ದು, ಭಾರತಕ್ಕೆ ಚಿನ್ನದ ಪದಕ ತರುವುದೇ ನನ್ನ ಗುರಿಯಾಗಿದೆ**

**ಅನಿಕೇತ್ ಪಿಲನಕರ್**

**ಇಂದು ಮಕ್ಕಳ ದಿನ**

**ಬೆಳಗಾವಿ:** ಈ ಬಾಲಕನ ವಯಸ್ಸು ಹದಿಮೂರು. ಈಗಾಗಲೇ ಆತನಿಗೆ ಹನ್ನೆರಡು ಶಸ್ತ್ರಚಿಕಿತ್ಸೆಗಳಾಗಿವೆ.

ಆದರೆ, ಈ ಬಾಲಕನ ಸಾಧನೆಗೆ ಯಾವುದೂ ಅಡ್ಡಿಬಂದಿಲ್ಲ. ಅಂಗವೈಕಲ್ಯದ ಮಧ್ಯೆಯೂ ರಾಷ್ಟ್ರಮಟ್ಟದ ಈಜು ಟೂರ್ನಿಗಳಲ್ಲಿ ಮಿಂಚುತ್ತಿದ್ದಾರೆ.

ನಗರದ ಅನಗೋಳ ಬಡಾವಣೆಯ ಈಜುಪಟು ಅನಿಕೇತ್ ಚಿದಂಬರ ಪಿಲನಕರ್ ಯಶೋಗಾಥೆ ಇದು. ಹುಟ್ಟಿನಿಂದಲೂ ಆರೋಗ್ಯ ಸಮಸ್ಯೆ ಎದುರಿಸುತ್ತಲೇ ಬೆಳೆದ ಬಾಲಕ, ಇದೀಗ ಈಜಿನಲ್ಲಿ ಸಾಧನೆ ಮೆರೆಯುತ್ತಿದ್ದಾರೆ. ರಾಷ್ಟ್ರೀಯ ಟೂರ್ನಿಗಳಲ್ಲಿ 6, ರಾಜ್ಯಮಟ್ಟದ ಟೂರ್ನಿಗಳಲ್ಲಿ 3 ಚಿನ್ನದ ಪದಕ ಗಳಿಸಿದ್ದಾರೆ.

ಸದ್ಯ ಅಸ್ಸಾಮ್‌ನ ಗುವಾಹಟಿಯಲ್ಲಿ 22ನೇ ಪ್ಯಾರಾ ನ್ಯಾಷನಲ್ ಸ್ವಿಮ್ಮಿಂಗ್ ಚಾಂಪಿಯನ್‌ಷಿಪ್ ನಡೆಯುತ್ತಿದೆ. ಅಲ್ಲಿ ಸಬ್ ಜೂನಿಯರ್ ವಿಭಾಗದ 100 ಮೀ ಮತ್ತು 50 ಮೀ. ಫ್ರೀಸ್ಟೈಲ್, 50 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಚಿನ್ನದ ಪದಕಕ್ಕೆ ಕೊರಳೊಡ್ಡಿದ್ದಾರೆ. 'ಬೆಸ್ಟ್ ಸ್ವಿಮ್ಮರ್' ಪ್ರಶಸ್ತಿಗೆ ಭಾಜನವಾಗಿದ್ದಾರೆ.

**ಬದುಕನ್ನೇ ಬದಲಿಸಿತು:** 'ನಮ್ಮ ಮಗನ ಜೀವನ ಎಲ್ಲ ಮಕ್ಕಳಂತಿರಲಿಲ್ಲ. ಅವನಿಗೆ ನಿಲ್ಲಲು, ನಡೆಯಲು ಆಗುತ್ತಿರಲಿಲ್ಲ. ಮೂರು ತಿಂಗಳಿಂದ 6 ವರ್ಷದವನಾಗುವವರೆಗೆ ಕೈ, ಕಾಲು, ಮೊಣಕಾಲು ಮತ್ತು ಕಿವಿಗೆ ಸಂಬಂಧಿಸಿ 12 ಶಸ್ತ್ರಚಿಕಿತ್ಸೆ ಮಾಡಿಸಿದೆವು. ಆದರೂ, ನಮ್ಮ ನಿರೀಕ್ಷೆಯಂತೆ ಆರೋಗ್ಯ ಸುಧಾರಿಸಲಿಲ್ಲ. ಈಜಲು ಆರಂಭಿಸಿದ ನಂತರ ಆರೋಗ್ಯವೂ ಸುಧಾರಿಸಿತು. ಬದುಕಿನ ಚಿತ್ರಣವೇ ಬದಲಾಯಿತು' ಎಂದು ಚಿದಂಬರ ಹಾಗೂ ಶ್ವೇತಾ ದಂಪತಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಇಲ್ಲಿನ ಜೆಎನ್‌ಎಂಸಿ ಈಜುಕೊಳದಲ್ಲಿ ನಿತ್ಯ ಒಂದೂವರೆ ತಾಸು ಅಭ್ಯಾಸ ಮಾಡುತ್ತಾನೆ. ಕಳೆದ 7 ವರ್ಷಗಳಿಂದ ಉಮೇಶ ಕಲಘಟಗಿ, ಗೋವರ್ಧನ ಕಾಕತಕರ್ ಮತ್ತಿತರರು ತರಬೇತಿ ನೀಡುತ್ತಿದ್ದಾರೆ. ಈಜಿನಿಂದಾಗಿ ಶರೀರ ಗಟ್ಟಿಯಾಗಿದ್ದು, ನಮ್ಮ ನೆರವಿನಿಂದ ನಡೆಯುತ್ತಿದ್ದಾನೆ. ಅವನಲ್ಲಿ ಆತ್ಮವಿಶ್ವಾಸವೂ ಹೆಚ್ಚಾಗಿದೆ' ಎಂದು ಸಂತಸ ಹಂಚಿಕೊಂಡರು.

ನಗರದ ಮುಕ್ತಾಂಗಣ ವಿದ್ಯಾಲಯದಲ್ಲಿ ಅನಿಕೇತ್ 7ನೇ ತರಗತಿ ಓದುತ್ತಿದ್ದಾನೆ. ಈ ಹಿಂದೆ ಪಾಲಕರೇ ಎತ್ತಿಕೊಂಡು ಹೋಗಿ ಡೆಸ್ಕ್ ಮೇಲೆ ಕೂರಿಸುತ್ತಿದ್ದರು. ಈಗ ತಾನೇ ತರಗತಿ ಕೊಠಡಿಗೆ ಹೋಗುತ್ತಿದ್ದಾನೆ. ತಂದೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ತಾಯಿ ಗೃಹಿಣಿ.

'ಅನಿಕೇತ್‌ಗೆ ಏನಾದರೂ ಸಾಧಿಸಬೇಕೆನ್ನುವ ಇಚ್ಛೆಯಿದೆ. ನಮ್ಮ ಬಳಿ ಉತ್ಸಾಹದಿಂದ ಅಭ್ಯಾಸ ನಡೆಸುತ್ತಿದ್ದಾನೆ. ಅವನು ಅಂತರರಾಷ್ಟ್ರೀಯ ಮಿಂಚುವ ವಿಶ್ವಾಸವಿದೆ' ಎನ್ನುತ್ತಾರೆ ತರಬೇತುದಾರ ಉಮೇಶ ಕಲಘಟಗಿ.

# ಬಿಡಬ್ಲ್ಯುಎಫ್ ಫೈನಲ್ಸ್ ಬ್ಯಾಡ್ಮಿಂಟನ್ ಟೂರ್ನಿ: ಹಿಂದೆ ಸರಿದ ಸಿಂಧು

**ನವದೆಹಲಿ (ಪಿಟಿಐ):** ಭಾರತದ ಪಿ.ವಿ.ಸಿಂಧು ಅವರು ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್ಸ್ ಬ್ಯಾಡ್ಮಿಂಟನ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ಪಾದದ ಗಾಯದಿಂದ ಇನ್ನೂ ಚೇತರಿಸಿಕೊಳ್ಳದಿರುವ ಕಾರಣ ಅವರು ಈ ನಿರ್ಧಾರ ತಳೆದಿದ್ದಾರೆ.

2018ರ ಆವೃತ್ತಿಯ ಚಾಂಪಿಯನ್ ಸಿಂಧು ಅವರು, ಆಗಸ್ಟ್‌ನಲ್ಲಿ ನಡೆದ ಕಾಮನ್‌ವೆಲ್ತ್ ಗೇಮ್ಸ್ ಸಂದರ್ಭದಲ್ಲಿ ಗಾಯಗೊಂಡಿದ್ದರು.

ಬಿಡಬ್ಲ್ಯುಎಫ್ ಫೈನಲ್ಸ್ ಚೀನಾದ ಗುವಾಂಗ್‌ಜುನಲ್ಲಿ ಡಿಸೆಂಬರ್ 14ರಿಂದ ನಡೆಯಲಿದೆ.

ಸಿಂಧು ಹಿಂದೆ ಸರಿದಿರುವುದರಿಂದ ಎಚ್.ಎಸ್. ಪ್ರಣಯ್ ಅವರು ಒಬ್ಬರೇ ಭಾರತದ ಆಟಗಾರನಾಗಿ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ.

ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ಮಕ್ಕಳ ದಿನದ ಅಂಗವಾಗಿ ಉತ್ಕೃಷ್ಟ ರೋಟರಿ ಇ ಕ್ಲಬ್ ಭಾನುವಾರ ಆಯೋಜಿಸಿದ್ದ 'ಕಿಡ್ಸ್ ವಾಕಥಾನ್'ನ ವಿಜೇತರು (ಎಡದಿಂದ) ನಿಂತವರು – 5ಕೆ ವಿಭಾಗ: ಅನಿಕೇತ್ ಸಿಹಾ (ಪ್ರಥಮ), ಪೂರ್ವಿ ಬಿ.ಸಿ. (ದ್ವಿತೀಯ), ಸಚಿತ್ ಬಿ.ಸಿ. (ತೃತೀಯ). 3ಕೆ: ವಿನೋದ್ ಕೆ. (ಪ್ರಥಮ), ರವಿವರ್ಮಾ ಎಂ.ಎಸ್ (ದ್ವಿತೀಯ), ಅರ್ಜುನ್ ಸಿಂಗ್ (ತೃತೀಯ). ಕುಳಿತವರು: 2ಕೆ: ಮಾನ್ ಸಿಂಗ್ (ಪ್ರಥಮ), ರೇಣುಕಾ ಎಚ್ (ದ್ವಿತೀಯ) ಮತ್ತು ಆರ್ಯನ್ (ತೃತೀಯ)

# ಐಎಸ್‌ಎಲ್: ಕೇರಳಕ್ಕೆ ಜಯ

**ಕೊಚ್ಚಿ (ಪಿಟಿಐ):** ಕೇರಳ ಬ್ಲಾಸ್ಟರ್ಸ್ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಪಂದ್ಯದಲ್ಲಿ ಭಾನುವಾರ ಜಯ ಗಳಿಸಿತು.

ಇಲ್ಲಿ ನಡೆದ ಪಂದ್ಯದಲ್ಲಿ 3–1ರಿಂದ ಎಫ್‌ಸಿ ಗೋವಾ ತಂಡವನ್ನು ಪರಾಭವಗೊಳಿಸಿತು. ನವೆಂಬರ್ 2016ರ ಬಳಿಕ ಗೋವಾ ವಿರುದ್ಧ ಆ ತಂಡಕ್ಕೆ ಮೊದಲ ಗೆಲುವು ಇದು.

# ಏರ್‌ಗನ್ ಚಾಂಪಿಯನ್‌ಷಿಪ್: ಭಾರತ ತಂಡಗಳಿಗೆ ಚಿನ್ನ

**ನವದೆಹಲಿ (ಪಿಟಿಐ):** ಏಷ್ಯನ್ ಏರ್‌ಗನ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಶೂಟರ್‌ಗಳ ಪದಕಬೇಟೆ ಮುಂದುವರಿದಿದೆ.

ದಕ್ಷಿಣ ಕೊರಿಯಾದ ಡೇಗುನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ಭಾರತದವರು ತಂಡ ವಿಭಾಗದ ಎಲ್ಲ ನಾಲ್ಕೂ ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡರು.

ಪುರುಷರ ಏರ್ ರೈಫಲ್ ವಿಭಾಗದಲ್ಲಿ ಭಾರತದ ಅರ್ಜುನ್ ಬಬುತಾ, ಕಿರಣ್ ಜಾಧವ್ ಮತ್ತು ರುದ್ರಾಕ್ಷ್ ಪಾಟೀಲ್ 17–11ರಿಂದ ಕಜಕಸ್ತಾನ ಶೂಟರ್‌ಗಳನ್ನು ಮಣಿಸಿ ಅಗ್ರಸ್ಥಾನ ಗಳಿಸಿದರು. ಇದೇ ವಿಭಾಗದ ಮಹಿಳೆಯರ ಸ್ಪರ್ಧೆಯಲ್ಲಿ ಮೆಹುಲಿ ಘೋಷ್, ಇಳವೆನ್ನಿಲ ವಾಳರಿವನ್ ಮತ್ತು ಮೇಘನಾ ಸಜ್ಜನರ್ 16–10ರಿಂದ ಕೊರಿಯಾ ತಂಡಕ್ಕೆ ಸೋಲುಣಿಸಿ ಚಿನ್ನಕ್ಕೆ ಕೊರಳೊಡ್ಡಿದರು.

ದಿವ್ಯಾಂಶ್ ಸಿಂಗ್ ಪನ್ವಾರ್, ಶ್ರೀ ಕಾರ್ತಿಕ್ ಸಬರಿ ರಾಜ್ ರವಿಶಂಕರ್ ಮತ್ತು ವಿದಿತ್ ಜೈನ್ ಅವರನ್ನೊಳಗೊಂಡ ಪುರುಷರ ಜೂನಿಯರ್ ತಂಡವು ಫೈನಲ್‌ನಲ್ಲಿ 16–10ರಿಂದ ಕೊರಿಯಾ ತಂಡವನ್ನು ಮಣಿಸಿ ಚಿನ್ನ ತನ್ನದಾಗಿಸಿಕೊಂಡಿತು.

ಇದೇ ವಿಭಾಗದ ಭಾರತದ ಮಹಿಳೆಯರೂ ಅಗ್ರಸ್ಥಾನ ಗಳಿಸಿದರು. ತಿಲೋತ್ತಮಾ ಸೇನ್, ರಮಿತಾ ಮತ್ತು ನ್ಯಾನ್ಸಿ ಅವರನ್ನೊಳಗೊಂಡ ತಂಡ ಫೈನಲ್‌ನಲ್ಲಿ 16–2ರಿಂದ ಕೊರಿಯಾ ತಂಡಕ್ಕೆ ಸೋಲುಣಿಸಿತು.

## ಸಂಕ್ಷಿಪ್ತ ಸುದ್ದಿ

### ಅಥ್ಲೆಟಿಕ್ಸ್: ಉನ್ನತಿಗೆ ಚಿನ್ನ

ಉನ್ನತಿ ಅಯ್ಯಪ್ಪ

**ಬೆಂಗಳೂರು:** ಕರ್ನಾಟಕದ ಉನ್ನತಿ ಅಯ್ಯಪ್ಪ ಅವರು ಅಸ್ಸಾಂನ ಗುವಾಹಟಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಭಾನುವಾರ ನಡೆದ 18 ವರ್ಷದೊಳಗಿನ ಬಾಲಕಿಯರ 100 ಮೀಟರ್ಸ್ ಹರ್ಡಲ್‌ನಲ್ಲಿ ಉನ್ನತಿ 13.94 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಒಡಿಶಾದ ಸವಿತಾ ಟೊಪ್ಪೊ (14.16 ಸೆ.) ಬೆಳ್ಳಿ ಮತ್ತು ತಮಿಳುನಾಡಿನ ಶಿನಿ ಗ್ಲಾಡಿಸ್ಸಾ (14.64 ಸೆ.) ಕಂಚು ಜಯಿಸಿದರು.

### ಹಾಕಿ: ಐಡಿಯಲ್ ಸ್ಪೋರ್ಟ್ಸ್‌ಗೆ ಜಯ

**ಬೆಂಗಳೂರು:** ಸಂಘಟಿತ ಆಟವಾಡಿದ ಐಡಿಯಲ್ ಸ್ಪೋರ್ಟ್ಸ್ ಕ್ಲಬ್ ಬಿ ತಂಡದವರು ರಾಜ್ಯ ಸಿ ಡಿವಿಷನ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಜಯ ಗಳಿಸಿದರು.

ಭಾನುವಾರ ಇಲ್ಲಿ ನಡೆದ ಪಂದ್ಯದಲ್ಲಿ ಐಡಿಯಲ್ ಸ್ಪೋರ್ಟ್ಸ್ ಟೈಬ್ರೇಕ್‌ನಲ್ಲಿ 4–1ರಿಂದ ಡೈನಮೈಟ್ಸ್ ಯುನೈಟೆಡ್ ಹಾಕಿ ಎದುರು ಗೆದ್ದಿತು. ವಿಜೇತ ತಂಡಕ್ಕಾಗಿ ಶಿವ ಸೂರ್ಯ (31ನೇ ನಿಮಿಷ) ಮತ್ತು ಡೈನಮೈಟ್ಸ್ ಪರ ಬೋಪಣ್ಣ ಎ.ಎ. (48ನೇ ನಿ.) ನಿಗದಿತ ಅವಧಿಯಲ್ಲಿ ಗೋಲು ಗಳಿಸಿದ್ದರು. ಟೈಬ್ರೇಕ್‌ನಲ್ಲಿ ಐಡಿಯಲ್ ತಂಡದ ಶಿವ ಸೂರ್ಯ, ಸಂದೀಪ್ ಜೋಶಾ ಮತ್ತು ಅವಿನಾಶ್ ಗೋಲು ಹೊಡೆದರು. ಇನ್ನೊಂದು ಪಂದ್ಯದಲ್ಲಿ ಗರುಡ ಹಾಕಿ ಕ್ಲಬ್ 3–1ರಿಂದ ಬಿಸಿವೈಎ ಬಿ ಎದುರು ಗೆದ್ದಿತು. ಗರುಡ ಕ್ಲಬ್ ಪರ ಶ್ರೀನಾಥ್ (37ನೇ ನಿ.), ಚರಣ್ ಕುಮಾರ್ (41ನೇ ನಿ.), ಜಸ್ವಂತ್ (46ನೇ ನಿ.) ಗೋಲು ಹೊಡೆದರು. ಬಿಸಿವೈಎ ಬಿ ಪರ ನಿರನ್ ಸುಬ್ಬಯ್ಯ (23ನೇ ನಿ.) ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು.

### ಲಿವರ್‌ಪೂಲ್ ಕ್ಲಬ್ ಖರೀದಿಗೆ ಅಂಬಾನಿ ಆಸಕ್ತಿ

**ಲಂಡನ್ (ಪಿಟಿಐ):** ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಅಧ್ಯಕ್ಷ ಮುಕೇಶ್ ಅಂಬಾನಿ ಅವರು ಇಂಗ್ಲಿಷ್ ಫುಟ್‌ಬಾಲ್ ಕ್ಲಬ್ ಲಿವರ್‌ಪೂಲ್ ಎಫ್‌ಸಿ ಖರೀದಿಗೆ ಆಸಕ್ತಿ ತೋರಿದ್ದಾರೆ ಎಂದು ಇಂಗ್ಲೆಂಡ್‌ನ 'ದಿ ಮಿರರ್' ಪತ್ರಿಕೆ ವರದಿ ಮಾಡಿದೆ.

ಇಂಗ್ಲಿಷ್ ಪ್ರೀಮಿಯರ್ ಲೀಗ್‌ನ ಮುಂಚೂಣಿಯ ಕ್ಲಬ್‌ಗಳಲ್ಲಿ ಒಂದಾಗಿರುವ ಲಿವರ್‌ಪೂಲ್, ಫೆನ್ವೆ ಸ್ಪೋರ್ಟ್ಸ್ ಕ್ಲಬ್ (ಎಫ್‌ಎಸ್‌ಜಿ) ಮಾಲೀಕತ್ವದಲ್ಲಿದೆ. ಎಫ್‌ಎಸ್‌ಜಿ 2010 ರಲ್ಲಿ ಕ್ಲಬ್‌ಅನ್ನು ಖರೀದಿಸಿತ್ತು.

ಇದೀಗ ಅಂದಾಜು ₹ 38 ಸಾವಿರ ಕೋಟಿ ಮೊತ್ತಕ್ಕೆ ಮಾರಾಟ ಮಾಡಲು ಮುಂದಾಗಿದ್ದು, ಅದಕ್ಕೆ ಸಂಬಂಧಿಸಿದ ಪ್ರಕ್ರಿಯೆ ಪೂರ್ಣಗೊಳಿಸಲು ಗೋಲ್ಡ್‌ಮನ್ ಸಾಚ್ಸ್ ಮತ್ತು ಮೋರ್ಗನ್ ಸ್ಟ್ಯಾನ್ಲಿ ಸಂಸ್ಥೆಗಳನ್ನು ನೇಮಿಸಿದೆ.

ಅಂಬಾನಿ ಅವರು ಕ್ಲಬ್ ಬಗ್ಗೆ ಮಾಹಿತಿಗಳನ್ನು ಕಲೆಹಾಕಿದ್ದಾರೆ ಎಂದು ಪತ್ರಿಕೆಯ ವರದಿ ತಿಳಿಸಿದೆ.